ಶುಕ್ರವಾರ, ಆಗಸ್ಟ್ 29, 2025| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಪ್ರಜ್ಞಾನಂದ ರನ್ನರ್ ಅಪ್

ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ಅವರು ಸಿಂಕ್‌ಫೀಲ್ಡ್ ಕಪ್ ಚೆಸ್ ಟೂರ್ನಿಯಲ್ಲಿ ರನ್ನರ್ ಅಪ್ ಆಗಿ ಗ್ರ್ಯಾಂಡ್ ಚೆಸ್ ಟೂರ್ ಫೈನಲ್ ಪ್ರವೇಶಿಸಿದರು



ಪ್ರತಿ ಗಂಟೆಗೆ 20 ಜನ ಸಾವು

2023ರಲ್ಲಿ ದೇಶದಲ್ಲಿ 4.8 ಲಕ್ಷಕ್ಕೂ ಹೆಚ್ಚು ರಸ್ತೆ ಅಪಘಾತಗಳು ಸಂಭವಿಸಿದ್ದು, 1.72 ಲಕ್ಷ ಮಂದಿ ಮೃತಪಟ್ಟಿದ್ದಾರೆ. ಪ್ರತಿ ಗಂಟೆಗೆ 20 ಮಂದಿ ಮರಣ ಹೊಂದಿದ್ದಾರೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ತಿಳಿಸಿದೆ



‘ಆಲ್ಕೋ ಮೀಟರ್‌ಗಳ ಸಾಚಾತನ ಎಷ್ಟು’

ಕುಡಿದು ವಾಹನ ಚಾಲನೆ ಆರೋಪಕ್ಕೆ ದಂಡ ವಿಧಿಸಿದ ಪ್ರಕರಣ: ಹೈಕೋರ್ಟ್ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಬ್ರೀಥ್ ಅನಲೈಸರ್ ಯಾವುದೇ ರೀತಿಯಲ್ಲೂ ತಿರುಚಬಾರದು
- ಇಲಾಖೆಯು ಸದ್ಯ ಜಾರಿಯಲ್ಲಿರುವ ಕಾರ್ಯವಿಧಾನದ ಲಿಖಿತ ವಿವರಣೆ ನೀಡಿ



ಬೆಂಗಳೂರು: ‘ಮದ್ಯಪಾನ ಮಾಡಿ ವಾಹನ ಚಲಾಯಿಸುವವರನ್ನು ತಡೆದು ಪರೀಕ್ಷಿಸುವ ಬ್ರೀಥ್ ಅನಲೈಸರ್‌ಗಳು (ಆಲ್ಕೋ ಮೀಟರ್) ದೋಷರಹಿತವಾಗಿವೆ ಎಂಬುದನ್ನು ಖಾತ್ರಿಪಡಿಸುವಿರಾ’ ಎಂದು ನಗರ ಸಂಚಾರಿ ಪೊಲೀಸರನ್ನು ಹೈಕೋರ್ಟ್ ಮೌಖಿಕವಾಗಿ ಪ್ರಶ್ನಿಸಿದೆ.

ಮದ್ಯ ಸೇವನೆ ಮಾಡಿ ವಾಹನ ಚಲಾಯಿಸಿದ ಆರೋಪದ ಮೇರೆಗೆ ಪೊಲೀಸರು ದಂಡ ವಿಧಿಸಿದ್ದನ್ನು ಪ್ರಶ್ನಿಸಿ ನಗರದ ಸಿ.ಅಜಯ್ ಕುಮಾರ್ ಕಶ್ಯಪ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ಎಂ.ಶ್ಯಾಮ್ ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪ್ರತಿವಾದಿಗಳಾದ ರಾಜ್ಯ ಸರ್ಕಾರ ಮತ್ತು ಸಂಚಾರ ಪೊಲೀಸ್ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

‘ಅರ್ಜಿದಾರರ ವಿರುದ್ಧ ಬಲವಂತದ ಕ್ರಮ ಜರುಗಿಸಬಾರದು’ ಎಂದು ಮಧ್ಯಂತರ ಆದೇಶ ನೀಡಿ ವಿಚಾರಣೆಯನ್ನು ವಿಚಾರಣೆಯನ್ನು ಸೆಪ್ಟೆಂಬರ್ 3ಕ್ಕೆ ಮುಂದೂಡಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರ ವಾದ ಆಲಿಸಿದ ನ್ಯಾಯಪೀಠ, ‘ಬ್ರೀಥ್ ಅನಲೈಸರ್‌ಗಳು ದೋಷದಿಂದ ಕೂಡಿವೆ ಎಂದು ಅರ್ಜಿದಾರರು ಪ್ರತಿಪಾದಿಸುತ್ತಿದ್ದಾರೆ. ಹಾಗಾಗಿ, ನಿಮ್ಮ ಬಳಿ ಇರುವ ಬ್ರೀಥ್ ಅನಲೈಸರ್ ಯಂತ್ರಗಳು ದೋಷರಹಿತವಾಗಿವೆ ಎಂದು ಖಚಿತಪಡಿಸಿಕೊಳ್ಳಲು ಪೊಲೀಸ್ ಇಲಾಖೆ ಸದ್ಯ ಜಾರಿಯಲ್ಲಿ ಇರಿಸಿರುವ ಕಾರ್ಯವಿಧಾನದ ಬಗ್ಗೆ ಲಿಖಿತ ವಿವರಣೆ ನೀಡಿ’ ಎಂದು ಸಂಚಾರ ಪೊಲೀಸರಿಗೆ ನಿರ್ದೇಶಿಸಿತು.

‘ವಾಹನ ಚಾಲಕರು ಕುಡಿದು ವಾಹನ ಚಲಾಯಿಸುತ್ತಿದ್ದಾರೆಯೇ ಎಂದು ಪರಿಶೀಲಿಸಲು ಸಂಚಾರ ಪೊಲೀಸರು ಬಳಸುವ ಬ್ರೀಥ್ ಅನಲೈಸರ್‌ಗಳನ್ನು ಯಾವುದೇ ರೀತಿಯಲ್ಲೂ ತಿರುಚಬಾರದು’ ಎಂದು ತಾಕೀತು ಮಾಡಿತು.

ಪ್ರಕರಣವೇನು?: ಮದ್ಯಪಾನ ಮಾಡಿ ವಾಹನ ಚಲಾಯಿಸುವುದನ್ನು ಪರಿಶೀಲಿಸುವ ವೇಳೆ ಸಂಚಾರ ಠಾಣೆಯ ಪೊಲೀಸರು ಅರ್ಜಿದಾರರ ಕಾರನ್ನು ತಡೆದಿದ್ದರು. ಪರೀಕ್ಷೆ ವೇಳೆ ಅನಲೈಸರ್ ಮೊದಲ ಬಾರಿ ನಕಾರಾತ್ಮಕ ಫಲಿತಾಂಶ ನೀಡಿತ್ತು. ಆಗ ಪೊಲೀಸರು ಮತ್ತೆ ಅಲ್ಕೋ ಮೀಟರ್ ಅನ್ನು ಊದುವಂತೆ ಅರ್ಜಿದಾರರಿಗೆ ಒತ್ತಾಯಿಸಿದ್ದರು. ಮೂರನೇ ಬಾರಿಗೆ ಬ್ರೀಥ್ ಅನಲೈಸರ್ ಧನಾತ್ಮಕ ಫಲಿತಾಂಶ ನೀಡಿತ್ತು.

ಆಗ ಅರ್ಜಿದಾರರು ‘ನಾನು ಮದ್ಯ ಸೇವನೆ ಮಾಡಿಲ್ಲ’ ಎಂದು ಹೇಳಿದ್ದರೂ ಪೊಲೀಸರು ಅವರಿಗೆ ₹10 ಸಾವಿರ ದಂಡ ವಿಧಿಸಿದ್ದರು. ಇದಕ್ಕೆ ಪ್ರತಿಯಾಗಿ ಅರ್ಜಿದಾರರು, ‘ಹತ್ತಿರದ ಸರ್ಕಾರಿ ಆಸ್ಪತ್ರೆಯಲ್ಲಿ ನನ್ನ ರಕ್ತ ಪರೀಕ್ಷೆ ಮಾಡಿಸೋಣ ಬನ್ನಿ ಎಂದು ಪೊಲೀಸರನ್ನು ಕರೆದೆ. ಆದರೆ ಬರಲಿಲ್ಲ. ಬದಲಿಗೆ ದಂಡ ವಿಧಿಸಿ ನನ್ನ ವಾಹನವನ್ನು ವಶಪಡಿಸಿಕೊಂಡರು’ ಎಂದು ಆರೋಪಿಸಿದ್ದಾರೆ.

‘ಘಟನೆ ನಂತರ ಖಾಸಗಿ ಲ್ಯಾಬ್‌ಗೆ ಹೋಗಿ ನನ್ನ ರಕ್ತ ಪರೀಕ್ಷೆ ಮಾಡಿಸಿಕೊಂಡಾಗ ಮದ್ಯ ಸೇವನೆಯ ಯಾವುದೇ ಲಕ್ಷಣಗಳೂ ನನ್ನ ದೇಹದಲ್ಲಿ ಕಂಡುಬಂದಿರಲಿಲ್ಲ. ನನ್ನನ್ನು ಪರೀಕ್ಷಿಸುವ ಮೊದಲು ಉಪಕರಣವನ್ನು ಪರೀಕ್ಷೆಗೆ ಒಳಪಡಿಸಿಲ್ಲ’ ಎಂದು ಆಕ್ಷೇಪಿಸಿದ್ದಾರೆ.

ಮದ್ಯಪಾನ ಮಾಡಿ ವಾಹನ ಚಲಾಯಿಸುವವರು ಮೊದಲ ಬಾರಿ ಸಿಕ್ಕಿಬಿದ್ದರೆ ₹10 ಸಾವಿರ ದಂಡ ಅಥವಾ ಆರು ತಿಂಗಳ ಜೈಲು ಶಿಕ್ಷೆ ಮತ್ತು ಎರಡನೇ ಬಾರಿಗೆ ಅಪರಾಧ ಎಸಗಿದರೆ ₹15 ಸಾವಿರ ದಂಡ ತೆರಬೇಕಿದೆ.

1947ರ ಆಗಸ್ಟ್ 15ರಂದು ಗಾಂಧಿ ಎಲ್ಲಿದ್ದರು?: ಅರ್ಜಿ ವಜಾ

‘ಮೋಹನದಾಸ್ ಕರಮಚಂದ ಗಾಂಧಿ ಅವರ ಆತ್ಮಕಥೆಯ ಸಂಪುಟ–2ರ ಬಗ್ಗೆ ಬೆಳಕು ಚೆಲ್ಲುವ ನಿಟ್ಟಿನಲ್ಲಿ ಲೋಕಸಭೆ ಸ್ಪೀಕರ್ ಓಂ ಬಿರ್ಲಾ, ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಕೇಂದ್ರ ಹಾಗೂ ರಾಜ್ಯ ಶಿಕ್ಷಣ ಇಲಾಖೆಗೆ ನಿರ್ದೇಶನ ನೀಡಬೇಕು’ ಎಂದು ಕೋರಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ, ‘ಜಾಗೃತ ಕರ್ನಾಟಕ–ಜಾಗೃತ ಭಾರತ’ ಸಂಘಟನೆ ಅಧ್ಯಕ್ಷ ಕೆ.ಎನ್.ಮಂಜುನಾಥ್ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

‘ಇತಿಹಾಸದ ವಿಷಯದಲ್ಲಿ ಸಂಶೋಧನೆ ನಡೆಸಲು ಅರ್ಜಿದಾರರು ಬಯಸಿದಲ್ಲಿ ಅದಕ್ಕೆ ಯಾವುದೇ ಅಡ್ಡಿ–ಆತಂಕಗಳಿಲ್ಲ. ಆದರೆ, ಈ ಅರ್ಜಿ ಅಸ್ಪಷ್ಟವಾಗಿದೆ ಹಾಗೂ ಈ ವಿಚಾರದಲ್ಲಿ ಯಾವುದೇ ಆದೇಶ ಮಾಡಲಾಗದು’ ಎಂಬ ಅಭಿಪ್ರಾಯದೊಂದಿಗೆ ನ್ಯಾಯಪೀಠ ಅರ್ಜಿ ತಿರಸ್ಕರಿಸಿದೆ.

ಸುದ್ದಿ 2 ನಿಮಿಷ

ಯಶವಂತಪುರ ರೈಲು ನಿಲ್ದಾಣ ನವೀಕರಣ ಪರಿಶೀಲನೆ

ಬೆಂಗಳೂರು: ಯಶವಂತಪುರ ರೈಲು ನಿಲ್ದಾಣದ ನವೀಕರಣ ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಬೇಕು ಎಂದು ನೈರುತ್ಯ ರೈಲ್ವೆಯ ಪ್ರಧಾನ ವ್ಯವಸ್ಥಾಪಕ ಮುಕುಲ್ ಸರನ್ ಮಾಥುರ್ ತಿಳಿಸಿದರು.

ನವೀಕರಣ ಕಾಮಗಾರಿಯನ್ನು ಅವರು ಪರಿಶೀಲಿಸಿ ಮಾತನಾಡಿ, ‘₹367 ಕೋಟಿ ವೆಚ್ಚದಲ್ಲಿ ನವೀಕರಣಗೊಳ್ಳುತ್ತಿರುವ ಯಶವಂತಪುರ ರೈಲು ನಿಲ್ದಾಣವು ಕಾಮಗಾರಿ ಪೂರ್ಣಗೊಂಡಾಗ ಪ್ರಯಾಣಿಕರಿಗೆ ವಿಶ್ವ ದರ್ಜೆಯ ಸೌಲಭ್ಯಗಳು ದೊರೆಯಲಿವೆ’ ಎಂದು ತಿಳಿಸಿದರು.

ಕೆಎಸ್‌ಆರ್ ಬೆಂಗಳೂರು ಮತ್ತು ತುಮಕೂರು ನಡುವೆ ವಿಂಡೋ-ಟ್ರೇಲಿಂಗ್ ತಪಾಸಣೆ ನಡೆಸಿದರು.

ನಿಡವಂದ ನಿಲ್ದಾಣದಲ್ಲಿ ನಡೆಯುತ್ತಿರುವ ಮೇಲ್ದರ್ಜೆ ಕಾಮಗಾರಿಗಳು ಮತ್ತು ಸರಕು ಸಾಗಣೆ ಕೇಂದ್ರದ ಸರಕು ಶೆಡ್ ಅಭಿವೃದ್ಧಿ ಕಾರ್ಯವನ್ನು ಪರಿಶೀಲಿಸಿದರು. ಅಮೃತ್ ಭಾರತ್ ನಿಲ್ದಾಣ ಯೋಜನೆ (ಎಬಿಎಸ್‌ಎಸ್) ಅಡಿಯಲ್ಲಿ ₹88 ಕೋಟಿಯಲ್ಲಿ ಅಭಿವೃದ್ಧಿಗೊಳ್ಳಲಿರುವ ತುಮಕೂರು ನಿಲ್ದಾಣಕ್ಕೆ ಭೇಟಿ ನೀಡಿದರು.

ನೈರುತ್ಯ ರೈಲ್ವೆ ಮುಖ್ಯ ಆಡಳಿತಾಧಿಕಾರಿ (ನಿರ್ಮಾಣ) ಅಜಯ್ ಶರ್ಮಾ, ಬೆಂಗಳೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಅಶುತೋಷ್ ಕುಮಾರ್ ಸಿಂಗ್, ಹೆಚ್ಚುವರಿ ರೈಲ್ವೆ ವ್ಯವಸ್ಥಾಪಕ ಪರೀಕ್ಷಿತ್ ಮೋಹನ್‌ಪುರಿಯಾ ಉಪಸ್ಥಿತರಿದ್ದರು.

ನಗರದ ಹಲವೆಡೆ ಭಾರಿ ಮಳೆ



ಬೆಂಗಳೂರು: ನಗರದ ಹಲವು ಪ್ರದೇಶಗಳಲ್ಲಿ ಗುರುವಾರ ಸಂಜೆ ಭಾರಿ ಮಳೆಯಾಯಿತು.

ಮಧ್ಯಾಹ್ನದವರೆಗೆ ಬಿಸಿಲಿನ ವಾತಾವರಣವಿತ್ತು. ಸಂಜೆ ಸುಮಾರು 5ರ ವೇಳೆಗೆ ಮೋಡ ಕವಿದು ಬಿರುಸಾಗಿ ಮಳೆ ಸುರಿಯಿತು.

ಗುರಪ್ಪನಪಾಳ್ಯದಿಂದ ಸಾಗರ್ ಜಂಕ್ಷನ್, ದೊಮ್ಮಸಂದ್ರದಿಂದ ಕೊಡತಿ ಗೇಟ್, ಶಿವಾನಂದ ವೃತ್ತದಿಂದ ನೆಹರೂ ವೃತ್ತ, ಸೋನಿ ವರ್ಲ್ಡ್ ಜಂಕ್ಷನ್‌ನಿಂದ ಶ್ರೀನಿವಾಗಿಲು ಜಂಕ್ಷನ್, ವಿಪ್ರೊ ಜಂಕ್ಷನ್‌ನಿಂದ ಅಮೃತ ಬೇಕರಿ, ಬಿಳೇಕಹಳ್ಳಿಯಿಂದ ಜೆ.ಡಿ. ಮರ ಜಂಕ್ಷನ್, ಮಾರತ್‌ಹಳ್ಳಿ ಸೇತುವೆ, ಕೈಗೊಂಡಹಳ್ಳಿ, ಇಬ್ಲೂರು, ಬೆಳ್ಳಂದೂರು, ಸಾರಕ್ಕಿ ಜಂಕ್ಷನ್‌ನಿಂದ ಜೆ.ಪಿ. ನಗರ, ಪುಟ್ಟೇನಹಳ್ಳಿ ಅಂಡರ್ ಪಾಸ್, ಮಡಿವಾಳ ಪೊಲೀಸ್ ಠಾಣೆಯಿಂದ ಸಿಲ್ಕ್ ಬೋರ್ಡ್, ರೂಪೇನ ಅಗ್ರಹಾರದಿಂದ ಬೊಮ್ಮನಹಳ್ಳಿ, ದೇವರಬೀಸನಹಳ್ಳಿಯಿಂದ ಇಬ್ಲೂರು ಜಂಕ್ಷನ್‌ಗಳಲ್ಲಿ ನೀರು ನಿಂತು ವಾಹನ ಸಂಚಾರ ಅಸ್ತವ್ಯಸ್ತಗೊಂಡಿತ್ತು.

ವಿದ್ಯಾಪೀಠದಲ್ಲಿ 4.75 ಸೆಂ.ಮೀ, ಕೋರಮಂಗಲದಲ್ಲಿ 2.9 ಸೆಂ.ಮೀ, ಬಿಟಿಎಂ ಲೇಔಟ್‌ನಲ್ಲಿ 2.9 ಸೆಂ.ಮೀ, ಬೊಮ್ಮನಹಳ್ಳಿಯಲ್ಲಿ 2.8 ಸೆಂ.ಮೀ, ಬಿಳೇಕಹಳ್ಳಿಯಲ್ಲಿ 2.6 ಸೆಂ.ಮೀ, ಎಚ್‌ಎಸ್‌ಆರ್ ಲೇಔಟ್‌ನಲ್ಲಿ 2.3 ಸೆಂ.ಮೀ, ಪಟ್ಟಾಭಿರಾಮನಗರದಲ್ಲಿ 2.2 ಸೆಂ.ಮೀ, ನಾಯಂಡಹಳ್ಳಿಯಲ್ಲಿ 2.1 ಸೆಂ.ಮೀ, ರಾಜರಾಜೇಶ್ವರಿನಗರದಲ್ಲಿ 1.9 ಸೆಂ.ಮೀ, ಬೆಳ್ಳಂದೂರಿನಲ್ಲಿ 1.8 ಸೆಂ.ಮೀ, ವನ್ನಾರಪೇಟೆಯಲ್ಲಿ 1.75 ಸೆಂ.ಮೀ, ಅರಕೆರೆಯಲ್ಲಿ 1.55 ಸೆಂ.ಮೀ, ಪುಲಕೇಶಿನಗರದಲ್ಲಿ 1.5 ಸೆಂ.ಮೀ, ವಿಶ್ವೇಶ್ವರಪುರ 1.45 ಸೆಂ.ಮೀ, ಪೀಣ್ಯ ಕೈಗಾರಿಕೆ ಪ್ರದೇಶ, ಹಂಪಿ ನಗರ, ಮಾರತ್‌ಹಳ್ಳಿ, ಬಾಣಸವಾಡಿ, ನಾಗಪುರ, ಚೌಡೇಶ್ವರಿನಗ, ಬಸವೇಶ್ವರನಗರ, ಚಾಮರಾಜಪೇಟೆ, ಯಲಹಂಕ, ಸಂಪಂಗಿರಾಮನಗರ, ನಂದಿನಿ ಲೇಔಟ್, ರಾಜಮಹಲ್ ಗುಟ್ಟಹಳ್ಳಿಯಲ್ಲಿ ತಲಾ 1.4 ಸೆಂ.ಮೀ ಮಳೆಯಾಯಿತು.

ದಾಬಸ್ ಪೇಟೆಯ ಸೋಂಪುರ ಹೋಬಳಿಯ ನರಸೀಪುರ, ಹೆಗ್ಗುಂದ, ಮಾಕೇನಹಳ್ಳಿ, ಎಲೆಕ್ಯಾತನಹಳ್ಳಿ, ನಿಡವಂದ, ಶಿವಗಂಗೆ, ಅಗಳಕುಪ್ಪೆ ಸುತ್ತಮುತ್ತ ಮಧ್ಯಾಹ್ನ ಧಾರಾಕಾರ ಮಳೆಯಾಯಿತು.

ಚಿಟಿಕೆ ಸುದ್ದಿ

‘ಮತ ಆಧರಿತ ರಾಜಕೀಯ ಬೇಡ’

ಬೆಂಗಳೂರು: ‘ಮೈಸೂರು ದಸರಾ ಉದ್ಘಾಟಿಸಲಿರುವ ಸಾಹಿತಿ ಬಾನು ಮುಷ್ತಾಕ್ ಅವರಿಗೆ ವಿರೋಧ ವ್ಯಕ್ತಪಡಿಸುವ ನೆಪದಲ್ಲಿ ವಿರೋಧ ಪಕ್ಷಗಳು ಮತ ಆಧರಿತ ರಾಜಕೀಯಕ್ಕೆ ಒತ್ತು ನೀಡಿವೆ’ ಎಂದು ಮಾಜಿ ಸಚಿವ ಬಿ.ಕೆ.ಚಂದ್ರಶೇಖರ್ ಟೀಕಿಸಿದ್ದಾರೆ.



ಬಿ.ಕೆ. ಚಂದ್ರಶೇಖರ್

ಬಿಜೆಪಿಯ ನಾಯಕರು, ಕೇಂದ್ರ ಸಚಿವರು ಕೂಡ ವಿಭಿನ್ನವಾಗಿ ಹೇಳಿಕೆ ನೀಡಿದ್ದಾರೆ. ಚಾಮುಂಡಿಬೆಟ್ಟ ಹಿಂದೂಗಳಿಗೆ ಸೀಮಿತವಾದದು ಎನ್ನುವ ರೀತಿಯಲ್ಲಿ ಮಾತನಾಡಿದ್ದಾರೆ. ಹಿಂದೂ ಧರ್ಮ, ಹಿಂದೂ, ಮುಸ್ಲಿಂ ಮತಗಳ ಕುರಿತು ಮಾತನಾಡಿರುವುದರ ಹಿಂದೆ ರಾಜಕೀಯ ಇದೆ ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಬಿಜೆಪಿಯವರು ಹೆಚ್ಚು ಗೌರವಿಸುವ ಸ್ವಾಮಿ ವಿವೇಕಾನಂದರು, ‘ಎಲ್ಲಾ ಧರ್ಮಗಳನ್ನು ನಾನು ಸ್ವೀಕರಿಸುತ್ತೇನೆ. ನಮ್ಮ ಮಾತೃಭೂಮಿಯಲ್ಲಿ ಹಿಂದೂ ಹಾಗೂ ಮುಸ್ಲಿಂ ಧರ್ಮಗಳೆರಡೂ ಮಿಲನವಾಗಬೇಕು ಎನ್ನುವ ಮಾತುಗಳನ್ನಾಡಿದ್ದರು. ಈ ವಿಚಾರದಲ್ಲಿ ವಿವೇಕಾನಂದರ ಹೇಳಿಕೆಗಳನ್ನು ಆ ಪಕ್ಷದ ನಾಯಕರು ಗಮನಿಸಿಲ್ಲವೇ’ ಎಂದು ಪ್ರಶ್ನಿಸಿದ್ದಾರೆ.

‘ಮತಮೌಢ್ಯದಿಂದ ದೂರವಿದ್ದು ನಾವೆಲ್ಲ ಸಮಾನತೆಯ ಭಾವ ಉಳಿಸಿಕೊಳ್ಳುವ ಕುರಿತು ಕುವೆಂಪು ಅವರು ಬಹಳ ಹಿಂದೆಯೇ ಸ್ಪಷ್ಟವಾಗಿ ಹೇಳಿದ್ದಾರೆ. ಜನರು ಬಯಸುವ ಶಾಂತಿ, ಸಹಬಾಳ್ವೆಗೆ ತೊಂದರೆಯಾಗದಂತೆ ರಾಜಕೀಯ ನಾಯಕರು ಎಚ್ಚರಿಕೆ ವಹಿಸಬೇಕು’ ಎಂದು ತಿಳಿಸಿದ್ದಾರೆ.

ಸಂಗೀತೋತ್ಸವ ಇಂದಿನಿಂದ

ಬೆಂಗಳೂರು: ಇಂಡಿಯನ್ ಮ್ಯೂಸಿಕ್ ಎಕ್ಸ್‌ಪೀರಿಯನ್ಸ್ ಮ್ಯೂಸಿಯಂ ಸಂಸ್ಥೆಯಿಂದ ಆಗಸ್ಟ್ 29ರಿಂದ ಸೆಪ್ಟೆಂಬರ್ 7ರವರೆಗೆ ಜೆ.ಪಿ. ನಗರದ ಬ್ರಿಗೇಡ್ ಮಿಲ್ಲೇನಿಯಂನಲ್ಲಿ ಆಜಾದಿ ಸಂಗೀತೋತ್ಸವ ನಡೆಯಲಿದೆ.

10 ದಿನ ನಡೆಯುವ ಈ ಸಂಗೀತೋತ್ಸವದಲ್ಲಿ 23 ಸಂಗೀತ ಕಛೇರಿಗಳು ಇರಲಿವೆ. ಇದರಲ್ಲಿ ಜನಪದ, ಬುಡಕಟ್ಟು ಸಂಗೀತ, ರಾಕ್, ರ್‍ಯಾಪ್, ಗಜಲ್ ಮತ್ತು ಶಾಸ್ತ್ರೀಯ ಸಂಗೀತ ಕ್ಷೇತ್ರಗಳ ಜನಪ್ರಿಯ ಗಾಯಕರು ಪಾಲ್ಗೊಳ್ಳಲಿದ್ದಾರೆ. ಈ ಉತ್ಸವವು ಭಾರತದ ವೈವಿಧ್ಯಮಯ ಸಂಗೀತ ಜಗತ್ತನ್ನು ತೆರೆದಿಡಲಿದೆ. ಪ್ರವೇಶ ಉಚಿತವಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಶ್ರೇಷ್ಠ ಶಿಕ್ಷಕಿ ಪ್ರಶಸ್ತಿಗೆ ಶ್ರೀವರ್ಧಿನಿ ಆಯ್ಕೆ

ಬೆಂಗಳೂರು: ಕೇಂದ್ರ ಸರ್ಕಾರದ ಶಿಕ್ಷಣ ಸಚಿವಾಲಯ ನೀಡುವ 2025ನೇ ಸಾಲಿನ ರಾಷ್ಟ್ರ ಮಟ್ಟದ ಶ್ರೇಷ್ಠ ಶಿಕ್ಷಕಿ ಪ್ರಶಸ್ತಿಗೆ ಬೆಂಗಳೂರಿನ ಐಐಎಂಬಿಯ ಉದ್ಯಮಶೀಲತೆ ವಿಭಾಗದ ಪ್ರಾಧ್ಯಾಪಕಿ ಹಾಗೂ ಐಐಎಂಬಿಯ ಸ್ಟಾರ್ಟಪ್ ಇನ್‌ಕ್ಯುಬೇಟರ್ ಸೆಲ್‌ನ ಮುಖ್ಯಸ್ಥೆ ಶ್ರೀವರ್ಧಿನಿ ಕೆ.ಝಾ ಆಯ್ಕೆಯಾಗಿದ್ದಾರೆ.



ಶ್ರೀವರ್ಧಿನಿ

ಶಿಕ್ಷಣ, ಸಂಶೋಧನೆ, ನಾವೀನ್ಯ ಮತ್ತು ಶಿಕ್ಷಣ ಸಂಸ್ಥೆ ರೂಪಿಸುವಲ್ಲಿ ಮಹತ್ವದ ಪಾತ್ರ ನಿರ್ವಹಿಸುವ ಶಿಕ್ಷಕರಿಗೆ ಈ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ಸೆಪ್ಟೆಂಬರ್ 5ರಂದು ನವದೆಹಲಿಯ ವಿಜ್ಞಾನ ಭವನದಲ್ಲಿ ರಾಷ್ಟ್ರಪತಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಶಿಕ್ಷಣ ಮತ್ತು ಸ್ಟಾರ್ಟಪ್ ವಿಭಾಗದಲ್ಲಿ ಕೆಲಸ ಮಾಡಿರುವ ಶ್ರೀವರ್ಧಿನಿ ಅವರು ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದಿಂದ ಎಂ.ಎಸ್ ಮತ್ತು ಐಐಎಂ ಬೆಂಗಳೂರಿನಿಂದ ಕಾರ್ಪೊರೇಟ್ ಸ್ಟ್ರಾಟಜಿ ಮತ್ತು ಪಾಲಿಸಿಯಲ್ಲಿ ಪಿಎಚ್.ಡಿ ಪಡೆದಿದ್ದಾರೆ. ಇದಕ್ಕೂ ಮೊದಲು, ಅವರು ಮೈಕ್ರೋಸಾಫ್ಟ್, ಸನ್ ಮೈಕ್ರೋಸಿಸ್ಟಮ್ಸ್ ಮತ್ತು ಇನ್ಫೊಸಿಸ್‌ನಲ್ಲಿ ಕಾರ್ಯ ನಿರ್ವಹಿಸಿದ್ದರು ಎಂದು ಪ್ರಕಟಣೆ ತಿಳಿಸಿದೆ.

ಬಡಾವಣೆಗಳಲ್ಲಿ ಗಣೇಶೋತ್ಸವ ಸಡಗರ

ಮೂರ್ತಿ ಪ್ರತಿಷ್ಠಾಪನೆ • ಖುಷಿ, ಮನೆಗಳಲ್ಲೂ ಹಬ್ಬದ ಸಂತಸ • ಗಮನಸೆಳೆದ ಚೆಂಡೆವಾದನ

ಪ್ರಜಾವಾಣಿ ವಾರ್ತೆ



ನಗರದಲ್ಲಿ ಗೌರಿ–ಗಣೇಶ ಹಬ್ಬ ಆಚರಿಸಿ ಗಣೇಶನ ಮೂರ್ತಿಗಳನ್ನು ಸ್ಯಾಂಕಿ ಟ್ಯಾಂಕಿಯಲ್ಲಿ ವಿಸರ್ಜಿಸಲಾಯಿತು– ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಬೆಂಗಳೂರು: ನಗರದ ಎಲ್ಲೆಡೆ ಗಣೇಶೋತ್ಸವದ ಸಂಭ್ರಮ ಮನೆ ಮಾಡಿತ್ತು. ಮನೆಗಳು, ಅಪಾರ್ಟ್‌ಮೆಂಟ್‌ಗಳಲ್ಲಿ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಿ ಭಕ್ತಿಯಿಂದ ಪೂಜಿಸಲಾಯಿತು.

ಸಂಘ–ಸಂಸ್ಥೆಗಳು ತಮ್ಮ ಬಡಾವಣೆಗಳಲ್ಲಿ ವಿನಾಯಕನನ್ನು ಆರಾಧಿಸಿದವು. ಪುಟ್ಟ ಮಕ್ಕಳೂ ತಮ್ಮ ಗಲ್ಲಿಗಳಲ್ಲಿ ಗಣೇಶನ ಮೂರ್ತಿ ಪ್ರತಿಷ್ಠಾಪನೆ ಮಾಡಿದ್ದರು. ಹಬ್ಬದ ಅಂಗವಾಗಿ ಮನೆಗಳು ಹಾಗೂ ಅಪಾರ್ಟ್‌ಮೆಂಟ್‌ಗಳಿಗೆ ವಿದ್ಯುತ್ ಅಲಂಕಾರ ಮಾಡಲಾಗಿತ್ತು.

ಗಣೇಶನ ಮೂರ್ತಿ ಪ್ರತಿಷ್ಠಾಪಿಸಲಾಗಿದ್ದ ವೇದಿಕೆಗಳು ವಿಶೇಷ ರಂಗು ಪಡೆದುಕೊಂಡಿದ್ದವು. ಮಂಟಪಗಳು ವಿದ್ಯುತ್ ಅಲಂಕಾರದಿಂದ ಕಂಗೊಳಿಸಿದವು.

ಬುಧವಾರ ರಾತ್ರಿಯೇ ಹೆಚ್ಚಿನ ಮನೆಗಳಲ್ಲಿನ ಗಣೇಶನ ವಿಸರ್ಜನೆಯೂ ನಡೆಯಿತು. ನಗರದ ನಾನಾ ಬಡಾವಣೆಗಳಲ್ಲಿ ಗಣೇಶ ಹಬ್ಬದ ಪೂಜೆ, ವಿಶೇಷ ಊಟ, ಸಂಜೆ ನಂತರ ವಿಸರ್ಜನೆಯ ಸಂಭ್ರಮ ಮನೆ ಮಾಡಿತ್ತು.

ಸತತ ಆರು ದಶಕದಿಂದ ವಿಭಿನ್ನ ಗಣೇಶೋತ್ಸವಕ್ಕೆ ಹೆಸರುವಾಸಿಯಾಗಿರುವ ಬಸವನಗುಡಿ ಎಪಿಎಸ್ ಕಾಲೇಜು ಆವರಣದಲ್ಲಿ ವಿದ್ಯಾರಣ್ಯ ಯುವಕರ ಸಂಘ ಕೂರಿಸುವ ಗಣೇಶನ ಮೂರ್ತಿ ಪ್ರತಿಷ್ಠಾಪನೆ ಚಟುವಟಿಕೆ ಈ ಬಾರಿ ವಿಶೇಷವಾಗಿದೆ. ಗುರುವಾರ ಸಂಜೆ ಇಲ್ಲಿ ಮಹಿಳೆಯರ ಚಂಡೆ ವಾದನ ಗಮನ ಸೆಳೆಯಿತು.

ಚಂದ್ರಾ ಬಡಾವಣೆಯ ಪ್ರಸನ್ನ ಗಣಪತಿ ದೇವಸ್ಥಾನ, ಯಲಹಂಕ ಚೌಡಪ್ಪ ಬಡಾವಣೆಯ ವರಸಿದ್ಧಿ ವಿನಾಯಕ ದೇಗುಲ, ಕೆಂಪೇಗೌಡ ನಗರದ ಉದಯಭಾನು ಕಲಾ ಸಂಘ ಸಹಿತ ಹಲವು ಕಡೆಗಳಲ್ಲಿ ಗಣೇಶ ಪ್ರತಿಷ್ಠಾಪನೆ ಮಾಡಲಾಗಿದೆ. ವಿವಿಧ ಸಂದೇಶ ಸಾರುವ ಗಣೇಶನ ಮೂರ್ತಿಗಳು ಗಮನ ಸೆಳೆಯುತ್ತಿವೆ.

ಗಣೇಶ ಮೂರ್ತಿಗಳ ವಿಸರ್ಜನೆ

ವಲಯ	ಒಟ್ಟು
ಪೂರ್ವ	44,000
ಪಶ್ಚಿಮ	60,703
ದಕ್ಷಿಣ	79,039
ಬೊಮ್ಮನಹಳ್ಳಿ	7,028
ದಾಸರಹಳ್ಳಿ	1,104
ಮಹದೇವಪುರ	5,690
ಆರ್.ಆರ್. ನಗರ	13,097
ಯಲಹಂಕ	8,492
ಒಟ್ಟು	2,19,153

ಟ್ಯಾಂಕರ್‌ಗಳಲ್ಲಿ ಮುಳುಗಿದ ಗಣೇಶ

ಬಿಬಿಎಂಪಿಯಿಂದ ನಗರದ 41 ಕೆರೆಗಳ ಅಂಗಳದಲ್ಲಿ ಟ್ಯಾಂಕರ್‌ಗಳನ್ನು ನಿಲ್ಲಿಸಿ ಗಣೇಶ ವಿಸರ್ಜನೆಗೆ ಅವಕಾಶ ಮಾಡಿಕೊಡಲಾಯಿತು.

ಅಕ್ಕಪಕ್ಕದ ಬಡಾವಣೆ ನಿವಾಸಿಗಳು ಸಂಜೆಯಿಂದಲೇ ಸಂಚಾರಿ ವಾಹನಗಳ ಟ್ಯಾಂಕರ್‌ಗಳಲ್ಲಿ ಗಣೇಶನನ್ನು ಕುಟುಂಬದವರೊಂದಿಗೆ ವಿಸರ್ಜಿಸಿ ಖುಷಿಪಟ್ಟರು.

ಕೆರೆಗಳಲ್ಲಿ ಗಣೇಶ ಮೂರ್ತಿ ವಿಸರ್ಜನೆ ಮಾಡದಂತೆ ಹಲವು ವರ್ಷಗಳಿಂದ ಬಿಬಿಎಂಪಿ ಹಾಗೂ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಜಾಗೃತಿ ಮೂಡಿಸಲಾಗುತ್ತಿದ್ದು, ಈ ಬಾರಿಯೂ ಬಿಬಿಎಂಪಿ ನೋಡಲ್ ಅಧಿಕಾರಿಗಳು ಅಲ್ಲಲ್ಲಿ ನಿಂತು ಮಾಹಿತಿ ನೀಡಿದರು.

ಇದಲ್ಲದೇ ಹೆಬ್ಬಾಳ, ಸ್ಯಾಂಕಿ, ಯಡಿಯೂರು, ಹಲಸೂರು ಕೆರೆಗಳಲ್ಲಿ ಸೆಪ್ಟಂಬರ್ ತಿಂಗಳಲ್ಲೂ ಗಣೇಶ ವಿಸರ್ಜನೆಗೆ ವ್ಯವಸ್ಥೆ ಇರಲಿದೆ.

2.19 ಲಕ್ಷ ಗಣೇಶ ಮೂರ್ತಿಗಳ ವಿಸರ್ಜನೆ

ಬೆಂಗಳೂರು: ಗಣೇಶ ಹಬ್ಬದ ದಿನವಾದ ಬುಧವಾರ ನಗರದಲ್ಲಿ 2.19 ಲಕ್ಷ ಮೂರ್ತಿಗಳನ್ನು ವಿಸರ್ಜಿಸಲಾಗಿದೆ.

ಹಲವು ಪ್ರದೇಶಗಳಲ್ಲಿ ಗಣೇಶ ಹಬ್ಬದ ದಿನ ಬೆಳಿಗ್ಗೆ ಮೂರ್ತಿಗೆ ಪೂಜೆ ನೆರವೇರಿಸಿ, ಸಂಜೆಯೇ ಮೂರ್ತಿಗಳನ್ನು ವಿಸರ್ಜಿಸಲಾಯಿತು. ಬಿಬಿಎಂಪಿ ಸಜ್ಜುಗೊಳಿಸಿದ್ದ ಕೆರೆ, ಕಲ್ಯಾಣಿ, ಮೊಬೈಲ್ ಟ್ಯಾಂಕ್‌ಗಳಲ್ಲಿ, ಕೆಲವು ಕಡೆ ಮನೆಗಳಲ್ಲಿನ ತೊಟ್ಟಿ ಅಥವಾ ಬಕೆಟ್‌ಗಳಲ್ಲಿ ಮೂರ್ತಿಗಳನ್ನು ವಿಸರ್ಜಿಸಲಾಯಿತು. ಪಿಒಪಿ ಮೂರ್ತಿಗಳ ನಿಷೇಧವಿದ್ದರೂ ಯಡಿಯೂರು ಕೆರೆಯೊಂದಲ್ಲೇ 1,200 ಪಿಒಪಿ ಮೂರ್ತಿಗಳ ವಿಸರ್ಜನೆಯಾಗಿದೆ. ಇನ್ನುಳಿದ ಪ್ರದೇಶಗಳಲ್ಲೂ ಪಿಒಪಿ ಮೂರ್ತಿಗಳ ವಿಸರ್ಜನೆಯಾಗಿದೆ. ಆದರೆ, ಬಿಬಿಎಂಪಿ ಅಂಕಿ–ಅಂಶಗಳನ್ನು ನೀಡಿಲ್ಲ.

ಬಿಬಿಎಂಪಿಯ ಎಂಟೂ ವಲಯಗಳ ಕೆರೆಗಳಲ್ಲಿ ನಿರ್ಮಿಸಲಾಗಿರುವ ತಾತ್ಕಾಲಿಕ ಕಲ್ಯಾಣಿಗಳಲ್ಲಿ 1.53 ಲಕ್ಷ ಮೂರ್ತಿಗಳು, ಮೊಬೈಲ್ ಟ್ಯಾಂಕರ್‌ಗಳಲ್ಲಿ 65,717 ಮೂರ್ತಿಗಳು, ಯಡಿಯೂರು ಕೆರೆಯಲ್ಲಿ 3,800 ಕಾಗದದ ಮೂರ್ತಿಗಳು ವಿಸರ್ಜನೆಯಾಗಿವೆ.

‘ನಗರದಲ್ಲಿ ಜನರು ಪರಿಸರಸ್ನೇಹಿ ಮೂರ್ತಿಗಳನ್ನು ಪೂಜಿಸಿ ವಿಸರ್ಜನೆ ಮಾಡಿದ್ದಾರೆ. ಬಿಬಿಎಂಪಿಯ ಸೌಲಭ್ಯಗಳನ್ನು ಬಳಸಿಕೊಂಡಿದ್ದಾರೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಹೇಳಿದರು.

‘ಪಿಒಪಿ ಮೂರ್ತಿಗಳ ನಿಷೇಧವಿದ್ದರೂ ಜನರು ಅವುಗಳನ್ನೇ ಪೂಜಿಸಿ, ವಿಸರ್ಜನೆ ಮಾಡಿದ್ದಾರೆ. ಇಂತಹ ಮೂರ್ತಿಗಳನ್ನು ಬಳಸದಿರುವ ಬಗ್ಗೆ ಇನ್ನಷ್ಟು ಜಾಗೃತಿ ಮೂಡಿಸುವ ಕೆಲಸ ವರ್ಷ ಪೂರ್ತಿ ನಡೆಸಬೇಕು’ ಎಂದು ಅಭಿಪ್ರಾಯಪಟ್ಟರು.

ಯುಜಿಸಿ ಪಠ್ಯಕ್ರಮಕ್ಕೆ ರಾಜ್ಯದ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವವಿದ್ಯಾಲಯ ಧನ ಸಹಾಯ ಆಯೋಗ (ಯುಜಿಸಿ) ಬಿಡುಗಡೆ ಮಾಡಿರುವ ‘ಕಲಿಕಾ ಪಠ್ಯಕ್ರಮ ಆಧಾರಿತ ಕಲಿಕಾ ಚೌಕಟ್ಟು’ (ಎಲ್‌ಒಸಿಎಫ್) ಕರಡು ಪ್ರತಿಗೆ ರಾಜ್ಯ ಸರ್ಕಾರ ತೀವ್ರ ವಿರೋಧ ವ್ಯಕ್ತಪಡಿಸಿದೆ.



ಸುಧಾಕರ್

ಸುದ್ದಿಗಾರರ ಜೊತೆ ಈ ಬಗ್ಗೆ ಮಾತನಾಡಿದ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್, ‘ಯುಜಿಸಿ ರೂಪಿಸಿದ ಪಠ್ಯಕ್ರಮವನ್ನು ಒಪ್ಪಿಕೊಳ್ಳುವ ಪ್ರಶ್ನೆಯೇ ಇಲ್ಲ’ ಎಂದರು.

‘ಯುಜಿಸಿ ಒಂದು ನಿಯಂತ್ರಣ ಸಂಸ್ಥೆ. ಅದು ಪಠ್ಯಕ್ರಮ ರೂಪಿಸಲು ಅಧಿಕಾರ ಹೊಂದಿಲ್ಲ. ಪಠ್ಯಕ್ರಮ ರೂಪಿಸುವ ಅಧಿಕಾರವು ಪ್ರತಿ ವಿಶ್ವವಿದ್ಯಾಲಯದ ಅಧ್ಯಯನ ಮಂಡಳಿಗೆ (ಬಿಒಎಸ್) ಇದೆ. ಯುಜಿಸಿ ಬಿಡುಗಡೆ ಮಾಡಿದ ಪಠ್ಯಕ್ರಮ ಕರಡನ್ನು ಅಧ್ಯಯನ ಮಾಡಲು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಮಂಡಳಿ ತಜ್ಞರ ಸಮಿತಿಯನ್ನು ರಚಿಸಲಿದೆ’ ಎಂದರು.

‘ಯುಜಿಸಿ ಎಲ್ಲ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುತ್ತಿರುವುದು ಏಕೆಂದು ನಮಗೂ ಅರ್ಥವಾಗುತ್ತಿಲ್ಲ. ಅದು ತನ್ನ ಮಿತಿಗಳನ್ನು ತಿಳಿದುಕೊಳ್ಳಬೇಕು. ಯುಜಿಸಿಗೆ ಪಠ್ಯದ ಚೌಕಟ್ಟು ರೂಪಿಸುವ ಹಕ್ಕಿದೆಯೇ ಹೊರತು ಪಠ್ಯಕ್ರಮ ಅಲ್ಲ’ ಎಂದರು.

‘ಯುಜಿಸಿ ತೆಗೆದುಕೊಂಡ ಇತ್ತೀಚಿನ ಕ್ರಮಗಳು ಕೇಂದ್ರ ಸರ್ಕಾರವು ಶಿಕ್ಷಣ ವ್ಯವಸ್ಥೆಯ ಮೇಲೆ ಹಿಡಿತ ಸಾಧಿಸಲು ಮತ್ತು ತನ್ನ ಸಿದ್ಧಾಂತಗಳನ್ನು ಮಕ್ಕಳ ಮೇಲೆ ಹೇರಲು ಪ್ರಯತ್ನಿಸುತ್ತಿದೆ ಎಂಬುದನ್ನು ತೋರಿಸುತ್ತವೆ. ಯುಜಿಸಿ ತನ್ನ ಕಾರ್ಯಸೂಚಿಯನ್ನು ಹೇರಲು ನಾವು ಅವಕಾಶ ನೀಡುವುದಿಲ್ಲ. ವಿಶ್ವವಿದ್ಯಾಲಯಗಳಿಗೆ ಕುಲಪತಿಗಳನ್ನು ನೇಮಿಸುವ ರಾಜ್ಯ ಸರ್ಕಾರದ ಅಧಿಕಾರವನ್ನು ತೆಗೆದುಹಾಕಲು ಹಿಂದಿನ ಕರಡು ಪ್ರತಿಯಲ್ಲಿ ಯುಜಿಸಿ ಯತ್ನಿಸಿದ್ದನ್ನು ಮರೆಯುವಂತಿಲ್ಲ. ಅದಕ್ಕೆ ವಿರೋಧ ವ್ಯಕ್ತಪಡಿಸಿದವರಲ್ಲಿ ನಾವೇ ಮೊದಲಿಗರು. ಈಗ ಪಠ್ಯಕ್ರಮದ ಮೂಲಕ ಯುಜಿಸಿ ಮತ್ತೊಂದು ಪ್ರಯತ್ನ ಮಾಡುತ್ತಿದೆ’ ಎಂದು ಆರೋಪಿಸಿದರು.

ಮುಂದಿನ ಸಚಿವ ಸಂಪುಟ ಸಭೆಗೆ ಎಸ್‌ಇಪಿ: ‘ರಾಜ್ಯ ಶಿಕ್ಷಣ ನೀತಿ ಆಯೋಗ (ಎಸ್‌ಇಪಿ) ನೀಡಿರುವ ವರದಿ ಯನ್ನು ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗುವುದು. ಎಸ್‌ಇಪಿಯ ಸಂಕ್ಷಿಪ್ತ ವರದಿ ಸಿದ್ಧಪಡಿಸಲು ಉನ್ನತ ಶಿಕ್ಷಣ ಅಧಿಕಾರಿಗಳ ಪ್ರತ್ಯೇಕ ತಂಡ ರಚಿಸಲಾಗಿದೆ’ ಎಂದು ಸಚಿವರು ತಿಳಿಸಿದರು.

‘ವಿಜ್ಞಾನ, ಕಲಾ ವಿಭಾಗಕ್ಕೂ ಎಇಡಿಪಿ’

‘ವಾಣಿಜ್ಯ ಪದವಿಯ (ಬಿ.ಕಾಂ) ನಾಲ್ಕು ಕೋರ್ಸ್‌ಗಳಿಗೆ ಸೀಮಿತವಾಗಿರುವ ‘ಅಪ್ರೆಂಟಿಶಿಪ್ ಎಂಬೆಡೆಡ್ ಡಿಗ್ರಿ ಪ್ರೋಗ್ರಾಮ್ (ಎಇಡಿಪಿ) ಅನ್ನು ಮುಂದಿನ ದಿನಗಳಲ್ಲಿ ಡಿಪ್ಲೊಮಾ ಜತೆಗೆ ವಿಜ್ಞಾನ ಮತ್ತು ಕಲಾ ವಿಭಾಗಕ್ಕೂ ಪರಿಚಯಿಸುವ ಚಿಂತನೆ ಇದೆ’ ಎಂದು ಡಾ.ಎಂ.ಸಿ. ಸುಧಾಕರ್ ತಿಳಿಸಿದರು.

ಯುಜಿಸಿ ಪರಿಷ್ಕೃತ ಮಾರ್ಗಸೂಚಿಗಳ ಅನ್ವಯ 68 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಮತ್ತು ಬೋಟ್ (ಬಿಒಎಟಿ-ಶಿಷ್ಯವೇತನ ತರಬೇತಿ ಮಂಡಳಿ) ನಡುವೆ ಒಡಂಬಡಿಕೆಗೆ ಸಹಿ ಹಾಕುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

‘ನೇರವಾಗಿ ಉದ್ಯೋಗಾವಕಾಶ ಕಲ್ಪಿಸುವ ಉದ್ದೇಶದಿಂದ ಬಿ.ಕಾಂ ಕೋರ್ಸ್‌ಗಳಿಗೆ 2024-25ನೇ ಸಾಲಿನಲ್ಲಿ ಎಇಡಿಪಿ ಶೈಕ್ಷಣಿಕ ಕೋರ್ಸ್ ಪರಿಚಯಿಸಲಾಗಿದೆ. ರಾಜ್ಯದ 44 ಪ್ರಥಮ ದರ್ಜೆ ಕಾಲೇಜುಗಳ ಸುಮಾರು 1,600 ವಿದ್ಯಾರ್ಥಿಗಳು ಅದರಡಿ ಪ್ರವೇಶ ಪಡೆದಿದ್ದರು. ಈ ಬಾರಿ ಮತ್ತೆ 24 ಕಾಲೇಜುಗಳಲ್ಲಿ 2,600ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ’ ಎಂದರು.

ವಿದ್ಯುತ್ ವ್ಯತ್ಯಯ ನಾಳೆ

ಬೆಂಗಳೂರು: ಐ.ಟಿ.ಐ 220/66/11 ಕೆ.ವಿ. ಉಪ ಕೇಂದ್ರದಲ್ಲಿ ತುರ್ತು ನಿರ್ವಹಣೆ ಕೈಗೊಳ್ಳುವ ಕಾರಣ ಇದೇ 30ರಂದು ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ನಗರದ ಕೆಲವೆಡೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಜೈ ಭುವನೇಶ್ವರ ಲೇಔಟ್, ಕೆ.ಆರ್. ಪುರ ಮುಖ್ಯರಸ್ತೆ, ದೀಪಾ ಆಸ್ಪತ್ರೆ, ವಿನಾಯಕ ಲೇಔಟ್, ಅಜಿತ್ ಲೇಔಟ್, ಟಿ.ಸಿ. ಪಾಳ್ಯ ಸಿಗ್ನಲ್, ಭಟ್ಟರಹಳ್ಳಿ, ಚಿಕ್ಕಬಸವನಪುರ, ಯರಪ್ಪನ ಪಾಳ್ಯ, ಕುವೆಂಪುನಗರ, ರಾಮಮೂರ್ತಿನಗರ, ಎನ್‌ಆರ್‌ಐ ಲೇಔಟ್, ಸಿಎಎನ್‌ವಿ ಲೇಔಟ್, ರಾಘವೇಂದ್ರ ವೃತ್ತ, ಸೀ ಕಾಲೇಜು, ಆಲ್ಫಾ ಗಾರ್ಡನ್, ಬೆಥೆಲ್ ನಗರ, ಸ್ವತಂತ್ರ ನಗರ, ರಾಜೇಶ್ವರಿ ಲೇಔಟ್, ಮುನೇಶ್ವರ ಲೇಔಟ್, ಆಲ್ಫಾ ಗಾರ್ಡನ್ ಲೇಔಟ್, ಕೋ ಕೋನಟ್ ಗಾರ್ಡನ್, ಕೇಂಬ್ರಿಡ್ಜ್ ಲೇಔಟ್, ಕೇಂಬ್ರಿಡ್ಜ್ ಗಾರ್ಡನ್ ಲೇಔಟ್, ಗ್ಯಾಸ್ ಗೋಡೌನ್ ಮುಖ್ಯರಸ್ತೆ, ಸುತ್ತ ಮುತ್ತಲಿನ ಪ್ರದೇಶಗಳು.

ಒಲಿಂಪಿಯಾಡ್: ನಾರಾಯಣ ಶಿಕ್ಷಣ ಸಂಸ್ಥೆಗೆ ಎರಡು ಚಿನ್ನ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಅಂತರರಾಷ್ಟ್ರೀಯ ಖಗೋಳಶಾಸ್ತ್ರ ಮತ್ತು ಖಗೋಳ ಭೌತವಿಜ್ಞಾನ ಒಲಿಂಪಿಯಾಡ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ನಾರಾಯಣ ಶಿಕ್ಷಣ ಸಂಸ್ಥೆಯ ಇಬ್ಬರು ವಿದ್ಯಾರ್ಥಿಗಳು ಎರಡು ಚಿನ್ನದ ಪದಕ ಪಡೆದಿದ್ದಾರೆ.


‘ಬನಿಬ್ರತ ಮಜೀ ಮತ್ತು ಅಕ್ಷತ್ ಶ್ರೀವಾಸ್ತವ ಚಿನ್ನದ ಪದಕ ಪಡೆದವರು. ಆಗಸ್ಟ್ 11ರಿಂದ 21ರವರೆಗೆ ಮುಂಬೈನಲ್ಲಿ ನಡೆದ ಅಂತರರಾಷ್ಟ್ರೀಯ ಮಟ್ಟದ ಈ ಸ್ಪರ್ಧೆಯಲ್ಲಿ ವಿಶ್ವದ 300 ಪ್ರತಿಭಾವಂತ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಭಾರತ ತಂಡವು ಒಟ್ಟು ನಾಲ್ಕು ಚಿನ್ನ ಮತ್ತು ಒಂದು ಬೆಳ್ಳಿ ಪದಕ ಗೆದ್ದಿದ್ದು, ಅದರಲ್ಲಿ ಇಬ್ಬರು ನಮ್ಮ ವಿದ್ಯಾರ್ಥಿಗಳು’ ಎಂದು ನಾರಾಯಣ ಶಿಕ್ಷಣ ಸಂಸ್ಥೆಗಳ ನಿರ್ದೇಶಕರಾದ ಸಿಂಧೂರ ನಾರಾಯಣ ಮತ್ತು ಶರಣಿ ನಾರಾಯಣ ತಿಳಿಸಿದ್ದಾರೆ.

ಬನಿಬ್ರತ ಮಜೀ, ಅಕ್ಷತ್ ಶ್ರೀವಾಸ್ತವ

ಅಂತರರಾಷ್ಟ್ರೀಯ ಖಗೋಳಶಾಸ್ತ್ರ ಮತ್ತು ಖಗೋಳ ಭೌತವಿಜ್ಞಾನ ಒಲಿಂಪಿಯಾಡ್ (ಐಒಎಎ) ಸವಾಲಿನ ಶೈಕ್ಷಣಿಕ ಸ್ಪರ್ಧೆಗಳಲ್ಲಿ ಒಂದಾಗಿದೆ. ಪ್ರತಿಭೆ, ದತ್ತಾಂಶ ವಿಶ್ಲೇಷಣೆ ಮತ್ತು ವೀಕ್ಷಣಾ ಕೌಶಲಗಳನ್ನು ಆಧರಿಸಿ ಸ್ಪರ್ಧಿಗಳನ್ನು ಆಯ್ಕೆ ಮಾಡಲಾಗುತ್ತದೆ ಎಂದು ಅವರು ವಿವರಿಸಿದ್ದಾರೆ.

ಆರ್‌ಯುಎಎಸ್–ಎನ್‌ಐಎಎಸ್ ನಡುವೆ ಒಪ್ಪಂದ

ಪ್ರಜಾವಾಣಿ ವಾರ್ತೆ



ಜಂಟಿ ಡಾಕ್ಟರೇಟ್ ಪ್ರೋಗ್ರಾಂಗಾಗಿ ಎಂ.ಎಸ್. ರಾಮಯ್ಯ ಆನ್ವಯಿಕ ವಿಜ್ಞಾನ ವಿಶ್ವವಿದ್ಯಾಲಯವು ರಾಷ್ಟ್ರೀಯ ಸುಧಾರಿತ ಅಧ್ಯಯನ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ.

ಬೆಂಗಳೂರು: ಜಂಟಿ ಡಾಕ್ಟರೇಟ್ ಪ್ರೋಗ್ರಾಂಗಾಗಿ ಎಂ.ಎಸ್. ರಾಮಯ್ಯ ಆನ್ವಯಿಕ ವಿಜ್ಞಾನ ವಿಶ್ವವಿದ್ಯಾಲಯವು (ಆರ್‌ಯುಎಎಸ್) ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್‌ನೊಂದಿಗೆ (ಎನ್‌ಐಎಎಸ್) ಒಡಂಬಡಿಕೆ ಮಾಡಿಕೊಂಡಿದೆ.

ಇದು ಐತಿಹಾಸಿಕ ಸಹಯೋಗ. ಸಮಾಜ ವಿಜ್ಞಾನ, ರಾಷ್ಟ್ರೀಯ ಭದ್ರತೆ, ನೀತಿ ಮತ್ತು ಸುಸ್ಥಿರತೆ ಸಂಶೋಧನಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮಾಡಿಕೊಂಡಿರುವ ಒಪ್ಪಂದ ಇದಾಗಿದೆ. ಎನ್‌ಐಎಎಸ್ ವಿದ್ಯಾರ್ಥಿಗಳ ಪಿಎಚ್.ಡಿ ನೋಂದಣಿ ಮಾಡಲಿದೆ ಮತ್ತು ಅವರಿಗೆ ಡಾಕ್ಟರೇಟ್ ಪದವಿಯನ್ನು ಎಂಎಸ್ ಆರ್‌ಯುಎಎಸ್‌ನಿಂದ ನೀಡಲಾಗುತ್ತದೆ. ಎನ್‌ಐಎಎಸ್‌ನಲ್ಲಿರುವ ಉನ್ನತ ಬೋಧಕ ಸಿಬ್ಬಂದಿ ಆರ್‌ಯುಎಎಸ್‌ನಲ್ಲಿಯೂ ವಿವಿಧ ವಿಭಾಗಗಳಲ್ಲಿ ಬೋಧನೆ ಮಾಡಲಿದ್ದಾರೆ. ಇದು ವಿದ್ಯಾರ್ಥಿಗಳ ಜ್ಞಾನ ವಿಸ್ತರಣೆಗೆ ಅನುಕೂಲ ಆಗಲಿದೆ ಎಂದು ಆರ್‌ಯುಎಎಸ್ ತಿಳಿಸಿದೆ.

ಸಂಶೋಧನಾರ್ಥಿಗಳು ಅಡ್ವಾನ್ಸ್ ಹೆಲ್ತ್ ಸೈನ್ಸಸ್ ರೀಸರ್ಚ್, ಇಂಧನ, ಎಐ ಹಾಗೂ ಮಷಿನ್ ಲರ್ನಿಂಗ್, ಹವಾಮಾನ ಬದಲಾವಣೆ ಮತ್ತಿತರ ಕ್ಷೇತ್ರಗಳಲ್ಲಿ ಸಂಪನ್ಮೂಲ ಬಳಕೆ, ಸಂಶೋಧನಾ ಪರಿಸರ ವ್ಯವಸ್ಥೆಯು ಆರ್‌ಯುಎಎಸ್ ಕ್ಯಾಂಪಸ್‌ನಲ್ಲಿ ದೊರೆಯಲಿದೆ ಎಂದು ಹೇಳಿದೆ.

ಎನ್‌ಐಎಎಸ್ ನಿರ್ದೇಶಕ ಶೈಲೇಶ್ ನಾಯಕ್ ಮತ್ತು ಆರ್‌ಯುಎಎಸ್ ಕುಲಪತಿ ಕುಲ್ದೀಪ್ ಕುಮಾರ್ ರೈನಾ ಒಡಂಬಡಿಕೆಗೆ ಸಹಿ ಹಾಕಿದರು.

ನಗರದಲ್ಲಿ ಇಂದು

‘ಭಾರತದಲ್ಲಿ ಅಪ್ರಾಪ್ತ ವಯಸ್ಸಿನ ಹೆಣ್ಣುಮಕ್ಕಳನ್ನು ಭಯ ಮುಕ್ತಗೊಳಿಸಿ ಅವರಿಗೆ ಸಶಕ್ತ ಮತ್ತು ಸಮರ್ಥ ಪರಿಸರ ದಕ್ಕುವಂತಾಗಲು’, ‘ಪೋಕ್ಸೊ ಕಾಯ್ದೆ–ಸವಾಲುಗಳನ್ನು ಎದುರಿಸಿ ಪ್ರಗತಿಯೆಡೆಗೆ ಅಣಿಗೊಳಿಸುವ ನಿಟ್ಟಿನಲ್ಲಿ ಮುಂದಕ್ಕೆ ಕೊಂಡೊಯ್ಯುವ ಅವಕಾಶಗಳು’ ಕಾರ್ಯಕ್ರಮ: ಉದ್ಘಾಟನೆ: ವಿಭು ಬಖ್ರು, ಅಧ್ಯಕ್ಷತೆ: ಅನು ಶಿವರಾಮನ್, ಉಪಸ್ಥಿತಿ: ಕೆ.ಎಸ್. ಮುದಗಲ್, ಎಸ್. ಸುನಿಲ್ ದತ್ತ ಯಾದವ್, ಅತಿಥಿಗಳು: ಕೆ. ನಾಗಣ್ಣಗೌಡ, ಶಾಲಿನಿ ರಜನೀಶ್, ಸೋನಿ ಕುಟ್ಟಿ ಜಾರ್ಜ್, ಆಯೋಜನೆ: ಬಾಲಾಪರಾಧಿ ನ್ಯಾಯ ಸಮಿತಿ, ಪೋಕ್ಸೊ ಸಮಿತಿ, ಕರ್ನಾಟಕ ಹೈಕೋರ್ಟ್, ಸ್ಥಳ: ಕರ್ನಾಟಕ ನ್ಯಾಯಾಂಗ ಅಕಾಡೆಮಿ, ಬೆಳಿಗ್ಗೆ 9.30



ವಿಭು ಬಖ್ರು

ಗಣೇಶೋತ್ಸವದ ವಿಶೇಷ

ಸಂಗೀತ ಕಛೇರಿ: ಪ್ರಸ್ತುತಿ: ರಘೋತ್ತಮ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಸ್ವಸ್ತಿಕ್ ಯುವಕರ ಸಂಘ, ಐದನೇ ಮುಖ್ಯ ರಸ್ತೆ, ಮಿಲ್ಕ್ ಕಾಲೊನಿ, ರಾಜಾಜಿನಗರ, ಎರಡನೇ ಹಂತ, ಸಂಜೆ 7.30

ಆಯೋಜನೆ: ಬೆಂಗಳೂರು ಅಡ್ವೊಕೇಟ್ ಫ್ರೆಂಡ್ಸ್ ಸರ್ಕಲ್, ಬೆಂಗಳೂರು ವಕೀಲರ ಸಂಘ, ಮಧ್ಯಾಹ್ನ 1.30ಕ್ಕೆ ಜಾನಪದ ಗೀತೆಗಳ ಗಾಯನ: ರಾಮಚಂದ್ರ ಹಡಪದ ಮತ್ತು ತಂಡ, ಸ್ಥಳ: ವಕೀಲರ ಸಂಘ, ಹೈಕೋರ್ಟ್ ಯೂನಿಟ್ ಹಾಲ್–1

ಇತರೆ ಕಾರ್ಯಕ್ರಮಗಳು:

ಸಂಸ್ಥಾಪಕರ ದಿನಾಚರಣೆ, ವಚನ ದಿನ: ಅತಿಥಿಗಳು: ಸಿ. ಸೋಮಶೇಖರ್, ಕೆ.ವಿ. ನಾಗರಾಜಮೂರ್ತಿ, ಪ್ರಮೀಳಾ ಗರಡಿ, ಉಪಸ್ಥಿತಿ: ಗೀತಾ ಜಯಂತ್, ದಿಬ್ಬೂರು ಗಿರೀಶ್, ಪಿ. ವಿಜಯಕುಮಾರ್, ಸುಧಾ ನಾಗರಾಜ್, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಶಿವರಾತ್ರೀಶ್ವರ ವೃತ್ತ, ಜಯನಗರ, ಬೆಳಿಗ್ಗೆ 10

ರಾಜ್ಯಮಟ್ಟದ ಚಾರ್ಟರ್ಡ್ ಅಕೌಂಟೆಂಟ್ಸ್ ಸಮ್ಮೇಳನ: ಉದ್ಘಾಟನೆ: ಮಹರ್ಷಿ ಪ್ರಶಾಂತ್ ಕುಮಾರ್, ನಗಿನ್‌ಚಂದ್ ಖಿಂಚಾ, ಸಚಿನ್ ಕುಮಾರ್ ಬಿ.ಪಿ., ಪ್ರಶಾಂತ್ ಜಿ.ಎಸ್., ಆಯೋಜನೆ: ದಿ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ, ಸ್ಥಳ: ಪ್ರಿನ್ಸೆಸ್ ಶ್ರೈನ್, ಅರಮನೆ ಮೈದಾನ, ಬೆಳಿಗ್ಗೆ 10ರಿಂದ

ರಾಮಕೃಷ್ಣ ಹೆಗಡೆ ಅವರ ಜನ್ಮ ದಿನಾಚರಣೆ: ಅತಿಥಿಗಳು: ದೇವೇಂದ್ರ ಸಿಂಗ್ ಆರ್ಯ ಬಘೇಲ್, ಸಾರಿಕಾ ಸಿಂಗ್ ಆರ್ಯ ಬಘೇಲ್, ಲೋಕೇಶ್ ವಿ., ಅಧ್ಯಕ್ಷತೆ: ಚಂದ್ರಶೇಖರ ವಿ. ಸ್ಥಾವರಮಠ್, ಆಯೋಜನೆ: ಲೋಕ್ ಶಕ್ತಿ ಪಾರ್ಟಿ, ಸ್ಥಳ: ಲಲಿತಕಲಾ ಅಕಾಡೆಮಿ, ಎಚ್‌ಎಂಟಿ ಲೇಔಟ್ ಮತ್ತಿಕೆರೆ, ಬೆಳಿಗ್ಗೆ 11.30

ರಾಮಕೃಷ್ಣ ಹೆಗಡೆ ಜನ್ಮದಿನಾಚರಣೆ, ಚಿಂತನ ಮಂಥನ ಸಭೆ, ‘ಕಾಯಕಶ್ರೀ’ ಪ್ರಶಸ್ತಿ ಪ್ರದಾನ: ಅಧ್ಯಕ್ಷತೆ: ಜೈಪ್ರಕಾಶ್ ಬಂಧು, ಉದ್ಘಾಟನೆ: ಸಂತೋಷ್ ಹೆಗ್ಡೆ, ಪುಷ್ಪ ನಮನ: ಪ್ರತಿಭಾ ಪ್ರಹ್ಲಾದ್, ಅತಿಥಿಗಳು: ಪಿ.ಜಿ.ಆರ್. ಸಿಂಧ್ಯ, ಕೋಡಿಹಳ್ಳಿ ಚಂದ್ರಶೇಖರ್, ಎಂ.ಪಿ. ನಾಡಗೌಡ, ವಾಣಿ ಎನ್. ಶೆಟ್ಟಿ, ರವಿ ಹೆಗಡೆ, ಆಯೋಜನೆ: ಜನತಾ ಪಕ್ಷ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11.30

ಅಂಗಾಂಗ ದಾನ ಪ್ರತಿಜ್ಞಾ ಅಭಿಯಾನಕ್ಕೆ ಚಾಲನೆ: ಆಯೋಜನೆ ಮತ್ತು ಸ್ಥಳ: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಸಂಜೆ 4

ಹಳಗನ್ನಡ ರಸಗ್ರಹಣ ತರಗತಿಗಳ ಸಮಾರೋಪ, ಬೆಂ.ಶಾ. ಶ್ಯಾಮಲಾ ರತ್ನಕುಮಾರಿ ಅವರ ‘ರಾಷ್ಟ್ರಕೂಟ ರಾಜ್ಯ’ ಪುಸ್ತಕದ ಬಿಡುಗಡೆ: ಅತಿಥಿ: ದೇವರಕೊಂಡಾರೆಡ್ಡಿ, ಪುಸ್ತಕ ಪರಿಚಯ: ಪಿ.ವಿ. ಕೃಷ್ಣಮೂರ್ತಿ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

ಅಹರ್ನಿಶಿ–2025 ನೃತ್ಯೋತ್ಸವ: ಅತಿಥಿ: ಗೀತಾ ಅನಂತನಾರಾಯಣ್, ಭರತನಾಟ್ಯ ಪ್ರದರ್ಶನ: ಸತ್ಯನಾರಾಯಣರಾಜು, ಅನನ್ಯಾ ಕಲಾ ನಿಕೇತನ ತಂಡ, ಆಯೋಜನೆ: ಅನನ್ಯಾ ಕಲಾ ನಿಕೇತನ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 6

‘ಸೆವೆನ್ ವೇಯ್ಸ್ ಟು ಸೀ ದಿ ವರ್ಲ್ಡ್’ ಕುರಿತು ಚರ್ಚೆ: ಭಾಷಣಕಾರರು: ದೀಪಾ ಬಲ್ಸಾವರ್, ಪಂಕಜ್ ಸೈಕಿಯಾ, ಒಜಿನ್ ನಯಮ್, ರಾಜೀವ್ ಇಪ್, ಪ್ರಿಯಾ ಕುರಿಯನ್, ನಿರ್ವಹಣೆ: ತೇಜಸ್ವಿ ಶಿವಾನಂದ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಎರಡನೇ ಹಂತ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in


ಶುಕ್ರವಾರ, ಆಗಸ್ಟ್ 29, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 239 | ಪುಟ 14
prajavani.net prajavani www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಅಮೀಬಾ ಸೋಂಕು
ಕೇರಳದ ಕೋಯಿಕ್ಕೋಡ್ ಜಿಲ್ಲೆಯಲ್ಲಿ ಮಿದುಳು ಸೋಂಕಿನ (ಅಮೀಬಿಕ್ ಎನ್ಸೆಫಲಿಟಿಸ್) ಮತ್ತೊಂದು ಪ್ರಕರಣ ಪತ್ತೆಯಾಗಿದೆ. 43 ವರ್ಷದ ಮಹಿಳೆಯೊಬ್ಬರಲ್ಲಿ ಈ ಸೋಂಕು ದೃಢಪಟ್ಟಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ



ನೀರಜ್‌ಗೆ ಬೆಳ್ಳಿ
ಭಾರತದ ಜಾವೆಲಿನ್ ಥ್ರೋ ತಾರೆ ನೀರಜ್ ಚೋಪ್ರಾ ಅವರು ಜೂರಿಕ್‌ನಲ್ಲಿ ಗುರುವಾರ ರಾತ್ರಿ ನಡೆದ ಡೈಮಂಡ್ ಲೀಗ್ ಫೈನಲ್‌ನಲ್ಲಿ ಬೆಳ್ಳಿ ಪದಕ ಗೆದ್ದರು

ಸೆನ್ಸೆಕ್ಸ್ 80,080 | ನಿಫ್ಟಿ 24,500 | $/₹ 87.58 | ಚಿನ್ನ (Std. 10g) ₹1,06,400 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,23,900 (ಬೆಂಗಳೂರು)

ಹೆದ್ದಾರಿ ಕಾಮಗಾರಿಗೆ ಆಮೆಗತಿ

ರಾಜ್ಯದಲ್ಲಿ ₹23,588 ಕೋಟಿ ಮೊತ್ತದ ಕಾಮಗಾರಿಗೆ ಭೂಸ್ವಾಧೀನವೇ ಕಗ್ಗಂಟು

• ಮಂಜುನಾಥ ಹೆಬ್ಬಾರ್

ನವದೆಹಲಿ: ಕರ್ನಾಟಕದಲ್ಲಿ ಅನುಷ್ಠಾನಗೊಳ್ಳುತ್ತಿರುವ ₹23,588 ಕೋಟಿ ಮೊತ್ತದ 27 ಹೆದ್ದಾರಿ ಕಾಮಗಾರಿಗಳು ಭೂಸ್ವಾಧೀನದ ಕಗ್ಗಂಟಿನಿಂದಾಗಿ ಆಮೆಗತಿಯಲ್ಲಿ ಸಾಗುತ್ತಿವೆ.

ಭೂಸ್ವಾಧೀನ ಪ್ರಕ್ರಿಯೆ ವಿಳಂಬ, ಭೂ ಸಂತ್ರಸ್ತರಿಗೆ ಪರಿಹಾರ ವಿತರಣೆ ತಡ ಹಾಗೂ ರಾಜ್ಯ ಸರ್ಕಾರ ತನ್ನ ಪಾಲನ್ನು ನೀಡದಿರುವುದರಿಂದ ಹೆದ್ದಾರಿ ಕಾಮಗಾರಿಗಳು ಗಡುವಿನೊಳಗೆ ಪೂರ್ಣಗೊಳ್ಳುತ್ತಿಲ್ಲ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಅಸಹಾಯಕತೆ ವ್ಯಕ್ತಪಡಿಸಿದೆ.

ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ 576 ಹೆದ್ದಾರಿ ಕಾಮಗಾರಿಗಳು ಕಾಲಮಿತಿಯೊಳಗೆ ಪೂರ್ಣಗೊಂಡಿಲ್ಲ. ಮಹಾರಾಷ್ಟ್ರದಲ್ಲಿ ಅತಿ ಹೆಚ್ಚು ಕಾಮಗಾರಿಗಳು ವಿಳಂಬವಾಗಿವೆ. ಕರ್ನಾಟಕವು ಎರಡನೇ ಸ್ಥಾನದಲ್ಲಿದೆ.

ಒಬ್ಬರಿಗೂ ಈವರೆಗೆ ಪರಿಹಾರ ಇಲ್ಲ

ಬೇಲೂರು-ಹಾಸನ ನಡುವೆ ಚತುಷ್ಪಥ ಕಾಮಗಾರಿ ನಡೆಯುತ್ತಿದೆ. 29.5 ಕಿ.ಮೀ. ಉದ್ದದ ಕಾಮಗಾರಿಗೆ ₹698 ಕೋಟಿ ವೆಚ್ಚ ಮಾಡಲಾಗುತ್ತಿದೆ. ಹೆದ್ದಾರಿ ವಿಸ್ತರಣೆಗೆ 946 ಜನರ ಭೂಮಿ ಸ್ವಾಧೀನ ಮಾಡಿಕೊಳ್ಳಲಾಗುತ್ತಿದೆ. ₹316.33 ಕೋಟಿ ಭೂಪರಿಹಾರ ಕೊಡಬೇಕಿದೆ. ಆದರೆ, ಈವರೆಗೆ ಒಬ್ಬರಿಗೂ ಭೂಪರಿಹಾರ ಕೊಟ್ಟಿಲ್ಲ. ಜತೆಗೆ, ಇಲ್ಲಿ ಅರಣ್ಯ ಭೂಮಿ ವಶಪಡಿಸಿಕೊಳ್ಳಬೇಕಿದೆ.

▸10



ವಿಳಂಬದ ಕಾಮಗಾರಿಗಳಲ್ಲಿ ಅಗ್ರರಾಜ್ಯಗಳು (ಕಳೆದ 11 ವರ್ಷಗಳಲ್ಲಿ)

ರಾಜ್ಯ	ಕಾಮಗಾರಿಗಳು
ಮಹಾರಾಷ್ಟ್ರ	53
ಕರ್ನಾಟಕ	44
ಉತ್ತರ ಪ್ರದೇಶ	43
ಆಂಧ್ರ ಪ್ರದೇಶ	37
ಬಿಹಾರ	31
ಉತ್ತರಾಖಂಡ	27
ತೆಲಂಗಾಣ	24

6 ಪ್ಯಾಕೇಜ್‌ಗಳಿಗೂ ರೈತರಿಂದ ತಕರಾರು

ಬೆಳಗಾವಿ-ಹುನಗುಂದ-ರಾಯಚೂರು ನಡುವಿನ ಹೆದ್ದಾರಿ ವಿಸ್ತರಣೆ ಕಾಮಗಾರಿ ಆರು ಪ್ಯಾಕೇಜ್‌ಗಳಲ್ಲಿ ನಡೆಯುತ್ತಿದೆ. 227 ಕಿ.ಮೀ. ಉದ್ದದ ಕಾಮಗಾರಿಗೆ ₹6,629 ಕೋಟಿ ವ್ಯಯಿಸಲಾಗುತ್ತಿದೆ. ಆರು ಪ್ಯಾಕೇಜ್‌ಗಳಲ್ಲೂ ಭೂಸ್ವಾಧೀನಕ್ಕೆ ರೈತರು ತಕರಾರು ಎತ್ತಿದ್ದಾರೆ. ಸರ್ಕಾರ ನೀಡುತ್ತಿರುವ ಪರಿಹಾರ ಮೊತ್ತಕ್ಕೆ ರೈತರ ಸಹಮತ ಇಲ್ಲ.

ಜಿಲ್ಲಾಡಳಿತ ಹಾಗೂ ಪೊಲೀಸರ ನೆರವು ಸಿಕ್ಕರೆ ಮಾತ್ರ ಭೂಸ್ವಾಧೀನ ಪ್ರಕ್ರಿಯೆ ಮುಂದುವರಿಸಬಹುದು ಎಂದು ವಿಶೇಷ ಭೂಸ್ವಾಧೀನ ಅಧಿಕಾರಿಗಳು ಅಸಹಾಯಕತೆ ವ್ಯಕ್ತಪಡಿಸಿದ್ದಾರೆ.

ಇನ್ನೊಂದೆಡೆ, ಹೊಸಕೋಟೆಯಿಂದ ತಮಿಳುನಾಡಿನ ಗಡಿ ವರೆಗಿನ 20.9 ಕಿ.ಮೀ. ಹೆದ್ದಾರಿ ವಿಸ್ತರಣೆ ಕಾಮಗಾರಿಗೂ ರೈತರು ವರ್ಷದಿಂದ ಆಕ್ಷೇಪ ವ್ಯಕ್ತಪಡಿಸಿದ್ದರು.

▸10

ಹೆಚ್ಚುವರಿ ಪರಿಹಾರಕ್ಕೆ ಗ್ರಾಮಸ್ಥರ ಪಟ್ಟು

ತುಮಕೂರು-ಶಿವಮೊಗ್ಗ ನಡುವಿನ ಹೆದ್ದಾರಿ ವಿಸ್ತರಣೆ ಕಾಮಗಾರಿಯನ್ನು ಎರಡು ಪ್ಯಾಕೇಜ್‌ಗಳ ಮೂಲಕ ಮಾಡಲಾಗುತ್ತಿದೆ. 107 ಕಿ.ಮೀ. ಉದ್ದದ ಕಾಮಗಾರಿಗೆ ₹3,600 ಕೋಟಿ ವೆಚ್ಚ ಮಾಡಲಾಗುತ್ತಿದೆ. ಭೂ ಪರಿಹಾರ ಹೆಚ್ಚಿಸುವಂತೆ ಬೆಂಡೆಕೆರೆ ಗ್ರಾಮಸ್ಥರು ಪಟ್ಟು ಹಿಡಿದ ಕಾರಣ 3.1 ಕಿ.ಮೀ ಉದ್ದದ ಕಾಮಗಾರಿ ಕೆಲಸ ನನೆಗುದಿಗೆ ಬಿದ್ದಿದೆ. ಇದಲ್ಲದೇ, 2 ಕಿ.ಮೀ ಉದ್ದದ ರಸ್ತೆ ನಿರ್ಮಾಣಕ್ಕೆ ಜಾಗ ಇನ್ನೂ ಹಸ್ತಾಂತರ ಆಗಿಲ್ಲ.

▸10

ಹೆದ್ದಾರಿ ಕಾಮಗಾರಿಗಳಿಗೆ ವೇಗ ನೀಡುವ ಸಲುವಾಗಿಯೇ ಕಳೆದ ಎರಡು ವರ್ಷಗಳಲ್ಲಿ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರನ್ನು ಕನಿಷ್ಠ 10 ಸಲ ಭೇಟಿ ಮಾಡಿದ್ದೇನೆ. ಇದರಿಂದಾಗಿ, 13 ಕಡೆ ಸಮಸ್ಯೆ ಬಗೆಹರಿದಿದೆ. ಎರಡು-ಮೂರು ತಿಂಗಳಿಗೊಮ್ಮೆ ಪ್ರಗತಿ ಪರಿಶೀಲನೆ ನಡೆಸುತ್ತಿದ್ದೇನೆ. ಆರು ತಿಂಗಳಲ್ಲಿ ಎಲ್ಲ ಸಮಸ್ಯೆಗಳನ್ನು ಬಗೆಹರಿಸುತ್ತೇವೆ.

ಸತೀಶ ಜಾರಕಿಹೊಳಿ, *ಲೋಕೋಪಯೋಗಿ ಸಚಿವ*



ಬೀದರ್ ಜಿಲ್ಲೆಯ ಕಮಲನಗರ ತಾಲ್ಲೂಕಿನ ಚಿಮ್ಮೆಗಾಂವ್–ಚಿರ್ಕಿ ತಾಂಡಾ ನಡುವೆ ಸಂಪರ್ಕ ಕಲ್ಪಿಸುವ ಸೇತುವೆ ಮಳೆಯಿಂದಾಗಿ ಗುರುವಾರ ಕೊಚ್ಚಿ ಹೋಗಿದೆ ಪ್ರಜಾವಾಣಿ ಚಿತ್ರ

ಮಳೆ: ಸೇತುವೆಗಳು ಜಲಾವೃತ

ಕರಾವಳಿ, ಮಲೆನಾಡು, ‘ಕಲ್ಯಾಣ’ದಲ್ಲಿ ಹೆಚ್ಚಿದ ಅಬ್ಬರ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಕಲಬುರಗಿ: ಮಂಗಳೂರು, ಉಡುಪಿ, ಕೊಡಗು ಮತ್ತು ಕಲಬುರಗಿ, ಬೀದರ್, ಯಾದಗಿರಿ ಕೊಪ್ಪಳ ಜಿಲ್ಲೆಗಳಾದ್ಯಂತ ಬುಧವಾರ ರಾತ್ರಿಯಿಂದ ಗುರುವಾರ ಬೆಳಗಿನವರೆಗೆ ಭಾರಿ ಮಳೆಯಾಗಿದೆ.

ಮಳೆ ಸುರಿದ ಪರಿಣಾಮ ಹಲವು ಸೇತುವೆಗಳು ಜಲಾವೃತಗೊಂಡು ಸಂಚಾರ ಸ್ಥಗಿತಗೊಂಡಿದೆ. ಬೀದರ್‌ನ ಐತಿಹಾಸಿಕ ಬಹಮನಿ ಕೋಟೆಯ ಒಂದು ಭಾಗ ಕುಸಿದಿದೆ. ಬೀದರ್ ಜಿಲ್ಲೆಯಲ್ಲಿ 20 ಸೇತುವೆಗಳು ಜಲಾವೃತಗೊಂಡಿವೆ. ಮುನ್ನೆಚ್ಚರಿಕೆ ಕ್ರಮವಾಗಿ ದಕ್ಷಿಣ ಮಧ್ಯ ರೈಲ್ವೆಯು, ಬೀದರ್-ಕಲಬುರಗಿ, ಕಲಬುರಗಿ–ಬೀದರ್ ನಡುವಿನ ಡೆಮು ರೈಲಿನ ಸಂಚಾರವನ್ನು ಶುಕ್ರವಾರ (ಆ.29) ರದ್ದುಗೊಳಿಸಿದೆ.

ಕಲಬುರಗಿ ಜಿಲ್ಲೆ ಜೇವರ್ಗಿಯ ತಹಶೀಲ್ದಾರ್ ಕಚೇರಿ ಸೇರಿದಂತೆ ವಿವಿಧ ಕಚೇರಿ ಹಾಗೂ ಬಡಾವಣೆಗಳಿಗೆ ನೀರು ನುಗ್ಗಿದೆ. ಹಳ್ಳದ ಪ್ರವಾಹದಿಂದ ಜೇವರ್ಗಿ–ಗೌನಳ್ಳಿ ಗ್ರಾಮಕ್ಕೆ ತೆರಳುವ ಸೇತುವೆ ಮುಳುಗಡೆಯಾಗಿ ಸಂಚಾರ ಬಂದ್ ಆಗಿದೆ. ಜೇವರ್ಗಿ ತಾಲ್ಲೂಕಿನಲ್ಲಿ 21 ಮನೆಗಳು ಕುಸಿದು ಬಿದ್ದಿವೆ. ಆಂದೋಲಾ ಗ್ರಾಮದಲ್ಲಿ ಮಳೆಗೆ 21 ಕುರಿಗಳು ಸಾವನಪ್ಪಿವೆ.

ಚಿತ್ತಾಪುರ ತಾಲ್ಲೂಕಿನ ಕೊಲ್ಲೂರು ಗ್ರಾಮ ಪಂಚಾಯಿತಿ ಕಚೇರಿಗೆ ಮಳೆ ನೀರು ನುಗ್ಗಿದ್ದರಿಂದ ಯಂತ್ರೋಪಕರಣ, ಕಂಪ್ಯೂಟರ್, ಜೆರಾಕ್ಸ್ ಯಂತ್ರ, ದಾಖಲೆ-ಪತ್ರಗಳು ಹಾಳಾಗಿವೆ. ಯಾದಗಿರಿ ಜಿಲ್ಲೆಯ ಹುಣಸಗಿ ತಾಲ್ಲೂಕಿನ ಕೃಷ್ಣಾ ನದಿಯ ನಡುಗಡ್ಡೆಗಳಲ್ಲಿ ಮೇಯಲು ಬಿಟ್ಟಿದ್ದ 200ಕ್ಕೂ ಹೆಚ್ಚು ಕುರಿಗಳು ಪ್ರವಾಹದಲ್ಲಿ ಕೊಚ್ಚಿ ಹೋಗಿವೆ.

ಮೈಸೂರು ವರದಿ: ಕೊಡಗು ಜಿಲ್ಲೆಯ ಮಡಿಕೇರಿ, ಸುಂಟಿಕೊಪ್ಪ, ವಿರಾಜಪೇಟೆಯಲ್ಲಿ ಗುರುವಾರವೂ ಭಾರಿ ಮಳೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಗೆ ಹೊಂದಿಕೊಂಡಿರುವ ಸಂಪಾಜೆ ಘಟ್ಟ ಪ್ರದೇಶದಲ್ಲಿ ಭಾರಿ ಮಳೆಯಾಗುತ್ತಿದೆ. ಮಡಿಕೇರಿ–ವಿರಾಜಪೇಟೆ ಸಂಪರ್ಕ ಕಲ್ಪಿಸುವ ಶಕ್ತಿನಗರ ಬಳಿ ರಸ್ತೆಬದಿಯಲ್ಲಿ ಮಣ್ಣು ಕುಸಿದಿದೆ.

ಮಂಗಳೂರು ವರದಿ: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಧಾರಾಕಾರ ಮಳೆ ಮುಂದುವರಿದಿದೆ. ಚಿಕ್ಕಮಗಳೂರಿನಲ್ಲಿ ಮಧ್ಯಾಹ್ನದ ನಂತರ ಮಳೆ ಬಿರುಸು ಪಡೆದುಕೊಂಡಿತ್ತು. ಜಿಲ್ಲೆಯ ಮೂಡಿಗೆರೆ, ಆಲ್ದೂರು, ಕೊಟ್ಟಿಗೆಹಾರ, ಕೊಪ್ಪ, ಕಳಸ, ನರಸಿಂಹರಾಜಪುರ, ತರೀಕೆರೆ ಭಾಗದಲ್ಲಿ ಧಾರಾಕಾರವಾಗಿ ಸುರಿದಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕು ಸಂಟ್ಯಾರು-ಪಾಣಾಜೆ ರಸ್ತೆಯ ಕೈಕಾರದಲ್ಲಿ ರಸ್ತೆ ಮೇಲೆ ಮರ ಬಿದ್ದು ವಾಹನ ಸಂಚಾರಕ್ಕೆ ಅಡ್ಡಿಯಾಯಿತು. ಮಂಗಳೂರು ನಗರದ ರಾಜಕಾಲುವೆಗಳು ಉಕ್ಕಿ ಹರಿದಿದ್ದು ಚರಂಡಿ ನೀರು ರಸ್ತೆಯ ಮೇಲೆ ಹರಿದು ಹಲವು ಕಡೆಗಳಲ್ಲಿ ಸಂಚಾರಕ್ಕೆ ತೊಂದರೆಯಾಗಿದೆ. ಕುಂದಾಪುರ, ಬೈಂದೂರು, ಹೆಬ್ರಿ, ಕಾರ್ಕಳ, ಬ್ರಹ್ಮಾವರ, ಕಾರ್ಕಳದಲ್ಲಿ ನಿರಂತರ ಮಳೆ ಸುರಿದಿದೆ.

▸9


ಮನೆ ಕುಸಿತ: ಏಳು ಮಂದಿಗೆ ಗಾಯ

ವಿಜಯಪುರ, ಗದಗ, ಉತ್ತರ ಕನ್ನಡ ಜಿಲ್ಲೆಯಲ್ಲಿ ಬುಧವಾರ ರಾತ್ರಿ ಭಾರಿ ಮಳೆಯಾದ ಕಾರಣ, ಮುದ್ದೇಬಿಹಾಳ ತಾಲ್ಲೂಕಿನ ಹಿರೇಮುರಾಳ ಮತ್ತು ಬಸವನ ಬಾಗೇವಾಡಿ ತಾಲ್ಲೂಕಿನ ಕಾಮನಕೇರಿ ಗ್ರಾಮಗಳಲ್ಲಿ ಮನೆಗಳು ಕುಸಿದಿದ್ದು, ಏಳು ಮಂದಿ ಗಾಯಗೊಂಡಿದ್ದಾರೆ. ಮೂಕಿಹಾಳ ಬಳಿಯ ಸೇತುವೆ ಮುಳುಗಿದ್ದು, ತಾಳಿಕೋಟೆಯಿಂದ ಹಡಗಿನಾಳ ಮಾರ್ಗ ಬಂದ್ ಆಗಿದೆ.

‘75ನೇ ವರ್ಷಕ್ಕೆ ನಿವೃತ್ತಿಯಾಗಬೇಕು ಎಂದಿಲ್ಲ’

ನವದೆಹಲಿ (ಪಿಟಿಐ): ‘ನಾನು ನಿವೃತ್ತಿಯಾಗುತ್ತೇನೆ ಅಥವಾ ಬೇರೆಯವರು ಕೂಡ 75ನೇ ವಯಸ್ಸಿಗೆ ನಿವೃತ್ತಿಯಾಗಬೇಕು ಎಂಬುದಾಗಿ ನಾನು ಯಾರಿಗೂ ಹೇಳಿಲ್ಲ’ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಸ್ಪಷ್ಟಪಡಿಸಿದ್ದಾರೆ.

ಆರ್‌ಎಸ್‌ಎಸ್‌ನ ಶತಮಾನೋತ್ಸವದ ಅಂಗವಾಗಿ ಇಲ್ಲಿನ ವಿಜ್ಞಾನ ಭವನದಲ್ಲಿ ಗುರುವಾರ ನಡೆದ ಸರಣಿ ಉಪನ್ಯಾಸದ ಬಳಿಕ ಎರಡೂವರೆ ಗಂಟೆ ನಡೆದ ಪ್ರಶ್ನೋತ್ತರ ಗೋಷ್ಠಿಯಲ್ಲಿ ಸಭಿಕರ ಪ್ರಶ್ನೆಗಳಿಗೆ ಅವರು ಉತ್ತರಿಸಿದರು. ಕೃತಕ ಬುದ್ಧಿಮತ್ತೆ, ಸುಂಕ, ಜಾತಿ, ಶಿಕ್ಷಣ, ದೇಶಭಕ್ತಿ, ರಾಷ್ಟ್ರಭಾಷೆ, ದೇಶ ವಿಭಜನೆ ಸೇರಿದಂತೆ ಹಲವು ವಿಷಯಗಳ ಬಗ್ಗೆ ವಿಶ್ಲೇಷಿಸಿದರು.



ಮೋಹನ ಭಾಗವತ್

ಪ್ರಧಾನಿ ನರೇಂದ್ರ ಮೋದಿ, ಮೋಹನ್ ಭಾಗವತ್ ಅವರು ಸೆಪ್ಟೆಂಬರ್ ತಿಂಗಳಿನಲ್ಲಿ 75ನೇ ವರ್ಷಕ್ಕೆ ಕಾಲಿಡಲಿದ್ದಾರೆ. ಹೀಗಾಗಿ, ಇಬ್ಬರೂ ತಮ್ಮ ಹುದ್ದೆ ತೆರವುಗೊಳಿಸಲಿದ್ದಾರೆ ಎಂಬ ವದಂತಿಗಳು ಹರಡಿರುವ ಬೆನ್ನಲ್ಲೇ, ನಿವೃತ್ತಿ ಕುರಿತು ಭಾಗವತ್ ಸ್ಪಷ್ಟನೆ ನೀಡಿದ್ದಾರೆ.

▸9

ಭಾಗವತ್ ಹೇಳಿದ್ದು...

- ಕಾಶಿ–ಮಥುರಾ ಪುನಶ್ಚೇತನ ಅಭಿಯಾನವನ್ನು ಆರ್‌ಎಸ್‌ಎಸ್ ಬೆಂಬಲಿಸಲ್ಲ; ಸ್ವಯಂಸೇವಕರು ಭಾಗ ವಹಿಸುವುದಕ್ಕೆ ಅಭ್ಯಂತರವಿಲ್ಲ
- ಭಾರತೀಯರು ಮಾತೃಭಾಷೆ, ರಾಜ್ಯಭಾಷೆ, ಇಡೀ ದೇಶಕ್ಕೆ ಸಂಪರ್ಕ ಸೇತುವಾದ ರಾಷ್ಟ್ರ ಭಾಷೆ–ಹೀಗೆ ಮೂರು ಭಾಷೆಯನ್ನು ಕಲಿಯುವುದು ಅಗತ್ಯ
- ರಸ್ತೆಗಳು, ಸ್ಥಳಗಳಿಗೆ ಆಕ್ರಮಣಕಾರರ ಹೆಸರನ್ನು ಇಡಬಾರದು. ಮುಸಲ್ಮಾನರ ಹೆಸರನ್ನು ಇಡಬಾರದು ಎಂದು ಹೇಳುತ್ತಿಲ್ಲ, ಆಕ್ರಮಣಕಾರರ ಹೆಸರನ್ನು ಇಡುವುದು ಬೇಡ

▸9

ನಗದು ಬಹುಮಾನದ ಮೊತ್ತ ಹೆಚ್ಚಳ: ಸಿ.ಎಂ

ಬೆಂಗಳೂರು: ‘ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಪದಕ ಗೆದ್ದ ಕರ್ನಾಟಕದ ಕ್ರೀಡಾಪಟುಗಳಿಗೆ ನೀಡುವ ನಗದು ಬಹುಮಾನದ ಮೊತ್ತವನ್ನು ಹೆಚ್ಚಳ ಮಾಡಲಾಗಿದೆ’ ಎಂದು ಸಿ.ಎಂ ಸಿದ್ದರಾಮಯ್ಯ ಪ್ರಕಟಿಸಿದರು.

▸12

ಚಿನಕುರುಳಿ ಪ್ರಕಾಶ್ ಶೆಟ್ಟಿ



ಹವಾಮಾನ ಮುನ್ಸೂಚನೆ: ನಗರದಲ್ಲಿ ಸಾಮಾನ್ಯವಾಗಿ ಮೋಡ ಕವಿದ ವಾತಾವರಣವಿರಲಿದ್ದು, ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ.

‘ಪ್ರಶಸ್ತಿಗಳು ಕಲಾವಿದರ ಕೊಡುಗೆ ಅಳೆಯುವ ಮಾನದಂಡವಲ್ಲ’

ಬೆಂಗಳೂರು: ‘ಪ್ರಶಸ್ತಿಗಳು ಕಲಾವಿದರ ಕೊಡುಗೆಯನ್ನು ಅಳೆಯುವ ಏಕೈಕ ಮಾನದಂಡವಲ್ಲ ಎಂದು ಸಿಎಂಆರ್ ವಿಶ್ವವಿದ್ಯಾಲಯ ಹಾಗೂ ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಕೆ.ಸಿ.ರಾಮಮೂರ್ತಿ ಹೇಳಿದರು.

ಸಿಎಂಆರ್ ವಿಶ್ವವಿದ್ಯಾಲಯದ ವಾಸ್ತುಶಿಲ್ಪ ವಿಭಾಗ ಆಯೋಜಿಸಿದ್ದ ‘ಬ್ರಷಸ್ ಆ್ಯಂಡ್ ಬಿಯ್ಯಾಂಡ್’ ರಾಷ್ಟ್ರೀಯ ವಾಸ್ತುಶಿಲ್ಪ ಕಲಾ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ‘ಈ ಶಿಬಿರವು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದಕ್ಕೆ ಉತ್ತಮ ವೇದಿಕೆಯಾಗಿದೆ’ ಎಂದರು.

ಏಕ್ಯಾ ಸಮೂಹ ಶಾಲೆಗಳ ಸಂಸ್ಥಾಪಕಿ ತ್ರೀಸ್ತಾ ರಾಮಮೂರ್ತಿ, ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷ ಪ.ಸ. ಕುಮಾರ್, ವಿಶ್ವವಿದ್ಯಾಲಯದ ಕುಲಪತಿ ಕೆ.ಆರ್. ಜಯದೀಪ್ ಆರ್. ರೆಡ್ಡಿ, ಸಿಎಂಆರ್ ವಿಶ್ವವಿದ್ಯಾಲಯದ ಸಮ ಕುಲಾಧಿಪತಿ ಪ್ರವೀಣ್ ಆರ್., ಕುಲಸಚಿವ ಧನಂಜಯ ಎಂ., ಸ್ಕೂಲ್ ಆಫ್ ಆರ್ಕಿಟೆಕ್ಚರ್ ವಿಭಾಗದ ನಿರ್ದೇಶಕರಾದ ಮುರಳೀಧರ ಉಪಸ್ಥಿತರಿದ್ದರು.



ಶಿಬಿರದಲ್ಲಿ ಪ್ರದರ್ಶಿಸಿರುವ ಕಟ್ಟಿಗೆಯ ಕಲಾಕೃತಿಯ ಬಗ್ಗೆ ಕಲಾವಿದರೊಬ್ಬರು ವಿವರಿಸಿದರು. ಪ.ಸ. ಕುಮಾರ್, ಕೆ.ಸಿ. ರಾಮಮೂರ್ತಿ ಉಪಸ್ಥಿತರಿದ್ದರು

ಗಮನ ಸೆಳೆದ ಪ್ರಕಾರಗಳು

ಈ ಶಿಬಿರದಲ್ಲಿ ವುಡ್‌ ಕಟ್ ಮುದ್ರಣ, ಮಿಶ್ರ ಮಾಧ್ಯಮ, ಚಿತ್ರಕಲೆ ಸೇರಿದಂತೆ ಅನೇಕ ಕಲಾ ಪ್ರಕಾರಗಳು ನೋಡುಗರ ಕಣ್ಮನ ಸೆಳೆದವು. ಶಿಬಿರದಲ್ಲಿ ಭಾಗವಹಿಸಿದ ಎಲ್ಲ ಕಲಾವಿದರಿಗೆ ಸ್ಮರಣಿಕೆಗಳನ್ನು ನೀಡಿ ಗೌರವಿಸಲಾಯಿತು.

ಶ್ರೀ ವಿನಾಯಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್

ರಿ.ನಂ. ಬಿ/ಎಆರ್‌ಬಿಎಲ್/1800/70-71

ನಂ.14, 3ನೇ ಮುಖ್ಯ ರಸ್ತೆ, ಪ್ಯಾಲೇಸ್ ಗುಟ್ಟಹಳ್ಳಿ, ಬೆಂಗಳೂರು-560 003.

ದೂ: 23441545, 23441546, 23419545, 23241399.

52ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ತಿಳುವಳಿಕೆ

ದಿನಾಂಕ: 14/09/2025ರ ಭಾನುವಾರ ಬೆಳಿಗ್ಗೆ 10:00 ಘಂಟೆಗೆ

ಮೇಲ್ಕಂಡ ಸೊಸೈಟಿಯ 2024-2025ನೇ ಸಾಲಿನ 52ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ದಿನಾಂಕ: 14/09/2025ರ ಭಾನುವಾರ ಬೆಳಿಗ್ಗೆ 10:00 ಘಂಟೆಗೆ "ಶ್ರೀ ಆಂಜನೇಯ ಸ್ವಾಮಿ ದೇವಾಲಯ ಟ್ರಸ್ಟ್ (ರಿ.) ಕಲ್ಯಾಣ ಮಂಟಪ" ವೆಂಕಟಸ್ವಾಮಿರಾಜು ರಸ್ತೆ, ಶ್ರೀ ಆಂಜನೇಯ ಸ್ವಾಮಿ ದೇವಾಲಯ ವೃತ್ತ, ರಾಜಾಮಹಲ್ ಗುಟ್ಟಹಳ್ಳಿ, ಬೆಂಗಳೂರು-560 020 ಇದರ ಆವರಣದಲ್ಲಿ ಸೊಸೈಟಿಯ ಅಧ್ಯಕ್ಷರಾದ ಶ್ರೀ ಆರ್. ರಮೇಶ್‌ರವರ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಅರ್ಹ ಮಾನ್ಯ ಸಾಮಾನ್ಯ ಸದಸ್ಯರಿಗೆ ಸರ್ವ ಸದಸ್ಯರ ಸಭೆಯ ನೋಟಿಸ್‌ನ್ನು ಅಂಚೆ ಮೂಲಕ ಕಳುಹಿಸಲಾಗಿದೆ. ನೋಟೀಸ್ ತಲುಪದಿದ್ದಲ್ಲಿ ಈ ಪ್ರಕಟಣೆಯನ್ನೇ ಅಧಿಕೃತ ನೋಟೀಸ್ ಎಂದು ತಿಳಿದು ಅರ್ಹ ಮಾನ್ಯ ಸಾಮಾನ್ಯ ಸದಸ್ಯರು ಸೊಸೈಟಿಯಿಂದ ನೀಡಿರುವ ಗುರುತಿನ ಚೀಟಿಯೊಂದಿಗೆ ಸಭೆಗೆ ಆಗಮಿಸಬೇಕಾಗಿ ಕೋರಿದೆ. 2024-2025ನೇ ಶೈಕ್ಷಣಿಕ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷೆಯಲ್ಲಿ ಕನಿಷ್ಠ ಶೇಕಡ 80 ಅಂಕಗಳನ್ನು ಪಡೆದು ಉತ್ತೀರ್ಣರಾಗಿರುವಂತಹ ಅರ್ಹ ಸಾಮಾನ್ಯ ಸದಸ್ಯರುಗಳ ಪ್ರತಿಭಾವಂತ ಮಕ್ಕಳಿಗೆ ಪ್ರೋತ್ಸಾಹಕ ಬಹುಮಾನಗಳನ್ನು ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸೊಸೈಟಿಗೆ ಭೇಟಿ ನೀಡಲು ಸೂಚಿಸಿದೆ.

ಸ್ಥಳ: ಬೆಂಗಳೂರು
ದಿನಾಂಕ: 29/08/2025

ಸಹಿ/- ಬಿ.ಎನ್. ಸಾವಿತ್ರಮ್ಮ ಬಿ.ಕಾಂ., ಡಿ.ಸಿ.ಎಂ.
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಕರ್ನಾಟಕ ಸರ್ಕಾರ

ನಗರ ಭೂ ಸಾರಿಗೆ ನಿರ್ದೇಶನಾಲಯ, ನಗರಾಭಿವೃದ್ಧಿ ಇಲಾಖೆ

ಆಯುಕ್ತರ ಕಾರ್ಯಾಲಯ ನಗರ ಭೂ ಸಾರಿಗೆ

ಬಿಎಂಟಿಸಿ, ಟಿಟಿಎಂಸಿ, ‘ಬಿ’ ಬ್ಲಾಕ್ (ಬಸ್ ಸ್ಟ್ಯಾಂಡ್ ಮೇಲ್ಭಾಗ), 4ನೇ ಮಹಡಿ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560027, ದೂರವಾಣಿ : 080-22226627/6628, ಫ್ಯಾಕ್ಸ್ : 080-22226630
ಇಮೇಲ್ : dultbangalore@gmail.com, dult@karnataka.gov.in ಜಾಲತಾಣ: https://dult.karnataka.gov.in

ಸಂಖ್ಯೆ: DULT-ACCT/1/2020 ದಿನಾಂಕ: 28.08.2025

ಇ-ಟೆಂಡರ್ ಪ್ರಕಟಣೆ

ನಗರ ಭೂ ಸಾರಿಗೆ ನಿರ್ದೇಶನಾಲಯ, ಬೆಂಗಳೂರಿನಲ್ಲಿರುವ ಕಛೇರಿಯ ಸೇವೆಗೆ ಬೇಕಾದ ಮಾನವ ಸಂಪನ್ಮೂಲಕ್ಕಾಗಿ ಇ-ಟೆಂಡರ್ ಅಧಿಸೂಚನೆಯನ್ನು ಪ್ರಕಟಿಸಿದೆ. (ಇ-ಟೆಂಡರ್ ಸಂಖ್ಯೆ: DULT/2025-26/SE0008). ಈ ಇ-ಟೆಂಡರ್ ಪ್ರಕ್ರಿಯೆಯಲ್ಲಿ ಬಿಡ್ ಸಲ್ಲಿಸುವ ಕೊನೆಯ **ದಿನಾಂಕ: 11.09.2025** ಹೆಚ್ಚಿನ ಮಾಹಿತಿಯನ್ನು https://kppp.karnataka.gov.in ನಿಂದ ಪಡೆದುಕೊಳ್ಳಬಹುದು.

ಸಹಿ/- ಆಡಳಿತಾಧಿಕಾರಿ
ನಗರ ಭೂ ಸಾರಿಗೆ ನಿರ್ದೇಶನಾಲಯ
ನಗರಾಭಿವೃದ್ಧಿ ಇಲಾಖೆ ಬೆಂಗಳೂರು.

ವಾಸಾಸಂಇ/ವಾಪ್ರ/2503/ಎಸ್ಎಸ್‌ಸಿ/2025-26

ಸ್ಥಾಪನೆ: 2009-10 ದೂರವಾಣಿ: 080-23469678

ಮಾಧವನಗರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್ (ರಿ)

ಕೇಂದ್ರ ಕಛೇರಿ ನಂ. 14. 3ನೇ ಅಡ್ಡ ರಸ್ತೆ, ನೆಹರುನಗರ, ಶೇಷಾದ್ರಿಪುರಂ ಬೆಂಗಳೂರು-560 020

16ನೇ ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆ

ಸಂಘದ 2024-25ನೇ ಸಾಲಿನ 16ನೇ ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ: 31/08/2025ನೇ ಭಾನುವಾರ ಬೆಳಿಗ್ಗೆ 10:30 ಗಂಟೆಗೆ 'ಬಿ.ವಿ.ಎಸ್. ಸಂಘ" (ಬ್ರಾಹ್ಮಣ ವಿದ್ಯಾರ್ಥಿ ಸಹಾಯಕ ಸಂಘ) ಶೇಷಾದ್ರಿಪುರಂ ಕಾಲೇಜು ಹಿಂಭಾಗದ ರಸ್ತೆ, ನಂ.35, ಎನ್.ಎಸ್.ಐಯ್ಯಂಗಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-560020 ಇಲ್ಲಿ **ಸಂಘದ ಅಧ್ಯಕ್ಷರಾದ ಶ್ರೀ ಬಿ. ಸಿ. ಸುರೇಂದ್ರರವರ** ರವರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿ ಕೋರಲಾಗಿದೆ. ಸರ್ವಸದಸ್ಯರ ಸಭೆಯ ಆಹ್ವಾನ ಪತ್ರಿಕೆಯನ್ನು ಈಗಾಗಲೇ ಅಂಚೆ ಮೂಲಕ ಕಳುಹಿಸಲಾಗಿದ್ದು ತಲುಪದಿದ್ದಲ್ಲಿ ಈ ಪ್ರಕಟಣೆಯನ್ನೇ ಆಹ್ವಾನ ಪತ್ರಿಕೆ ಎಂದು ಭಾವಿಸಿ, ಸಭೆಗೆ ಹಾಜರಾಗಬೇಕಾಗಿ ಮಾನ್ಯ ಸದಸ್ಯರಲ್ಲಿ ವಿನಂತಿ.

ಸ್ಥಳ: ಬೆಂಗಳೂರು
ದಿನಾಂಕ: 28/08/2025

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
(ಗಜೇಂದ್ರ ಟಿ.) ಕಾರ್ಯದರ್ಶಿ

PUEBLO VILLA OWNERS' CO-OP SOCIETY LTD.

#36/3, 1st Floor, Naganathapura Village, Doddanagamangala Road, BBMP Ward 191, Bangalore-560100

TENDER NOTIFICATION

Name f Work: Constricting of Club House at the above address
Cost of Work: - Rs.2.00cr.
E.M.D.: Rs 2.00 Lakhs.
Time for Completion : 18 months.
B.O.Q. can be collected from office on 03.09.2025 Onwards
Contact: 93412 26213
e-mail: prasannakj@live.com

PUBLIC NOTICE

ಸಂಬಂಧಿಸಿದವರ ಗಮನಕ್ಕೆ

ಸಾರ್ವಜನಿಕ ಪ್ರಕಟಣೆ

ಬೆಂಗಳೂರು ಮಹಾನಗರ ಪಾಲಿಕೆಯ, ಹಿಂದಿನ 5ನೇ ಕೋದಂಡರಾಮಪುರಂ, ಇಂದಿನ 45ನೇ ಮಲ್ಲೇಶ್ವರಂ ವಾರ್ಡಿಗೆ ಸೇರಿದ ಸ್ವತ್ತಿನ ಸಂಖ್ಯೆ 99-100/83, ಹೊಸ ಪಿ.ಐ.ಡಿ 4604976601 (ಹಿಂದೆ 50-20-83), ಮಲ್ಲೇಶ್ವರಂ 17ನೇ ಮೈನ್ ನಲ್ಲಿರುವ 8ನೇ ಮುಖ್ಯ ರಸ್ತೆ ಮತ್ತು 1ನೇ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ, ಸುಮಾರು 24,925 ಚದುರಡಿಯ ನಿವೇಶನ/2315 ಚದುರಡಿ ಕಟ್ಟಡಗಳಿರುವ ಆಸ್ತಿಯು ಶ್ರೀಮತಿ ಮಹಾಲಕ್ಷ್ಮಿಯವರಿಗೆ ಸೇರಿದ್ದು, ನಾನು ಶ್ರೀನಾಥ ನಗರಗದ್ದೆ, ಈ ಸ್ವತ್ತಿಗಾಗಿ ಮುಂಗಡ ಹಣ ಪಾವತಿಸಿ ಮಾರಾಟ ಒಪ್ಪಂದ ಕರಾರನ್ನು ಮೂರು ಬಾರಿ ಮಾಡಿಕೊಂಡಿದ್ದು ಅಂತಿಮವಾಗಿ ದಿನಾಂಕ 26/10/2021ನೇ ದಿನಾಂಕದ ಕರಾರು ಪತ್ರವನ್ನು ಬೆಂಗಳೂರಿನ ಹೆಬ್ಬಾಳದ ಉಪ-ನೋಂದಣಾಧಿಕಾರಿಯವರ ಕಛೇರಿಯಲ್ಲಿ ನೋಂದಾಯಿಸಿಕೊಂಡಿರುವೆ. ಇದು ಪುಸ್ತಕ 1 ರಲ್ಲಿ ದಸ್ತಾವೇಜು ನಂ HBB-1-03190/2021-22.ರಲ್ಲಿ CD NO HBB 898 ದಾಖಲಾಗಿದೆ. ಜೊತೆಗೇ ಈ ಆಸ್ತಿಯ ಸಂಪೂರ್ಣ ನಿರ್ವಹಣೆಯ ಜವಾಬ್ದಾರಿ ಯನ್ನು ಮಾಲೀಕರು ನನಗೆ ವಹಿಸಿದ್ದು ಜಿ. ಪಿ. ಎ ಸಹ ನೋಂದಾಯಿಸಿ ಕೊಟ್ಟಿದ್ದಾರೆ.

ಈಚೆಗೆ ಕೆಲವರು ಈ ಆಸ್ತಿಯನ್ನು ಮಾಲೀಕರಿಂದ ಕ್ರಯಪತ್ರ ಮಾಡಿಸಿಕೊಡುವುದಾಗಿ ಮುಂಗಡ ಹಣ ಪಡೆಯುತ್ತಿದ್ದಾರೆಂದು ತಿಳಿದುಬಂದ ಕಾರಣ, ಸದರಿ ಆಸ್ತಿಯನ್ನು ಬೇರೆಯವರಿಗೆ ಮಾರಾಟ/ಪರಭಾರೆ ಮಾಡದೇ ನನಗೇ ಶುದ್ಧ ಕ್ರಯಪತ್ರದ ಮೂಲಕ ನೊಂದಾಯಿಸಿ ಕೊಡಬೇಕಾಗಿ ಬೆಂಗಳೂರಿನ ನಗರ ಸಿವಿಲ್ ಕೋರ್ಟ್ ನಲ್ಲಿ ಮೊಕದ್ದಮೆ ದಾಖಲು ಮಾಡಿದ್ದು (O.S. NO 5874/2025) ವಿಚಾರಣೆಗೆ ಅಂಗೀಕರವಾಗಿದೆ.

ಆದ್ದರಿಂದ ಮೇಲೆ ತಿಳಿಸಿದ ಆಸ್ತಿಯನ್ನು ಖರೀದಿಸಲು ಯಾರೇ ಹಣ ಹೂಡಿದರೆ ಇದರ ಸಂಪೂರ್ಣ ಹೊಣೆಗಾರಿಕೆ ಮತ್ತು ಪರಿಣಾಮಗಳಿಗೆ ವೈಯಕ್ತಿಕವಾಗಿ ಅವರೇ ಜವಾಬ್ದಾರರು ಎಂದು ಸಾರ್ವಜನಿಕವಾಗಿ ಸ್ಪಷ್ಟಪಡಿಸುವೆ.

ಆಸಕ್ತರು ಸತ್ಯಾಸತ್ಯತೆಗಾಗಿ ಈ ಅಂಶಗಳನ್ನೂ ಮತ್ತು ಮೂಲ ಇ. ಸಿ ಸೇರಿದಂತೆ ಉಳಿದ ದಾಖಲೆಗಳನ್ನು ಪರಿಶೀಲಿಸ ಬೇಕಾಗಿ ಕೋರಿದೆ.

ಶ್ರೀನಾಥ ನಗರಗದ್ದೆ M.A.,L.Lb.,L.Lm
(ಜಿ. ಪಿ. ಎ. ಹೋಲ್ಡರ್ ಮತ್ತು ಮೊದಲ ನೊಂದಾಯಿತ ಕ್ರಯಪತ್ರದ ಒಪ್ಪಂದದಾರರು ಮತ್ತು ಮಾಜಿ ಉಪಮುಖ್ಯಮಂತ್ರಿಗಳ ವಿಶೇಷಾಧಿಕಾರಿ)

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜನೀಯರ್‌ರವರ ಕಛೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ-562101
ದೂರವಾಣಿ ಸಂಖ್ಯೆ: ಕಛೇರಿ: 08156-295427
ಫ್ಯಾಕ್ಸ್: 08156-295427 ಇಮೇಲ್-eemidcbpura@gmail.com

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಸಂಖ್ಯೆ: ಕಾಸಬ/ತಾಂಶಾ/ತಾಂಸ/ ಟೆಂಡರ್ ಪ್ರಕಟಣೆ ಸಂಖ್ಯೆ: 09/2025-26
ದಿನಾಂಕ: 28/08/2025

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ, ಗೌರಿಬಿದನೂರು ಚಿಕ್ಕಬಳ್ಳಾಪುರ ಮತ್ತು ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 4702 ವಿಶೇಷ ಘಟಕ ಯೋಜನೆ ಮತ್ತು 4702 ಗಿರಿಜನ ಉಪ ಯೋಜನೆ, ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗೆ ಕೆ.ಡಬ್ಲೂ 1 ಮತ್ತು 2ರ ನಿಭಂದನೆಗೊಳಪಟ್ಟಂತೆ ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಮೂಲಕ ದ್ವಿ ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಇ.ಎಂ.ಡಿ ಮೊತ್ತ ಕೆ.ಪಿ.ಪಿ ನಲ್ಲಿ ಇದ್ದಂತೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 06/09/2025 ಸಾಯಂಕಾಲ 4.30 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ 08/09/2025 ರಂದು (ಸಾಧ್ಯವಾದ್ದಲ್ಲಿ) ಸದರಿ ಕಾಮಗಾರಿಯ ಟೆಂಡರ್‌ಗಳ ಮೊತ್ತ ಅಥವಾ ಇ.ಎಂ.ಡಿ ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ-ಪ್ರಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತಗಳು ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ – 08156-295427 ಮತ್ತು ಕೆ.ಪಿ.ಪಿ ಪೋರ್ಟಲ್ ಸಹಾಯವಾಣಿ ದೂರವಾಣಿ ಸಂಖ್ಯೆ: 91-8068948777 ಮತ್ತು 91-8046010000 ರಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

CONNECT ಕ್ಲಾಸಿಫೈಡ್ಸ್

RV Institute of Management®
Approved by AICTE, New Delhi | Accredited by NAAC with ‘A+’ grade
Autonomous Institution, Affiliated to Bengaluru City University
Go, change the world®

We the Management, Staff and Students Invite all the proud alumni of RVIM to

SAMMILANA – 2025
The Alumni Meet
on Saturday 30th August 2025 from 4.00 pm to 8.00 pm

Prof. Krishnegowda
(Actor & Humorist)
will join us for the evening filled with Nostalgia, Cultural Extravaganza and Dinner.

RSVP: 98454 18657

Dr. Purushottam Bung, Director, RVIM
Dr. (h.c) A V S Murthy, Hon.Secretary, RSST

ರಾಷ್ಟ್ರೀಯ ನವ ನಿರ್ಮಾಣ ವೇದಿಕೆ
ಬೆಂಗಳೂರು



ಶ್ರೀ ರಾಮಕೃಷ್ಣ ಹೆಗಡೆಯವರ 99ನೇ ಜನ್ಮ ದಿನಾಚರಣೆ

ವಿಷಯ
“ಬೆಂಗಳೂರು ಅಭಿವೃದ್ಧಿ ಮತ್ತು ಸವಾಲುಗಳು”

ಉದ್ಘಾಟಕರು:
ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ವಿಷಯ ಮಂಡನೆ:
ಕ್ಯಾಪ್ಟನ್ ಗೋಪಿನಾಥ್
ಉದ್ಯಮಿ ಹಾಗೂ ಚಿಂತಕರು

ಅಧ್ಯಕ್ಷತೆ:
ಶ್ರೀಮತಿ ಮಮತಾ ನಿಚಾನಿ
ಅಧ್ಯಕ್ಷರು, ರಾಷ್ಟ್ರೀಯ ನವ ನಿರ್ಮಾಣ ವೇದಿಕೆ

ದಿನಾಂಕ: 29ನೇ ಆಗಸ್ಟ್, ಶುಕ್ರವಾರ ಸಂಜೆ 4.30ಕ್ಕೆ
ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರ ಕೃಪಾ ರಸ್ತೆ, ಬೆಂಗಳೂರು – 560 001.

ಎಲ್ಲರಿಗೂ ಆದರದ ಸುಸ್ವಾಗತ

ಡಾ: ಎಂ. ಪಿ. ನಾಡಗೌಡ, ಪ್ರಧಾನ ಕಾರ್ಯದರ್ಶಿ & ಖಜಾಂಚಿ
ಟಿ. ಪ್ರಭಾಕರ್, ಪ್ರಧಾನ ಕಾರ್ಯದರ್ಶಿ

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

PUBLIC NOTICE

PUBLIC NOTICE

NOTICE is hereby given that, our client intends to transact with the property which is more fully described in the Schedule hereunder and hereinafter to as the **“Schedule Property”** from its owner **Mr M Subash Kumar Jain, son of Late Mr B Manikchand Jain.**

Any person having any subsisting claim, right, title or interest, in respect of the Schedule Property or any part thereof, in any manner including by way of sale, transfer, assignment, exchange, charge, tenancy, sub-tenancy, lease, sub-lease, license, mortgage, inheritance, share, gift, devise, lien, maintenance, easement, encumbrance, trust, covenant, possession, beneficial interest or pre-emption or under any agreement or other disposition or under any suit or award passed by any Court or Authority, arbitrator, lis-pendens, power of attorney, bequest, FSI, development rights, partnership, family arrangement or settlement or otherwise encumbrance of any nature howsoever (“Claim”), are hereby requested to respond with documentary proof to the undersigned within 10 (Ten) days from the date of publication of this notice, failing which, it shall be presumed that no such Claim exists and if it existed, the claimant has relinquished such Claim and/or waived their right to exercise such Claim.

SCHEDULE PROPERTY

All that piece and parcel of immovable property being agricultural land measuring 2 acres 39 guntas alongwith 5 gunta kharabh in all totally measuring 3 acres 4 guntas bearing Survey No 7/1(old Survey No 7), situated at Kokkarepadiya Village, Vijayapura Hobli, Devanahalli Taluk, Bangalore Rural District and bounded as follows- **East By:** Land in Survey No 9, **West By :** Land in Survey No 7/2, **North By :** Land in Survey No 8, **South By:** Devanahalli- Vijayapura Road.

Dated : 29/08/2025 **Sd/- Pavithra Thammaiah.**
Khaitan & Co LLP., Embassy Quest, 3rd Floor, 45/1, Magrath Road, Bengaluru-560 025. T: +91 80 43397000



LAST 3 DAYS

Meena BAZAR

Arts, Crafts, Handlooms and Lifestyle Exhibition

GANESH CHATURTHI FESTIVAL SPECIAL

22nd August 2025 to 31st August 2025

10.30 AM - 7 PM

10 Days Exhibition

Venue:
KARNATAKA CHITRAKALA PARISHATH
(7 Galleries and Lawn area)
Shivananda Circle, Kumara Krupa Road, Bangalore - 01

70+ Stalls | 40+ CRAFTSMAN
Entry Free

For Details Contact : 6364685716 / 9036658774

HANDLOOMS | HOME DECOR | HANDICRAFTS | CLOTHING | JEWELLERY

JOB OPPORTUNITIES

Drivers

DRIVER REQUIREMENT
- Minimum 5 years Exp
- Well experienced in Automatic Luxury vehicles
- * Only 8 hours working
- First or Second Shift 4 drivers, (7:30am to 3:30pm) (2:00 pm to 10:30 pm)
- Salary 25 plus perks

Location: JP Nagar, Electronic City, Attibele
Contact number: **96060 76427 76191 26043**
Apply only Immediate Joiners

General

REQUIRED IMMEDIATELY Communication Skilled MANAGERS, LADY EXECUTIVES. MARKETING EXECUTIVES. Good Salary. Walkin V&V GROUP, Behind IIMB, Bannerghatta Road: 99000-54462

Marketing & Sales

WANTED MANAGERS, Sales Executives, Telecallers to work different parts of Bangalore earn 20,000-30,000: 8867627879

Teachers/ Professors

WANTED COMPUTER TEACHER 1st to 10th Std Male or Femlae State Syllabus New Carmel English School, Divanarapalya, Yeshwanthpur, Bangalore. Mob:- 9379191544.

PERSONAL

Change of Name

I, PONNANNNA MACHAIAH MUKKATRIA, Residing at #5/3, Nanjappa Layout, 3rd phase, Vidyaranyapura, Bengaluru-97 have changed my name as PONNANNA MACHAIAH MUKKATIRA, vide affidavit dated 28/08/2025 before Notary V.Anjanappa, Bengaluru

CHANGE OF NAME
I, **M K Vijayalaxmi** Spouse of **No. 2578027Y, RANK: Ex Havildar, Name: M C Kalappa,** R/at No. 2594, 2nd Block, 4th Cross, Vishweshwaraiah Layout, Sulikere, Bengaluru-560060, have changed my name from **M K Vijayalaxmi** to **VIJAYALAXMI M K** vide affidavit dated 28-08-2025, before Notary Ravi, Bengaluru.

I, SURENDRA VARMA, S/o Tarur Patyapura Kumaran, aged 60 years, R/at No. 52/3, 5th Main 18th Cross Malleshwaram Bangalore-560055, have changed my Name from KUMARAN SURENDRA VARMA to SURENDRA VARMA, vide Affidavit dated: 26-08-2025 sworn before Notary K.S. Giridhar, Bangalore.

I, BHARAT NARAYANA Residing at No'18, Below New National School, Nayandahalli Main Road, Nayandahalli Bengaluru-39 have Changed my name to BHARATH NARAYANA Vide affidavit dated 26-08-2025 Before Notary H.S.SAKALESH ARADHYA Bangalore.

RENTAL PROPERTIES

Accommodation Available

Commercial

COMMERCIAL PREMISES For rent on 9th Floor, Mittal Tower 445 sqft, Contact:- 7208012111/ 8892051858.

REAL ESTATE SELLING

Agricultural Land

Chikkaballapura

1 ACER 8 GUNTA CORNER Land For Sale, 3km From Chikkaballapur District Manchenahalli Taluk. Contact: 9844603127

House

Vidyaranyapura

IMMEDIATE REGISTRATION: 60’x40’ BEL 2nd Block 4 BHK Duplex House S/F Semi Furnished- 15500/- sq.ft: 9844264852

Residential/ Commercial

Hoskote

PLOT FOR IMMEDIATE SALE Location:Haraluru,Hoskote 6000sqft atRs.2500/sqft West facing Corner plot,5Km toHoskote Government hospital with BMTC accessCall: +91 9448011981

Farm House/ Land/ Resorts

Out-Station

27 ACRES land for sale in Sira Taluk, 141 KM FROM BANGALORE, 1 KM FROM NH48 (BANGALORE-MUMBAI) GENUINE BUYERS CALL 9845397798

This is only an advertisement for information purposes and not for publication, distribution, or release, directly or indirectly in the United States of America or otherwise outside India. This is not an announcement for the offer document. All capitalized terms used and not defined herein shall have the meaning assigned to them in the letter of offer dated June 12, 2024 read with corrigendum dated June 18, 2024 filed with the Stock Exchanges, namely BSE Limited ("BSE") and National Stock Exchange of India Limited ("NSE" and together with BSE, the "Stock Exchanges") and the Securities and Exchange Board of India ('SEBI').

SOBHA

SOBHA LIMITED
CIN : L45201KA1995PLC018475
Regd. Office: ‘SOBHA’ Sarjapur – Marathahalli Outer Ring Road (ORR), Devarabisanahalli, Bellandur Post, Bangalore - 560 103
Ph: +91-80-49320000, Email: investors@sobha.com, Website: www.sobha.com

THIRD AND FINAL REMINDER CUM FORFEITURE NOTICE TO THE HOLDERS OF PARTLY PAID-UP EQUITY SHARES ON WHICH CALL MONEY IS TO BE PAID

In terms of provisions of the Companies Act, 2013 ('Act'), read with the relevant rules made thereunder, the First and Final Call Notice has been issued to such persons who were holders of the partly paid shares as on December 06, 2024, being the Record Date. The call payment period has since expired on January 10, 2025.

In this connection, the Rights Issue Committee of the Board of Directors of the Company (the "Committee"), duly authorised by the Board of Directors of the Company, at its meeting held on January 21, 2025, approved sending Reminder-cum-Forfeiture Notice from time to time for payment of the First and Final Call amount of ₹825.50 per partly-up equity share (comprising ₹5.00 towards face value and ₹820.50 towards securities premium) ("Reminder-cum-Forfeiture Notice") to the holders of such partly paid-up equity shares on which the First and Final Call Money remains unpaid for payment of such unpaid First and Final Call Money. Accordingly, sending of Third and Final Reminder-cum-Forfeiture Notice to all the members who have not paid the call money has been initiated on August 28, 2025.

The payment period is from Friday,12 September 2025, to Friday, 26 September 2025 (both days inclusive). Payment is to be made through **Cheque/ Demand Draft** with collection center of Axis Bank Limited (made payable to Sobha Limited Partly Paid First and Final Call Money-R (For Resident shareholders), Sobha Limited Partly Paid First and Final Call Money-NR (For Non - Resident shareholders).

Please note that, failure to pay the Third and Final Reminder cum Forfeiture Money, as aforesaid, shall render the partly paid-up equity shares of the Company, including the amount already paid thereon, liable to be forfeited in accordance with the provisions of the Act, the Articles of Association of the Company and the Letter of Offer. The Company shall be entitled to deduct from any dividend payable to such members, if any, all sums of money outstanding on account of calls and interest due thereon in relation to the partly paid-up equity shares of the Company. All correspondence in this regard may be addressed to Registrar to the Issue at below mentioned address:

MUFG Intime India Private Limited (Unit: Sobha Limited), C-101, 1st Floor, 247 Park, Lal Bahadur Shastri Marg, Vikhroli (West) Mumbai – 400 083 , Maharashtra, India , Tel No.: +91 8108114949, Fax No.: 022-49186060
E-mail ID: sobha.callmoney@linkintime.co.in , Website: www.in.mpms.mufg.com , SEBI Registration No: INR000004058
Contact Person: Shanti Gopalkrishnan

For SOBHA Limited
On Behalf of the Board of Directors
Sd/-
Bijan Kumar Dash
Company Secretary & Compliance Officer

Date : August 28, 2025
Place : Bangalore

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು - 560 064.
ವೆಬ್‌ಸೈಟ್: rwf.indianrailways.gov.in
FAX: 080-28460367, PH: 080-28072739

ಇ-ಟೆಂಡರ್ ಸೂಚನೆ

ಸಂ.:ಆರ್‌ಡಬ್ಲ್ಯೂಎಫ್/ಎಸ್/07/2025-26 ದಿ. 25.08.2025

ಟೆಂಡರ್ ಸಂ.:ಆರ್‌ಡಬ್ಲ್ಯೂಎಫ್/ಎಸ್/ 06/ 2025-26 ದಿ. 18.08.2025 ಗೆ ತಿದ್ದುಪಡಿ

1) ಟೆಂಡರ್‌ಸಂಖ್ಯೆ: ಪಿ2255279.
ಸಂಕ್ಷಿಪ್ತ ಐಟಂ ವಿವರಣೆ ಮತ್ತು ಪ್ರಮಾಣ: RWF ನಿರ್ದಿಷ್ಟ ಸಂಖ್ಯೆ RWF/M&P/SPECN/CYL GRINDING/2024/REV-3 ರ ಪ್ರಕಾರ ಸಿವಿಲ್ ಫೌಂಡೇಶನ್ ಮತ್ತು ಎಲ್ಲಾ ಅಗತ್ಯ ವಿದ್ಯುತ್ ಕೇಬಲ್‌ಗಳೊಂದಿಗೆ ಗ್ರೈಂಡಿಂಗ್ ಯಂತ್ರದ ವಿನ್ಯಾಸ, ಪೂರೈಕೆ, ಸ್ಥಾಪನೆ ಮತ್ತು ಕಾರ್ಯಾರಂಭ. **ಪ್ರಮಾಣ:** 1 ಸಂಖ್ಯೆ.
ಸೂಚನೆ: ಹಾಲಿ ಇರುವ ವಿವರಣೆ REV-2 ಅನ್ನು ವಿವರಣೆ REV-3 ಎಂದು ಪರಿಷ್ಕರಿಸಲಾಗಿದೆ.
ಟೆಂಡರ್ ಮುಕ್ತಾಯ ದಿನಾಂಕ ಮತ್ತು ಸಮಯ: 30.06.2025 ಮತ್ತು 21.08.2025 ರಿಂದ 11.09.2025 ರ ಮಧ್ಯಾಹ್ನ 2:00 ಗಂಟೆಯವರೆಗೆ ವಿಸ್ತರಿಸಲಾಗಿದೆ.

ಟೆಂಡರ್ ಸಂ.:ಆರ್‌ಡಬ್ಲ್ಯೂಎಫ್/ಎಸ್/05/ 2025-26 ದಿ. 14.06.2025 ಗೆ ತಿದ್ದುಪಡಿ

2) ಟೆಂಡರ್‌ಸಂಖ್ಯೆ: ಪಿ2255344.
ಸಂಕ್ಷಿಪ್ತ ಐಟಂ ವಿವರಣೆ ಮತ್ತು ಪ್ರಮಾಣ: RWF ನಿರ್ದಿಷ್ಟ ಸಂಖ್ಯೆ RWF/M&P /2024-25/CNC End Milling, Rev-3 ರ ಪ್ರಕಾರ ಚಿಪ್ ಕನ್ವೇಯರ್‌ನೊಂದಿಗೆ ಸಿಎನ್‌ಸಿ ಎಂಡ್ ಮಿಲ್ಲಿಂಗ್, ಸೆಂಟ್ರಿಂಗ್ ಮತ್ತು ಕಪ್ ಟರ್ನಿಂಗ್ ಯಂತ್ರ ಒದಗಿಸುವುದು. **ಪ್ರಮಾಣ:** 1 ಸಂಖ್ಯೆ.
ಸೂಚನೆ: (1) ಹಾಲಿ ಇರುವ ವಿವರಣೆ REV-2 ಅನ್ನು ವಿವರಣೆ REV-3 ಎಂದು ಪರಿಷ್ಕರಿಸಲಾಗಿದೆ. (2) ಬದಲಾದ ವಿತರಣಾ ವೇಳಾಪಟ್ಟಿಯನ್ನು ಟೆಂಡರ್‌ಗೆ ಲಗತ್ತಿಸಲಾಗಿದೆ.
ಟೆಂಡರ್ ಮುಕ್ತಾಯ ದಿನಾಂಕ ಮತ್ತು ಸಮಯ: 30.06.2025 ಮತ್ತು 01.09.2025 ರಿಂದ 26.09.2025ರ, ಮಧ್ಯಾಹ್ನ 2:00 ಗಂಟೆರವರೆಗೆ ವಿಸ್ತರಿಸಲಾಗಿದೆ.

ಟೆಂಡರ್ ತಿದ್ದುಪಡಿಯನ್ನು ನಮ್ಮ ವೆಬ್‌ಸೈಟ್ **www.rwf.indianrailways.gov.in or www.ireps.gov.in** ನಲ್ಲಿ ವೀಕ್ಷಿಸಬಹುದು. ಟೆಂಡರ್ ದಾಖಲೆಗಳು, ವಿವರ ಮತ್ತು ಟೆಂಡರ್‌ನ ತಿದ್ದುಪಡಿಗಳು ಪೋರ್ಟಲ್‌ನಲ್ಲಿ ಮಾತ್ರ ಲಭ್ಯವಿರುತ್ತವೆ.

ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ / ಫ್ಯಾಕ್ಸ್: 080-27934470/ 27935412
E-mail: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂಉಬ/11/2025-26 ದಿನಾಂಕ: 25-08-2025

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30.01.2018 ರಂದು ಅನುಮೋದನೆಯಾದ ಮಹಾಯೋಜನೆಯಂತೆ **ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ** ಮಾಡಲು ಕೋರಿ ಈ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಅಜಗೊಂಡನಹಳ್ಳಿ ಗ್ರಾಮದ			
ಕ್ರ. ಸಂ.	ಭೂ ಮಾಲೀಕರ ಹೆಸರು	ಸ.ನಂ.	ವಿಸ್ತೀರ್ಣ ಎ-ಗುಂ
1	ಶ್ರೀ ಕೆ.ಆರ್. ಹರೀಶ್ ಬಿನ್ ಲೇಟ್ ರಾಮಕೃಷ್ಣಪ್ಪ	48/1	00-31 1/2
2		48/12	00-04 1/2
3	ಶ್ರೀ ಕೆ. ವಿಜಯ್ ಕುಮಾರ್	48/10	00-04 1/2

ಷರಾ:- ಪ್ರಶ್ನಿತ ಜಮೀನುಗಳ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, ಸದರಿ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿ ಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಗೆ ಸಹಕಾರಿಯಾಗುವುದು ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾಸಾಸಂಇ/ವಾ.ಪ್ರ/2501/ಅಡ್ವರ್ಟೋರ್/2025-26

PUBLIC NOTICE

My client has entered into an MOU dated 10/08/2025 to purchase of the property being a residential apartment which is more particularly described in the Schedule hereunder from its present co-owners Mr. Sai Krishna Bharathan and Mrs. Tenaaz Mama, both residing at Godrej Bay View, Worli Sea Face, Mumbai 400030, who are the lawful co-owners in possession of the same. Any person/s, financial institutions and statutory authorities who claim any right, title or interest of any nature in or any lien, charge or enforceable right in relation to the Schedule Property and/or has any objections of any nature to the aforesaid transaction should lodge such claim and/or objections in writing to the undersigned together with supporting documents **within Ten (10) days** hereof, failing which it will be presumed that no valid claims or objections subsist and my client would proceed to complete the transaction with the present owner thereof subject to compliance with other statutory and legal formalities.

SCHEDULE PROPERTY

All that piece and parcel of the residential apartment bearing No.0502 situated on the 4h Floor, 5th level in the residential apartment building known as "Lost in the Greens' constructed on the land bearing Municipal No.10, Crescent Road, High Grounds, Bangalore, measuring a built up area of about 3026 sq. ft., Carpet Area of about 2709 sq. ft., together 2 regular independent car parks and the exclusive right to access and use the terrace area space on the 6th level (Floor 5) directly above the unit measuring an extent of about 2,406 sq. ft., along with 1,029 sq. ft., of undivided share, right, title and interest in the land bearing Municipal No.10, Crescent Road, High Grounds, Bangalore on which the aforesaid apartment building "Lost in the Greens" has been constructed as one composite property.

Bangalore, Date: 29.08.2025

ARVIND RAGHAVAN, Advocate
48, "Ishita" 3rd Floor, 2nd Main Road, Vyalikaval, Bangalore 560 003.
E-mail: arvind ncsr@yahoo.com

ಟೆಕಿ ಆತ್ಮಹತ್ಯೆ: ಪತಿ ಬಂಧನ

ವರದಕ್ಷಿಣೆ ಕಿರುಕುಳ: ಮೃತ ಮಹಿಳೆಯ ಸಂಬಂಧಿಕರ ಆರೋಪ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಕೌಟುಂಬಿಕ ವಿಚಾರಕ್ಕೆ ಮಹಿಳಾ ಟೆಕಿಯೊಬ್ಬರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆಗೆ ಸಂಬಂಧಿಸಿದಂತೆ ಆಕೆಯ ಪತಿಯನ್ನು ಸುದ್ದಗುಂಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೊಪ್ಪಳ ಜಿಲ್ಲೆ ಗಂಗಾವತಿಯವರಾಗಿದ್ದ ಶಿಲ್ಪಾ (27) ಆತ್ಮಹತ್ಯೆ ಮಾಡಿಕೊಂಡ ಗೃಹಿಣಿ. ಆಕೆಯ ಪತಿ ಪ್ರವೀಣ್‌ನನ್ನು ಬಂಧಿಸಿ, ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ.

'ಪ್ರವೀಣ್ ಮತ್ತು ಶಿಲ್ಪಾ ಮೂರು ವರ್ಷಗಳ ಹಿಂದೆ ಮದುವೆಯಾಗಿದ್ದು, ದಂಪತಿಗೆ ಒಂದೂವರೆ ವರ್ಷದ ಗಂಡು ಮಗುವಿದೆ. ನಗರದ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ದಂಪತಿ, ಗಂಗೋತ್ರಿ ಸರ್ಕಲ್‌ನಲ್ಲಿರುವ ಮನೆಯಲ್ಲಿ ವಾಸವಾಗಿದ್ದರು. ಆರಂಭದಲ್ಲಿ ದಂಪತಿ ಚೆನ್ನಾಗಿಯೇ ಇದ್ದರು. ಮಗು ಹುಟ್ಟಿದ ಬಳಿಕ ಶಿಲ್ಪಾ ಕೆಲಸ ತೊರೆದು ಮನೆಯಲ್ಲೇ ಇದ್ದರು' ಎಂದು ಪೊಲೀಸರು ಮಾಹಿತಿ ನೀಡಿದರು.

'ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಪ್ರವೀಣ್, ಮದುವೆಯಾದ ಒಂದು ವರ್ಷದ ಬಳಿಕ ಕೆಲಸ ತೊರೆದು, ಪಾನಿಪುರಿ ವ್ಯಾಪಾರ ಮಾಡಿಕೊಂಡಿದ್ದ. ತನ್ನ ವ್ಯವಹಾರಕ್ಕೆ ಹಣದ ಅಗತ್ಯವಿದ್ದ ಕಾರಣ, ತವರು ಮನೆಯಿಂದ ಹಣ ತರುವಂತೆ ಪತ್ನಿಗೆ ಹಿಂಸೆ ನೀಡುತ್ತಿದ್ದ ಎಂದು ಮೃತಳ ಕುಟುಂಬದವರು ದೂರು ನೀಡಿದ್ದಾರೆ. ಈ ಮಧ್ಯೆ ಕೌಟುಂಬಿಕ ವಿಚಾರಕ್ಕೆ ದಂಪತಿ ನಡುವೆ ಕೆಲ ತಿಂಗಳಿಂದ ಜಗಳ ನಡೆಯುತ್ತಿತ್ತು. ಮಂಗಳವಾರ ಕೂಡ ಇಬ್ಬರ ನಡುವೆ ಜಗಳ ನಡೆದಿದ್ದು, ಅದರಿಂದ ಬೇಸರಗೊಂಡಿರುವ ಶಿಲ್ಪಾ ಕೋಣೆಯಲ್ಲಿ ಫ್ಯಾನ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬುಧವಾರ ಬೆಳಿಗ್ಗೆ ಪ್ರವೀಣ್ ಕೋಣೆಯ ಬಾಗಿಲು ತೆರೆದು ನೋಡಿದಾಗ ಆತ್ಮಹತ್ಯೆ ವಿಚಾರ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು. ವರದಕ್ಷಿಣೆ ಕಿರುಕುಳ ನೀಡುತ್ತಿದ್ದರಿಂದ ಪುತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಆರೋಪಿಸಿ ಮೃತಳ ತಾಯಿ ಶಾರದಾ ಅವರು ಅಳಿಯ ಪ್ರವೀಣ್ ಮತ್ತು ಆತನ ತಾಯಿಯ ವಿರುದ್ಧ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆ ಕೈಗೊಂಡಿದ್ದಾರೆ.

'3 ತಿಂಗಳಿಂದ ಮಾತನಾಡುತ್ತಿರಲಿಲ್ಲ'

ಮೃತ ಶಿಲ್ಪಾ ತಾಯಿ ಶಾರದಾ ಮಾತನಾಡಿ, 'ತವರು ಮನೆಯಿಂದ ಹಣ ತರುವಂತೆ ಗಂಡನ ಮನೆಯಲ್ಲಿ ಮಗಳಿಗೆ ನಿತ್ಯ ಕಿರುಕುಳ ಕೊಡುತ್ತಿದ್ದರು. ಅಳಿಯ ಪ್ರವೀಣ್ ಮೂರು ತಿಂಗಳಿಂದ ನನ್ನ ಜೊತೆ ಮಾತನಾಡುತ್ತಿರಲಿಲ್ಲ. ಘಟನೆ ಆದಾಗ ಅವರ ಮನೆಯವರು ಯಾರೂ ಇರಲಿಲ್ಲ. ದೂರು ಕೊಡಬೇಡ ಅಂತ ನಮಗೆ ಕೇಳಿ ಕೊಂಡರು. ಮಗಳ ಸಾವಿಗೆ ನ್ಯಾಯಬೇಕು. ಬೇರೆ ಹೆಣ್ಣು ಮಕ್ಕಳಿಗೆ ಈ ರೀತಿ ಆಗಬಾರದು' ಎಂದು ಕಣ್ಣೀರಿಟ್ಟರು.

ಘಟನೆ ಬಗ್ಗೆ ಪ್ರತಿಕ್ರಿಯಿಸಿರುವ ಮೃತಳ ಚಿಕ್ಕಪ್ಪ ಚನ್ನಬಸಯ್ಯ, 'ಮೂರು ವರ್ಷಗಳ ಹಿಂದೆ ಅದ್ದೂರಿಯಾಗಿ ಮದುವೆ ಮಾಡಿಕೊಟ್ಟಿದ್ದೆವು. ಮನೆ ಮಾರಿದ ₹40 ಲಕ್ಷ ಹಣ ಮದುವೆಗೆ ಖರ್ಚು ಮಾಡಲಾಗಿತ್ತು. 160 ಗ್ರಾಂ ಚಿನ್ನಾಭರಣವನ್ನು ಮದುವೆ ವೇಳೆ ಕೊಟ್ಟಿದ್ದೇವೆ. ಕೆಲ ತಿಂಗಳ ಹಿಂದೆ ಪ್ರವೀಣ್ 10 ಲಕ್ಷ ಹಣ ಪಡೆದುಕೊಂಡಿದ್ದ. ಎರಡು ವರ್ಷಗಳಿಂದ ಪಾನಿಪುರಿ ಮಾರುತ್ತಿದ್ದಾನೆ. ಮಗಳ ಸಾವಿನ ಹಿಂದೆ ಗಂಡ ಹಾಗೂ ಮನೆಯವರ ಪಾತ್ರವಿದೆ' ಎಂದು ಸಂಶಯ ವ್ಯಕ್ತಪಡಿಸಿದರು.

ಕಂಪ್ಯೂಟರ್ ಆಪರೇಟರ್ ಆತ್ಮಹತ್ಯೆ

ಬೆಂಗಳೂರು: ಸುಧಾಮನಗರದಲ್ಲಿ ಖಾಸಗಿ ಕಂಪನಿ ಉದ್ಯೋಗಿಯೊಬ್ಬರು ಬುಧವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕಂಪ್ಯೂಟರ್ ಆಪರೇಟರ್ ಪ್ರದೀಪ್ (30) ಮೃತ ವ್ಯಕ್ತಿ. ಪ್ರದೀಪ್, ನಿತ್ಯ ಮದ್ಯ ಸೇವಿಸುತ್ತಿದ್ದರು. ಕುಟುಂಬದ ಸದಸ್ಯರೆಲ್ಲಾ ಗಣೇಶ ಹಬ್ಬದ ಆಚರಣೆಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದ ವೇಳೆ ತಮ್ಮ ಕೊಠಡಿಯಲ್ಲಿ ನೇಣು ಹಾಕಿಕೊಂಡಿದ್ದಾರೆ. ಆತ್ಮಹತ್ಯೆಗೆ ನಿಖರ ಕಾರಣ ಗೊತ್ತಾಗಿಲ್ಲ. ಸಾಲಬಾಧೆಯಿಂದ ಅವರು ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆಯಿದೆ ಎಂದು ಪೊಲೀಸರು ಹೇಳಿದ್ದಾರೆ. ವಿಲ್ಸನ್ ಗಾರ್ಡನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

100 ಪ್ರಕರಣ: ₹46,500 ದಂಡ ಪಾವತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸಂಚಾರ ನಿಯಮ ಉಲ್ಲಂಘನೆ ಪ್ರಕರಣ ಇತ್ಯರ್ಥ ಪಡಿಸಿಕೊಳ್ಳಲು ಶೇಕಡ 50ರಷ್ಟು ರಿಯಾಯಿತಿಯಡಿ ದಂಡ ಪಾವತಿಸಲು ವಾಹನ ಮಾಲೀಕರಿಗೆ ಅವಕಾಶ ಕಲ್ಪಿಸಿದ್ದು, ಈವರೆಗೆ ಎಲ್ಲ ವಿಧಾನಗಳ ಮೂಲಕ ಒಟ್ಟು 6,72,875 ಪ್ರಕರಣಗಳು ಇತ್ಯರ್ಥಗೊಂಡು, ₹18,95,83,150 ದಂಡ ಪಾವತಿಯಾಗಿದೆ ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದ್ದಾರೆ.

ಈ ನಡುವೆ ದ್ವಿಚಕ್ರ ವಾಹನದ ಮಾಲೀಕರೊಬ್ಬರು ₹46,500 ದಂಡ ಪಾವತಿಸಿದ್ದಾರೆ. ಹೆಲ್ಮೆಟ್ ರಹಿತ ಚಾಲನೆ, ಸಿಗ್ನಲ್ ಜಂಪ್ ಸೇರಿದಂತೆ ನೂರು ಪ್ರಕರಣಗಳು ಈ ವಾಹನದ ಮೇಲೆ ದಾಖಲಾಗಿತ್ತು. ತಮ್ಮ ದ್ವಿಚಕ್ರ ವಾಹನದ ಬೆಲೆಯಷ್ಟೇ ದಂಡ ಪಾವತಿಸಿರುವುದು ವಿಶೇಷ. ಸೆಪ್ಟೆಂಬರ್ 12ರವರೆಗೆ ದಂಡ ಪಾವತಿಸಲು ಅವಕಾಶವಿದೆ. ಬಿಟಿಪಿ ಅಸ್ತ್ರಂ, ಕರ್ನಾಟಕ ರಾಜ್ಯ ಪೊಲೀಸ್ (ಕೆಎಸ್‌ಪಿ) ಆ್ಯಪ್, ಬೆಂಗಳೂರು ಸಂಚಾರ ಪೊಲೀಸ್ ಅಥವಾ ಕರ್ನಾಟಕ ಒನ್ ವೆಬ್ ಸೈಟ್‌ನಲ್ಲಿ ವಾಹನದ ನೋಂದಣಿ ಸಂಖ್ಯೆ ನಮೂದಿಸಿ ಸಂಚಾರ ಉಲ್ಲಂಘನೆ ಪ್ರಕರಣಗಳನ್ನು ತಿಳಿದುಕೊಳ್ಳಬಹುದು.

ಬಳಿಕ ಪಾವತಿಸಲು ಇಚ್ಛಿಸುವ ದಂಡದ ಮೊತ್ತವನ್ನು ಆಯ್ಕೆ ಮಾಡಿದರೆ, ರಿಯಾಯಿತಿ ಮೊತ್ತದ ಪಾವತಿಯ ಆಯ್ಕೆ ಲಭ್ಯವಾಗುತ್ತದೆ. ನಂತರ ದಂಡದ ಮೊತ್ತ ಪಾವತಿಸಬಹುದು.

₹2.65 ಲಕ್ಷ ವಂಚನೆ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘಿಸಿರುವ ವಾಹನಗಳ ಮೇಲಿನ ದಂಡ ಪಾವತಿಗೆ ಶೇಕಡ 50ರಷ್ಟು ರಿಯಾಯಿತಿ ನೀಡಿರುವ ಅವಕಾಶವನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವ ಸೈಬರ್ ವಂಚಕರು, ಸಾಫ್ಟ್‌ವೇರ್ ಎಂಜಿನಿಯರ್ ಒಬ್ಬರಿಗೆ ವಂಚನೆ ಮಾಡಿದ್ದಾರೆ.

ಟೆಲಿಕಾಂ ಲೇಔಟ್‌ನ 50 ವರ್ಷದ ಸಾಫ್ಟ್‌ವೇರ್ ಎಂಜಿನಿಯರ್ ಮುರುಳಿ ಮೋಹನ್ ಅವರು ರಿಯಾಯಿತಿ ದರದಲ್ಲಿ ವಾಹನದ ಮೇಲಿನ ದಂಡ ಪಾವತಿಗೆ ಆನ್‌ಲೈನ್ ಹುಡುಕಾಟ ನಡೆಸುತ್ತಿದ್ದರು. ಈ ವೇಳೆ ವಂಚಕರು ಅವರ ವಾಟ್ಸ್‌ಆ್ಯಪ್‌ಗೆ 'ಎಪಿಕೆ' ಹೆಸರಿನ ನಕಲಿ ಲಿಂಕ್ ಕಳುಹಿಸಿ, ಅದನ್ನು ಡೌನ್‌ಲೋಡ್ ಮಾಡಿಕೊಳ್ಳುವಂತೆ ಸೂಚಿಸಿದ್ದರು. ಲಿಂಕ್ ಮೇಲೆ ಕ್ಲಿಕ್ ಮಾಡುತ್ತಿದ್ದಂತೆ ಮೊಬೈಲ್ ಹ್ಯಾಕ್ ಆಗಿದೆ. ಕೆಲ ಹೊತ್ತಿನಲ್ಲೇ ಅವರ ಬ್ಯಾಂಕ್ ಖಾತೆಯಲ್ಲಿರುವ ₹2,65,979 ವಂಚಕರು ದೋಚಿದ್ದಾರೆ.

ಈ ಸಂಬಂಧ ಕೊಡಿಗೇಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇನ್‌ಸ್ಪೆಕ್ಟರ್ ಮೇಲೆ ಹಲ್ಲೆ ಯತ್ನ: ಕಾನ್‌ಸ್ಟೆಬಲ್ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಂಸದ ಹೋಟೆಲ್‌ನಲ್ಲಿ ಮದ್ಯಪಾನಕ್ಕೆ ಅವಕಾಶ ಮಾಡಿಕೊಟ್ಟಿರುವುದನ್ನು ಪ್ರಶ್ನಿಸಿದ್ದ ಕೆ.ಪಿ ಅಗ್ರಹಾರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಮೇಲೆ ಹಲ್ಲೆಗೆ ಮುಂದಾಗಿದ್ದ ಕಾನ್‌ಸ್ಟೆಬಲ್‌ನನ್ನು ಅಮಾನತು ಮಾಡಲಾಗಿದೆ.

ಚಾಮರಾಜಪೇಟೆ ಠಾಣೆ ಕಾನ್‌ಸ್ಟೆಬಲ್ ಮಧುಸೂದನ್ ಅಮಾನತುಗೊಂಡವರು.

ಆಗಸ್ಟ್ 24ರಂದು ಮಾಗಡಿ ರಸ್ತೆಯಲ್ಲಿನ ಮಾಂಸದ ಹೋಟೆಲ್‌ನಲ್ಲಿ ಸಾರ್ವಜನಿಕರಿಗೆ ಮದ್ಯ ಸೇವನೆಗೆ ಅವಕಾಶ ಮಾಡಿಕೊಟ್ಟಿರುವುದನ್ನು ಪ್ರಶ್ನಿಸಿದ್ದ ಇನ್‌ಸ್ಪೆಕ್ಟರ್ ಗೋವಿಂದರಾಜು ಮೇಲೆ ಹೋಟೆಲ್ ಮಾಲೀಕ ಮಂಜುನಾಥ್ ಅವರ ಸಹೋದರ, ಕಾನ್‌ಸ್ಟೆಬಲ್ ಮಧುಸೂದನ್ ಸ್ಥಳಕ್ಕೆ ಬಂದು, ಇನ್‌ಸ್ಪೆಕ್ಟರ್ ಜತೆ ವಾಗ್ವಾದ ನಡೆಸಿದ್ದರು. ಅಲ್ಲದೇ ಹಲ್ಲೆ ನಡೆಸಲು ಮುಂದಾಗಿದ್ದರು.

ಕೆ.ಪಿ ಅಗ್ರಹಾರ ಠಾಣೆಯಲ್ಲಿ ಇಬ್ಬರ ಮೇಲೆ ಎಫ್‌ಐಆರ್ ದಾಖಲಾಗಿತ್ತು. ಇಬ್ಬರನ್ನೂ ವಶಕ್ಕೆ ಪಡೆದಿದ್ದ ಪೊಲೀಸರು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದರು. ಘಟನೆ ಬಗ್ಗೆ ತನಿಖೆ ನಡೆಸಿದ ಡಿಸಿಪಿ, ಕಾನ್‌ಸ್ಟೆಬಲ್‌ನನ್ನು ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ಜಗದೀಶ್ ವಿಚಾರಣೆ ತೀವ್ರ

ಪ್ರಜಾವಾಣಿ ವಾರ್ತೆ


ಶಿವು


ಜಗದೀಶ್

ಬೆಂಗಳೂರು: ರೌಡಿಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವ ಕೊಲೆ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಐಡಿ ಪೊಲೀಸರು, ಮೊದಲನೇ ಆರೋಪಿ ಜಗದೀಶ್ ಅಲಿಯಾಸ್ ಜಗ್ಗನನ್ನು ತೀವ್ರ ವಿಚಾರಣೆಗೆ ಒಳಪಡಿಸಿದ್ದಾರೆ.

ಜುಲೈ 15ರಂದು ಭಾರತಿ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬಿಕ್ಲು ಶಿವ ಹತ್ಯೆ ನಡೆದ ಬಳಿಕ ಜಗದೀಶ್ ತಲೆಮರೆಸಿಕೊಂಡಿದ್ದ. ಆತನ ಬಂಧನಕ್ಕೆ ವಿಶೇಷ ತಂಡಗಳನ್ನು ರಚಿಸಲಾಗಿತ್ತು. ವಿದೇಶದಲ್ಲಿ ತಲೆಮರೆಸಿಕೊಂಡಿದ್ದ ಆರೋಪಿ, ದೆಹಲಿಗೆ ಬರುತ್ತಿದ್ದಂತೆ ಸಿಐಡಿ ಅಧಿಕಾರಿಗಳು ಬಂಧಿಸಿ, ಬೆಂಗಳೂರಿಗೆ ಕರೆತಂದರು. ನಂತರ ಆರೋಪಿಯನ್ನು 5ನೇ ಎಸಿಎಂಎಂ ಕೋರ್ಟ್ ನ್ಯಾಯಾಧೀಶರ ಮುಂದೆ ಹಾಜರುಪಡಿಸಿ, 10 ದಿನ ತಮ್ಮ ವಶಕ್ಕೆ ಪಡೆದಿದ್ದಾರೆ.

ಸಿಐಡಿ ಎಸ್ಪಿ ವೆಂಕಟೇಶ್ ನೇತೃತ್ವದಲ್ಲಿ ವಿಚಾರಣೆ ನಡೆಯುತ್ತಿದೆ. ಬಿಕ್ಲು ಶಿವ ಹಾಗೂ ಜಗದೀಶ್ ನಡುವಿನ ವೈಷಮ್ಯ, ಕಿತ್ತಗನೂರು ಜಮೀನಿನ ಗಲಾಟೆ, ಹಳೆ ಪ್ರಕರಣಗಳು ಹಾಗೂ ಶಾಸಕ ಬೈರತಿ ಬಸವರಾಜ್ ಜೊತೆಗಿನ ಸಂಪರ್ಕದ ಬಗ್ಗೆ ವಿಚಾರಣೆ ನಡೆಸಲಾಗುತ್ತಿದೆ.

ಅಲ್ಲದೇ ಹಲವು ಬಾರಿ ಶಾಸಕರ ಜೊತೆ ಕಾಣಿಸಿಕೊಂಡಿರುವುದು, ಕುಂಭಮೇಳದಲ್ಲೂ ಶಾಸಕರ ಜೊತೆಯಲ್ಲಿ ಇರುವುದು, ಬೈರತಿ ಬಸವರಾಜ್ ಪರಿಚಿತರಾದದ್ದು ಹೇಗೆ ಎಂಬುದರ ಬಗ್ಗೆ ಅಧಿಕಾರಿಗಳು ಮಾಹಿತಿ ಪಡೆದುಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಬೈರತಿ ಬಸವರಾಜ್‌ಗೂ ತನಗೂ ಆತ್ಮೀಯತೆ ಇಲ್ಲ. ಕ್ಷೇತ್ರದ ಶಾಸಕರಾದ ಕಾರಣ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದೆ. ಕುಂಭಮೇಳಕ್ಕೆ ಹೋಗಿದ್ದಾಗ ಸಿಕ್ಕಿದ್ರು, ಹಾಗಾಗಿ ಅವರ ಜತೆ ಫೋಟೊ ತೆಗೆಸಿಕೊಂಡಿದ್ದೆ. ಶಿವನ ಕೊಲೆಗೂ ತನಗೂ ಸಂಬಂಧವಿಲ್ಲ' ಎಂದು ಪ್ರಾಥಮಿಕ ವಿಚಾರಣೆ ವೇಳೆ ತಿಳಿಸಿದ್ದಾನೆ ಎಂದು ಪೊಲೀಸ್ ಮೂಲಗಳು ಹೇಳಿವೆ.

'ಶಿವ ಹತ್ಯೆಯಲ್ಲಿ ಜಗ್ಗನ ಪಾತ್ರದ ಬಗ್ಗೆ ಸಾಕ್ಷ್ಯಗಳನ್ನು ಸಂಗ್ರಹಿಸಲಾಗಿದೆ. ಸಾಕ್ಷಿಗಳನ್ನು ಮುಂದಿಟ್ಟು ಆರೋಪಿಯ ವಿಚಾರಣೆ ನಡೆಸಲಾಗುತ್ತಿದೆ. ಆತನ ಹೇಳಿಕೆಗಳನ್ನು ಆಧರಿಸಿ, ಪ್ರಕರಣದ ಐದನೇ ಆರೋಪಿ, ಕೆ.ಆರ್.ಪುರ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ್ ಅವರನ್ನು ಮತ್ತೊಮ್ಮೆ ವಿಚಾರಣೆ ನಡೆಸುವ ಬಗ್ಗೆ ನಿರ್ಧರಿಸಲಾಗುವುದು' ಎಂದು ಮೂಲಗಳು ತಿಳಿಸಿವೆ.

ಬೈರತಿ ಬಸವರಾಜ್ ಅವರನ್ನು ಭಾರತಿನಗರ ಠಾಣೆಯ ಪೊಲೀಸರು ಎರಡು ಬಾರಿ ವಿಚಾರಣೆ ನಡೆಸಿದ್ದರು. ನಂತರ, ಪ್ರಕರಣದ ತನಿಖೆಯನ್ನು ರಾಜ್ಯ ಸರ್ಕಾರ ಸಿಐಡಿಗೆ ವಹಿಸಿತ್ತು.

ವಾಹನ ಡಿಕ್ಕಿ: ಪೇಂಟರ್ ಸಾವು

ಬೆಂಗಳೂರು: ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಪೇಂಟರ್ ಮೃತಪಟ್ಟಿರುವ ಘಟನೆ ವಿಲ್ಸನ್ ಗಾರ್ಡನ್ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಬೈಲಸಂದ್ರ ನಿವಾಸಿ ನಾಗರಾಜು(40) ಮೃತ ಪೇಂಟರ್.

ಕೆಲಸದ ನಿಮಿತ್ತ ಹೊರಗಡೆ ಹೋಗಿದ್ದ ನಾಗರಾಜು, ಬುಧವಾರ ರಾತ್ರಿ 9 ಗಂಟೆ ಸುಮಾರಿಗೆ ಬೈಲಸಂದ್ರ ಮುಖ್ಯರಸ್ತೆಯಲ್ಲಿ ನಡೆದುಕೊಂಡು ಮನೆಗೆ ಹೋಗುತ್ತಿದ್ದರು. ಇದೇ ವೇಳೆ ವೇಗವಾಗಿ ಬಂದ ವಾಹನ ಡಿಕ್ಕಿ ಹೊಡೆದಿದ್ದು, ಚಾಲಕ ವಾಹನ ನಿಲ್ಲಿಸದೆ ಪರಾರಿಯಾಗಿದ್ದಾನೆ. ತೀವ್ರ ರಕ್ತಸ್ರಾವವಾಗಿ ಕೆಳಗೆ ಬಿದ್ದಿದ್ದನ್ನು ಗಮನಿಸಿದ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಬಳಿಕ ಪೊಲೀಸರು ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದರು.

ವಿಲ್ಸನ್ ಗಾರ್ಡನ್ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ವಾಹನ ಪತ್ತೆ ಕಾರ್ಯ ನಡೆಯುತ್ತಿದೆ.

ಕಳ್ಳನ ಸೆರೆ: 100 ಗ್ರಾಂ ಚಿನ್ನಾಭರಣ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಗಳ್ಳತನ ಮಾಡಿ ಆಭರಣಗಳನ್ನು ಕೊಯಮತ್ತೂರಿನಲ್ಲಿ ಮಾರಾಟ ಮಾಡಿದ ಆರೋಪಿಯನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿ, 100 ಗ್ರಾಂ ಚಿನ್ನಾಭರಣ ವಶಪಡಿಸಿಕೊಂಡಿದ್ದಾರೆ.

ತಮಿಳುನಾಡಿನ ಕಾರ್ತಿಕ್ ಎಂಬಾತನನ್ನು ಬಂಧಿಸಿ, ₹10 ಲಕ್ಷ ಮೌಲ್ಯದ ಆಭರಣ ಜಪ್ತಿ ಮಾಡಲಾಗಿದೆ.

ಠಾಣಾ ವ್ಯಾಪ್ತಿಯ ವಿದ್ಯಾಪೀಠ ರಸ್ತೆಯ ನಿವಾಸಿಯೊಬ್ಬರು ವರಮಹಾಲಕ್ಷ್ಮೀ ಹಬ್ಬದ ನಿಮಿತ್ತ ಪೂಜಾ ಸಾಮಗ್ರಿಗಳನ್ನು ಖರೀದಿಸಲು ಮನೆಗೆ ಬೀಗ ಹಾಕಿಕೊಂಡು ಹೋಗಿದ್ದರು. ಈ ವೇಳೆ ಆರೋಪಿಗಳು ಮನೆಯ ಬೀಗ ಮುರಿದು, ಬೀರುವಿನಲ್ಲಿಟ್ಟಿದ್ದ 55 ಗ್ರಾಂ ಚಿನ್ನಾಭರಣ ಹಾಗೂ ₹6 ಸಾವಿರ ನಗದು ಕಳ್ಳತನ ಮಾಡಿ ಪರಾರಿಯಾಗಿದ್ದರು.



ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು, ಖಚಿತ ಮಾಹಿತಿ ಆಧರಿಸಿ, ತಮಿಳುನಾಡಿನ ಉಕ್ಕಡಂನಲ್ಲಿ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ ಮನೆಗಳ್ಳತನ ಮಾಡಿರುವುದು ಗೊತ್ತಾಗಿದೆ. ಕದ್ದ ಆಭರಣಗಳನ್ನು ಕೊಯಮತ್ತೂರಿನಲ್ಲಿರುವ ಆಭರಣ ಅಂಗಡಿಯಲ್ಲಿ ಮಾರಾಟ ಮಾಡಿರುವುದಾಗಿ ತಿಳಿಸಿದ್ದು, ಅವುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಆರೋಪಿಯು ತಮಿಳುನಾಡಿನ 28 ಕಡೆ ಕಳ್ಳತನ ಮಾಡಿದ್ದು, ವಿವಿಧ ಠಾಣೆಗಳಲ್ಲಿ ಪ್ರಕರಣ ದಾಖಲಾಗಿದೆ. ಕಳೆದ ತಿಂಗಳಷ್ಟೇ ಜಾಮೀನಿನ ಮೇಲೆ ಜೈಲಿನಿಂದ ಹೊರಬಂದಿದ್ದ ಆರೋಪಿ, ಮತ್ತೆ ಕಳ್ಳತನಕ್ಕಿಳಿದಿದ್ದ. ಈತನ ಬಂಧನದಿಂದ ಕೆಂಗೇರಿ ಪೊಲೀಸ್ ಠಾಣೆಯ 2, ರಾಜಾಜಿನಗರ ಹಾಗೂ ಬಂಡೆಪಾಳ್ಯ ಠಾಣೆಯ ತಲಾ ಒಂದು ಕಳವು ಪ್ರಕರಣ ಸೇರಿ ನಾಲ್ಕು ಪ್ರಕರಣಗಳು ಪತ್ತೆಯಾಗಿವೆ. ವಿಲಾಸಿ ಜೀವನ ನಡೆಸಲು ಕಳ್ಳತನ ಮಾಡುತ್ತಿರುವುದು ತನಿಖೆ ವೇಳೆ ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸರಳೀಕರಣ ಮಹತ್ವದ ಹೆಜ್ಜೆ

ಬೆಂಗಳೂರು: 'ಜಿಎಸ್‌ಟಿ ಸರಳೀಕರಣದ ತೀರ್ಮಾನದಿಂದ ಭಾರತ ವಿಶ್ವದ 3ನೇ ಆರ್ಥಿಕ ಶಕ್ತಿಯಾಗಲಿದೆ. ಇದು ಮಹತ್ವದ ಹೆಜ್ಜೆ' ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಬಣ್ಣಿಸಿದ್ದಾರೆ.

ನಿಧನ ವಾರ್ತೆ

ಕ.ನಂ. ನಾಗರಾಜು



ಬೆಂಗಳೂರು: ನಿವೃತ್ತ ಕನ್ನಡ ಪ್ರಾಧ್ಯಾಪಕ ಕ.ನಂ. ನಾಗರಾಜು (84) ಬುಧವಾರ ಗಿರಿನಗರದಲ್ಲಿ ನಿಧನರಾದರು. ಮೃತರಿಗೆ ಪತ್ನಿ ಇದ್ದಾರೆ.

ದೊಡ್ಡಬಳ್ಳಾಪುರ ತಾಲ್ಲೂಕಿನ ಕನ್ನಮಂಗಲದವರಾದ ನಾಗರಾಜು ಅವರು ಬಸವನಗುಡಿಯ ನ್ಯಾಷನಲ್ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ವಿಭಾಗದ ಮುಖ್ಯಸ್ಥರಾಗಿ, ಸಂಜೆ ಕಾಲೇಜಿನ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸಿದ್ದರು. 'ಪಾರ್ಥೇನಿಯಂ' ಕಥಾ ಸಂಕಲನ, 'ಸಜ್ಜನ ಸಾವು' ಅನುವಾದಿತ ಕಥಾ ಸಂಕಲನ, 'ಗರೀಬಿ ಹಟಾವೋ' ನಾಟಕಗಳನ್ನು ಅವರು ರಚಿಸಿದ್ದರು. ಅವರ ಆಶಯದಂತೆ ಮೃತದೇಹವನ್ನು ಕುಟುಂಬದವರು ರಾಮಯ್ಯ ವೈದ್ಯಕೀಯ ಕಾಲೇಜಿಗೆ ದಾನ ಮಾಡಿದರು.

ಮನುಕುಲದ ಒಳಿತಿಗೆ, ಸೇವೆಗೆ ಜ್ಞಾನ ಬಳಕೆಯಾಗಲಿ: ರಿತೇಶ್

ಪ್ರಜಾವಾಣಿ ವಾರ್ತೆ



ಅಮೃತ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಪದವಿ ಪ್ರದಾನ ಸಮಾರಂಭದಲ್ಲಿ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ಅಧ್ಯಕ್ಷ ಟಿ.ಜಿ.ಸೀತಾರಾಮ್ ಮಾತನಾಡಿದರು

ಬೆಂಗಳೂರು: ಪದವೀಧರರು ತಾವು ಪಡೆದ ಜ್ಞಾನವನ್ನು ಮನುಕುಲದ ಒಳಿತಿಗೆ, ಸಮಾಜ ಸೇವೆಗೆ ಮುಡುಪಾಗಿಡಬೇಕು ಎಂದು ಹಣಕಾಸು ಇಲಾಖೆ ಪ್ರಧಾನ ಕಾರ್ಯದರ್ಶಿ ರಿತೇಶ್‌ಕುಮಾರ್ ಸಿಂಗ್ ಹೇಳಿದರು.

ಅಮೃತ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಎಂಜಿನಿಯರಿಂಗ್, ಮ್ಯಾನೇಜ್‌ಮಂಟ್, ತಂತ್ರಜ್ಞಾನ ಮತ್ತು ಸಂಶೋಧನಾ ವಿಭಾಗದ ವಿದ್ಯಾರ್ಥಿಗಳ ಪದವಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಸ್ವಾತಂತ್ರ್ಯ ಹೋರಾಟಗಾರ ದೇಶಭಕ್ತಿ, ಸೇವಾ ಮನೋಭಾವವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು. ಅವರಿಂದ ಸದಾ ಪ್ರೇರಣೆ ಪಡೆಯಬೇಕು. ಆಗ ಕಲಿತ ಜ್ಞಾನ ಸಾರ್ಥಕವಾಗುತ್ತದೆ ಎಂದು ಕಿವಿಮಾತು ಹೇಳಿದರು.

ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ಅಧ್ಯಕ್ಷ ಟಿ.ಜಿ.ಸೀತಾರಾಮ್ ಮಾತನಾಡಿ, 'ಶಿಕ್ಷಣ ಪೂರೈಸಿದ ವಿದ್ಯಾರ್ಥಿಗಳು ಸಮಾಜ ಮತ್ತು ರಾಷ್ಟ್ರ ನಿರ್ಮಾಣದಲ್ಲಿ ತೊಡಗಿಸಿಕೊಳ್ಳಬೇಕು. ವೇಗವಾಗಿ ಬದಲಾಗುತ್ತಿರುವ ಜಗತ್ತಿನ ತಂತ್ರಜ್ಞಾನ ಬಳಸಿಕೊಂಡು ಸಮಾನತೆ, ಸುಸ್ಥಿರ ಅಭಿವೃದ್ಧಿ ಮತ್ತು ಜೀವನಮಟ್ಟ ಸುಧಾರಿಸಲು ಶ್ರಮಿಸಬೇಕು' ಎಂದರು.

ಸ್ವಾಮಿ ರಾಮಕೃಷ್ಣಾನಂದಪುರಿ ಅವರು, 21 ಚಿನ್ನದ ಪದಕ ಒಳಗೊಂಡು 778 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು. ಬಿ.ಟೆಕ್‌ನಲ್ಲಿ 595, ಎಂ.ಬಿ.ಎನಲ್ಲಿ 99, ಎಂ.ಟೆಕ್‌ನಲ್ಲಿ 74 ವಿದ್ಯಾರ್ಥಿಗಳು ಪದವಿ ಪ್ರಮಾಣಪತ್ರ, 10 ಮಂದಿ ಪಿಎಚ್‌.ಡಿ ಪ್ರಮಾಣಪತ್ರ ಪಡೆದರು.

ವಿಶ್ವವಿದ್ಯಾಲಯದ ಬೆಂಗಳೂರು ಕ್ಯಾಂಪಸ್ ನಿರ್ದೇಶಕ ಮನೋಜ್ ಪಿ, ಎಂಜಿನಿಯರಿಂಗ್ ಕಾಲೇಜು ಪ್ರಾಂಶುಪಾಲ ಶ್ರೀರಾಮ ದೇವನಾಥನ್, ಇ.ಗೋಪಾಲಕೃಷ್ಣನ್ ಉಪಸ್ಥಿತರಿದ್ದರು.

ಮುಖ್ಯಾಂಶಗಳು

- ಅಮೃತ ವಿ.ವಿ ಕಾರ್ಯಕ್ರಮದಲ್ಲಿ ಅಭಿಮತ
- ಸ್ವಾತಂತ್ರ್ಯ ಹೋರಾಟಗಾರರಿಂದ ಸ್ಫೂರ್ತಿ ಪಡೆಯಬೇಕು

ಸಿನಿಮಾ ರಂಜನೆ


ವಿಜಯ ರಾಘವೇಂದ್ರ

ವಿಜಯ ರಾಘವೇಂದ್ರ ನಟನೆಯ 'ರಿಪ್ಪನ್ ಸ್ವಾಮಿ' ಚಿತ್ರ ಇಂದು (ಆ.29) ತೆರೆ ಕಾಣುತ್ತಿದೆ. ಎಸ್ಟೇಟ್‌ನಲ್ಲಿ ನಡೆದ ಒಂದು ನೈಜ ಘಟನೆಯನ್ನೇ ಕಥೆಯಾಗಿ ಹೊಂದಿರುವ ಚಿತ್ರದಲ್ಲಿ ತಮ್ಮ ಪಾತ್ರ ಹಾಗೂ ಎರಡೂವರೆ ದಶಕಗಳ ಸಿನಿಪಯಣ ಕುರಿತು ಅವರು ಮಾತನಾಡಿದ್ದಾರೆ.

'ಯಶಸ್ಸು ಕೆಲಸಕ್ಕೆ ಮುಖ್ಯ, ವ್ಯಕ್ತಿಗಲ್ಲ'

• ವಿನಾಯಕ ಕೆ.ಎಸ್.

• ಚಿತ್ರದಲ್ಲಿ ತಮ್ಮ ಪಾತ್ರ...

'ರಿಪ್ಪನ್ ಸ್ವಾಮಿ' ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಚಿತ್ರದ ಫಸ್ಟ್‌ಲುಕ್, ಟೀಸರ್, ಟ್ರೇಲರ್‌ನಲ್ಲಿ ನೋಡಿದಂತೆ ಕ್ರೌರ್ಯವನ್ನು ಹೊಂದಿರುವ ಪಾತ್ರ. ಸಕಾರಾತ್ಮವಲ್ಲ, ಆದರೆ ತುಂಬ ಗ್ರೇ ಶೇಡ್ ಇರುವ ಪಾತ್ರ. ಆತ ತೋಟದ ಮಾಲೀಕ. ಕುಟುಂಬದ ಜತೆ ಜೀವನ ನಡೆಸುತ್ತ ಇರುತ್ತಾನೆ. ಯಾವಾಗಲೂ ಕೋಪ, ಸಿಡುಕ. ಆತ ಸ್ವಭಾವತಃ ಹಾಗೆ. ಅವನನ್ನು ಕಂಡರೆ ಊರಲ್ಲಿ ಯಾರಿಗೂ ಆಗುವುದಿಲ್ಲ. ಆದರೆ ಆತ ತಾನು ಸರಿಯಿದ್ದೇನೆ, ಸಮಾಜವೇ ಸರಿಯಿಲ್ಲ ಎಂದುಕೊಂಡಿರುವ ವ್ಯಕ್ತಿ.

• ಯಾವ ಜಾನರ್‌ನ ಸಿನಿಮಾ?

ತೋಟದ ಮಾಲೀಕ ನಿಗೂಢವಾಗಿ ಸಾವನ್ನಪ್ಪುತ್ತಾನೆ. ಅದು ಆತ್ಮಹತ್ಯೆಯೋ ಅಥವಾ ಕೊಲೆಯೋ ಎಂಬುದು ಚಿತ್ರದ ಸಾರಾಂಶ ಎನ್ನುವುದನ್ನು ಪೋಸ್ಟರ್ ಒಂದರಲ್ಲಿ ಹೇಳಿದ್ದೆವು. ಇದರ ನಡುವೆ ಬರುವ ಸನ್ನಿವೇಶಗಳನ್ನು ಬಹಳ ಸಹಜವಾಗಿ, ನಿಜಜೀವನಕ್ಕೆ ಹತ್ತಿರವಾಗುವಂತೆ ಪ್ರಸ್ತುತಪಡಿಸಿದ್ದಾರೆ ನಿರ್ದೇಶಕ. ಡಾರ್ಕ್ ಆ್ಯಕ್ಷನ್ ಥ್ರಿಲ್ಲರ್ ಜಾನರ್ ಎನ್ನಬಹುದು. ಸಸ್ಪೆನ್ಸ್ ಥ್ರಿಲ್ಲರ್ ಎಂತಲೂ ಕರೆಯಬಹುದು. ಆದರೆ ಹಾಗೇ ಹೇಳಿದರೆ ಜನ ತಾವೇ ಒಂದಷ್ಟು ನಿರೀಕ್ಷೆಗಳೊಂದಿಗೆ ಬರುತ್ತಾರೆ. ಜನ ಕಥೆಯ ಜತೆ ಸಾಗಬೇಕು. ಹೀಗಾಗಿ ಇದನ್ನು ನಾವು ಸಸ್ಪೆನ್ಸ್ ಥ್ರಿಲ್ಲರ್ ಎನ್ನುತ್ತಿಲ್ಲ.

• ಇದು 'ಕೇಸ್ ಆಫ್ ಕೊಂಡಾಣ' ರೀತಿಯ ಸಿನಿಮಾವೇ?

'ಕೇಸ್ ಆಫ್ ಕೊಂಡಾಣ', 'ಸೀತಾರಾಮ್ ಬಿನೋಯ್' ರೀತಿಯದ್ದೇ ಜಾನರ್. ಆದರೆ ಕಥೆ ಬೇರೆಯೇ ಇದೆ. ಒಂದು ಸರಳವಾದ ಕಥೆ ಬಿಚ್ಚಿಕೊಳ್ಳುತ್ತ ಹೋಗುತ್ತದೆ. ಆಸಕ್ತಿದಾಯಕ, ಬಹಳ ಹಿಡಿತ ಹೊಂದಿದ ಕಥೆ. ಅಲ್ಲಲ್ಲಿ ಸಣ್ಣನಗುವಿನೊಂದಿಗೆ ಕೊನೆಗೆ ಕುತೂಹಲಭರಿತರಾಗಿ ನೋಡಬಹುದಾದ ಸಿನಿಮಾ. ಜನ ನೋಡಿ ಹೇಳಿದ ನಂತರ ಇದನ್ನು ಅದ್ಭುತ ಎನ್ನಬಹುದು. ನಾವೇ ಇದನ್ನು ಅತ್ಯದ್ಭುತ ಸಿನಿಮಾ ಎಂದುಕೊಳ್ಳಲು ಆಗುವುದಿಲ್ಲ. ನಾವೊಂದು ಒಳ್ಳೆ ಕಥೆ ಹೇಳಿದ್ದೇವೆ. ಬಂದು ಕುಳಿತು ನೋಡಿ ಎಂದು ಜನರನ್ನು ಕರೆಯುತ್ತಿದ್ದೇವೆ. ಹಿಂದಿನ ಸಿನಿಮಾಗಳ ರೀತಿಯದ್ದೇ ಕಥೆಯಲ್ಲ.

• ಜನಪ್ರಿಯ ನಾಯಕನಾಗಿದ್ದರೂ ಸಿದ್ಧಸೂತ್ರಕ್ಕೆ ಅಂಟಿಕೊಳ್ಳದೆ ವಿಭಿನ್ನ ಪಾತ್ರಗಳನ್ನು ಮಾಡುವುದು, ಹೊಸ ಕಥೆಗಳನ್ನು ಹುಡುಕುವುದರ ಗುಟ್ಟೇನು?

ವೃತ್ತಿಜೀವನ ಪ್ರಾರಂಭವಾದಾಗಿನಿಂದ ನಾನೊಬ್ಬ ಒಳ್ಳೆಯ ಕಲಾವಿದ ಆಗಬೇಕು ಎಂದುಕೊಂಡವನು. ಹೀಗಾಗಿ ಯಾವುದೋ ಒಂದು ಸೂತ್ರಕ್ಕೆ ಸೀಮಿತವಾಗಿಲ್ಲ. ಆದ್ದರಿಂದಲೇ ಅಭಿಮಾನಿಗಳು ಆರಾಧಿಸುವ ನಟ ನಾನಾಗಲಿಲ್ಲ. ನನ್ನ ಎಲ್ಲ ಪಾತ್ರಗಳಲ್ಲಿಯೂ ವಿಜಯ ರಾಘವೇಂದ್ರನಾಗಿ ಕಾಣಿಸಿಕೊಳ್ಳುತ್ತ ಹೋಗುತ್ತೇನೆ. ನನಗೆ ಪಾತ್ರಗಳನ್ನು ಆಯ್ಕೆ ಮಾಡಿಕೊಳ್ಳುವ ಐಷಾರಾಮಿತನವನ್ನು ಬದುಕು ನೀಡಿಲ್ಲ. ನಿರ್ದೇಶಕರು ನನ್ನನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಕೆಲವು ನನಗಾಗಿ ಸಿನಿಮಾ ಮಾಡುವೆ, ಕೆಲವು ಸಲ ವೃತ್ತಿಗಾಗಿ, ಇನ್ನು ಕೆಲವು ಸಲ ಅನಿವಾರ್ಯಕ್ಕೆ ಸಿನಿಮಾ ಮಾಡುತ್ತೇನೆ.

• ಈತನಕದ ವೃತ್ತಿ ಬದುಕು ಹೇಗಿತ್ತು?

ನಾಯಕನಾಗಿ ಎರಡೂವರೆ ದಶಕಗಳು ಕಳೆದಿವೆ. ಈ ಪಯಣ ಬಹಳ ಖುಷಿ ಎನ್ನಿಸುತ್ತದೆ. ಯಾವುದೋ ಒಂದು ಪಾತ್ರ ಮನಸಿನಲ್ಲಿ ಉಳಿದುಕೊಳ್ಳುವುದು, ಆ ಪಾತ್ರದ ಮೂಲಕ ಜನ ನನ್ನನ್ನು ಗುರುತಿಸುವುದು ಸಂತಸದ ಸಂಗತಿಗಳು. 'ಚಿನ್ನಾರಿ ಮುತ್ತ' ಹಾಕಿಕೊಟ್ಟ ಅಡಿಪಾಯ ಎಷ್ಟು ಗಟ್ಟಿಯಾಗಿದೆ ಎಂದರೆ, ಇಡೀ ಜನ್ಮಕ್ಕಾಗುವಷ್ಟು ಜನಮನ್ನಣೆಯನ್ನು ನೀಡಿದೆ. ಜನರ ಮನಸ್ಸಿನಲ್ಲಿ ಆ ಪಾತ್ರ ಈಗಲೂ ಹಾಗೆ ಇದೆ.

• ನೀವು ಮಾಡಲೇಬೇಕು ಎಂದು ತೀವ್ರವಾಗಿ ಅನಿಸಿರುವ ಪಾತ್ರಗಳು...

ಬುದ್ಧಿಮಾಂಧ್ಯರು ಅಥವಾ ಅಂಗವಿಕಲ ಪಾತ್ರ ಮಾಡಬೇಕು ಎಂಬ ಆಸೆಯಿದೆ. ಸ್ವಾಧೀನ ಇಲ್ಲದ ದೇವರ ಮಕ್ಕಳ ಪಾತ್ರ ಎನ್ನುತ್ತಾರಲ್ಲ, ಆ ರೀತಿಯದ್ದು. ನಾನು ಚೆನ್ನೈನಲ್ಲಿ ನಟನೆ ತರಗತಿಯಲ್ಲಿ ಈ ಪಾತ್ರ ಮಾಡಿದ್ದೆ. ಈ ಪಾತ್ರಕ್ಕಾಗಿ ಕಾಯುತ್ತಿರುವೆ.

• ನಿಮ್ಮ ಪ್ರಕಾರ ಕನ್ನಡ ಚಿತ್ರಗಳಿಗೆ ಪ್ರೇಕ್ಷಕರು ಬಾರದಿರಲು ಕಾರಣ?

ಗಟ್ಟಿಯಾದಬರವಣಿಗೆಕೊರತೆಇದೆ. 1970–80ರ ದಶಕಗಳಲ್ಲಿ ನೆನಪಿನಲ್ಲಿ ಉಳಿವಂಥ ಪಾತ್ರಗಳನ್ನು ಬರೆಯುತ್ತಿದ್ದರು. ಸಿನಿಮಾ ಮುಗಿದಾಗ ಒಂದು ಸಂದೇಶ ಸಿಗುತ್ತಿತ್ತು. ಸಿನಿಮಾ ಬಗ್ಗೆ, ಸ್ಕ್ರಿಪ್ಟ್ ಕುರಿತು ಕಲಿಕೆ ಇತ್ತು. ಮೊದಲ ಆದ್ಯತೆ ಸ್ಕ್ರಿಪ್ಟ್‌ಗೆ ಇತ್ತು. ಮೇರು ನಟರು ಸ್ಕ್ರಿಪ್ಟ್ ವಿಚಾರದಲ್ಲಿ ಜಗಳ ಆಡುತ್ತಿದ್ದರು. ಈಗ ಆ ಜಗಳ ಕಡಿಮೆ ಆಗಿದೆ. ಆ ಗುಣಮಟ್ಟವೂ ಇಲ್ಲ. ಪೋಸ್ಟರ್, ಟೀಸರ್ ಹಾಕಿ ಬ್ರಹ್ಮಾಂಡ ತೋರಿಸುತ್ತೇನೆ ಎಂದು ಪ್ರೇಕ್ಷಕರಿಗೆ ಸುಳ್ಳು ಹೇಳಿದರೆ ಜನ ನಿರಾಸೆಗೊಳ್ಳುತ್ತಾರೆ. ಜನಕ್ಕೆ ಬೇಕಿರುವುದು ಸರಳವಾದ ಇಡ್ಲಿ, ಸಾಂಬಾರ್. ಅದನ್ನು ಎಷ್ಟು ರುಚಿಕರವಾಗಿ, ಅಚ್ಚುಕಟ್ಟಾಗಿ ನೀಡುತ್ತೇವೆ ಎಂಬುದು ಮುಖ್ಯ. 'ರಿಪ್ಪನ್ ಸ್ವಾಮಿ' ಆ ರೀತಿ ಬರವಣಿಗೆ ಹೊಂದಿರುವಪಾತ್ರ.

• ನಿಮ್ಮ ಮುಂದಿನ ಸಿನಿಮಾಗಳು?

ಪಿ.ಸಿ.ಶೇಖರ್ ನಿರ್ದೇಶನದ 'ಮಹಾನ್' ಸಿನಿಮಾ ಡಬ್ಬಿಂಗ್ ಹಂತದಲ್ಲಿದೆ. ನಟೇಶ್ ಹೆಗಡೆ ಅವರ 'ಕುರ್ಕ' ಚಿತ್ರದಲ್ಲಿ ನಟಿಸಿರುವೆ. 'ಸೀತಾರಾಮ್ ಬಿನೋಯ್–2' ಸಿನಿಮಾ ಮುಗಿದಿದೆ. 'ರುದ್ರಾಭಿಷೇಕಂ' ಚಿತ್ರ ಸಿದ್ಧವಾಗುತ್ತಿದೆ. ಇನ್ನೊಂದು ಸಿನಿಮಾ ಕಥೆ ಅಂತಿಮವಾಗಿದೆ. ಅಕ್ಟೋಬರ್‌ನಲ್ಲಿ ಶುರುವಾಗಲಿದೆ. ಅನಂತರಾಜು ನಿರ್ದೇಶನದ ಚಿತ್ರವಿದು.

• ನೀವು ಚಿತ್ರರಂಗದಿಂದ ಕಲಿತಿದ್ದೇನೆ ಎಂದುಕೊಳ್ಳುವ ಸಂಗತಿಗಳು ಯಾವುವು?

ಬೇರೆ ಬೇರೆ ಆಯಾಮಗಳಿಂದ ನಟನೆಯನ್ನು ಕಲಿಯುತ್ತ ಇರುತ್ತೇನೆ. ಮುಖ್ಯವಾಗಿ ಕಲಿತಿದ್ದು ತಾಳ್ಮೆ ಮತ್ತು ನಂಬಿಕೆ. ಇವೆರಡೂ ಇದ್ದಾಗ ಸೋಲು, ಗೆಲುವು ಎರಡನ್ನೂ ತಡೆದುಕೊಳ್ಳುವ ಶಕ್ತಿ ಬರುತ್ತದೆ. ಕೆಲಸ ಮಾಡಿಕೊಂಡು ಮುಂದಕ್ಕೆ ಹೋಗುತ್ತಿರಬೇಕು. ಜನರ ಮನಸಿನಲ್ಲಿ ಉಳಿದುಕೊಳ್ಳಬೇಕು ಎಂದಾಗ ಯಶಸ್ಸು ಮುಖ್ಯವಾಗುತ್ತದೆ. ಆದರೆ ಯಶಸ್ಸು ಕೆಲಸಕ್ಕೆ ಮುಖ್ಯ, ವ್ಯಕ್ತಿಗಲ್ಲ. ಅದನ್ನೇ ನಂಬಿಕೊಂಡಿದ್ದರೆ ವ್ಯಕ್ತಿ ಬೆಳೆಯಲು ಸಾಧ್ಯವಿಲ್ಲ. ಅದನ್ನು ಮೀರಿ ವ್ಯಕ್ತಿತ್ವ ಬೆಳೆಸಿಕೊಳ್ಳಬೇಕು.

• ನಟನೆ ಹೊರತಾಗಿ ನಿಮ್ಮ ಮುಂದಿನ ಯೋಜನೆಗಳು?

ನಿರ್ದೇಶನದ ಕನಸಿದೆ, ಆದರೆ ಸದ್ಯಕ್ಕಲ್ಲ. ದೆವ್ವದ ಸಿನಿಮಾ ಮಾಡಬೇಕು. ಆದರೆ ಕಥೆ ಸಿದ್ಧವಾಗಿಲ್ಲ. ಯಾವಾಗ ಆಗುತ್ತದೆ ಎಂದು ಗೊತ್ತಿಲ್ಲ.


ಖುಷಿ ರವಿ, ಪ್ರಣಂ ದೇವರಾಜ್

'S/O ಮುತ್ತಣ್ಣ'ನ ಟ್ರೇಲರ್ ಬಿಡುಗಡೆ

ಶ್ರೀಕಾಂತ್ ಹುಣಸೂರು ನಿರ್ದೇಶನದಲ್ಲಿ ಪ್ರಣಂ ದೇವರಾಜ್ ನಾಯಕನಾಗಿ ನಟಿಸಿರುವ 'S/O ಮುತ್ತಣ್ಣ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. 'ದಿಯಾ' ಖ್ಯಾತಿಯ ಖುಷಿ ರವಿ ನಾಯಕಿಯಾಗಿ ನಟಿಸಿರುವ ಚಿತ್ರ ಸೆಪ್ಟೆಂಬರ್ 12ರಂದು ತೆರೆ ಕಾಣಲಿದೆ.

'ಚಿತ್ರದಲ್ಲಿ ತಂದೆ ಪಾತ್ರದಲ್ಲಿ ನಟಿಸಿರುವ ರಂಗಾಯಣ ರಘು ಅವರಿಂದ ಸಾಕಷ್ಟು ಕಲಿತಿದ್ದೇನೆ. ಅವರು ನನ್ನ ತಂದೆಗೆ ಸಮಾನ. ಸೆಟ್‌ನಲ್ಲಿ ಸಾಕಷ್ಟು ತಪ್ಪುಗಳನ್ನು ತಿದ್ದಿ ನಟನೆ ಹೇಳಿಕೊಟ್ಟರು. ಒಂದು ಸುಂದರ ಅನುಭವ ನೀಡುವ ಚಿತ್ರವಿದು. ಖುಷಿ ರವಿ ಸೇರಿದಂತೆ ಎಲ್ಲರ ಅಭಿನಯ ಚೆನ್ನಾಗಿದೆ. ಛಾಯಾಚಿತ್ರಗ್ರಾಹಕ ಸ್ಕೇಟಿಂಗ್ ಕೃಷ್ಣ ಅವರು ಈ ಚಿತ್ರದಲ್ಲಿ ಕಾಶಿಯನ್ನೂ ತೋರಿಸಿರುವ ಪರಿ ಚೆನ್ನಾಗಿದೆ' ಎಂದರು ಪ್ರಣಂ.

'ಪ್ರಜ್ವಲ್ ಜೊತೆಗೆ ಅವರ ಮೊದಲ ಚಿತ್ರ 'ಸಿಕ್ಸರ್' ನಲ್ಲಿ ಅಭಿನಯಿಸಿದ್ದೆ. ಈಗ ಪ್ರಣಂ ಜತೆ ಈ ಚಿತ್ರದಲ್ಲಿ ಕಾಣಿಸಿಕೊಂಡಿರುವೆ. ನಿರ್ದೇಶಕ ಶ್ರೀಕಾಂತ್ ಹುಣಸೂರು ನಿರ್ದೇಶಕರಾಗಿ ಕನ್ನಡ ಚಿತ್ರರಂಗದಲ್ಲಿ ಉಳಿಯುವ ಲಕ್ಷಣಗಳು ಇವೆ. ತಂದೆ ಮಗನ ಬಾಂಧವ್ಯದ ಚಿತ್ರ ನೋಡಿ ಹೊರಬಂದಾಗ ಕಾಡುತ್ತದೆ' ಎಂದರು ರಂಗಾಯಣ ರಘು.

ಪುರಾತನ ಫಿಲ್ಮ್ಸ್ ಬಂಡವಾಳ ಹೂಡಿದೆ. 'ನಮ್ಮ ಚಿತ್ರ ಆಗಸ್ಟ್ 22 ರಂದು ಬಿಡುಗಡೆಯಾಗಬೇಕಿತ್ತು. ಆದರೆ, ನಮ್ಮ ಚಿತ್ರ ನೋಡಿದ ಮಲಯಾಳ ವಿತರಕ ಶಾನ್, ಅಲ್ಲಿಯೂ ತೆರೆಗೆ ತರಲು ಮುಂದಾಗಿದ್ದಾರೆ. ಹಾಗಾಗಿ ನಮ್ಮ ಚಿತ್ರವನ್ನು ಚಿತ್ರವನ್ನು ಸೆಪ್ಟೆಂಬರ್ 12ರಂದು ಕನ್ನಡ, ತೆಲುಗು, ಮಲಯಾಳ ಭಾಷೆಗಳಲ್ಲಿ ಬಿಡುಗಡೆ ಮಾಡುತ್ತಿದ್ದೇವೆ' ಎಂದರು ನಿರ್ದೇಶಕ ಶ್ರೀಕಾಂತ್ ಹುಣಸೂರು.

ಸಚಿನ್ ಬಸ್ರೂರ್ ಸಂಗೀತ, ಹರೀಶ್ ಕೊಮ್ಮೆ ಸಂಕಲನ ಚಿತ್ರಕ್ಕಿದೆ.

ತೆರೆಗೆ ಬರಲು ಸಜ್ಜು


ಯದು, ಮೇಘಶ್ರೀ

ಸಿನಿಮಾ ಹೇಗಾದರೂ ಇರಲಿ, ಆದರೆ ಟ್ರೇಲರ್, ಟೀಸರ್, ಹಾಡು ಬಿಡುಗಡೆ ಸಮಾರಂಭಗಳು ಮಾತ್ರ ವಿಶೇಷವಾಗಿರಬೇಕೆಂದು ಕೆಲ ಸಿನಿಮಾ ತಂಡಗಳು ಯೋಚಿಸುತ್ತವೆ. 'ಕುಂಟೆಬಿಲ್ಲೆ' ಚಿತ್ರದ ಟ್ರೇಲರ್ ಅದೇ ರೀತಿ ವಿಶೇಷವಾಗಿ ಬಿಡುಗಡೆಗೊಂಡು ಗಮನ ಸೆಳೆದಿದೆ. ಕ್ರಿಕೆಟ್ ಪಂದ್ಯಗಳ ವೇಳೆ ಶ್ವಾನದಂತೆ ಓಡಾಡುತ್ತಿದ್ದ ರೋಬೋಟ್‌ನಿಂದ ಚಿತ್ರದ ಟ್ರೇಲರ್ ಬಿಡುಗಡೆಗೊಳಿಸಲಾಯಿತು.

ಸಿದ್ದೇಗೌಡ ನಿರ್ದೇಶನದ ಎಂಟನೇ ಚಿತ್ರವಿದು. ನಾಯಕ ಯದುವಿಗೆ ನಾಯಕಿಯಾಗಿ ಮೇಘಶ್ರೀ ಜತೆಯಾಗಿದ್ದಾರೆ. ಎಸ್.ಬಿ.ಶಿವು, ಕುಮಾರ್ ಗೌಡ ಬಂಡವಾಳ ಹೂಡಿದ್ದಾರೆ. ಹರಿಕಾವ್ಯ ಸಂಗೀತ, ಮುಂಜಾನೆ ಮಂಜು ಛಾಯಾಚಿತ್ರಗ್ರಹಣ, ಸುಜಿತ್ ಸಂಕಲನ ಚಿತ್ರಕ್ಕಿದೆ.

'ಹಳ್ಳಿಯ ಸೊಗಡಿನ ಕಥೆ. ಲವ್, ಸಸ್ಪೆನ್ಸ್ ಅಂಶಗಳಿರುವ ಚಿತ್ರ. ನಮ್ಮ ಕೈಯಾರೆ ನಾವೇ ನಮ್ಮ ಪ್ರೀತಿಯನ್ನು ಹೇಗೆ ಹಾಳು ಮಾಡಿಕೊಳ್ಳುತ್ತೇವೆ ಎಂಬುದರ ಸುತ್ತ ಕಥೆ ಸಾಗುತ್ತದೆ. ಚಿತ್ರವೀಗ ಸೆನ್ಸಾರ್ ಹಂತದಲ್ಲಿದೆ' ಎಂದರು ನಿರ್ದೇಶಕರು.

ಮಾಯಾವಿಯ ಹಾಡು

ಬಹುತೇಕ ಹೊಸ ಪ್ರತಿಭೆಗಳಿಂದ ಕೂಡಿರುವ 'ಮಾಯಾವಿ' ಚಿತ್ರ ತೆರೆಗೆ ಬರಲು ಸಿದ್ಧವಾಗುತ್ತಿದೆ. ಚಿತ್ರದ ಟ್ರೇಲರ್ ಮತ್ತು ಹಾಡುಗಳು ಇತ್ತೀಚೆಗೆ ಬಿಡುಗಡೆಗೊಂಡಿವೆ. ಶಂಕರ್ ಜಿ. ನಿರ್ದೇಶನವಿದೆ.

'ಇದೊಂದು ಸಸ್ಪೆನ್ಸ್-ಕ್ರೈಂ ಥ್ರಿಲ್ಲರ್ ಕಥಾಹಂದರದ ಸಿನಿಮಾ. ಸಿನಿಮಾದ ಕೊನೆಯಲ್ಲೊಂದು ಸಂದೇಶವಿದೆ. ಎಲ್ಲಾ ಥರದ ಪ್ರೇಕ್ಷಕರಿಗೂ ಇಷ್ಟವಾಗುವಂಥ ಸಿನಿಮಾ ಮಾಡಿದ್ದೇವೆ. ಲವ್, ಸೆಂಟಿಮೆಂಟ್, ಆ್ಯಕ್ಷನ್ ಹೀಗೆ ಎಲ್ಲಾ ಥರದ ಅಂಶಗಳೂ ಈ ಸಿನಿಮಾದಲ್ಲಿವೆ. ಚಿತ್ರದುರ್ಗ, ಬೆಂಗಳೂರು, ಹೊಸಪೇಟೆ ಸುತ್ತಮುತ್ತ ಸಿನಿಮಾದ ಬಹುತೇಕ ಚಿತ್ರೀಕರಣ ನಡೆಸಲಾಗಿದೆ. ಸೆನ್ಸಾರ್‌ನಿಂದ ಸಿನಿಮಾಕ್ಕೆ 'ಯು' ಸರ್ಟಿಫಿಕೇಟ್ ಸಿಕ್ಕಿದೆ' ಎಂದು ಮಾಹಿತಿ ನೀಡಿದರು ನಿರ್ದೇಶಕರು.

ರಘುರಾಮ್‌ಗೆ ನಿಶ್ಚಿತಾ ಶೆಟ್ಟಿ ನಾಯಕಿ. ಉಳಿದಂತೆ ಹಿರಿಯ ನಟ ಎಂ. ಕೆ. ಮಠ, ಸೂರ್ಯ ಪ್ರವೀಣ್, ಸುರೇಶ ಬಾಬು, ಅನುರಾಧಾ, ಶಿಲ್ಪಾ, ಖುಷಿ ಗೌಡ ಮತ್ತಿತರರು 'ಮಾಯಾವಿ' ಚಿತ್ರದ ಇತರ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. 'ಶ್ರೀದುರ್ಗಾ ಸೆಕ್ಯುರಿಟಿ ಸರ್ವೀಸಸ್' ಬ್ಯಾನರಿನಲ್ಲಿ ಡಾ. ಮಹಂತೇಶ್ ಹೆಚ್. ಬಂಡವಾಳ ಹೂಡಿದ್ದಾರೆ.

ಚಿತ್ರದ ಎರಡು ಹಾಡುಗಳಿಗೆ ಅಗಸ್ತ್ಯ ಸಂತೋಷ್ ಸಂಗೀತ ಸಂಯೋಜಿಸಿದ್ದು ವಿಜಯ ಪ್ರಕಾಶ್, ಮೇಘನಾ ಮತ್ತಿತರರು ಹಾಡುಗಳಿಗೆ ಧ್ವನಿಯಾಗಿದ್ದಾರೆ. ಗುರುದತ್ತ ಮುಸುರಿ ಛಾಯಾಚಿತ್ರಗ್ರಹಣ, ಅನಿಲ್ ಕುಮಾರ್ ಸಂಕಲನ ಕಾರ್ಯ ನಿರ್ವಹಿಸಿದ್ದಾರೆ.


ಚಿತ್ರತಂಡ

7 ಚಿತ್ರಗಳು ಈ ವಾರ ತೆರೆಗೆ

ವಿಜಯ ರಾಘವೇಂದ್ರ ನಟನೆಯ 'ರಿಪ್ಪನ್ ಸ್ವಾಮಿ' ಸೇರಿದಂತೆ ಒಟ್ಟು ಏಳು ಚಿತ್ರಗಳು ಈ ವಾರ ತೆರೆಯಲ್ಲಿವೆ.


ವಿನಯ್ ರಾಜ್‌ಕುಮಾರ್, ಅದಿತಿ

ಅಂದೊಂದಿತ್ತು ಕಾಲ

ನಿರ್ದೇಶಕನ ಬದುಕಿನ ಪಯಣದ ಕಥೆಯನ್ನು ಹೊಂದಿರುವ ಚಿತ್ರವಿದು. ಕೀರ್ತಿ ಕೃಷ್ಣಪ್ಪ ಕಥೆ ಬರೆದು ನಿರ್ದೇಶಿಸಿದ್ದಾರೆ.

'ನನ್ನ ಎಲ್ಲಾ ಸಿನಿಮಾಗಳಿಗಿಂತ ಈ ಚಿತ್ರ ಬಹಳ ವಿಶೇಷ. ಈ ಚಿತ್ರದ ಒಂದೊಂದು ಹಾಡು ಬಹಳ ವಿಭಿನ್ನವಾಗಿದ್ದು, ಅಮ್ಮ ಮಗನ ಸೆಂಟಿಮೆಂಟ್ ಹಾಡು ಮನಸನ್ನು ಸೆಳೆಯುತ್ತದೆ. ನಿರ್ದೇಶಕ ಕೀರ್ತಿ ಅವರ ಜೀವನದಲ್ಲಿ ನಡೆದ ಘಟನೆಗಳನ್ನು ಇಟ್ಟುಕೊಂಡು ಸಿನಿಮಾ ಮಾಡಲಾಗಿದೆ. ಅದರಲ್ಲೂ ಅವರ ಸಿನಿಮಾ ಬದುಕಿನ ಸುತ್ತಮುತ್ತ ನಡೆದದ್ದನ್ನು ಕಥೆಯಾಗಿಸಿಕೊಂಡು ಬಹಳ ಸಹಜವಾಗಿ ಈ ಚಿತ್ರವನ್ನು ನಿರ್ದೇಶನ ಮಾಡಿದ್ದಾರೆ. ನನ್ನದು ಮೂರು ಶೇಡ್‌ಗಳನ್ನು ಒಳಗೊಂಡಿರುವಂಥ ಪಾತ್ರ. ಇದು ಮೂರು ವರ್ಷದ ಶ್ರಮದ ಫಲ. ನನ್ನ ಅಮ್ಮನಾಗಿ ಅರುಣಾ ಬಾಲರಾಜ್ ಕಾಣಿಸಿಕೊಂಡಿದ್ದಾರೆ. ಅವರ ಜೊತೆ ನನ್ನ ಮೂರನೇ ಚಿತ್ರ ಇದಾಗಿದೆ. ಇದೊಂದು ಫೀಲ್ ಗುಡ್ ಚಿತ್ರವಾಗಿದ್ದು, ಎಲ್ಲಾ ವರ್ಗದವರಿಗೂ ಇಷ್ಟವಾಗುವ ಕಥೆ' ಎಂದಿದ್ದಾರೆ ಚಿತ್ರದ ನಾಯಕ ವಿನಯ್ ರಾಜ್‌ಕುಮಾರ್.

ಭುವನ್ ಸುರೇಶ್ ಬಂಡವಾಳ ಹೂಡಿದ್ದಾರೆ. 'ಚಿತ್ರರಂಗಕ್ಕೆ ಸಂಬಂಧಿಸಿದ ಕಥೆ. ನಾನು ಹದಿನೈದು ವರ್ಷಗಳಿಂದ ಈ ಉದ್ಯಮದಲ್ಲಿರುವೆ. ನಿರ್ದೇಶಕನ ಬಾಲ್ಯ, ಯೌವ್ವನ ಎಲ್ಲವೂ ಬರುತ್ತದೆ. ಪ್ರೇಮಕಥೆಯೂ ಇದೆ. ಒಟ್ಟಾರೆಯಾಗಿ ಒಂದು ಭಾವನಾತ್ಮಕ ಪಯಣ' ಎಂದಿದ್ದಾರೆ ನಿರ್ದೇಶಕರು.

ಅತಿಥಿ ಪಾತ್ರದಲ್ಲಿ ವಿ.ರವಿಚಂದ್ರನ್ ಕಾಣಿಸಿಕೊಂಡಿದ್ದಾರೆ. ವಿನಯ್ ರಾಜ್‌ಕುಮಾರ್‌ಗೆ ಅದಿತಿ ಪ್ರಭುದೇವ ಜೋಡಿಯಾಗಿ ಕಾಣಿಸಿಕೊಂಡಿದ್ದಾರೆ. ನಿಶಾ ರವಿಕೃಷ್ಣ ಕೂಡ ಪ್ರಮುಖ ಪಾತ್ರದಲ್ಲಿದ್ದಾರೆ.

ತೀರ್ಥಹಳ್ಳಿ, ಬೆಂಗಳೂರು ಸುತ್ತಮುತ್ತ ಚಿತ್ರೀಕರಣಗೊಂಡಿದೆ. ರಾಘವೇಂದ್ರ. ವಿ ಸಂಗೀತ, ಅಭಿಷೇಕ್.ಜಿ. ಕಾಸರಗೋಡು ಛಾಯಾಚಿತ್ರಗ್ರಹಣ, ಸುರೇಶ್ ಆರ್ಮುಗಂ ಸಂಕಲನವಿದೆ.

ಉಸಿರು

ಕೇಳಿದ್ದು ಸುಳ್ಳಾಗಬಹುದು, ನೋಡಿದ್ದು ಸುಳ್ಳಾಗಬಹುದು, ನಿಧಾನಿಸಿ ಯೋಚಿಸಿದಾಗ ನಿಜ ತಿಳಿಯುವುದು ಎಂಬ ಪರಿಕಲ್ಪನೆಯಲ್ಲಿ ಸಿದ್ಧಗೊಂಡ ಚಿತ್ರ 'ಉಸಿರು'.

ನಟ ತಿಲಕ್ ಶೇಖರ್, ಪ್ರಿಯಾ ಹೆಗ್ಡೆ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಆರ್.ಎಸ್.ಪಿ. ಪ್ರೊಡಕ್ಷನ್ ಮೂಲಕ ಶ್ರೀಮತಿ ಲಕ್ಷ್ಮಿ ಹರೀಶ್ ನಿರ್ಮಿಸಿದ್ದಾರೆ. ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಒಳಗೊಂಡ ಚಿತ್ರಕ್ಕೆ ಪನೇಮ್ ಪ್ರಭಾಕರ್ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ.

ಆರ್.ಎಸ್.ಗಣೇಶ್ ನಾರಾಯಣನ್ ಅವರ ಸಂಗೀತ ಸಂಯೋಜನೆ ಈ ಚಿತ್ರಕ್ಕಿದ್ದು, ಭೈರವರಾಮ ಸಂಭಾಷಣೆ ಹಾಗೂ ಸಾಹಿತ್ಯ ರಚಿಸಿದ್ದಾರೆ.

'ಅನಾಮಧೇಯ ವ್ಯಕ್ತಿಯಿಂದ ಹೆಂಡತಿಯ ಪ್ರಾಣಕ್ಕೆ ಆಪತ್ತು ಬಂದಾಗ, ಪೊಲೀಸ್ ಅಧಿಕಾರಿಯೊಬ್ಬ ತನ್ನ ಪತ್ನಿಯನ್ನು ಹೇಗೆ ಕಾಪಾಡಿಕೊಳ್ಳುತ್ತಾನೆ? ಎಂಬುದೇ ಮುಖ್ಯಕಥಾವಸ್ತು. ನನ್ನ ನಿರ್ದೇಶನದ ಪ್ರಥಮ ಚಿತ್ರವಿದು. ನಮ್ಮ ಚಿತ್ರದಲ್ಲಿ ಕಂಟೆಂಟೇ ಹೀರೊ. ಗಂಡನ ಪ್ರೀತಿ, ಸ್ನೇಹ ಸಂಬಂಧ ಹೀಗೆ ಎಲ್ಲಾ ರೀತಿಯ ಭಾವನೆಗಳೂ ಚಿತ್ರದಲ್ಲಿದ್ದು, ಪ್ರತಿ ಪಾತ್ರಕ್ಕೂ ಅದರದೇ ಆದ ಪ್ರಾಮುಖ್ಯ ಇದೆ. ಬೆಂಗಳೂರು, ಮಡಿಕೇರಿ, ಚಿಕ್ಕಮಗಳೂರು, ಮೂಡಿಗೆರೆ ಸುತ್ತಮುತ್ತ ಈ ಚಿತ್ರದ ಚಿತ್ರೀಕರಣ ನಡೆಸಲಾಗಿದೆ' ಎಂದಿದ್ದಾರೆ ನಿರ್ದೇಶಕರು.

'ಈ ಚಿತ್ರದಲ್ಲಿ ನಾನೊಬ್ಬ ತನಿಖಾಧಿಕಾರಿಯಾಗಿ ನಟಿಸಿದ್ದೇನೆ. ಇದು ಬರೀ ಮರ್ಡರ್ ಮಿಸ್ಟ್ರಿಯಲ್ಲ, ಕಥೆಯಲ್ಲಿ ತುಂಬಾ ಪದರಗಳಿವೆ. ನೋಡುತ್ತ ಹೋದಂತೆ ಕಥೆ ಅರ್ಥವಾಗುತ್ತದೆ' ಎಂದು ನಟ ತಿಲಕ್ ಹೇಳಿದ್ದಾರೆ.


ಉಸಿರು
ಪ್ರಿಯಾ

ಬಾಲ್ಯ

ಪ್ರತಿಯೊಬ್ಬರ ಜೀವನದಲ್ಲೂ ಬಾಲ್ಯ ಅಮೂಲ್ಯ. ಆ ಬಾಲ್ಯದ ದಿನಗಳು ಹೇಗಿರಬೇಕು? ಮಕ್ಕಳ ಬಾಲ್ಯದ ದಿನಗಳಲ್ಲಿ ಪೋಷಕರ ಪಾತ್ರ ಏನು? ಎಂಬ ವಿಷಯಗಳನ್ನೇ ಕಥೆಯಾಗಿಸಿಕೊಂಡಿರುವ ಚಿತ್ರವಿದು. ವಿ.ಎಂ.ರಾಜು (ಸುಲ್ತಾನ್ ರಾಜು) ನಿರ್ದೇಶನದ ಚಿತ್ರಕ್ಕೆ ಸತ್ಯನಾರಾಯಣಾಚಾರ್ ಬಂಡವಾಳ ಹೂಡಿದ್ದಾರೆ.

ನಾರಾಯಣಸ್ವಾಮಿ, ನಿಶ್ಚಿತ, ಬುಲೆಟ್ ವಿನೋದ್, ಅಪ್ಸರ, ಮಾಸ್ಟರ್ ಮನೀಶ್, ಮಾಸ್ಟರ್ ಆರ್ಯನ್, ಮಾಸ್ಟರ್ ದಕ್ಷಿತ್, ಕುಮಾರಿ ದೀಕ್ಷ ಮುಂತಾದವರು ಚಿತ್ರದಲ್ಲಿ ಅಭಿನಯಿಸಿದ್ದಾರೆ.

ಇಂದು ವಿಶ್ವನಾಥ್ ಸಂಗೀತ ನೀಡಿರುವ ಈ ಚಿತ್ರದ ಹಾಡುಗಳನ್ನು ನೀಲ್ ಕೆಂಗಾಪುರ್ ಬರೆದಿದ್ದಾರೆ. ಲಕ್ಮಣ್ ರೆಡ್ಡಿ ಸಂಕಲನ ಹಾಗೂ ರಮೇಶ್ ಕೊಯಿರಾ ಅವರ ಛಾಯಾಚಿತ್ರಗ್ರಹಣವಿರುವ 'ಬಾಲ್ಯ'ಕ್ಕೆ ಎ.ಟಿ.ರವೀಶ್ ಹಿನ್ನೆಲೆ ಸಂಗೀತ ನೀಡಿದ್ದಾರೆ.


ಮುರುಗ ಸನ್ ಆಫ್ ಕಾನೂನು

ಕಿರುತೆರೆಯ ನಟ ಮುನಿಕೃಷ್ಣ ನಾಯಕನಾಗಿ ನಟಿಸಿದ್ದ 'ಕೊಡೆಮುರುಗ' ಚಿತ್ರ ಯಶಸ್ಸು ಕಂಡಿತ್ತು. ಆ ಚಿತ್ರದ ಮೂಲಕ ನಾಯಕನಾಗಿ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟಿದ್ದ ಮುನಿಕೃಷ್ಣ ಅವರ ಎರಡನೇ ಚಿತ್ರವಿದು. ಅವರು ನಾಯಕನಾಗಿ ನಟಿಸುವ ಜೊತೆಗೆ ತಮ್ಮ ಎ.ಎಸ್.ಎ. ಪ್ರೊಡಕ್ಷನ್ ಬ್ಯಾನರ್‌ನಲ್ಲಿ ನಿರ್ಮಾಣ ಕೂಡ ಮಾಡಿದ್ದಾರೆ.

ವಿಜಯ್ ಪ್ರವೀಣ್ ನಿರ್ದೇಶನದ ಚಿತ್ರದಲ್ಲಿ ಮಮತ ರಾವುತ್, ಚಿರಶ್ರೀ ಅಂಚನ್, ಶೋಭರಾಜ್, ಥ್ರಿಲರ್ ಮಂಜು, ಉಮೇಶ್, ವಿನಯ ಪ್ರಸಾದ್, ಹುಲಿ ಕಾರ್ತಿಕ್, ಚಂದ್ರಪ್ರಭ ಮುಂತಾದವರು ಅಭಿನಯಿಸಿದ್ದಾರೆ.

'ಗಾಂಧಿ ಮತ್ತು ನೋಟು', 'ಗೌರಿ ಶಂಕರ' ಚಿತ್ರಗಳೂ ಈವಾರ ತೆರೆ ಕಾಣುತ್ತಿವೆ.

ರೂಪೇಶ್‌ಗೆ ಜೈ ಎಂದ ಶ್ರೀಮುರಳಿ


ರೂಪೇಶ್ ಶೆಟ್ಟಿ,


ಅದ್ವಿತಿ ಶೆಟ್ಟಿ

ರೂಪೇಶ್ ಶೆಟ್ಟಿ ನಾಯಕನಾಗಿ ನಟಿಸಿ, ನಿರ್ದೇಶಿಸಿರುವ 'ಜೈ' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟ ಶ್ರೀಮುರಳಿ ಟೀಸರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು. ಬಾಲಿವುಡ್ ನಟ ಸುನಿಲ್ ಶೆಟ್ಟಿ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಶ್ರೀಮುರಳಿ ಸಮಾರಂಭದಲ್ಲಿದ್ದ ಎಲ್ಲರಿಂದ ಜೈಕಾರ ಕೂಗಿಸಿ, ತಾವು ಜೋರಾಗಿ 'ಜೈ' ಎಂದು ಟೀಸರ್ ಬಿಡುಗಡೆಗೊಳಿಸಿದ್ದು ವಿಶೇಷವಾಗಿತ್ತು. 'ಟೀಸರ್ ಬಹಳ ಅದ್ಭುತವಾಗಿ ಮೂಡಿಬಂದಿದೆ. ತಂಡದ ಶ್ರಮ ಕಾಣುತ್ತದೆ. ನಟ ರೂಪೇಶ್ ಶೆಟ್ಟಿ ಬಹಳ ಸುಂದರವಾದ ನಾಯಕ. ತುಳು ಭಾಷೆಯ ಸಂಸ್ಕೃತಿ, ಆಚಾರ, ವಿಚಾರಗಳ ಬಗ್ಗೆ ಅಪಾರ ಪ್ರೀತಿಯನ್ನು ಇಟ್ಟುಕೊಂಡು ಸಿನಿಮಾ ಮಾಡುತ್ತಾ ಬಂದಿದ್ದಾರೆ. ನಾನು ಅವರನ್ನ ಬಿಗ್‌ಬಾಸ್ ನಿಂದ ನೋಡುತ್ತಾ ಬಂದಿದ್ದೇನೆ. ಏನಾದರೂ ಸಾಧಿಸಬೇಕು ಎಂಬ ತುಡಿತ ಅವರಲ್ಲಿ ಕಾಣುತ್ತಿದೆ. ಚಿತ್ರದ ಸಂಗೀತ, ಛಾಯಾಚಿತ್ರಗ್ರಹಣ ಎಲ್ಲವೂ ಸೊಗಸಾಗಿದೆ' ಎಂದರು ಶ್ರೀಮುರಳಿ.

'ತುಳುವಿನಲ್ಲಿ ಈ ಹಿಂದೆ 'ಗಿರ್ಗಿಟ್', 'ಸರ್ಕಸ್' ಸಿನಿಮಾಗಳನ್ನು ನಿರ್ದೇಶಿಸಿದ್ದೆ. ಎರಡೂ ನೂರು ದಿನ ತೆರೆಯಲ್ಲಿದ್ದು, ಹಿಟ್ ಆಗಿದ್ದವು. ಈಗ 'ಜೈ' ಮೂಲಕ ಕನ್ನಡ ಚಿತ್ರರಂಗಕ್ಕೂ ಕಾಲಿಡುತ್ತಿರುವೆ. ತುಳಿವಿನಲ್ಲಿ ಸಿದ್ಧಗೊಂಡು ಕನ್ನಡಕ್ಕೆ ಡಬ್ ಆಗಿದೆ. ಸುನಿಲ್ ಶೆಟ್ಟಿ 18–20 ನಿಮಿಷ ತೆರೆಯಲ್ಲಿ ಇರುತ್ತಾರೆ. ನವೆಂಬರ್ 14ರಂದು ಚಿತ್ರ ಬಿಡುಗಡೆಯಾಗಲಿದೆ. ದಕ್ಷಿಣ ಕನ್ನಡದ ಊರೊಂದರಲ್ಲಿ ನಡೆಯುವ ರಾಜಕೀಯದ ಕುರಿತಾದ ಕಾಲ್ಪನಿಕ ಕಥೆಯಿದು. ಚಿತ್ರ ನೋಡಿ ಜನ ಮಾತಾಡಬೇಕು. ಆಗ ನಮಗೆ ಖುಷಿ' ಎಂದರು ರೂಪೇಶ್.

ಅದ್ವಿತಿ ಶೆಟ್ಟಿ ನಾಯಕಿ. 'ಚಿತ್ರರಂಗಕ್ಕೆ ಬಂದು ಹತ್ತು ವರ್ಷಗಳ ಬಳಿಕ ತುಳು ಚಿತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ. ಒಳ್ಳೆಯ ತಂಡಕ್ಕಾಗಿ ಕಾಯುತ್ತಿದ್ದೆ. ಈಗ ಆ ಅವಕಾಶ ಸಿಕ್ಕಿದೆ. ನಾನು ತುಳುವಿನಲ್ಲಿ ನಟಿಸಬೇಕು ಎಂಬುದು ಅಪ್ಪನ ಕನಸಾಗಿತ್ತು. ಅವರು ಈಗ ಜತೆಗಿಲ್ಲ. ಆದರೆ ಅವರ ಕನಸು ನನಸಾಗಿದೆ' ಎಂದು ಭಾವುಕರಾದರು ಅದ್ವಿತಿ.

ಆರ್. ಎಸ್. ಸಿನಿಮಾಸ್, ಶೂಲಿನ್ ಫಿಲ್ಮ್ಸ್, ಮುಗ್ರೋಡಿ ಪ್ರೊಡಕ್ಷನ್ ಲಾಂಛನದಲ್ಲಿ ಅನಿಲ್ ಶೆಟ್ಟಿ, ಸುಧಾಕರ ಶೆಟ್ಟಿ ಮುಗ್ರೋಡಿ, ಮಂಜುನಾಥ ಅತ್ತಾವರ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ರೂಪೇಶ್ ಶೆಟ್ಟಿ ಹಾಗೂ ವೇಣು ಹಸ್ರಾಳಿ ಚಿತ್ರಕಥೆಯಿದೆ. ದೇವದಾಸ್ ಕಾಪಿಕಾಡ್, ರಾಜ್ ದೀಪಕ್ ಶೆಟ್ಟಿ, ನವೀನ್ ಡಿ ಪಡೀಲ್, ಅರವಿಂದ ಬೋಳಾರ್, ಭೋಜರಾಜ ವಾಮಂಜೂರು, ಪ್ರಸನ್ನ ಶೆಟ್ಟಿ ಬೈಲೂರು, ಸಂದೀಪ್ ಶೆಟ್ಟಿ ಮಾಣಿಬೆಟ್ಟು, ಉಮೇಶ್ ಮಿಜಾರ್ ಮೊದಲಾದವರು ಅಭಿನಯಿಸಿದ್ದಾರೆ. ಚಿತ್ರಕ್ಕೆ ವಿನುತ್ ಛಾಯಾಚಿತ್ರಗ್ರಹಣ, ಲೊಯ್ ವೆಲೆಂಟಿನ್ ಸಲ್ದಾನ ಸಂಗೀತ, ರಾಹುಲ್ ವಸಿಷ್ಠ ಸಂಕಲನವಿದೆ.

ಮಿಡಲ್ ಕ್ಲಾಸ್ ರಾಮಾಯಣ


ವಿನು ಗೌಡ
ಮೋಕ್ಷಿತ ಪೈ

'ಬಿಗ್‌ಬಾಸ್' ಖ್ಯಾತಿಯ ಮೋಕ್ಷಿತ ಪೈ ನಾಯಕಿಯಾಗಿ ನಟಿಸಿರುವ 'ಮಿಡಲ್ ಕ್ಲಾಸ್ ರಾಮಾಯಣ' ಚಿತ್ರದ ಚಿತ್ರೀಕರಣ ಇತ್ತೀಚೆಗಷ್ಟೇ ಮುಕ್ತಾಯಗೊಂಡಿದೆ. ಧನುಶ್ ಗೌಡ ವಿ. ನಿರ್ದೇಶನವಿದೆ.

'ಇದೊಂದು ಮಿಡಲ್ ಕ್ಲಾಸ್ ರಾಮಾಯಣ ಎಂಬುದು ಶೀರ್ಷಿಕೆಯಿಂದಲೇ ತಿಳಿಯುತ್ತದೆ. ನಾಯಕ ಕಪ್ಪು ಹುಡುಗಿಯನ್ನು ಯಾಕೆ ಇಷ್ಟಪಟ್ಟು ಮದುವೆಯಾದ ಎಂಬುದೇ ಕಥೆ. ಈಗಾಗಲೇ ಎರಡು ಹಾಡುಗಳು ಬಿಡುಗಡೆಗೊಂಡಿದ್ದು, ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಇದು ನನ್ನ ಎರಡನೇ ಸಿನಿಮಾ. ಕನ್ನಡ ಹಾಗೂ ತೆಲುಗು ಭಾಷೆಗಳಲ್ಲಿ ಚಿತ್ರ ಸಿದ್ಧಗೊಳ್ಳುತ್ತಿದೆ. ಆದರೆ ಮೊದಲು ಕನ್ನಡ ಭಾಷೆಯಲ್ಲಿ ಸಿನಿಮಾ ಬಿಡುಗಡೆ ಮಾಡುತ್ತೇವೆ' ಎಂದರು ನಿರ್ದೇಶಕರು.

ಅಂಜನಾದ್ರಿ ಪ್ರೊಡಕ್ಷನ್ ಹಾಗೂ ವಾವ್ ಸ್ಟುಡಿಯೋಸ್ ಅಡಿಯಲ್ಲಿ ಜಯರಾಮ್ ಗಂಗಪ್ಪನಹಳ್ಳಿ ಅವರು ನಿರ್ಮಾಣ ಮಾಡಿದ್ದಾರೆ. 'ಇದು ನನ್ನ ಮೊದಲ ಸಿನಿಮಾ. ಧಾರಾವಾಹಿ, ರಿಯಾಲಿಟಿ ಶೋಗಳಿಗಿಂತ ಒಂದು ಸಿನಿಮಾ ಮಾಡಿ ಬಿಡುಗಡೆ ಮಾಡುವುದು ಸಾಹಸ. ಶೀಘ್ರದಲ್ಲಿ ಈ ಸಿನಿಮಾ ತೆರೆಗೆ ಬರಲಿದೆ' ಎಂದರು ಮೋಕ್ಷಿತ.

ಅಲೆಕ್ಸ್ ಸಂಗೀತ, ವಿನೋದ್ ಲೋಕಣ್ಣನವರ್ ಛಾಯಾಚಿತ್ರಗ್ರಹಣವಿದೆ. ಎಸ್. ನಾರಾಯಣ್, ವೀಣಾ ಸುಂದರ್, ಮಜಾಭಾರತ ಜಗ್ಗಪ್ಪ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಜಲಮೂಲ ನಿರ್ವಹಣೆಗೆ ಉಪಗ್ರಹ, ಎಐ ತಂತ್ರಜ್ಞಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲಮೂಲಗಳ ಸಮಗ್ರ ನಿರ್ವಹಣೆಗೆ ಉಪಗ್ರಹ ಹಾಗೂ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಆಧರಿತ 'ಡಿಜಿಟಲ್ ವಾಟರ್ ಸ್ಟಾಕ್' ಯೋಜನೆಯನ್ನು ದೇಶದಲ್ಲಿ ಪ್ರಥಮ ಬಾರಿಗೆ ರಾಜ್ಯದಲ್ಲಿ ಜಾರಿಗೆ ತರಲಾಗುತ್ತಿದೆ ಎಂದು ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು ತಿಳಿಸಿದರು.

ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಅಂತರ್ಜಲ ಮಟ್ಟ ಕುಸಿತಗೊಂಡಿದ್ದು, ವಿವಿಧ ಇಲಾಖೆಗಳಲ್ಲಿ ಹಂಚಿ ಹೋಗಿರುವ ಜಲಮೂಲಗಳನ್ನು ಒಂದೇ ವೇದಿಕೆಯಡಿ ನಿರ್ವಹಿಸಿ, ನೀರಿನ ನಿರ್ವಹಣೆ ಮಾಡುವುದು ಈ ಯೋಜನೆಯ ಮೂಲ ಉದ್ದೇಶ ಎಂದು ಹೇಳಿದರು.

ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ (ಕೆಟಿಸಿಡಿಎ) ಈ ಯೋಜನೆಯ ನಿರ್ವಹಣೆ ಮಾಡಲಿದೆ. ಕೆರೆಗಳು ಮತ್ತು ಇನ್ನಿತರ ಜಲಮೂಲಗಳ ಸರ್ವೆ ನಡೆದಿರುವ ಮೇಲ್ವಿಚಾರಣೆ ಹಾಗೂ ಸಮರ್ಪಕ ನಿರ್ವಹಣೆಯನ್ನು 'ಡಿಜಿಟಲ್ ವಾಟರ್ ಸ್ಟಾಕ್' (ಡಿಡಬ್ಲ್ಯುಎಸ್) ಖಚಿತಪಡಿಸಲಿದೆ ಎಂದರು.

ಉಪಗ್ರಹ ಸೆನ್ಸರ್, 'ಇಮೇಜಿಂಗ್' ಮತ್ತು ಎಐ ತಂತ್ರಜ್ಞಾನಗಳ ಮೂಲಕ ಕೆರೆಗಳು ಮತ್ತು ಭೂಗರ್ಭದ ಜಲಧಾರೆಗಳ ಸಮಗ್ರ ನಿರ್ವಹಣೆಯಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ ಎಂದು ಸಚಿವರು ಹೇಳಿದರು.

ಏನಿದು 'ಡಿಜಿಟಲ್ ವಾಟರ್ ಸ್ಟಾಕ್'?

ಉಪಗ್ರಹಗಳ ಸೆನ್ಸರ್‌ನಿಂದ ಪಡೆದ ದತ್ತಾಂಶ, ಎಐ ಹಾಗೂ ಮಷಿನ್ ಲರ್ನಿಂಗ್‌ನಿಂದ ಇಮೇಜಿಂಗ್ ವಿಶ್ಲೇಷಣೆ ಮಾಡುವ ತಂತ್ರಜ್ಞಾನ 'ಡಿಜಿಟಲ್ ವಾಟರ್ ಸ್ಟಾಕ್' (ಡಿಡಬ್ಲ್ಯುಎಸ್). ಇದರಿಂದ ಜಲಮೂಲಗಳ ಐದು ವರ್ಷಗಳ ಹಿಂದಿನ ದತ್ತಾಂಶವನ್ನು ಪಡೆದುಕೊಂಡು, ಪ್ರಸ್ತುತ ಸ್ಥಿತಿಗತಿಯನ್ನು ಹೋಲಿಕೆ ಮಾಡಲಾಗುವುದು.

ಜಲಮೂಲದ ಸ್ವರೂಪ, ನೀರಿನ ಶೇಖರಣೆಯಲ್ಲಿ ಆಗುತ್ತಿರುವ ವ್ಯತ್ಯಾಸವನ್ನು ಗುರುತಿಸಲಾಗುವುದು. ಈ ಮೂಲಕ ಅದನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗುತ್ತದೆ.

ಡಿಡಬ್ಲ್ಯುಎಸ್ ಮೂಲಕ ರಾಜ್ಯದೆಲ್ಲೆಡೆಯ ಜಲಮೂಲಗಳ ನೀರಿನ ನಿರ್ವಹಣೆಯ ಡ್ಯಾಶ್‌ಬೋರ್ಡ್ ಮತ್ತು 'ಮಾಸ್ಟರ್ ವಾಟರ್ ಅಟ್ಲಾಸ್' ರಚನೆಯಾಗಲಿದೆ. ಅಂತರ್ಜಲದ ಮಟ್ಟ, ಮಳೆಯ ಪ್ರಮಾಣ, ಮಲ್ಟಿ ಹರಿವು, ಬಳಕೆ ಮತ್ತು ನೀರಿನ ಗುಣಮಟ್ಟದ ದತ್ತಾಂಶ ಸಂಗ್ರಹಿಸಲಾಗುವುದು. ಈ ಯೋಜನೆಯ ಮೂಲಕ ನಾಗರಿಕರು ಹಾಗೂ ಕೃಷಿ ಒತ್ತಡದಿಂದ ಉಂಟಾಗುವ ನೀರಿನ ಮಟ್ಟ ಕುಸಿತ, ಮಾಲಿನ್ಯ ಮತ್ತು ಅತಿಕ್ರಮಣಗಳನ್ನು ಸರಿಯಾದ ಸಮಯದಲ್ಲಿ ಗುರುತಿಸಿ, ತಕ್ಷಣದ ಕ್ರಮ ಕೈಗೊಳ್ಳಬಹುದಾಗಿದೆ.

41,000	ರಾಜ್ಯದಲ್ಲಿರುವ ಜಲಮೂಲಗಳು
34,000	ಕೆರೆಗಳ ಸಮೀಕ್ಷೆ ಪೂರ್ಣ
31,000	ಕೆರೆಗಳ ಜಿಯೊಟ್ಯಾಗ್ ಅಳವಡಿಕೆ
42,678 ಎಕರೆ	ಕೆರೆಗಳಲ್ಲಿನ ಒತ್ತುವರಿ ಗುರುತು
29,000 ಎಕರೆ	ಕೆರೆಗಳಲ್ಲಿನ ಒತ್ತುವರಿ ತೆರವು

41 ತಾಲ್ಲೂಕುಗಳಲ್ಲಿ ಡಿಡಬ್ಲ್ಯುಎಸ್: ಮೊದಲ ಹಂತದಲ್ಲಿ ಅಂತರ್ಜಲವನ್ನು ಅತಿಯಾಗಿ ಬಳಕೆ ಮಾಡುತ್ತಿರುವ 41 ತಾಲ್ಲೂಕುಗಳಲ್ಲಿ ಡಿಡಬ್ಲ್ಯುಎಸ್ ಯೋಜನೆಯನ್ನು ಜಾರಿಗೆ ತರಲಾಗುವುದು. ಜಲಮೂಲಗಳನ್ನು 'ನೈಸರ್ಗಿಕ ಉಳಿತಾಯ ಖಾತೆ'ಗಳಂತೆ ಪರಿಗಣಿಸಿ, ಅವುಗಳ ಸಮರ್ಪಕ ನಿರ್ವಹಣೆಗೆ ಸರ್ಕಾರ ಬದ್ಧವಾಗಿದೆ. 'ಇದಕ್ಕೆ ಡಿಡಬ್ಲ್ಯುಎಸ್ ಯೋಜನೆ ಸಹಕಾರಿಯಾಗಲಿದೆ' ಎಂದು ಸಣ್ಣ ನೀರಾವರಿ ಸಚಿವ ಬೋಸರಾಜು ತಿಳಿಸಿದರು.

ಶೀಘ್ರವೇ ಡಿಜಿ-ಐಜಿಪಿ ನೇಮಕ

ಬೆಂಗಳೂರು: 'ಯುಪಿಎಸ್‌ಸಿ ಉನ್ನತಮಟ್ಟದ ಸಮಿತಿಗೆ ರಾಜ್ಯ ಪೊಲೀಸ್ ಮಹಾ ನಿರ್ದೇಶಕರನ್ನು ನೇಮಕ ಮಾಡುವ ಸಂಬಂಧ ನಿರ್ದಿಷ್ಟ ಹೆಸರುಗಳನ್ನು ಶಿಫಾರಸು ಮಾಡಲಾಗಿದ್ದು, ಅಲ್ಲಿಂದ ವರದಿ ಬಂದ ವಾರದಲ್ಲಿ ಕಾಯಂ ನೇಮಕ ಮಾಡಲಾಗುವುದು' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

'ರಾಜ್ಯ ಪ್ರಭಾರ ಪೊಲೀಸ್ ಮಹಾ ನಿರ್ದೇಶಕರಾಗಿ (ಡಿಜಿ-ಐಜಿಪಿ) ಐಪಿಎಸ್ ಅಧಿಕಾರಿ ಎಂ.ಎ.ಸಲೀಂ ಅವರನ್ನು ನೇಮಕ ಮಾಡಿ ಹೊರಡಿಸಿರುವ ಆದೇಶ ರದ್ದುಪಡಿಸಬೇಕು' ಎಂದು ಕೋರಿ ಹೈಕೋರ್ಟ್ ವಕೀಲೆ ಸುಧಾ ಕಾಟ್ವ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ವಜಾಗೊಳಿಸಿತು.

ಹರಪನಹಳ್ಳಿ: ವಿಷಕಾರಿ ಬಳ್ಳಿ ತಿಂದು; 34 ಕುರಿ, ಮೇಕೆ ಸಾವು

ಪ್ರಜಾವಾಣಿ ವಾರ್ತೆ

ಹರಪನಹಳ್ಳಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ ಮುತ್ತಿಗಿ ಗ್ರಾಮದಲ್ಲಿ ಕ್ರಿಮಿನಾಶಕ ಸಿಂಪಡಿಸಿದ ಬೆಳೆಯನ್ನು ತಿಂದು 34 ಕುರಿಗಳು ಮತ್ತು ಒಂದು ಮೇಕೆ ಸಾವನ್ನಪ್ಪಿದೆ.

ಮುತ್ತಿಗೆ ಗ್ರಾಮದ ಕುರಿಗಾಹಿಗಳಾದ ಕೊಟ್ರಪ್ಪ, ಚೌಡಪ್ಪ, ಹಾಲಪ್ಪ ಎಂಬುವರಿಗೆ ಕುರಿಗಳು ಮತ್ತು ಮೇಕೆಗಳು ಸೇರಿದ್ದವು. ಪಶುವೈದ್ಯರು ಕುರಿಗಳ ಮರಣೋತ್ತರ ಪರೀಕ್ಷೆ ನಡೆಸಿದರು. ಕೊಟ್ಟೂರಿನ ಚಿಗಟೇರಿ ಠಾಣೆ ಈ ಕುರಿತು ಪ್ರಕರಣ ದಾಖಲಿಸಿ ಪೊಲೀಸರು ತಿಳಿಸಿದ್ದಾರೆ.



ನಿರೂಪಕಿ ಅನುಶ್ರೀ ತಮ್ಮ ಗೆಳೆಯ ರೋಷನ್ ರಾಮಮೂರ್ತಿ ಅವರೊಂದಿಗೆ ಗುರುವಾರ ಸಪ್ತಪದಿ ತುಳಿದರು. ಬೆಂಗಳೂರಿನ ಹೊರವಲಯದ ರೆಸಾರ್ಟ್‌ನಲ್ಲಿ ವಿವಾಹ ಸಮಾರಂಭ ನೆರವೇರಿತು

ಚಿಟಿಕೆ ಸುದ್ದಿ

ಮುಗಿದ ಅಧ್ಯಾಯ, ಚರ್ಚೆ ಬೇಡ- ಖರ್ಗೆ

ಬೆಂಗಳೂರು: 'ಆರ್‌ಎಸ್‌ಎಸ್ ಗೀತೆ ಹಾಡಿರುವುದಕ್ಕೆ ಡಿ.ಕೆ. ಶಿವಕುಮಾರ್ ಕ್ಷಮೆ ಕೇಳಿದ್ದಾರೆ. ಹೀಗಾಗಿ, ಆ ವಿಷಯ ಮುಗಿದಿದೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಮುಗಿದು ಹೋದ ವಿಷಯವನ್ನು ಮತ್ತೆ ಚರ್ಚಿಸಲು ಹೋಗುವುದಿಲ್ಲ. ಅದೇ ರೀತಿ ಪಕ್ಷದಲ್ಲಿ ಯಾರೂ ಕೂಡ ಮಾತನಾಡಬಾರದು' ಎಂದರು.

'ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೆ ಹೇಳಬಾರದಿತ್ತು, ಆದರೆ, ಹೇಳಿದ್ದಾರೆ. ತಮ್ಮ ಹೇಳಿಕೆಗೆ ಕ್ಷಮೆಯನ್ನೂ ಕೇಳಿದ್ದಾರೆ' ಎಂದರು.

ಧರ್ಮಸ್ಥಳ ಪ್ರಕರಣದ ಕುರಿತು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಮಲ್ಲಿಕಾರ್ಜುನ ಖರ್ಗೆ ಅವರು, 'ಅದೂ ಕೂಡ ಮುಗಿದು ಹೋದ ವಿಷಯ. ಅದರ ಬಗ್ಗೆ ಮಾತನಾಡುವುದಿಲ್ಲ' ಎಂದು ಹೇಳಿದ್ದಾರೆ.

'ಕ್ಷಮೆ ಕೇಳುವ ಸ್ಥಿತಿ ಬಂದಿದೆ'

'ಡಿ.ಕೆ.ಶಿವಕುಮಾರ್ ಅವರು ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತ. ಅವರು ಸದನದಲ್ಲಿ ಆರ್‌ಎಸ್‌ಎಸ್ ಗೀತೆ ಹಾಡಿದ್ದಾರೆ. ತಮಾಷೆಗಾಗಿ ಆ ರೀತಿ ಹೇಳಿರುವುದನ್ನು ಕಾಂಗ್ರೆಸ್ ಒಪ್ಪಿರುವುದಿಲ್ಲ. ಈಗ ಶಿವಕುಮಾರ್ ಕ್ಷಮೆ ಕೇಳುವ ಸ್ಥಿತಿ ಎದುರಾಗಿದೆ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.


ಸೀಟು ನಿರಾಕರಣೆ: ವೈದ್ಯ ಕಾಲೇಜಿಗೆ ₹15 ಲಕ್ಷ ದಂಡ

ಬೆಂಗಳೂರು: ಎಂಬಿಬಿಎಸ್ ಕೋರ್ಸ್‌ಗೆ 2017-18ನೇ ಶೈಕ್ಷಣಿಕ ಸಾಲಿನಲ್ಲಿ ಅರ್ಹ ವಿದ್ಯಾರ್ಥಿನಿಯೊಬ್ಬಳಿಗೆ ಪ್ರವೇಶ ನಿರಾಕರಿಸಿದ್ದ ತುಮಕೂರಿನ ಸಿದ್ಧಾರ್ಥ ಸಮೂಹ ಸಂಸ್ಥೆಗಳ ಸಿದ್ಧಾರ್ಥ ವೈದ್ಯಕೀಯ ಕಾಲೇಜಿಗೆ ಹೈಕೋರ್ಟ್ ₹15 ಲಕ್ಷ ದಂಡ ವಿಧಿಸಿದೆ.

ಈ ಕುರಿತಂತೆ ಸಂತ್ರಸ್ತ ವಿದ್ಯಾರ್ಥಿನಿ ಸನಾಯ ವಿ.ಕುಮಾರನ್ ಅವರು ಸಲ್ಲಿಸಿದ್ದ ರಿಟ್ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಆರ್. ಶಿವರಾಮನ್ ನೇತೃತ್ವದ ವಿಭಾಗೀಯ ನ್ಯಾಯಪೀಠ, 'ದಂಡದ ಮೊತ್ತವನ್ನು ಸಂತ್ರಸ್ತ ಅರ್ಜಿದಾರರಿಗೆ ಪರಿಹಾರ ರೂಪದಲ್ಲಿ ಪಾವತಿಸಿ' ಎಂದು ಆದೇಶ ನೀಡಿದೆ.

ಅಭಿಮತ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಅರಿವನ್ನು ಹೊಸತಾಗಿಸುವುದೇ ಧರ್ಮ. ಅಂತಾಗದಂತೆ ತಡೆವುದು ಅಧರ್ಮ.
–ಪಂಪ

ಸಂಪಾದಕೀಯ

ಬಾಲಗರ್ಭಿಣಿ ಪ್ರಕರಣಗಳ ಹೆಚ್ಚಳ ಮಕ್ಕಳ ಸುರಕ್ಷತೆಗೆ ಆದ್ಯತೆ ಸಿಗಲಿ

ಹೆಣ್ಣುಮಕ್ಕಳ ಸಬಲೀಕರಣಕ್ಕೆ ಒತ್ತು ನೀಡುವ ಹತ್ತಾರು ಸರ್ಕಾರಿ ಕಾರ್ಯಕ್ರಮಗಳ ನಡುವೆಯೂ ಹದಿನೆಂಟು ವರ್ಷಕ್ಕಿಂತಲೂ ಕಡಿಮೆ ವಯಸ್ಸಿನ ಬಾಲಕಿಯರು ಗರ್ಭ ಧರಿಸುತ್ತಿರುವ ಪ್ರಕರಣಗಳು ನಿರಂತರವಾಗಿ ಹೆಚ್ಚುತ್ತಿರುವುದು ಕಳವಳಕಾರಿ. 'ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ' (ಆರ್‌ಸಿಎಚ್) ಪೋರ್ಟಲ್ ಮಾಹಿತಿಯ ಪ್ರಕಾರ, 2023ರಿಂದ 2025ರ ಜುಲೈವರೆಗಿನ ಎರಡು ವರ್ಷ ಏಳು ತಿಂಗಳ ಅವಧಿಯಲ್ಲಿ 14ರಿಂದ 18 ವರ್ಷದೊಳಗಿನ ವಯಸ್ಸಿನ 80,813 ಬಾಲಕಿಯರು ಗರ್ಭಿಣಿಯರಾಗಿದ್ದಾರೆ. ಅಪ್ರಾಪ್ತ ವಯಸ್ಸಿನ ಬಾಲಕಿಯರು ಗರ್ಭಿಣಿಯರಾಗಿರುವ ಜಿಲ್ಲೆಗಳಲ್ಲಿ ಬೆಂಗಳೂರು (8,891), ಬೆಳಗಾವಿ (8,169) ಹಾಗೂ ವಿಜಯಪುರ (6,229) ಮುಂಚೂಣಿಯಲ್ಲಿದ್ದರೆ, ಉಡುಪಿಯಲ್ಲಿ ಅತಿ ಕಡಿಮೆ (182) ಬಾಲಗರ್ಭಿಣಿಯರಿದ್ದಾರೆ. ಬಾಲಗರ್ಭಿಣಿಯರ ಪ್ರಕರಣಗಳು ಹೆಚ್ಚುತ್ತಿರುವ ವರದಿ ಪ್ರಕಟಗೊಂಡಿರುವ ಸಂದರ್ಭದಲ್ಲೇ, ಯಾದಗಿರಿ ಜಿಲ್ಲೆಯ ಶಹಾಪುರದ ವಸತಿ ಶಾಲೆಯೊಂದರ ಶೌಚಾಲಯದಲ್ಲಿ ಒಂಬತ್ತನೇ ತರಗತಿಯ ವಿದ್ಯಾರ್ಥಿನಿ ಮಗುವಿಗೆ ಜನ್ಮ ನೀಡಿದ್ದಾಳೆ. ಈ ಪ್ರಕರಣವನ್ನು ವಸತಿಶಾಲೆಯ ಅಧಿಕಾರಿಗಳು ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಗಮನಕ್ಕೂ ತಂದಿಲ್ಲ. ಬೇರೆ ಮೂಲಗಳಿಂದ ವಿಷಯ ತಿಳಿದುಕೊಂಡ ಆಯೋಗ, ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ. ಶಹಾಪುರದಲ್ಲಿನ ಪ್ರಕರಣ, ಬಾಲಕಿಯರ ಸುರಕ್ಷತೆಯ ಬಗ್ಗೆ ವ್ಯವಸ್ಥೆಯ ನಿರ್ಲಕ್ಷ್ಯಕ್ಕೆ ನಿದರ್ಶನದಂತಿದೆ.

ಬಾಲಕಿಯರ ಸುರಕ್ಷತೆಗೆ ಸಂಬಂಧಿಸಿದಂತೆ ಶಾಲೆ, ಮನೆಗಳಲ್ಲಿಯೂ ನಿರ್ಲಕ್ಷ್ಯ ವ್ಯಕ್ತವಾಗುವುದಿದೆ. ಶಾಲಾ ಪರಿಸರದಲ್ಲಿ ಬಾಲಕಿಯರ ಸುರಕ್ಷತೆಯ ಕಾಳಜಿ ಶಿಕ್ಷಣ ಸಂಸ್ಥೆಯದ್ದಾದರೆ, ಮನೆಯಲ್ಲಿ ಆ ಜವಾಬ್ದಾರಿಯನ್ನು ಪೋಷಕರೇ ನಿರ್ವಹಿಸಬೇಕಾಗಿದೆ. ಅಪ್ರಾಪ್ತರ ಗರ್ಭಧಾರಣೆಗೆ ಬಾಲ್ಯ ವಿವಾಹ ಸೇರಿದಂತೆ ಹಲವು ಕಾರಣಗಳಿವೆ. ಪ್ರೀತಿಯ ನೆಪದಲ್ಲಿ ಅಮಾಯಕ ಹುಡುಗಿಯರನ್ನು ವಂಚಿಸುವುದು ಹಾಗೂ ಮದುವೆಯಾಗುವುದಾಗಿ ನಂಬಿಸಿ ಲೈಂಗಿಕವಾಗಿ ಬಳಸಿ ಕೊಳ್ಳುವುದು ಹೆಚ್ಚಿನ ಪ್ರಕರಣಗಳಲ್ಲಿ ಕಂಡುಬಂದಿದೆ. ಬಾಲಕಿಯರು ಶಾಲೆ ಬಿಡುವುದು, ಸಾಮಾಜಿಕ ಮಾಧ್ಯಮಗಳ ಬಳಕೆ, ಮೊಬೈಲ್ ಆಮಿಷ ಸೇರಿದಂತೆ ಹಲವು ಕಾರಣಗಳಿಂದಾಗಿ ಎಳೆಯ ವಯಸ್ಸಿನಲ್ಲಿ ತಾಯ್ತನದ ಹೊರೆಯನ್ನು ಹೊರುವಂತಾಗಿದೆ. ಕಾರಣ ಯಾವುದೇ ಆದರೂ, ಬಾಲಗರ್ಭಿಣಿಯರ ಪ್ರಕರಣಗಳು ಮಕ್ಕಳ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯವೂ ಆಗಿದೆ. ಆದರೆ, ಬಹುತೇಕ ಪ್ರಕರಣಗಳಲ್ಲಿ 'ಪೋಕ್ಸೊ'ದಡಿ ದೂರು ದಾಖಲಾಗದಿರುವುದು ಕಾನೂನು ಅನುಷ್ಠಾನದ ಗಂಭೀರ ಲೋಪವಾಗಿದೆ.



ಬಾಲಗರ್ಭಿಣಿಯರ ಸಂಖ್ಯೆ ನಿರಂತರವಾಗಿ ಹೆಚ್ಚುತ್ತಿರುವುದು, ಶಾಲೆ ಹಾಗೂ ಕೌಟುಂಬಿಕ ಪರಿಸರದಲ್ಲಿ ಹೆಣ್ಣುಮಕ್ಕಳ ಸುರಕ್ಷತೆಯ ಬಗ್ಗೆ ಇನ್ನಷ್ಟು ಎಚ್ಚರ ವಹಿಸಬೇಕಾದ ಅಗತ್ಯವನ್ನು ಸೂಚಿಸುವಂತಿದೆ.

ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯವನ್ನು ತಡೆಗಟ್ಟಲು ಹಲವು ಕಾರ್ಯಕ್ರಮಗಳು ಈಗಾಗಲೇ ಜಾರಿಯಲ್ಲಿವೆ. ಶಿಕ್ಷಕರು, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು, ಗ್ರಾಮ ಲೆಕ್ಕಾಧಿಕಾರಿ, ಪೊಲೀಸ್ ಇನ್‌ಸ್ಪೆಕ್ಟರ್ ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಒಳಗೊಂಡ ಕಾವಲು ಸಮಿತಿಗಳನ್ನು ಗ್ರಾಮ ಪಂಚಾಯಿತಿ ಹಂತದಲ್ಲಿ ರಚಿಸಲಾಗಿದೆ. ಈ ಕಾವಲು ಸಮಿತಿಗಳು ಮಕ್ಕಳು ಹಾಗೂ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಯದಂತೆ ಎಚ್ಚರ ವಹಿಸುತ್ತವೆ. ಆದರೆ, ಬಾಲಗರ್ಭಿಣಿಯರ ಸಂಖ್ಯೆ ಹೆಚ್ಚುತ್ತಿರುವುದು, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಗಟ್ಟುವ ಕಾರ್ಯಕ್ರಮಗಳ ವೈಫಲ್ಯವನ್ನು ಸೂಚಿಸುವಂತಿದೆ. ವಲಸೆ ಕಾರ್ಮಿಕರ ಬಹಳಷ್ಟು ಮಕ್ಕಳಿಗೆ ಊರಿನಲ್ಲಿ ಸಿಗುವ ಸುರಕ್ಷತೆ, ವಲಸೆ ಬಂದ ನಗರಪ್ರದೇಶಗಳಲ್ಲಿ ದೊರೆಯುವುದಿಲ್ಲ. ಶಾಲಾಕಾಲೇಜುಗಳಲ್ಲಿ ಲೈಂಗಿಕತೆಯ ಕುರಿತು ಅರಿವು ಮೂಡಿಸುವ ಹಾಗೂ ಲೈಂಗಿಕ ದೌರ್ಜನ್ಯದ ಬಗ್ಗೆ ಎಚ್ಚರ ಮೂಡಿಸುವ ಕಾರ್ಯಕ್ರಮಗಳು ಹೆಚ್ಚಿನ ಸಂಖ್ಯೆಯಲ್ಲಿ ನಡೆಯಬೇಕಾಗಿದೆ. ಅಗತ್ಯವಿರುವ ಮಕ್ಕಳಿಗೆ ಆಪ್ತಸಮಾಲೋಚನೆ ಒದಗಿಸುವ ಸೌಕರ್ಯವೂ ಶಾಲಾಕಾಲೇಜುಗಳಲ್ಲಿ ಕಡ್ಡಾಯವಾಗಿ ಇರಬೇಕು. ಹದಿನೆಂಟು ವರ್ಷದೊಳಗೆ ಗರ್ಭ ಧರಿಸುವುದು ಹೆಣ್ಣುಮಕ್ಕಳ ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಒಳ್ಳೆಯದಲ್ಲ; ಹದಿನೆಂಟು ಎನ್ನುವುದು ವಿವಾಹ ಹಾಗೂ ಗರ್ಭಧಾರಣೆಗೆ ಗೊತ್ತುಪಡಿಸಿರುವ ಕನಿಷ್ಠ ವಯಸ್ಸೇ ಹೊರತು, ಅದು ಸಮರ್ಪಕವಾದ ವಯಸ್ಸಲ್ಲ ಎನ್ನುವುದನ್ನು ಮಕ್ಕಳಿಗೆ ಮನದಟ್ಟು ಮಾಡಿಸಬೇಕು. ಹದಿಹರೆಯದಲ್ಲಿ ಮಕ್ಕಳ ಮನಸ್ಸು ಬಹು ಸೂಕ್ಷ್ಮವಾಗಿದ್ದು, ಅವರು ಕುತೂಹಲದಿಂದ ಸಲ್ಲದ ಸಾಹಸಗಳಿಗೆ ಕೈಹಾಕುವುದೂ ಇದೆ. ಹೊಣೆಗೇಡಿ ಸಮೂಹಮಾಧ್ಯಮಗಳು ಕೂಡ ಮಕ್ಕಳ ಮನಸ್ಸು ಚಂಚಲವಾಗಲು ಪೂರಕವಾಗಿವೆ. ಮಕ್ಕಳ ಮನಸ್ಸು ಸ್ವಸ್ಥವಾಗಿ ಇರುವಂತೆ ನೋಡಿಕೊಳ್ಳುವ ಸಾಮೂಹಿಕ ಹೊಣೆಗಾರಿಕೆಯನ್ನು ಸಮಾಜ ನಿರ್ವಹಿಸಬೇಕಾಗಿದೆ.

ಸತ್ಯಕ್ಕೂ ಮಿಗಿಲಾದ ಪದವಿಯಿಲ್ಲ



ದೇಶವನ್ನು ಮುನ್ನಡೆಸುವ ನಾಯಕ ಪದವೀಧರ ಆಗಿರಲೇಬೇಕು ಎಂದೇನಿಲ್ಲ. ಸತ್ಯಕ್ಕಿಂತ ದೊಡ್ಡ ಪದವಿ, ಅರ್ಹತೆ ಇನ್ನೊಂದಿಲ್ಲ.

ಸವಿರಾಜ್ ಆನಂದೂರು, ಲೇಖಕ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಕರ್ನಾಟಕ ಮತ್ತು ಕನ್ನಡದ ಹಿರಿಮೆ ಬಾನು ಮುಷ್ತಾಕ್ ಅವರು, ತಮ್ಮ ಭಾಷಾಪ್ರೀತಿಯನ್ನು ಪ್ರದರ್ಶಿಸಬೇಕಾದ ಮತ್ತು ವಿವರಿಸಬೇಕಾದ ಸನ್ನಿವೇಶ ಸೃಷ್ಟಿಸಿದ ಕಿಡಿಗೇಡಿಗಳಲ್ಲಿ ಸ್ವಲ್ಪವಾದರೂ ಆತ್ಮಸಾಕ್ಷಿ ಇದ್ದಲ್ಲಿ, ಬಾನು ಅವರ ಕ್ಷಮೆಯಾಚಿಸಲಿ.

ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಸಚಿವ

25 ವರ್ಷಗಳ ಹಿಂದೆ

ಮಂಗಳವಾರ, 29-8-2000

• ವಿವಾದದ ಸಿಂಧಿ ಅಕಾಡೆಮಿಗೆ ಕೃಷ್ಣ ತಡೆ

ಬೆಂಗಳೂರು, ಆ. 28: ಕಳೆದ ತಿಂಗಳ 19ರಂದು ಕರ್ನಾಟಕ ಸಿಂಧಿ ಅಕಾಡೆಮಿ ರಚಿಸಿ ಸರ್ಕಾರ ಹೊರಡಿಸಿದ್ದ ಆದೇಶಕ್ಕೆ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ತಡೆ ನೀಡಿದ್ದಾರೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ. ಬರಗೂರು ರಾಮಚಂದ್ರಪ್ಪ, ಸಿಂಧಿ ಅಕಾಡೆಮಿ ರಚನೆಗೆ ಆಕ್ಷೇಪಿಸಿ ಪತ್ರ ಬರೆದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ಈ ಕ್ರಮ ತೆಗೆದುಕೊಂಡಿದ್ದಾರೆ. ಸಿಂಧಿ ಅಕಾಡೆಮಿ ರಚಿಸಿ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶ ವಿವಾದದ ಸುಳಿಯಲ್ಲಿ ಸಿಲುಕಿತ್ತು.

• ಟಾಡಾ ಕೈದಿಗಳ ವಿರುದ್ಧ ಎಲ್ಲ ಆರೋಪ ವಾಪಸ್

ಬೆಂಗಳೂರು, ಆ. 28: ಮೈಸೂರಿನ ಕಾರಾಗೃಹದಲ್ಲಿ ಇರುವ 51 ಜನ ಟಾಡಾ ಕೈದಿಗಳ ವಿರುದ್ಧದ ಎಲ್ಲ ಭಾರತೀಯ ದಂಡ ಸಂಹಿತೆ ಪ್ರಕರಣಗಳನ್ನು ಕೈಬಿಡಲು ರಾಜ್ಯ ಸರ್ಕಾರ ಇಂದು ತೀರ್ಮಾನ ತೆಗೆದುಕೊಂಡಿದ್ದು, ಅತ್ತ ಮೈಸೂರಿನ ಸೆಷನ್ಸ್ ನ್ಯಾಯಾಧೀಶರು ಈ ಆರೋಪಿಗಳನ್ನು ಷರತ್ತಿನ ಮೇಲೆ ಬಿಡುಗಡೆ ಮಾಡಲು ಆದೇಶಿಸಿದ್ದಾರೆ.

75 ವರ್ಷಗಳ ಹಿಂದೆ

ಮಂಗಳವಾರ, 29-8-1950

• ಆನೆ ಸಾಕಿ ನೋಡು; ಅರಮನೆ ಕಟ್ಟಿ ನೋಡು

ಅಲಂಗಂಜ್, ಆ. 28: 25 ವರ್ಷ ವಯಸ್ಸಿನ 5 ಟನ್ ತೂಕದ ಹೆಣ್ಣು ಆನೆಯೊಂದರ ಮಾಲಿಕರನ್ನ ಹುಡುಕುವ ಕೆಲಸ ಪೊಲೀಸರ ಪಾಲಿಗೆ ಬಂದಿದೆ.

ಹತ್ತು ದಿನಗಳ ಕೆಳಗೆ ಗಂಗೆಯ ರಭಸ ಪ್ರವಾಹದಲ್ಲಿ ಕೊಚ್ಚಿ ಬಂದಳು ಈ ಗಜಲಕ್ಷ್ಮಿ. ಕಂಡ ಜನ ಈಕೆಯನ್ನು ಗಂಗೆಯ ರೋಷದಿಂದ ಪಾರು ಮಾಡಿ ಪೊಲೀಸರ ಕೈ ತಲುಪಿಸಿದರು.


ಪಾಟ್ನಾದಿಂದ ಕಾಶಿಯವರೆಗಿನ ಸರ್ವ ಪೊಲೀಸ್ ನಿಲ್ದಾಣಗಳಿಗೂ ಸುದ್ದಿ ತಲುಪಿಸಲಾಗಿದೆ.

ಹತ್ತು ದಿನ ಈಕೆಯನ್ನು ಸಾಕಿ ಸೋತ ಪೊಲೀಸರು, 'ಯಾರಾದರೂ ನಂದು ಅಂದರೆ ಸಾಕು ವಹಿಸಿ ಕೊಟ್ಟೇವು' ಎಂದು ನುಡಿವ ಸ್ಥಿತಿಗೆ ಬಂದಿದ್ದಾರೆ.

• ಸಾರ್ವತ್ರಿಕ ಚುನಾವಣೆ ಮುಂದೆ ಹೋಗಕೂಡದು

ಮುಂಬೈ, ಆ. 28: ಚುನಾವಣೆ ಇನ್ನೂ ತಡವಾಗಿ ನಡೆಯಬಹುದೆಂಬ ವರದಿಗೆ ದೇಶಾದ್ಯಂತ ತೀವ್ರ ವಿರೋಧ ಸೂಚಿಸುವುದು ಅತ್ಯಗತ್ಯ ಎಂದು ಪ್ರಕಟಣೆಯೊಂದರಲ್ಲಿ ಸ್ವಚ್ಛ ಮತ್ತು ಶುದ್ಧ ಚುನಾವಣಾ ಸಮ್ಮೇಳನದ ಸ್ಥಾಯೀ ಸಮಿತಿ ಇಂದು ಪ್ರಕಟಿಸಿದೆ.

ಎಲ್ಲರ ಎದೆ ಬೆಳಗಲಿ ಹಣತೆ!



ಅನುಸಂಧಾನ
ರವೀಂದ್ರ ಭಟ್ಟ

> 'ಸರ್ವ ಜನಾಂಗದ ಶಾಂತಿಯ ತೋಟ' ಎನ್ನುವ 'ಕನ್ನಡ ವಿವೇಕ' ರೂಪುಗೊಳ್ಳುವಲ್ಲಿ ಮೈಸೂರು ದಸರೆಯ ಪಾತ್ರ ದೊಡ್ಡದಿದೆ. ಹಿಂದೂ ಮುಸ್ಲಿಂ ಕೊಡು ಕೊಳೆ ಈಗಿನ ದಸರಾ ಆಚರಣೆಯಲ್ಲೂ ಇದೆ. ಆ ವಿವೇಕದ ಭಾಗವಾಗಿಯೇ, ಬಾನು ಮುಷ್ತಾಕ್ ಅವರು ದಸರಾ ಉದ್ಘಾಟನೆಗೆ ನಿಯೋಜನೆ ಆಗಿರುವುದನ್ನು ನೋಡಬೇಕು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 1922ರಲ್ಲಿ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಅಂಗರಕ್ಷಕರ ಮಸೀದಿಯನ್ನು ನಿರ್ಮಿಸಿದರು. ಆ ವರ್ಷದ ಏಪ್ರಿಲ್ 14ರಂದು ಮಸೀದಿ ಉದ್ಘಾಟಿಸಿದ ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ 'ನಿಮ್ಮ ವಸತಿಗೃಹಗಳ ಒಂದು ಪಕ್ಕದಲ್ಲಿ ಹಿಂದೂ ದೇವಾಲಯವಿದೆ. ಇನ್ನೊಂದು ಪಕ್ಕದಲ್ಲಿ ಮಸೀದಿ ಇದೆ. ಈ ಎರಡೂ ಪೂಜಾಮಂದಿರಗಳು ಬೇರೆ ಬೇರೆ ಧರ್ಮಕ್ಕೆ ಸೇರಿದವಾದರೂ, ಅಲ್ಲಿ ನಡೆಯುವುದು ಒಂದೇ. ಅದು ಭಕ್ತಿಯ ಅರ್ಪಣೆ. ಅನೇಕತೆಯಲ್ಲಿ ಏಕತೆ ಎಂದರೆ ಇದೇ. ಇದು ತಾಯಿನಾಡಿನ ಧರ್ಮ. ಇದು ಸಾಮರಸ್ಯವನ್ನು ಜಗತ್ತಿಗೆ ಸಾರುವ ಅಮರ ಸಂದೇಶ' ಎಂದು ಹೇಳಿದ್ದರು. 2025ರ ನಾಡಹಬ್ಬ ದಸರಾ ಉದ್ಘಾಟನೆಗೆ ಬೂಕರ್ ಪ್ರಶಸ್ತಿ ಪುರಸ್ಕೃತೆ ಬಾನು ಮುಷ್ತಾಕ್ ಅವರನ್ನು ಆಹ್ವಾನ ಮಾಡಿರುವ ಹಿನ್ನೆಲೆಯಲ್ಲಿ ವಿವಾದ ಎಬ್ಬಿಸುತ್ತಿರುವ ಪ್ರತಿಯೊಬ್ಬರೂ ನಾಲ್ವಡಿ ಅವರ ಈ ಮಾತುಗಳನ್ನು ಗಮನಿಸಬೇಕು. ಸೌಹಾರ್ದ ಮನೋಭಾವ ನಮ್ಮ ಮಣ್ಣಿನ ಗುಣ. 'ಮೂರ್ತಿಪೂಜೆಯನ್ನು ಒಪ್ಪಿಕೊಂಡು, ಹಣೆಗೆ ಕುಂಕುಮ ಇಟ್ಟುಕೊಂಡು ಬರುವುದಾದರೆ ಬರಲಿ' ಎಂದು ಬಾನು ಅವರ ಮೇಲೆ ಒತ್ತಡ ಹೇರುವುದು ತರವಲ್ಲ. ಈಗ ಬೇಕಾಗಿರುವುದು ಹಿಂದೂ ಮತ್ತು ಮುಸ್ಲಿಮರ ನಡುವೆ ಪರಸ್ಪರ ಗೌರವವೇ ವಿನಾ, ಯಾವುದೇ ಒಂದು ಧರ್ಮದ ಸಂಪ್ರದಾಯವನ್ನು ಇನ್ನೊಂದು ಧರ್ಮದವರು ಅನುಸರಿಸಬೇಕು ಎನ್ನುವುದಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಬಾನು ಮುಷ್ತಾಕ್ ಅವರು ಉದ್ಘಾಟಿಸುತ್ತಿರುವುದು ನಾಡಹಬ್ಬ ದಸರಾ ಉತ್ಸವವನ್ನೇ ವಿನಾ ನವರಾತ್ರಿ ಪೂಜೆಯನ್ನಲ್ಲ.

ಮೈಸೂರು ದಸರಾ ಹಬ್ಬವನ್ನು ನಾಡಹಬ್ಬ ಎಂದು ಗುರುತಿಸಿದ ಮೇಲೆ ಅದು ಒಂದು ಜನಾಂಗಕ್ಕೆ, ಒಂದು ಧರ್ಮಕ್ಕೆ ಸೀಮಿತವಲ್ಲ. ಏಕಸಂಸ್ಕೃತಿಯ ಪ್ರತೀಕವೂ ಅಲ್ಲ. ಅದು ಎಲ್ಲರ ಹಬ್ಬ. ಎಲ್ಲ ಧರ್ಮ, ಎಲ್ಲ ಜನಾಂಗದವರ ಹಬ್ಬ.

ಮೈಸೂರು ದಸರಾ ಹಬ್ಬದ ಸೌಹಾರ್ದತೆಗೆ ದೊಡ್ಡ ಇತಿಹಾಸ ಇದೆ. ಮೈಸೂರು ರಾಜ್ಯವನ್ನು ಬ್ರಿಟಿಷರು ಆಳುವಾಗಲೂ, ಮುಸ್ಲಿಂ ದೊರೆಗಳು ಆಳುವಾಗಲೂ ದಸರಾ ಹಬ್ಬ ಇತ್ತು. ಆಗಲೂ ಅದು ಸೌಹಾರ್ದ ದಸರಾವೇ ಆಗಿತ್ತು ಎನ್ನುವುದನ್ನು ನಾವು ಮರೆಯಬಾರದು. ರಾಷ್ಟ್ರಕವಿ ಕುವೆಂಪು ಅವರು ನಾಡಗೀತೆಯಲ್ಲಿ ಕರ್ನಾಟಕದ ಬಗ್ಗೆ ಹೇಳಿದ 'ಸರ್ವಜನಾಂಗದ ಶಾಂತಿಯ ತೋಟ, ರಸಿಕರ ಕಂಗಳ ಸೆಳೆಯುವ ನೋಟ, ಹಿಂದೂ ಕ್ರೈಸ್ತ ಮುಸಲ್ಮಾನ, ಪಾರಸಿಕ ಜೈನರುದ್ಯಾನ' ಎಂಬ ಮಾತು ನಾಡಹಬ್ಬಕ್ಕೂ ಅನ್ವಯವಾಗುತ್ತದೆ.

ಜಂಬೂಸವಾರಿ ಮೆರವಣಿಗೆಯಲ್ಲಿ ಅಂಬಾರಿ ಮೇಲೆ ಚಾಮುಂಡೇಶ್ವರಿ ಮೂರ್ತಿಯನ್ನು ಕುಳ್ಳಿರಿಸಲಾಗುತ್ತದೆ. ಚಾಮುಂಡೇಶ್ವರಿ ಕನ್ನಡನಾಡಿನ ದೇವತೆ. ನಾಡಿನೊಳಗೆ ಇರುವ ಎಲ್ಲರನ್ನೂ ಕಾಪಾಡುವ ತಾಯಿ ಆಕೆ. ಚಾಮುಂಡೇಶ್ವರಿಗೆ ಕೇವಲ ಹಿಂದೂ ಭಕ್ತರು ಮಾತ್ರ ಇಲ್ಲ. ಮುಸ್ಲಿಂ, ಕ್ರೈಸ್ತ ಭಕ್ತರೂ ಇದ್ದಾರೆ. ಚಾಮುಂಡೇಶ್ವರಿ ದೇವಾಲಯದ ಮುಂಭಾಗದಲ್ಲಿ ಇರುವ ಮಂಟಪವನ್ನು ಕಟ್ಟಿಸಿದ್ದು ಒಬ್ಬ ಮುಸ್ಲಿಂ ಭಕ್ತ. ಈ ಹಿಂದೆ ಕವಿ ಕೆ.ಎಸ್. ನಿಸಾರ್ ಅಹಮದ್ ಅವರು ದಸರಾ ಹಬ್ಬವನ್ನು ಉದ್ಘಾಟಿಸಿದ್ದರು. ತನ್ವೀರ್ ಸೇಠ್ ಅವರು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ಚಾಮುಂಡೇಶ್ವರಿಯ ಗರ್ಭಗುಡಿಗೇ ತೆರಳಿ ಪೂಜೆ ಸಲ್ಲಿಸಿದ್ದರು. ರಾಜ ಮಹಾರಾಜರ ಕಾಲದಿಂದಲೂ ದಸರಾ ಹಬ್ಬದಲ್ಲಿ ಮುಸ್ಲಿಮರು ಭಾಗಿಯಾಗುವ ಸಂಪ್ರದಾಯ ಇದೆ. ಮಹಾರಾಜರ ಜಂಬೂಸವಾರಿ ಮೆರವಣಿಗೆಯಲ್ಲಿ ಸಾಗುವಾಗ ನಿರ್ದಿಷ್ಟ ಸ್ಥಳಗಳಲ್ಲಿ ಮುಸ್ಲಿಮರು, ಕ್ರೈಸ್ತರು, ಜೈನರು, ಬೌದ್ಧರು ನಿಂತು ಮಹಾರಾಜರ ಮೇಲೆ ಪುಷ್ಪವೃಷ್ಟಿ ಮಾಡುತ್ತಿದ್ದರು. ಮೆರವಣಿಗೆಯಲ್ಲಿ ಸಾಗುವ ಕುದುರೆ ಸವಾರರು ಮತ್ತು ಆನೆ ಗಾಡಿಯಲ್ಲಿ ಮುಸ್ಲಿಮರೇ ಇರುತ್ತಿದ್ದರು. ದಸರಾ ನಡೆಯುವ ಹತ್ತು ದಿನಗಳಲ್ಲಿ ಮೈಸೂರಿನ ಎಲ್ಲ ಚರ್ಚ್‌ಗಳಲ್ಲಿ 'ನಾಡಿಗೆ ಒಳಿತಾಗಲಿ' ಎಂದು ವಿಶೇಷ ಪ್ರಾರ್ಥನೆ ಸಲ್ಲಿಸುವ ಸಂಪ್ರದಾಯವೂ ಇದೆ.

ದಸರಾ ಹಬ್ಬ ಬಂತು ಎಂದರೆ ಪಲ್ಲಕ್ಕಿ ಶೃಂಗಾರದ ಜವಾಬ್ದಾರಿ ಮುಸ್ಲಿಮರದ್ದೇ ಆಗಿತ್ತು. ಬನ್ನಿಮಂಟಪದಲ್ಲಿ ದಸರಾ ಸಿದ್ಧತೆ ನಡೆಸುವುದು ಕೂಡ ಮುಸ್ಲಿಮರೆ. ಮೈಸೂರು ಅರಮನೆಯ ಪಕ್ಕದಲ್ಲಿಯೇ ಮನ್ಸೂರ್ ದಿವಾನ್ ಷಾ ವಲಿ ಎಂಬ ಸಂತರ ಗೋರಿ ಇದೆ. ಮಹಾರಾಜರಿಗೆ ಒಳ್ಳೆಯದಾಗಲಿ ಎಂದು ಅಲ್ಲಿ ಪ್ರಾರ್ಥನೆ ಮಾಡಿ, ಅಲ್ಲಿಂದ ಗಂಧದ ಧೂಪವನ್ನು ಮಹಾರಾಜರ ಬಳಿಗೆ ಮುಸ್ಲಿಮರೇ ಕೊಂಡೊಯ್ದು ಹಾಕುತ್ತಿದ್ದರು. ಮೈಸೂರಿನಲ್ಲಿರುವ ಬಹುತೇಕ ಮಸೀದಿಗಳನ್ನು ನಿರ್ಮಿಸಿದ್ದು ಮೈಸೂರು ಮಹಾರಾಜರು. ಮಸೀದಿಗಳಲ್ಲದೆ ಹಜರತ್ ಇಮಾಂ ಷಾ ವಲಿ, ಹೈದರ್ ಷಾ ವಲಿ ಮುಂತಾದ ಸಂತರ ಗೋರಿಗಳನ್ನೂ ಸರ್ಕಾರಿ ಇಲಾಖೆಯಿಂದಲೇ ನಿರ್ಮಿಸಲಾಗಿತ್ತು. ಅಲ್ಲಿನ ಸೇವೆಗೆ ಹಣ, ಪೂಜೆ ಖರ್ಚು, ಕೆಲಸಗಾರರಿಗೆ ಸಂಬಳ ಎಲ್ಲವನ್ನೂ ಮಹಾರಾಜರೇ ನೀಡುತ್ತಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಮುಸ್ಲಿಂ ಸೈನಿಕರಿಗಾಗಿಯೇ ಪ್ರತ್ಯೇಕ ಮಸೀದಿ ಕಟ್ಟಿಸಿದ್ದರು. ದಸರಾ ಸಂದರ್ಭದಲ್ಲಿ ಮೈಸೂರಿಗೆ ಬರುವ ಮುಸ್ಲಿಮರಿಗೆ ಅನುಕೂಲವಾಗಲಿ, ಊಟಕ್ಕೆ ಮತ್ತು ವಸತಿಗೆ ತೊಂದರೆಯಾಗದಿರಲಿ ಎಂದು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಲಂಗರ್ ಖಾನಾವೊಂದನ್ನು ನಿರ್ಮಿಸಿದ್ದರು. ಅಲ್ಲದೆ ಅವರು ಕಛ್‌ನಿಂದ ಬಂದ ಮುಸ್ಲಿಮರಿಗಾಗಿಯೇ 'ಕಚ್ಚೇ ಮೆಮನ್ ಮಸೀದಿ' ನಿರ್ಮಾಣ ಮಾಡಿದ್ದರು.


ದಸರಾ ಉತ್ಸವದ ಆಚರಣೆ ಮೈಸೂರಿಗೆ ಬಂದಿದ್ದು ವಿಜಯನಗರದಿಂದ. ವಿಜಯನಗರ ಅರಸರ ಸೇನೆಯಲ್ಲಿ ಆಫ್ಘನ್ ಮುಸ್ಲಿಮರ ದೊಡ್ಡ ಪಡೆಯೇ ಇತ್ತು. ವಿಜಯನಗರದ ಅರಸರ ಕಾಲದಲ್ಲಿ ಕಟ್ಟಿಗೆ ಬಂಟ (ಬಾಡಿ ಗಾರ್ಡ್) ಆಗಿದ್ದ ಕಟ್ಟಿಗೆ ಅಹ್ಮದ್ ಖಾನ್, ಹಂಪಿಯ ರಾಜಬೀದಿಯಲ್ಲಿ ಒಂದು ಧರ್ಮಶಾಲೆ ಕಟ್ಟಿದ್ದಾನೆ. ಬಾವಿಯನ್ನೂ ತೆಗೆಸಿದ್ದಾನೆ. ಅದರ ಮೇಲೆ ಬರೆಸಿದ ಬರಹ ಹೀಗಿದೆ: 'ರಾಯರಿಗೆ ಒಳ್ಳೇದಾಗಲಿ. ಸೂರ್ಯ ಚಂದ್ರರು ಇರುವವರೆಗೂ ಅವರಿಗೆ ಪುಣ್ಯ ಬರಲಿ'.

ಮುಸ್ಲಿಂ ವ್ಯಕ್ತಿಗಳನ್ನು ಬಾಡಿಗಾರ್ಡ್ ಆಗಿ ಇಟ್ಟುಕೊಳ್ಳುವ ಪದ್ಧತಿಯನ್ನು ಮೈಸೂರು ಅರಸರೂ ಮುಂದುವರಿಸಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಬಾಡಿಗಾರ್ಡ್ ಆಗಿದ್ದವನು ಪೀರ್ ಬೇಗ್. ಒಡೆಯರ್ ಅವರ ಆಪ್ತ ಬಂಟನಾಗಿದ್ದ ಆತ ಒಂದು ಕ್ಷಣವೂ ದೊರೆಯನ್ನು ಬಿಟ್ಟು ಕದಲುತ್ತಿರಲಿಲ್ಲ. ಈಗಲೂ ಮೈಸೂರು ಅರಮನೆಯಲ್ಲಿ ಒಡೆಯರ್ ಜೊತೆಗೆ ಆತನ ಪ್ರತಿಮೆಯನ್ನು ನೋಡಬಹುದು.

ಮೈಸೂರು ಅರಮನೆ ಕೂಡ ಸೌಹಾರ್ದದ ಸಂಕೇತವೇ ಆಗಿದೆ. ಇಂಡೋ ಸಾರ್ಸೆನಿಕ್ ಶೈಲಿಯಲ್ಲಿ ನಿರ್ಮಾಣವಾದ ಅರಮನೆಯಲ್ಲಿ ಇಸ್ಲಾಂ ಶೈಲಿಯ ಸ್ತಾರ್‌ಗಳು, ಹಿಂದೂ ಶೈಲಿಯ ಹಾವುಗಳು, ಕ್ರೈಸ್ತರ ಗೋಥಿಕ್ ಶೈಲಿಯ ವಿನ್ಯಾಸಗಳನ್ನು ಕಾಣಬಹುದು.

1927ರ ಅಕ್ಟೋಬರ್ 27ರಂದು ನಡೆದ ವಿಜಯದಶಮಿ ಜಂಬೂಸವಾರಿಯಲ್ಲಿ ನಾಲ್ವಡಿ ಅವರು ಆನೆಯ ಮೇಲಿನ ಅಂಬಾರಿಯಲ್ಲಿ ಮಿರ್ಜಾ ಇಸ್ಮಾಯಿಲ್ ಅವರನ್ನು ಕುಳ್ಳಿರಿಸಿಕೊಂಡು, ರಾಜಮಾರ್ಗದಲ್ಲಿ ಮೆರವಣಿಗೆ ಹೊರಟಿದ್ದರು. ಆಗ ಕೆಲವರು ಪ್ರತಿಭಟನೆ ನಡೆಸಿದರು. ಅಂಬಾರಿಯತ್ತ ಚಪ್ಪಲಿಗಳನ್ನು ತೂರಿದರು. ಅಂಬಾರಿ ಆನೆಯನ್ನು ಬೆದರಿಸುವ ಕೃತ್ಯವನ್ನೂ ಮಾಡಿದರು. ಆದರೆ ಅದಕ್ಕೆ ಆನೆಯೂ ಬೆದರಲಿಲ್ಲ. ಮಹಾರಾಜರೂ ಬೆದರಲಿಲ್ಲ. ಮುಂದಿನ ವರ್ಷವೂ ಅವರು ಮಿರ್ಜಾ ಇಸ್ಮಾಯಿಲ್ ಅವರಿಗೆ ಅಂಬಾರಿಯಲ್ಲಿ ಜಾಗ ಕೊಟ್ಟರು. ಬಾನು ಮುಷ್ತಾಕ್ ಅವರು ಕನ್ನಡ ಬಾವುಟದ ಬಗ್ಗೆ ಮತ್ತು ಭುವನೇಶ್ವರಿಯ ಬಗ್ಗೆ ಆಡಿದ ಮಾತುಗಳನ್ನು ಈ ಹಿನ್ನೆಲೆಯಲ್ಲಿ ನೋಡಬೇಕು ಹಾಗೂ ಅವರನ್ನು ಒಳಗೊಳ್ಳುವುದರ ಬಗ್ಗೆ ಪ್ರಯತ್ನಿಸಬೇಕು. ಬಾನು ಅವರಿಗೂ ಕನ್ನಡ ಎಲ್ಲವನ್ನೂ ಕೊಟ್ಟಿದೆ. ಅವರಿಗೆ ಅಂತರರಾಷ್ಟ್ರೀಯ ಪ್ರಶಸ್ತಿ ಬಂದಿದ್ದು ಕನ್ನಡದಿಂದ. ಮೂರ್ತಿಪೂಜೆ ಮಾಡುವುದರಿಂದ ಏನೆಲ್ಲ ಕಷ್ಟವಾಗಬಹುದು ಎಂದು ಆಲೋಚಿಸಬೇಕಾದವರು ಬಾನು ಅವರೇ ವಿನಾ ಉಳಿದವರಲ್ಲ.

ದೇವುಡು ನರಸಿಂಹಶಾಸ್ತ್ರಿ ಅವರು ಒಮ್ಮೆ ಸರ್ವಜ್ಞ ಪದಗಳ ಸಂಪಾದಕರಾದ ರೆವರೆಂಡ್ ಚನ್ನಪ್ಪ ಉತ್ತಂಗಿ ಅವರನ್ನು ಭೇಟಿಯಾದಾಗ, 'ತಾವು ನಾಳೆ ನಮ್ಮ ಮನೆಗೆ ಊಟಕ್ಕೆ ಬರಬಹುದೇ?' ಎಂದು ಪ್ರಶ್ನಿಸಿದರಂತೆ. ಅದಕ್ಕೆ ಉತ್ತಂಗಿ ಅವರು ಒಪ್ಪಿಕೊಂಡರು. ನಂತರ ಶಾಸ್ತ್ರಿಗಳಿಗೆ, ತಾವಾದರೆ ಸಂಪ್ರದಾಯಸ್ಥ ಬ್ರಾಹ್ಮಣ, ಚನ್ನಪ್ಪನವರು ಕ್ರೈಸ್ತ ಪಂಗಡದವರು. ಅವರನ್ನು ಸತ್ಕರಿಸುವುದು ಹೇಗೆ ಎಂಬ ಪ್ರಶ್ನೆ ಮೂಡಿತು. ಅದಕ್ಕೆ ಅವರು ತಮ್ಮ ಗುರುಗಳಾದ ವೈದ್ಯನಾಥ ಶಾಸ್ತ್ರಿಗಳಲ್ಲಿ ವಿಚಾರಿಸಿದರು. ಅದಕ್ಕೆ ಗುರುಗಳು 'ನಿನ್ನ ಮನೆಗೆ ಆ ಏಸು ದೇವನೇ ಬಂದರೆ ಹೇಗೋ ಹಾಗೆ ಅವರನ್ನು ಸತ್ಕರಿಸು' ಎಂದು ಸಲಹೆ ಮಾಡಿದರು. ಅದರಂತೆ ದೇವುಡು ಅವರು ಸಪತ್ನೀಕರಾಗಿ ಉತ್ತಂಗಿ ಚನ್ನಪ್ಪ ಅವರ ಕಾಲು ತೊಳೆದು, ಪಾದೋದಕವನ್ನು ತಮ್ಮ ತಲೆಯ ಮೇಲೆ ಪ್ರೋಕ್ಷಿಸಿಕೊಂಡರು. ಚನ್ನಪ್ಪ ಅವರನ್ನು ಪೂರ್ವಾಭಿಮುಖವಾಗಿ ಕುಳ್ಳಿರಿಸಿ ತಾವು ಉತ್ತರಾಭಿಮುಖವಾಗಿ ಕುಳಿತು ಸಂಭಾಷಿಸಿದರು. ಸಹಪಂಕ್ತಿ ಭೋಜನವನ್ನೂ ಮಾಡಿದರು. ನಾವೂ ಹಾಗೆಯೇ ಬಾನು ಮುಷ್ತಾಕ್ ಅವರನ್ನು ಸ್ವಾಗತಿಸೋಣ.



ವಾಚಕರ ವಾಣಿ

ನಾಡಹಬ್ಬಕ್ಕೆ ಧರ್ಮದ ಚೌಕಟ್ಟು ಬೇಡ

ಮೈಸೂರು ದಸರಾ ಮಹೋತ್ಸವವನ್ನು ಉದ್ಘಾಟಿಸಲು ಬಾನು ಮುಷ್ತಾಕ್ ಅವರನ್ನು ಆಯ್ಕೆ ಮಾಡಿರುವುದು ಅಭಿನಂದನಾರ್ಹ. ಜಾತಿ-ಧರ್ಮದ ಸಂಕೋಲೆಯನ್ನು ಮೀರಿ, ವಿಶ್ವಕ್ಕೆ ಕನ್ನಡನಾಡಿನ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿನಿಧಿಸುವ ನಾಡಹಬ್ಬದ ಉದ್ಘಾಟನೆ, ಕನ್ನಡ ಸಾಹಿತ್ಯವನ್ನು ಜಾಗತಿಕ ಮಟ್ಟದಲ್ಲಿ ಪ್ರತಿನಿಧಿಸಿದ ಲೇಖಕಿಯಿಂದ ನಡೆಯುವುದು ಅರ್ಥಪೂರ್ಣ.

ದಸರಾ ಉದ್ಘಾಟನೆಗೆ ಬಾನು ಅವರ ಆಯ್ಕೆಯನ್ನು ಜಾತಿ-ಧರ್ಮದ ಕಾರಣದಿಂದ ಕೆಲವರು ವಿರೋಧಿಸುತ್ತಿರುವುದು ನಾಗರಿಕ ಸಮಾಜವು ನಾಚುವಂತಿದೆ. ಇನ್ನಾದರೂ ಧರ್ಮಗಳ ನಡುವೆ ವಿಷಬೀಜ ಬಿತ್ತುವ ಪಿತೂರಿಗಳು ನಿಲ್ಲಲಿ. ಜಾತ್ಯತೀತ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಅಶಾಂತಿಯನ್ನು ಉಂಟು ಮಾಡುವ ಮನಸ್ಸುಗಳು ಮೊದಲು ಸ್ವಚ್ಛಗೊಳ್ಳಬೇಕು.

ಪವನ್ ಜಯರಾಂ, ಚಾಮರಾಜನಗರ

ಸರ್ಕಾರಿ ಆಸ್ಪತ್ರೆಗಳ ದಕ್ಷತೆ ಹೆಚ್ಚಲಿ

ದೇವದುರ್ಗದಲ್ಲಿಯ ಸಾರ್ವಜನಿಕ ಆಸ್ಪತ್ರೆಯಲ್ಲಿ, ತೀವ್ರ ರಕ್ತಸ್ರಾವದಿಂದ ಬಾಣಂತಿ ಹಾಗೂ ಮಗು ಸಾವನ್ನಪ್ಪಿದ ಸುದ್ದಿ (ಪ್ರ.ವಾ., ಆ. 17) ಓದಿ ಸಂಕಟವಾಯಿತು. ಈ ದುರ್ಘಟನೆಯ ನೈತಿಕ ಹೊಣೆ ಸರ್ಕಾರದ್ದು ಹಾಗೂ ಆರೋಗ್ಯ ಇಲಾಖೆಯ ಸಚಿವರದ್ದು. ಅಗತ್ಯ ಸಮಯದಲ್ಲಿ ರೋಗಿಗಳಿಗೆ ವೈದ್ಯರ ಶುಶ್ರೂಷೆ ದೊರೆಯದೆ ಹೋದರೆ, ಆಸ್ಪತ್ರೆಗಳಿಗೆ ಅರ್ಥವಾದರೂ ಏನು?

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಅಪಘಾತ ತಡೆ: ವೈಜ್ಞಾನಿಕ ಕ್ರಮ ಅಗತ್ಯ

ಬೆಂಗಳೂರು ನಗರದಲ್ಲಿ ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ಬಸ್‌ಗಳಿಂದ ಸಂಭವಿಸುತ್ತಿರುವ ಅಪಘಾತಗಳು ಹಾಗೂ ಸಾವುಗಳಿಗೆ ಚಾಲಕರ ಮೇಲೆ ಇರುವ ಕೆಲಸದ ಒತ್ತಡವೇ ಪ್ರಮುಖ ಕಾರಣವೆಂದು ತೋರುತ್ತಿದೆ. ಎಂಟು ಗಂಟೆಗಳಲ್ಲಿ ಪೂರೈಸಬೇಕಾದ ನಿಗದಿತ ಟ್ರಿಪ್‌ಗಳನ್ನು ಸಂಚಾರ ದಟ್ಟಣೆ ಕಾರಣದಿಂದಾಗಿ ಮುಗಿಸುವುದು ಚಾಲಕರಿಗೆ ಸಾಧ್ಯವಾಗುತ್ತಿಲ್ಲ; ಹೆಚ್ಚುವರಿ ಸಮಯ ದುಡಿಯುವುದು ಅವರಿಗೆ ಅನಿವಾರ್ಯವಾಗಿದೆ. ರಸ್ತೆ ಕಾಮಗಾರಿಗಳು, ಮೆಟ್ರೊ ಕಾಮಗಾರಿಗಳು, ಗುಂಡಿಗಳು ಹಾಗೂ ವಾಹನಗಳ ಹೆಚ್ಚಳದಿಂದ ಪ್ರಯಾಣದ ಅವಧಿ ಹೆಚ್ಚಾಗಿದೆ. ಇಂತಹ ಪರಿಸ್ಥಿತಿಯಲ್ಲಿ, ಚಾಲಕರ ಆತುರ ಹಾಗೂ ದಣಿವು ಅಪಘಾತಗಳಿಗೆ ಕಾರಣವಾಗುತ್ತಿದೆ.

ಅಪಘಾತಗಳನ್ನು ತಡೆಯಲು ಮಾರ್ಗ ಮತ್ತು ವೇಳಾಪಟ್ಟಿಗಳನ್ನು ವೈಜ್ಞಾನಿಕವಾಗಿ ಪರಿಷ್ಕರಿಸಿ, ಚಾಲಕರು ಎಂಟು ಗಂಟೆಗಳಲ್ಲಿ ಕರ್ತವ್ಯ ಮುಗಿಸುವಂತೆ ಬಿಎಂಟಿಸಿ ಕ್ರಮ ಕೈಗೊಳ್ಳಬೇಕು. ಚಾಲಕರ ಕೆಲಸದ ಒತ್ತಡ ಕಡಿಮೆಯಾದರೆ, ಪ್ರಯಾಣಿಕರ ಸುರಕ್ಷತೆ ಖಚಿತವಾಗುತ್ತದೆ.

ವಿಜಯಕುಮಾರ್ ಎಚ್.ಕೆ., ರಾಯಚೂರು

ಅಂದು–ಇಂದು

ಸಾರ್ವಜನಿಕ ಗಣಪತಿ ವಿಶೇಷ:
ಅಂದು, ಪೂಜೆ.
ಇಂದು, ಡಿಜೆ!
ಎಚ್. ಆನಂದರಾಮ ಶಾಸ್ತ್ರೀ

ಪೋಕ್ಸೊ: ಜರೂರು ಇತ್ಯರ್ಥವಾಗಲಿ

ಪೋಕ್ಸೊ ಕಾಯ್ದೆಯಡಿ ದಾಖಲಾಗುವ ಪ್ರಕರಣಗಳನ್ನು ಗಂಭೀರ ಸ್ವರೂಪದ ಪ್ರಕರಣವೆಂದು ಪರಿಗಣಿಸಿ, ಜರೂರಾಗಿ ಇತ್ಯರ್ಥ ಪಡಿಸಬೇಕಾದ ಅನಿವಾರ್ಯ ಇದೆ. ಈ ಪ್ರಕರಣಗಳಲ್ಲಿ ಮಕ್ಕಳ ಪೋಷಕರಿಗೆ ಆಮಿಷವೊಡ್ಡುವ ಮೂಲಕ ದೂರನ್ನು ವಾಪಸ್ ಪಡೆಯುವಂತೆ ಒತ್ತಾಯಿಸಿ, ಆ ಮೂಲಕ ಬಲಾಢ್ಯರು ತಾವು ಎಸಗಿರುವ ದುಷ್ಕೃತ್ಯದಿಂದ ತಪ್ಪಿಸಿಕೊಳ್ಳುತ್ತಿರುವುದು ಕಳವಳಕಾರಿ ಸಂಗತಿ.

ಒತ್ತಡದ ಸನ್ನಿವೇಶಗಳಲ್ಲಿ ದೂರನ್ನು ಹಿಂಪಡೆಯಲು ಮುಂದಾಗುವ ಪೋಷಕರ ಮೇಲೆಯೇ ಕ್ರಮ ಜರುಗಿಸಬೇಕು. ಅಸಹಾಯಕ ಪೋಷಕರಿಗೆ ಅಗತ್ಯವಾದ ಕಾನೂನು ನೆರವು ದೊರೆಯಬೇಕು. ಆಗ, ಸಂತ್ರಸ್ತ ಮಕ್ಕಳಿಗೆ ನ್ಯಾಯ ದೊರಕುವುದು ಸಾಧ್ಯವಾಗುತ್ತದೆ. ಅಪರಾಧ ಎಸಗಿದ ವ್ಯಕ್ತಿಗೆ ಯಾವುದೇ ಶಿಕ್ಷೆಯಾಗದೆ, ಮಕ್ಕಳ ಎದುರೇ ಅಪರಾಧಿ ನಿರ್ಲಜ್ಜೆಯಿಂದ ಓಡಾಡುವಂತಾದರೆ, ಎಳೆಯರ ಬದುಕಿನುದ್ದಕ್ಕೂ ಖಿನ್ನತೆ ಕಾಡುತ್ತದೆ.

ಸುಜ್ಞಲೂರು ವಿಜಿ, ಯಳಂದೂರು

ಭಾರತ ಸ್ವಾವಲಂಬಿಯಾಗಲು ಸಕಾಲ

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರವನ್ನು ಹಿಡಿತದಲ್ಲಿಟ್ಟುಕೊಂಡು ಭಾರತ ಸ್ವಾವಲಂಬನೆಯಿಂದ ಬದುಕುವುದಕ್ಕೆ ಸಾಧ್ಯ ಮಾಡಿಕೊಡದೆ, ಪಾಶ್ಚಾತ್ಯ ರಾಷ್ಟ್ರಗಳು ಕೊಟ್ಟ ಕಾಟ ಒಂದೆರಡಲ್ಲ. ಪ್ರತಿಯೊಂದಕ್ಕೂ ದೊಣ್ಣೆನಾಯಕನ ಅನುಮತಿ ಬೇಕು. ನಮಗೆ ಎಲ್ಲಿ ಬೇಕೋ ಅಲ್ಲಿ ವ್ಯವಹಾರ ಮಾಡುವ ಹಾಗೂ ಇಲ್ಲ.

ಭಾರತ ಈಗ ಮೈ ಕೊಡವಿ ನಿಂತಿದೆ. ರಷ್ಯಾದಲ್ಲಿ ಅಗ್ಗವಾಗಿ ಸಿಗುವ ತೈಲ ಖರೀದಿ ಮಾಡದಂತೆ ಇನ್ನಿಲ್ಲದ ಒತ್ತಡ ಹೇರಿದ ಅಮೆರಿಕದ ಮಾತಿಗೆ ಭಾರತ ಜಗ್ಗಿಲ್ಲ. ಪ್ರಧಾನಿ ನರೇಂದ್ರ ಮೋದಿ ಅವರು ಆತ್ಮನಿರ್ಭರ ಭಾರತ ಯೋಜನೆ ಅಡಿಯಲ್ಲಿ ಭಾರತೀಯರೆಲ್ಲರಿಗೂ ಸ್ವದೇಶಿ ವಸ್ತುಗಳನ್ನು ಬಳಸುವುದಕ್ಕೆ ಕರೆಕೊಟ್ಟಿದ್ದಾರೆ. ದೇಶ ಸ್ವಾಭಿಮಾನದಿಂದ ಮುನ್ನಡೆಯಲು ಇದು ಸಕಾಲ.


ಎಂ. ಪರಮೇಶ್ವರ, ಮದ್ದಿಹಳ್ಳಿ

ಪ್ರಾರ್ಥನೆ ಪೇಟೆಂಟ್ ಯಾರಿಗೂ ಸೇರಿದ್ದಲ್ಲ

'ನಮಸ್ತೇ ಸದಾ ವತ್ಸಲೇ' ಪ್ರಾರ್ಥನೆಯನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸದನದಲ್ಲಿ ಹೇಳಿದ ಕಾರಣಕ್ಕಾಗಿ ಪಕ್ಷದಲ್ಲಿ ವಿರೋಧ ಎದುರಿಸಿ, ಕ್ಷಮೆ ಕೋರಿದ್ದಾರೆ. 'ರಾಜಕಾರಣ' ಹೊರತುಪಡಿಸಿದರೆ ಆ ಪ್ರಾರ್ಥನೆಯಲ್ಲಿ ವಿವಾದಕ್ಕೆ ಕಾರಣವಾಗುವಂತಹದ್ದು ಏನೂ ಇಲ್ಲ. ಯಾವುದೇ ರಾಜಕೀಯ ಪಕ್ಷ ಅಥವಾ ಸಂಘಟನೆ 'ನಮಸ್ತೇ ಸದಾ ವತ್ಸಲೇ'ಯ ಪೇಟೆಂಟ್ ಪಡೆದುಕೊಂಡಿಲ್ಲ! ಬಿಜೆಪಿ, ಆರ್‌ಎಸ್‌ಎಸ್‌ಗೆ ಸೇರಿದವರು ಮಾತ್ರವೇ ದೇಶಪ್ರೇಮಿಗಳಲ್ಲ.

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

ಚುರುಮುರಿ



ಬುರುಡೆ ಸಿಂಡ್ರೋಮ್!

• ಬಿ.ಎನ್. ಮಲ್ಲೇಶ್

ಟೀವಿ ಪತ್ರಕರ್ತ ತೆಪರೇಸಿಯನ್ನು ಆಸ್ಪತ್ರೆಗೆ ಸೇರ್ಸಿದ್ದಾರೆ ಅನ್ನೋ ಸುದ್ದಿ ಹರಟೆಕಟ್ಟೆಯಲ್ಲಿ ಬ್ರೇಕ್ ಆಗಿ ಸದಸ್ಯರೆಲ್ಲ ಒಂದೇ ಉಸಿರಿಗೆ ಆಸ್ಪತ್ರೆಗೆ ಧಾವಿಸಿದರು.

ವಾರ್ಡಲ್ಲಿ ತೆಪರೇಸಿ ಸ್ಥಿತಿ ನೋಡಿ ಗುಡ್ಡೆ, ದುಬ್ಬೀರ, ಪಮ್ಮಿ, ಮಂಜಮ್ಮಗೆಲ್ಲ ಗಾಬರಿಯಾಯಿತು. 'ಯಾರೋ ಯಾರೋ ಗೀಚಿ ಹೋದ...' ಹಾಡಿನಂತೆ ಎತ್ತೆತ್ತಲೋ ನೋಡುತ್ತ, ತಲೆ ಕೆರೆದುಕೊಳ್ಳುತ್ತ ಕೂತಿದ್ದ ತೆಪರೇಸಿ. 'ಇಲ್ಲಿಗೆ ಬರೋ ಮೊದ್ಲು ತಲೆ, ಕೂದಲು ಎಲ್ಲ ಕಿತ್ಕಂಡು, ಪರಪರ ಕೆರ್ಕಂಡು ಬಂದಿದ್ರು. ಬಟ್ಟೆ ಹರ್ಕಳ್ಳೋದು ಒಂದು ಬಾಕಿ ಇತ್ತು' ಎಂದರು ಡಾಕ್ಟರು.

'ಯಾಕೆ? ಅಂಥದ್ದೇನಾತು?' ಗುಡ್ಡೆ ಕೇಳಿದ.

'ಇವ್ರು ಟೀವಿ ರಿಪೋರ್ಟ್ರಲ್ವಾ, ಬುರುಡೆ ಕೇಸ್ ರಿಪೋರ್ಟ್ ಮಾಡ್ತಿದ್ರಂತೆ. ಕೇಸಲ್ಲಿ ಟ್ವಿಸ್ಟ್ ಮೇಲೆ ಟ್ವಿಸ್ಟ್ ಬಂದ್ರೆ ಇನ್ನೇನಾಗುತ್ತೆ? ಸುಳ್ಳು, ಸತ್ಯ ಒಂದೂ ತಿಳೀದೆ ಗರಗರ ತಲೆ ತಿರುಗಿ, ದಿಕ್ ತಪ್ಪಿ ಬಿದ್ದಿದ್ರಂತೆ' ಡಾಕ್ಟರು ವಿವರಿಸಿದರು.

'ಅಯ್ಯೋ ರಾಮ, ಹಂಗೆಲ್ಲ ಆಗುತ್ತಾ?' ಮಂಜಮ್ಮ ಕೇಳಿದಳು.

'ಮತ್ತೆ ಆಗದೇ ಇರುತ್ತಾ? ಇಲ್ಲಿಗೆ ಬಂದಾಗ ಬುರುಡೆ, ಷಡ್ಯಂತ್ರ, ಗ್ಯಾಂಗು ಅಂತೆಲ್ಲ ಏನೇನೋ ಬಡಬಡಿಸ್ತಿದ್ರು...'

'ಎಲ್ಲ ಸುಳ್ಳು' ಎಂದು ಒಮ್ಮೆಲೇ ಕೂಗಿದ ತೆಪರೇಸಿ. ನಂತರ ನಿಧಾನಕ್ಕೆ ಪಮ್ಮಿ ಮುಖ ನೋಡುತ್ತ 'ಹಾ... ಇವಳೇ ನನ್ನ ಮಗಳು...' ಎಂದ.

'ಲೇಯ್, ಇವಳು ನಿನ್ನೆಂಡ್ತಿ ಕಣೋ... ಪಮ್ಮಿ' ಎಂದಳು ಮಂಜಮ್ಮ. ಹೆಂಡ್ತಿ ಅಂತಿದ್ದಂಗೆ ತೆಪರೇಸಿಗೆ ಶಾಕ್! ಮೂರ್ಛೆ ಹೋದ.

'ಇದಕ್ಕೆ ಬುರುಡೆ ಅಂಡ್ ಬುರುಡೆ ಸಿಂಡ್ರೋಮ್ ಅಂತಾರೆ...' ಡಾಕ್ಟರು ಹೇಳಿದರು.

'ಬುರುಡೆ ಅಂಡ್ ಬುರುಡೆನಾ? ಅಲ್ಲಿ ಸಿಕ್ಕಿದ್ದು ಒಂದೇ ಬುರುಡೆ ಅಲ್ವಾ? ಇನ್ನೊಂದು ಯಾವುದು?' ಗುಡ್ಡೆ ಕೇಳಿದ.

'ಒಂದು ಒರಿಜಿನಲ್ ಬುರುಡೆ, ಇನ್ನೊಂದು ಈ ತೆಪರೇಸಿ ಟಿವೀಲಿ ಬಿಡ್ತಿದ್ದ ಬುರುಡೆ...' ಎಂದರು ಡಾಕ್ಟರು. ಯಾರೂ ಪಿಟಿಕ್ಕನ್ನಲಿಲ್ಲ.

ಸಂಗತ

ಹಬ್ಬಗಳ ಜೀವಸೆಲೆ ಸದ್ದುಗದ್ದಲದಲ್ಲಿ ಕಣ್ಮರೆ


ಯಾವುದೇ ಹಬ್ಬದ ಕೇಂದ್ರದಲ್ಲಿ ಸೌಹಾರ್ದ ಹಾಗೂ ನೆಮ್ಮದಿ ಇರಬೇಕು. ಆದರೆ, ಇಂದಿನ ಹಬ್ಬಗಳ ಆಚರಣೆಗಳಲ್ಲಿ ಸದ್ದುಗದ್ದಲ, ಗೊಂದಲವೇ ಹೆಚ್ಚಾಗಿರುತ್ತದೆ.

• ರಾಹುಲ ಬೆಳಗಲಿ

ಕಿರಿದಾದ ರಸ್ತೆಯಲ್ಲಿ ಎರಡು ಟ್ರ್ಯಾಕ್ಟರ್‌ಗಳು ನಿಧಾನವಾಗಿ ಸಾಗುತ್ತಿದ್ದರೆ, ಅವುಗಳ ಬದಿ ಮತ್ತು ಎದುರು ಬೈಕ್‌ಗಳು ಜೊತೆಗೆ ಬರುತ್ತಿದ್ದವು. ಒಂದು ಟ್ರ್ಯಾಕ್ಟರ್‌ನಲ್ಲಿ ಚಾಲಕನ ಜೊತೆ ಐದಕ್ಕೂ ಹೆಚ್ಚು ಮಂದಿ ಕೂತಿದ್ದರು. ಅವರ ಹಿಂಬದಿ ಟ್ರಾಲಿಯ ಮೇಲೆ ಕಿವಿಯ ಪದರು ಹರಿಯುವಷ್ಟು ಸಂಗೀತ ಅಬ್ಬರಿಸುತ್ತಿದ್ದ ಭಾರೀ ಗಾತ್ರದ ಧ್ವನಿವರ್ಧಕಗಳು (ಡಿಜೆ) ಇದ್ದವು. ಈ ಟ್ರ್ಯಾಕ್ಟರ್ ಎದುರು ಮೂವತ್ತಕ್ಕೂ ಹೆಚ್ಚು ಯುವಕರಿಂದ ಮನಸೋಇಚ್ಛೆ ಕುಣಿತ, ಕೇಕೆ, ಶಿಳ್ಳೆ ಎಲ್ಲವೂ ಇತ್ತು. ಇದರ ಜೊತೆಗೆ ಝುಗಮಗಿಸುವ ದೀಪಗಳ ಅಲಂಕಾರ, ಕಣ್ಣುಗಳಿಗೆ ಕುಕ್ಕುವ ಲೇಸರ್ ಬೆಳಕು. ಅಲ್ಲಲ್ಲಿ ಪಟಾಕಿಗಳ ಸದ್ದು ಮುಂದುವರಿದಿತ್ತು.

ಆದರೆ, ಈ ಎಲ್ಲದರ ಹಿಂದಿನ ಟ್ರ್ಯಾಕ್ಟರ್‌ನಲ್ಲಿ ಮಾತ್ರ ಸಂಪೂರ್ಣ ಶಾಂತಸ್ಥಿತಿ. ಒಬ್ಬ ಚಾಲಕ, ಇಬ್ಬರು ಹುಡುಗರು ಮತ್ತು ಟ್ರಾಲಿಯಲ್ಲಿ ಬೃಹತ್ ಆಕಾರದ ಗಣೇಶನ ಮೂರ್ತಿ ಹೊರತುಪಡಿಸಿದರೆ ಮತ್ತ್ಯಾವ ಸಂಭ್ರಮವೂ ಇರಲಿಲ್ಲ. ಮೂರ್ತಿಯ ಅಕ್ಕಪಕ್ಕ ನಿಲ್ಲುವುದಿರಲಿ, ಅಪ್ಪಿತಪ್ಪಿ ಅವಘಡ ಸಂಭವಿಸಿದರೆ, ಯಾರು ಹೊಣೆ ಎಂದು ಯೋಚಿಸುವವರು ಕೂಡ ಅಲ್ಲಿ ಇರಲಿಲ್ಲ. ಅಷ್ಟು ನಿರ್ಲಿಪ್ತವಾಗಿ ಅದು ಸಾಗುತ್ತಿತ್ತು.

ಹುಬ್ಬಳ್ಳಿ-ಧಾರವಾಡದ ಬಹುತೇಕ ಕಡೆ ಕಾಣಸಿಕ್ಕ ಗಣೇಶ ಹಬ್ಬದ ಆಚರಣೆಯ ಬಗೆಯಿದು. ಯಾವುದೇ ಪ್ರಮುಖ ಹಬ್ಬ, ಮಹನೀಯರ ಜಯಂತಿ ಅಥವಾ ಉತ್ಸವವೇ ಇರಲಿ, ಇತ್ತೀಚಿನ ವರ್ಷಗಳಲ್ಲಿ ಅಬ್ಬರದ ಸಂಗೀತ (ಡಿಜೆ), ಮೈಮರೆಯುವಷ್ಟು ಕುಣಿತ ಮತ್ತು ಪ್ರತಿಷ್ಠೆಯ ಪ್ರದರ್ಶನ ಇಲ್ಲದಿದ್ದರೆ, ಆ ಆಚರಣೆ ಪರಿಪೂರ್ಣ ಆಗುವುದಿಲ್ಲ ಎಂಬ ಮನಃಸ್ಥಿತಿ ನಿರ್ಮಾಣವಾಗಿದೆ. ಲಕ್ಷಾಂತರ ರೂಪಾಯಿ ಹಣ ಖರ್ಚಾಗಲಿ, ವಿದ್ಯುತ್ ಮತ್ತು ಇಂಧನ ವ್ಯಯವಾಗಲಿ, 'ತೋರಿಕೆ'ಗಾದರೂ ಹೀಗೆ ಖರ್ಚು ಮಾಡಲೇಬೇಕು ಎಂಬ ಧೋರಣೆ ಹಲವರಲ್ಲಿದೆ.



ಇದು ದೇವರನ್ನು ಆರಾಧಿಸುವ ಭಕ್ತಿಯ ಸ್ವರೂಪವೇ ಅಥವಾ ಸಮಾಜದ ಏಳ್ಗೆಗೆ ಮಹನೀಯರನ್ನು ಸ್ಮರಿಸುವ ವಿಧಾನವೇ?

ಅಬ್ಬರದ ಸಂಗೀತದಲ್ಲಿ 'ಐಟಂ ಸಾಂಗ್' ಎಂದು ಕರೆಯಲಾಗುವ ಪ್ರಚೋದಕ ಹಾಡುಗಳು ಪ್ರಧಾನ ಆಗಿರುತ್ತವೆಯೇ ಹೊರತು ಭಕ್ತಿಗೀತೆಗಳು ಖಂಡಿತ ಇರುವುದಿಲ್ಲ. ಗೀತೆಯ ಸಾರ ಅರ್ಥವಾಗಲಿ ಅಥವಾ ಬಿಡಲಿ, ಹಬ್ಬಕ್ಕೆ ಸಂಬಂಧಪಡಲಿ ಅಥವಾ ಸಂಬಂಧಪಡದಿರಲಿ, ನಶೆ ಏರಿದಂತೆ ಒಬ್ಬರ ಮೇಲೆ ಒಬ್ಬರು ಬಿದ್ದು, ಎದ್ದು ಮತ್ತು ಹೆಗಲ ಮೇಲೆ ಕೂತು ಕುಣಿಯುವುದಷ್ಟೇ ಆ ಸಂದರ್ಭಕ್ಕೆ ಮುಖ್ಯ ಆಗಿರುತ್ತದೆ. ಮಿತಿ ಮೀರಿದ ಅಬ್ಬರದ ಸಂಗೀತದಿಂದ ಪುಟಾಣಿ ಮಕ್ಕಳು ಸೇರಿ ಹಿರಿಯರು ಶ್ರವಣಶಕ್ತಿ ಕಳೆದುಕೊಂಡರೂ ಪರವಾಗಿಲ್ಲ, ಹೇಗಾದರೂ ಮಾಡಿ, ಭಕ್ತಿಯ ಪರಾಕಾಷ್ಠೆ ತಲುಪಬೇಕು ಎಂಬುದಷ್ಟೇ ಗುರಿ ಆಗಿರುತ್ತದೆ.

ಇದು ಎಲ್ಲವೂ ಅರ್ಧ ಗಂಟೆ ಅಥವಾ ಒಂದು ಗಂಟೆಯಲ್ಲಿ ಮುಗಿಯುವಂತಹದ್ದು ಅಲ್ಲ. ಎಲ್ಲಿಂದ ಮೆರವಣಿಗೆ ಶುರುವಾಗುತ್ತದೋ, ನಿಗದಿತ ಸ್ಥಳ ತಲುಪುವವರೆಗೆ ಗಂಟೆಗಟ್ಟಲೆ ಸಮಯ ತೆಗೆದುಕೊಳ್ಳಲಾಗುತ್ತದೆ. ಅಲ್ಲಲ್ಲಿ ನಿಲ್ಲಿಸಿ, ಮೆರವಣಿಗೆ ನಡೆಸಲು ಕಾರಣರಾದವರ, ಸಮಾಜಸೇವಕರ ಅಥವಾ ನಾಯಕರ ಚಿತ್ರವನ್ನು ಪ್ರದರ್ಶಿಸಲಾಗುತ್ತದೆ. ಆ ವ್ಯಕ್ತಿಯು ಆ ಕ್ಷಣಕ್ಕೆ ದೇವರಿಗಿಂತ ಪ್ರಮುಖನಾಗಿ ಗೋಚರಿಸುತ್ತಾನೆ. ಆತನ ಕುರಿತು ಗುಣಗಾನವನ್ನು ಅಲ್ಲಿನ ಜನರು, ಆ ಗೌಜುಗದ್ದಲದ ಮಧ್ಯೆಯೇ ಆಲಿಸಬೇಕು. ಈ ಎಲ್ಲದಕ್ಕೂ ಯಾರಾದರೂ ಸ್ವಲ್ಪ ಆಕ್ಷೇಪಣೆ ತೆಗೆದರೆ, ಅಲ್ಲಿನ ಚಿತ್ರಣವೇ ಬೇರೆ ಆಗುತ್ತದೆ. 'ವರ್ಷಕ್ಕೊಮ್ಮೆ ಹುಡುಗರು ಹೀಗೆ ಕುಣಿಯುತ್ತಾರೆ ಬಿಡ್ರಿ. ಇವರು ಖುಷಿಯಿಂದ ಕುಣಿದರೆ, ನಿಮಗೆ ಕಿರಿಕಿರಿ ಆಗುತ್ತಾ' ಎಂಬ ಪ್ರಶ್ನೆಯನ್ನು ಹಿರಿಯರೇ ಕೇಳುತ್ತಾರೆ.

ಬಹುಸಂಸ್ಕೃತಿ, ವೈವಿಧ್ಯಮಯ ಆಚಾರ-ವಿಚಾರ, ವಿಭಿನ್ನವಾದ ಜೀವನಶೈಲಿಯುಳ್ಳ ಭಾರತದಲ್ಲಿ ಯಾವುದೇ ಹಬ್ಬ ಅಥವಾ ಉತ್ಸವ ಆಚರಿಸಿದರೂ, ಅದಕ್ಕೆ ಬಹುತ್ವದ ತಳಪಾಯವಿದೆ ಎಂಬ ವಿಷಯದ ಅರಿವು ಇತ್ತೀಚಿನ ದಿನಗಳಲ್ಲಿ ಮಸುಕಾಗುತ್ತಿದೆ. ಇನ್ನೊಬ್ಬರ ಮೇಲೆ ಬಲ ಪ್ರದರ್ಶನ, ವೈಭವದ ದರ್ಶನ ಮಾಡಿಸಲು ಹೋಗಿ, ಆಯಾ ಹಬ್ಬಗಳ ಮಹತ್ವ ಕಳೆಗುಂದುತ್ತಿದೆ. ಅರ್ಥಪೂರ್ಣ ಆಚರಣೆಗಿಂತ ಅನಗತ್ಯ ಅದ್ದೂರಿ ಪ್ರದರ್ಶನ ಮತ್ತು ಹಲವು ಸ್ವರೂಪದ ಮಾಲಿನ್ಯಕ್ಕೆ ಕಾರಣವಾಗುತ್ತಿದೆ.

ಸಾರ್ವಜನಿಕರ ಹಿತದೃಷ್ಟಿಯಿಂದ ಅಬ್ಬರದ ಸಂಗೀತಕ್ಕೆ ಕಡಿವಾಣ ಹಾಕಲು ಅಥವಾ ಕೆಲವಷ್ಟು ನಿಯಮಗಳ ಮೂಲಕ ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸುವಂತೆ ಪೊಲೀಸರು ತಿಳಿ ಹೇಳಲು ಪ್ರಯತ್ನಿಸಿದರೆ, ಅವರ ವಿರುದ್ಧ ಆಯಾ ಕ್ಷೇತ್ರದ ಜನಪ್ರತಿನಿಧಿಗಳೇ ತಿರುಗಿ ಬೀಳುತ್ತಾರೆ. ನೇರವಾಗಿ ಆಡಳಿತಸೌಧದ ವಿಷಯ ಪ್ರಸ್ತಾಪಿಸಿ, 'ಈ ಪಕ್ಷದ ಸರ್ಕಾರದಲ್ಲಿ ಯಾವಾಗಲೂ ಇದು ಇದ್ದಿದ್ದೇ' ಎಂದು ಸಿಟ್ಟಿಗೇಳುತ್ತಾರೆ. 'ಹುಡುಗರು ತಮಗೆ ಅನ್ನಿಸಿದಂತೆ ಹಬ್ಬ ಆಚರಿಸುತ್ತಾರೆ. ಅವರಿಗೆ ಅಡ್ಡಿಪಡಿಸಿದರೆ, ಹುಷಾರ್' ಎಂಬ ಎಚ್ಚರಿಕೆಯೂ ನೀಡುತ್ತಾರೆ. ಅಲ್ಲಿಗೆ 'ಎಲ್ಲವೂ' ಗೌಣವಾಗುತ್ತದೆ.

ಹಬ್ಬಗಳು ಮನಸ್ಸುಗಳನ್ನು ಬೆಸೆಯಬೇಕು. ಮಾನಸಿಕ ನೆಮ್ಮದಿ ಹೆಚ್ಚಿಸಬೇಕು. ಮನಸ್ಸುಗಳನ್ನು ಮುರಿಯುವಂತಾದರೆ, ಮಾನಸ ಸರೋವರದಲ್ಲಿ ಗದ್ದಲದ ಕಂಪನಗಳನ್ನು ಎಬ್ಬಿಸುವಂತಾದರೆ ಹಬ್ಬ ಎನ್ನುವುದು ಹಬ್ಬವಾಗಿ ಉಳಿದೀತೆ?

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ದೇಶದ ಮಧ್ಯಮ ವರ್ಗದ ಜನ ಮತ್ತು ಯುವಕರನ್ನು ಹಣ ಆಧಾರಿತ ಆನ್‌ಲೈನ್ ಆಟಗಳಿಂದ ರಕ್ಷಿಸಲು ಮತ್ತು ಇತರ ಆನ್‌ಲೈನ್ ಆಟಗಳನ್ನು ಪ್ರಚಾರ ಮಾಡಲು ಮತ್ತು ನಿಯಂತ್ರಿಸಲು ಕೇಂದ್ರ ಸರ್ಕಾರವು 'ಆನ್‌ಲೈನ್ ಗೇಮಿಂಗ್ ಉತ್ತೇಜನ ಮತ್ತು ನಿಯಂತ್ರಣ ಮಸೂದೆ –2025' ಮಂಡಿಸಿದ್ದು, ಅದಕ್ಕೆ ಸಂಸತ್ತಿನಲ್ಲಿ ಅಂಗೀಕಾರ ದೊರೆತು ರಾಷ್ಟ್ರಪತಿಯವರ ಅಂಕಿತವನ್ನೂ ಪಡೆದಿದೆ. ಈ ಕಾಯ್ದೆಯಿಂದ ಸರ್ಕಾರದ ಬೊಕ್ಕಸಕ್ಕೆ ಸಾವಿರಾರು ಕೋಟಿ ನಷ್ಟವಾದರೂ ಜನರ ಜೀವ ಮತ್ತು ಆಸ್ತಿಪಾಸ್ತಿ ಉಳಿಸುವ ದಿಸೆಯಲ್ಲಿ ಇದು ಸ್ವಾಗತಾರ್ಹ ಎನ್ನುವ ಅಭಿಪ್ರಾಯ ವ್ಯಕ್ತವಾಗಿದೆ. ಇದೇ ವೇಳೆ, ಹಲವು ಆನ್‌ಲೈನ್ ಗೇಮಿಂಗ್ ಕಂಪನಿಗಳು ಕಾಯ್ದೆಯನ್ನು ವಿರೋಧಿಸಿವೆ

ಆನ್‌ಲೈನ್ ಜೂಜಾಟ ಪೂರ್ಣವಿರಾಮ ಸಾಧ್ಯವೇ?

ಪ್ರಜಾವಾಣಿ ವಾರ್ತೆ

ಆನ್‌ಲೈನ್ ಆಟಗಳಿಗೆ (ಗೇಮಿಂಗ್) ಸಂಬಂಧಿಸಿದಂತೆ, ಅದರಲ್ಲೂ ವಿಶೇಷವಾಗಿ ಹಣ ಆಧಾರಿತ ಆನ್‌ಲೈನ್ ಆಟಗಳ ವಿಚಾರದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಸಾಂಸ್ಥಿಕ ಹಾಗೂ ಕಾನೂನು ಚೌಕಟ್ಟು ಈವರೆಗೂ ಇರಲಿಲ್ಲ. ಬೆರಳೆಣಿಕೆಯಷ್ಟು ರಾಜ್ಯಗಳು ಇವುಗಳನ್ನು ನಿಷೇಧಿಸುವ ಪ್ರಯತ್ನ ಮಾಡಿದ್ದವು. ಮಧ್ಯಮ ವರ್ಗ ಮತ್ತು ಯುವಜನರ ನಡುವೆ ಜನಪ್ರಿಯವಾಗಿರುವ ಈ ಆಟಗಳಿಗೆ ಒಂದು ಕಾನೂನು ಚೌಕಟ್ಟು ರೂಪಿಸಲು, ಅವುಗಳನ್ನು ನಿಯಂತ್ರಿಸಲು, ಅವುಗಳ ಚಟುವಟಿಕೆ, ಸಂಪನ್ಮೂಲ, ಮೂಲಸೌಕರ್ಯ ಮತ್ತು ಸಂಶೋಧನೆಗೆ ವ್ಯವಸ್ಥಿತ ರೂಪ ನೀಡಲು ಕೇಂದ್ರ ಸರ್ಕಾರವು ಮೊಟ್ಟ ಮೊದಲ ಬಾರಿಗೆ 'ಆನ್‌ಲೈನ್ ಗೇಮಿಂಗ್ ಉತ್ತೇಜನ ಮತ್ತು ನಿಯಂತ್ರಣ ಮಸೂದೆ 2025' ಕಾಯ್ದೆಯನ್ನು ಕೆಲವು ದಿನಗಳ ಹಿಂದೆಯಷ್ಟೇ ರೂಪಿಸಿದೆ. ಹಣ ಆಧಾರಿತ ಆನ್‌ಲೈನ್ ಆಟವು ಜಾಗತಿಕ ಮಟ್ಟದ ಸಮಸ್ಯೆಯಾಗಿದ್ದು, ವಿಶ್ವ ಆರೋಗ್ಯ ಸಂಸ್ಥೆಯು ಇದನ್ನು ಒಂದು ವ್ಯಾಧಿ ಎಂದೇ ವ್ಯಾಖ್ಯಾನಿಸಿದೆ. ಆನ್‌ಲೈನ್ ಜೂಜಿನಲ್ಲಿ ತೊಡಗುವ ಜನರ ಸಂಖ್ಯೆ ಭಾರತದಲ್ಲಿಯೂ ದೊಡ್ಡ ಪ್ರಮಾಣದಲ್ಲಿದೆ. ಜನರು, ಅಪಾಯ ಮತ್ತು ನಷ್ಟದ ಅರಿವೇ ಇಲ್ಲದಂತೆ, ತಮ್ಮ ಮನಸ್ಸಿನ ಮೇಲೆ ನಿಯಂತ್ರಣ ಕಳೆದುಕೊಂಡು, ಕೆಲಸ ಕಾರ್ಯ ಬಿಟ್ಟು ಆನ್‌ಲೈನ್ ಜೂಜಿನಲ್ಲಿ ಹಣ ತೊಡಗಿಸುತ್ತಿದ್ದಾರೆ. ಅನೇಕರು ಶೀಘ್ರವಾಗಿ ಹಣ ಮಾಡುವ ಉದ್ದೇಶದಿಂದ ತಮ್ಮ ಬಳಿ ಇದ್ದ ಹಣ, ಆಸ್ತಿ ಕಳೆದುಕೊಂಡು, ಮಾನಸಿಕ ಖಿನ್ನತೆಗೆ ಗುರಿಯಾಗಿ, ಸಾಮಾಜಿಕವಾಗಿಯೂ ಪೆಟ್ಟು ತಿನ್ನುತ್ತಿದ್ದಾರೆ. ಕೆಲವರು ಆತ್ಮಹತ್ಯೆಯನ್ನೂ ಮಾಡಿಕೊಂಡಿದ್ದಾರೆ. ಇಂಥವರ ರಕ್ಷಣೆಯೇ ಕಾಯ್ದೆಯ ಉದ್ದೇಶ ಎಂದು ಕೇಂದ್ರವು ಪ್ರತಿಪಾದಿಸಿದೆ.

ಆನ್‌ಲೈನ್ ಜೂಜಿನ ಆ್ಯಪ್‌ಗಳು ಆಕರ್ಷಕವಾದ, ಅಷ್ಟೇ ಕ್ಲಿಷ್ಟವಾದ ವಿನ್ಯಾಸವನ್ನು ಹೊಂದಿದ್ದು, ಅನೇಕ ಬಾರಿ ಬಳಕೆದಾರರನ್ನು ದಾರಿ ತಪ್ಪಿಸುವಂತೆಯೂ ಇರುತ್ತವೆ. ಅವುಗಳಲ್ಲಿ ಬಳಕೆದಾರರ ರಕ್ಷಣೆ, ಉತ್ತರದಾಯಿತ್ವ ಮತ್ತು ಪಾರದರ್ಶಕತೆಯ ಕೊರತೆಯೂ ಇರುತ್ತದೆ. ಆನ್‌ಲೈನ್ ಜೂಜನ್ನು ಆಕರ್ಷಕವಾದ ಜಾಹೀರಾತುಗಳ ಮೂಲಕ ಪ್ರಚಾರ ಮಾಡಲಾಗುತ್ತದೆ. ಈ ಮೂಲಕ ಭಾರಿ ಪ್ರಮಾಣದಲ್ಲಿ ಯುವಕರನ್ನು ಮತ್ತು ಬಡ, ದುಡಿಯುವ ವರ್ಗಗಳನ್ನು ತನ್ನತ್ತ ಸೆಳೆದುಕೊಳ್ಳಲಾಗುತ್ತಿದೆ. ಜತೆಗೆ, ಆರ್ಥಿಕ ವಂಚನೆ, ಹಣ ಅಕ್ರಮ ವರ್ಗಾವಣೆ, ತೆರಿಗೆ ವಂಚನೆಗೆ ಕಾರಣವಾಗುತ್ತಿರುವುದಲ್ಲದೇ, ಭಯೋತ್ಪಾದನೆಯಂಥ ಕೃತ್ಯಗಳಿಗೆ ಹಣಕಾಸಿನ ಬೆಂಬಲ ಒದಗಿಸುವ ಮೂಲಕ ದೇಶದ ರಕ್ಷಣೆ, ಸಮಗ್ರತೆ ಮತ್ತು ಕಾನೂನು ಸುವ್ಯವಸ್ಥೆಗೂ ಕಂಟಕವಾಗುತ್ತಿವೆ.

ಡಿಜಿಟಲ್ ತಾಂತ್ರಿಕತೆಯ ಆಧಾರದಲ್ಲಿ ಕಂಪ್ಯೂಟರ್, ಮೊಬೈಲ್ ಮತ್ತು ಇಂಟರ್‌ನೆಟ್‌ಗಳ ಮೂಲಕ ನಡೆಯುತ್ತಿರುವ ಆನ್‌ಲೈನ್ ಆಟಗಳಿಂದ ವ್ಯಕ್ತಿ, ಕುಟುಂಬ, ಸಮಾಜ ಮತ್ತು ದೇಶವನ್ನು ರಕ್ಷಣೆ ಮಾಡುವ ಸಲುವಾಗಿ ಕಾಯ್ದೆ ಅಗತ್ಯವಾಗಿತ್ತು. ಜತೆಗೆ, ಅನೇಕ ಆನ್‌ಲೈನ್ ಗೇಮಿಂಗ್ ಆ್ಯಪ್‌ಗಳು ವಿದೇಶಗಳಿಂದ ಕಾರ್ಯಾಚರಣೆ ನಡೆಸುತ್ತಿದ್ದು, ನೆಲದ ಕಾನೂನನ್ನು ಉಲ್ಲಂಘಿಸುತ್ತಿವೆ; ಈ ಮೂಲಕ ಕಾನೂನು ಮತ್ತು ರಾಜ್ಯಗಳ ವ್ಯಾಪ್ತಿ ಮೀರಿ ಹಲವು ಸಮಸ್ಯೆಗಳಿಗೆ ಕಾರಣವಾಗುತ್ತಿವೆ. ಈ ಕಾರಣಗಳಿಂದ ಹಣ ಆಧಾರಿತ ಆನ್‌ಲೈನ್ ಆಟಗಳನ್ನು ನಿಷೇಧಿಸುವ ಕಾಯ್ದೆ ರೂಪಿಸಲಾಗಿದೆ. ಜತೆಗೆ, ಆರೋಗ್ಯಕರವಾದ ಪರ್ಯಾಯ ಆನ್‌ಲೈನ್ ಆಟಗಳನ್ನು ಉತ್ತೇಜಿಸುವುದು ಕಾಯ್ದೆಯ ಉದ್ದೇಶ ಎಂದು ಕೇಂದ್ರ ವಿವರಿಸಿದೆ.

ಕಾನೂನು ಜಾರಿಗೆ ಬಂದರೂ ದೇಶದಲ್ಲಿ ಪೂರ್ಣ ಪ್ರಮಾಣದಲ್ಲಿ ಆನ್‌ಲೈನ್ ಜೂಜಿಗೆ ತಡೆ ಒಡ್ಡಲು ಸಾಧ್ಯವೇ ಎಂಬ ಪ್ರಶ್ನೆಯೂ ಎದ್ದಿದೆ. ಯಾಕೆಂದರೆ ಕೆಲವು ರಾಜ್ಯಗಳಲ್ಲಿ ನಿಷೇಧ ಇದ್ದರೂ, ನಿಯಮ ಉಲ್ಲಂಘಿಸಿ ಆನ್‌ಲೈನ್ ಆಟಗಳನ್ನು ಜನ ಆಡುತ್ತಿದ್ದರು. ಗೇಮಿಂಗ್ ವೇದಿಕೆಯ ಡೊಮೈನ್ ಹೆಸರನ್ನು ಬದಲಾಯಿಸುವುದು, ಡಾರ್ಕ್‌ವೆಬ್ ಮೂಲಕ ಆಟ ಆಡುವುದು ಸೇರಿದಂತೆ ಕಾನೂನು ಉಲ್ಲಂಘಿಸುವ ಸಾಧ್ಯತೆ ಇದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಆಧಾರ: ರಾಯಿಟರ್ಸ್, ಪ್ರೆಸ್ ಇನ್‌ಫರ್ಮೇಷನ್ ಬ್ಯೂರೊ, ಬಿಬಿಸಿ

ಕರ್ನಾಟಕ ಹೈಕೋರ್ಟ್ ಮೆಟ್ಟಿಲೇರಿದ 'ಎ23'

ಆರ್‌ಎಂಜಿ ನಿರ್ವಹಿಸುವ ಕಂಪನಿಗಳು ಹೊಸ ಕಾನೂನನ್ನು ವಿರೋಧಿಸಿವೆ. ರಮ್ಮಿ ಮತ್ತು ಪೋಕರ್ ಆನ್‌ಲೈನ್ ಆಟಗಳನ್ನು ನಿರ್ವಹಿಸುತ್ತಿರುವ ಎ23 ಎಂಬ ಕಂಪನಿಯು ಈ ಕಾಯ್ದೆಯನ್ನು ಪ್ರಶ್ನಿಸಿ ಕರ್ನಾಟಕ ಹೈಕೋರ್ಟ್ ಮೆಟ್ಟಿಲೇರಿದೆ. 7 ಕೋಟಿ ಆನ್‌ಲೈನ್ ಆಟಗಾರರು ಈ ಕಂಪನಿಯಲ್ಲಿ ನೋಂದಣಿ ಮಾಡಿಕೊಂಡಿದ್ದಾರೆ.

ಹಣ ಆಧಾರಿತ ಆನ್‌ಲೈನ್ ಆಟಗಳು ಕೆಲವು ವರ್ಷಗಳಿಂದೀಚೆಗೆ ತ್ವರಿತವಾಗಿ ಬೆಳವಣಿಗೆ ಕಾಣುತ್ತಿದ್ದವು. ಸರ್ಕಾರ ಅವುಗಳ ಮೇಲೆ ಶೇ 28ರಷ್ಟು ಜಿಎಸ್‌ಟಿ ವಿಧಿಸುತ್ತಿದ್ದರೂ ಈ ಕಂಪನಿಗಳು ಭಾರಿ ಪ್ರಮಾಣದಲ್ಲಿ ಆದಾಯ ಗಳಿಸುತ್ತಿದ್ದವು. ಆನ್‌ಲೈನ್ ಆಟದ ಮಾರುಕಟ್ಟೆಯ ಒಟ್ಟು ಮೌಲ್ಯದಲ್ಲಿ ಆರ್‌ಎಂಜಿಗಳ ಪಾಲು ಶೇ 86ರಷ್ಟಿದೆ.

ಹೊಸ ಕಾನೂನು ಆರ್‌ಎಂಜಿ ಕಂಪನಿಗಳಿಗೆ ತೀವ್ರ ಹೊಡೆತ ನೀಡಿದೆ. ಭಾರತ ಕ್ರಿಕೆಟ್ ತಂಡದ ಪ್ರಾಯೋಜಕರಾಗಿದ್ದ ಡ್ರೀಮ್ 11 ಮತ್ತು ಐಪಿಎಲ್ ಪಾಲುದಾರರಾದ ಮೈ11ಸರ್ಕಲ್ ಎರಡೂ ತಮ್ಮ ಆನ್‌ಲೈನ್ ಗೇಮಿಂಗ್ ಚಟುವಟಿಕೆಗಳನ್ನು ಸ್ಥಗಿತಗೊಳಿಸಿವೆ.

ಹಣ ಆಧಾರಿತ ಆನ್‌ಲೈನ್ ಆಟಗಳನ್ನು ಜೂಜು ಎಂದು ಪರಿಗಣಿಸಲಾಗದು, ಅವು ಕೌಶಲದ ಅಡಿಯಲ್ಲಿ ಬರುತ್ತವೆ ಎಂದು ಈ ಹಿಂದೆ ಹಲವು ರಾಜ್ಯಗಳ ಹೈಕೋರ್ಟ್‌ಗಳು ತೀರ್ಪು ನೀಡಿವೆ. ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ರಾಜ್ಯ ಮಟ್ಟದ ನಿಷೇಧವನ್ನೂ ನ್ಯಾಯಾಲಯಗಳು ರದ್ದುಪಡಿಸಿದ್ದವು. ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ನೀಡಿದ್ದ ಇಂಥದ್ದೇ ತೀರ್ಪನ್ನು ಸುಪ್ರೀಂ ಕೋರ್ಟ್ 2022ರಲ್ಲಿ ಎತ್ತಿಹಿಡಿದಿತ್ತು.

- **₹32,000** ಕೋಟಿ — 2024ರಲ್ಲಿ ಭಾರತದ ಆನ್‌ಲೈನ್ ಗೇಮಿಂಗ್ ಮಾರುಕಟ್ಟೆಯ ಮೌಲ್ಯ
- **85.7%** — ಆನ್‌ಲೈನ್ ಗೇಮಿಂಗ್ ಮಾರುಕಟ್ಟೆಗೆ ಹಣ ಕಟ್ಟುವ ಆಟಗಳ (ಆರ್‌ಎಂಜಿ) ಕೊಡುಗೆ
- **₹27,000** ಕೋಟಿ — ಆನ್‌ಲೈನ್ ಗೇಮಿಂಗ್ ಮಾರುಕಟ್ಟೆಯಲ್ಲಿ ಆರ್‌ಎಂಜಿಯ ಪಾಲು
- **400** — ಕಾಯ್ದೆ ಜಾರಿಗೂ ಮುನ್ನ ದೇಶದಲ್ಲಿದ್ದ ಆರ್‌ಎಂಜಿ ನವೋದ್ಯಮಗಳ ಅಂದಾಜು ಸಂಖ್ಯೆ
- **2** ಲಕ್ಷ — ಆರ್‌ಎಂಜಿ ನವೋದ್ಯಮಗಳು ಸೃಷ್ಟಿಸಿದ್ದ ಉದ್ಯೋಗಗಳು
- **59** ಕೋಟಿ — ಭಾರತದಲ್ಲಿ ಆನ್‌ಲೈನ್ ಆಟಗಳನ್ನು ಆಡುವವರ ಸಂಖ್ಯೆ
- **45** ಕೋಟಿ — ಹಣ ಆಧಾರಿತ ಆನ್‌ಲೈನ್ ಆಟದಿಂದಾಗಿ ಆರ್ಥಿಕ ಸಂಕಷ್ಟಕ್ಕೆ ಗುರಿಯಾದವರು
- **₹20** ಸಾವಿರ ಕೋಟಿ — ಆರ್‌ಎಂಜಿಯಲ್ಲಿ ಪ್ರತಿ ವರ್ಷ ಜನರು ಕಳೆದುಕೊಳ್ಳುತ್ತಿರುವ ಮೊತ್ತ

ಕೆಲವು ಆಟಗಳಿಗೆ ಉತ್ತೇಜನ

ಹೊಸ ಕಾಯ್ದೆಯು ಹಣ ಕಟ್ಟುವ ಆನ್‌ಲೈನ್ ಆಟಗಳ ನಿಯಂತ್ರಣ ಮಾತ್ರ ಅಲ್ಲ, ಬದಲಿಗೆ ಕೌಶಲವನ್ನು ಬೇಡುವ ಮತ್ತು ಮನರಂಜನೆ ನೀಡುವ ಆನ್‌ಲೈನ್ ಆಟಗಳಿಗೆ ಉತ್ತೇಜನ ನೀಡುವ ಉದ್ದೇಶವನ್ನೂ ಹೊಂದಿದೆ.

ಕಾಯ್ದೆಯು ಮೂರು ರೀತಿಯ ಆನ್‌ಲೈನ್ ಆಟಗಳನ್ನು ಪಟ್ಟಿಮಾಡಿ, ಅವುಗಳನ್ನು ವ್ಯಾಖ್ಯಾನಿಸಿದೆ.

1 **ಇ-ಕ್ರೀಡೆ:** ಇದು ಸ್ಪರ್ಧಾತ್ಮಕವಾದ ಡಿಜಿಟಲ್ ಕ್ರೀಡೆ. ಅತ್ಯಂತ ವ್ಯವಸ್ಥಿತವಾಗಿ ಆಯೋಜಿಸಿರುವ ಡಿಜಿಟಲ್ ಟೂರ್ನಿಗಳಲ್ಲಿ ತಂಡಗಳು ಅಥವಾ ಕ್ರೀಡಾಪಟುಗಳು ಭಾಗವಹಿಸಬಹುದು. ಡಿಜಿಟಲ್ ಕ್ರೀಡೆಗಳು ಇತ್ತೀಚೆಗೆ ರೂಪಿಸಲಾಗಿರುವ ರಾಷ್ಟ್ರೀಯ ಕ್ರೀಡಾ ಆಡಳಿತ ಕಾಯ್ದೆಯ ವ್ಯಾಪ್ತಿಗೆ ಬರುತ್ತವೆ. ಇ-ಕ್ರೀಡೆಯಲ್ಲಿ ಯಶಸ್ಸು ಪಡೆಯಲು ಕ್ರೀಡಾಳುಗಳು ಕಾರ್ಯತಂತ್ರ ರೂಪಿಸಬೇಕು, ಪರಸ್ಪರ ಸಮನ್ವಯ ಮತ್ತು ಕ್ಷಿಪ್ರ ನಿರ್ಧಾರದ ಕೌಶಲ ಹೊಂದಿರಬೇಕು. ಈ ಸ್ಪರ್ಧೆಗಳಲ್ಲಿ ಭಾಗವಹಿಸಲು ತಂಡಗಳು ಅಥವಾ ಕ್ರೀಡಾಳುಗಳು ಪ್ರವೇಶ ಶುಲ್ಕವನ್ನು ಪಾವತಿಸಬೇಕಾಗಬಹುದು. ಆದರೆ, ಬಾಜಿ ಕಟ್ಟುವುದಕ್ಕೆ ಇದರಲ್ಲಿ ಅವಕಾಶವಿಲ್ಲ

2 **ಆನ್‌ಲೈನ್ ಸಾಮಾಜಿಕ ಆಟಗಳು:** ಇವು ಆನ್‌ಲೈನ್‌ನಲ್ಲಿ ಮನರಂಜನೆ, ಕಲಿಕೆ, ಕೌಶಲ ಅಭಿವೃದ್ಧಿ ಉದ್ದೇಶದಿಂದ ಆಡುವ ಆಟಗಳು. ಹಣದ ರೂಪದಲ್ಲಿ ಲಾಭ ಪಡೆಯುವ ಉದ್ದೇಶದ ಆಟಗಳು ಇವಲ್ಲ. ಆಟದಲ್ಲಿ ಭಾಗವಹಿಸುವುದಕ್ಕಾಗಿ ಒಂದು ಬಾರಿ ಪ್ರವೇಶ ಶುಲ್ಕ ಇರಬಹುದು. ಇ-ಕ್ರೀಡೆಗಿಂತ ಇದು ಭಿನ್ನವಾಗಿರುತ್ತದೆ

3 **ಹಣ ಆಧಾರಿತ ಆನ್‌ಲೈನ್ ಆಟ/ಜೂಜು:** ಇದು ಕೌಶಲ ಆಧಾರಿತ ಅಥವಾ ಅದೃಷ್ಟ ಆಧಾರಿತ ಅಥವಾ ಈ ಎರಡನ್ನೂ ಒಳಗೊಂಡಿರುವ ಆಟ. ಜೂಜು ಎಂದೇ ಕರೆಯಬಹುದು. ಈ ಆಟವನ್ನು ಆಡುವುದಕ್ಕೆ ಶುಲ್ಕ ಪಾವತಿಸಬೇಕು, ಹಣವನ್ನು ಠೇವಣಿ ಇರಿಸಬೇಕು. ಕಟ್ಟಿದ ಹಣಕ್ಕೆ ಪ್ರತಿಯಾಗಿ ಹೆಚ್ಚು ಹಣ ಅಥವಾ ಬೆಲೆಬಾಳುವ ವಸ್ತುಗಳನ್ನು ಗೆಲ್ಲುವ ನಿರೀಕ್ಷೆಯಲ್ಲಿ ಆಡಲಾಗುತ್ತದೆ

ಕಾಯ್ದೆಯ ಪ್ರಮುಖ ಅಂಶಗಳು

- ಕಾಯ್ದೆಯು ಇಡೀ ಭಾರತದ ವ್ಯಾಪ್ತಿ ಹೊಂದಿರುತ್ತದೆ. ದೇಶದ ಒಳಗೆ ಹಣ ಆಧಾರಿತ ಆನ್‌ಲೈನ್ ಆಟಗಳ ಸೇವೆ ಒದಗಿಸುತ್ತಿರುವ ಅಥವಾ ವಿದೇಶಗಳಿಂದ ಕಾರ್ಯಾಚರಿಸುತ್ತಿರುವ ಕಂಪನಿಗಳಿಗೂ ಇದು ಅನ್ವಯಿಸುತ್ತದೆ
- ಹಣ ಆಧಾರಿತ ಆನ್‌ಲೈನ್ ಆಟಗಳನ್ನು ಕಾಯ್ದೆಯು ಸಂಪೂರ್ಣವಾಗಿ ನಿಷೇಧಿಸುತ್ತದೆ. ಅವಕಾಶದ ಆಟಗಳು, ಕೌಶಲದ ಆಟಗಳು ಮತ್ತು ಇವರೆಡರ ಮಿಶ್ರಣವಾಗಿರುವ ಆಟಗಳಿಗೂ ನಿಷೇಧ ಅನ್ವಯವಾಗುತ್ತದೆ
- ಜಾಹೀರಾತುಗಳ ಮೂಲಕ ಅವುಗಳ ಉತ್ತೇಜನ, ಪ್ರಚಾರ ಮಾಡುವುದಕ್ಕೆ ನಿರ್ಬಂಧ
- ಮಾಹಿತಿ ತಂತ್ರಜ್ಞಾನ ಕಾಯ್ದೆ 2000 ಅನುಸಾರ ಕಾನೂನುಬಾಹಿರ ಆನ್‌ಲೈನ್ ಜೂಜಿನ ವೇದಿಕೆಗಳನ್ನು ಅಧಿಕಾರಿಗಳು ನಿರ್ಬಂಧಿಸಬಹುದು
- ತಪ್ಪುಗಳಿಗೆ ಕಂಪನಿಗಳು ಮತ್ತು ಅವುಗಳ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿಸಲಾಗುತ್ತದೆ. ಆದಾಗ್ಯೂ, ಸ್ವತಂತ್ರ ನಿರ್ದೇಶಕರು ಮತ್ತು ದೈನಂದಿನ ನಿರ್ಧಾರಗಳಲ್ಲಿ ಪಾತ್ರ ವಹಿಸದ ಕಾರ್ಯನಿರ್ವಾಹಕೇತರ ನಿರ್ದೇಶಕರು, ತಮ್ಮ ಪಾತ್ರದ ಬಗ್ಗೆ ಸೂಕ್ತ ದಾಖಲೆ ತೋರಿಸಿದರೆ, ಅವರಿಗೆ ಶಿಕ್ಷೆ ವಿಧಿಸಲಾಗುವುದಿಲ್ಲ

ಏನೇನು ಶಿಕ್ಷೆ?

ಆನ್‌ಲೈನ್ ಜೂಜಾಡುವವರು ಮಾತ್ರವಲ್ಲ, ಆ ಆಟಗಳನ್ನು ರೂಪಿಸುವ ಕಂಪನಿಗಳು, ಅವುಗಳ ಜಾಹೀರಾತು ಪ್ರಕಟಿಸಿ ಅವುಗಳಿಗೆ ಪ್ರೋತ್ಸಾಹ ನೀಡುವ ಮಾಧ್ಯಮಗಳು, ಜಾಹೀರಾತುಗಳಲ್ಲಿ ಅಭಿನಯಿಸಿ ಪ್ರೋತ್ಸಾಹ ನೀಡುವ ಸೆಲಬ್ರೆಟಿಗಳು, ಹಣಕಾಸು ನೆರವು ನೀಡುವ ಬ್ಯಾಂಕುಗಳು, ಪಾವತಿ ಸೇವೆ ಒದಗಿಸುವ ಸಂಸ್ಥೆಗಳು, ಆನ್‌ಲೈನ್ ಜೂಜಾಟಕ್ಕಾಗಿ ಇಂಟರ್‌ನೆಟ್ ಸೇವೆ ಒದಗಿಸುವ ಸಂಸ್ಥೆಗಳು... ಹೀಗೆ ಆನ್‌ಲೈನ್ ಬೆಟ್ಟಿಂಗ್‌ಗೆ ಬೆಂಬಲ ನೀಡುವ ಎಲ್ಲರ ವಿರುದ್ಧವೂ ಕಾನೂನು ಕ್ರಮ ಕೈಗೊಳ್ಳುವ ಅವಕಾಶ ಹೊಸ ಕಾಯ್ದೆಯಲ್ಲಿದೆ.

- ಹಣ ಆಧಾರಿತ ಆನ್‌ಲೈನ್ ಆಟಗಳನ್ನು ನಡೆಸುವುದು ಅಥವಾ ಅದಕ್ಕೆ ಸಂಬಂಧಿಸಿದಂತೆ ಹಣಕಾಸು ವ್ಯವಹಾರಗಳನ್ನು ನಡೆಸುವುದು ವಿಚಾರಣೆಗೆ ಅರ್ಹವಾದ ಮತ್ತು ಜಾಮೀನುರಹಿತ ಅಪರಾಧ. ಹೀಗಾಗಿ ಆರೋಪಿಗಳನ್ನು ಪೊಲೀಸರು ವಾರಂಟ್ ಇಲ್ಲದೆ ಬಂಧಿಸಬಹುದು ಮತ್ತು ಪೂರ್ವಾನುಮತಿ ಇಲ್ಲದೆಯೇ ಸ್ಥಳ ಶೋಧನೆ ಮಾಡಬಹುದು
- ಆನ್‌ಲೈನ್ ಜೂಜಾಟಕ್ಕೆ ಅವಕಾಶ ನೀಡುವ ವ್ಯಕ್ತಿಗೆ ಗರಿಷ್ಠ ಮೂರು ವರ್ಷಗಳವರೆಗೆ ಜೈಲು ಶಿಕ್ಷೆ ಅಥವಾ ₹1 ಕೋಟಿಯವರೆಗೆ ದಂಡ ಅಥವಾ ಎರಡನ್ನೂ ವಿಧಿಸಬಹುದು. ಅಪರಾಧವನ್ನು ಪುನರಾವರ್ತಿಸಿದರೆ ಕನಿಷ್ಠ ಮೂರು ವರ್ಷಗಳಿಂದ ಐದು ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು ಕನಿಷ್ಠ ₹1 ಕೋಟಿಯಿಂದ ಗರಿಷ್ಠ ₹2 ಕೋಟಿಯವರೆಗೂ ದಂಡ ವಿಧಿಸಬಹುದು
- ಯಾವುದೇ ವ್ಯಕ್ತಿ ಜಾಹೀರಾತುಗಳನ್ನು ನಿರ್ಮಿಸಿದರೆ ಅಥವಾ ಮಾಧ್ಯಮದಲ್ಲಿ ಅವುಗಳನ್ನು ಪ್ರಸಾರ ಮಾಡಿದರೆ ಗರಿಷ್ಠ ಎರಡು ವರ್ಷ ಜೈಲು ಶಿಕ್ಷೆ ಅಥವಾ ಗರಿಷ್ಠ ₹50 ಲಕ್ಷ ದಂಡ ಅಥವಾ ಎರಡನ್ನೂ ವಿಧಿಸಬಹುದು
- ಬ್ಯಾಂಕುಗಳು, ಹಣಪಾವತಿ ಸೇವಾ ಸಂಸ್ಥೆಗಳು ಅಥವಾ ಇತರ ಹಣಕಾಸು ಸಂಸ್ಥೆಗಳು ನಿಷೇಧಿತ ಆಟಗಳಿಗೆ ಸಂಬಂಧಿಸಿದ ಹಣಕಾಸು ವ್ಯವಹಾರಕ್ಕೆ ಅವಕಾಶ ಅಥವಾ ಅದನ್ನು ದೃಢೀಕರಿಸುವಂತಿಲ್ಲ



ರಾಷ್ಟ್ರೀಯ



ಮುಂಬೈನ ವಿರಾರ್‌ನಲ್ಲಿ ಕುಸಿದ ಕಟ್ಟಡದಲ್ಲಿ ಸಿಲುಕಿದ್ದ ಜನರ ರಕ್ಷಣೆಗಾಗಿ ಎನ್‌ಡಿಆರ್‌ಎಫ್ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು –ಪಿಟಿಐ ಚಿತ್ರ

ಕಟ್ಟಡ ಕುಸಿದು 17 ಸಾವು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ₹5 ಲಕ್ಷ ಪರಿಹಾರ ಘೋಷಿಸಿದ ಮುಖ್ಯಮಂತ್ರಿ
- ಎನ್‌ಡಿಆರ್‌ಎಫ್, ಪೊಲೀಸರಿಂದ ರಕ್ಷಣಾ ಕಾರ್ಯ
- ಸುರಕ್ಷಿತ ಪ್ರದೇಶಗಳಿಗೆ ನಿವಾಸಿಗಳ ಸ್ಥಳಾಂತರ

ಪಾಲ್ಘರ್: ಮುಂಬೈ ಸಮೀಪದ ವಿರಾರ್‌ನ ನಾರಂಗಿ ರಸ್ತೆಯಲ್ಲಿ ಸಂಭವಿಸಿದ ಕಟ್ಟಡ ದುರಂತದಲ್ಲಿ ಸಾವಿಗೀಡಾದವರ ಸಂಖ್ಯೆ 17ಕ್ಕೆ ಏರಿದೆ.

ವಸಯಿ ತಾಲ್ಲೂಕಿನ ವಿರಾರ್ ಪೂರ್ವ ಭಾಗದ ಚಾಮುಂಡಿ ನಗರ ಹಾಗೂ ವಿಜಯನಗರದ ನಡುವೆ ಇರುವ ನಾಲ್ಕು ಅಂತಸ್ತಿನ ಕಟ್ಟಡ 'ರಮಾಬಾಯಿ ಅಪಾರ್ಟ್‌ಮೆಂಟ್' ಮಂಗಳವಾರ ಮಧ್ಯರಾತ್ರಿ ಕುಸಿದಿತ್ತು. ಈ ಘಟನೆಯಲ್ಲಿ ಒಂಬತ್ತು ಮಂದಿ ಗಾಯಗೊಂಡಿದ್ದು, ಸ್ಥಳೀಯ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಈ ಪೈಕಿ ಆರು ಮಂದಿಯ ಸ್ಥಿತಿ ಗಂಭೀರವಾಗಿದೆ.

ಈ ಅಪಾರ್ಟ್‌ಮೆಂಟ್‌ನಲ್ಲಿ 50 ಫ್ಲ್ಯಾಟ್‌ಗಳಿದ್ದು, ಕುಸಿದ ಭಾಗದಲ್ಲಿ 12 ಫ್ಲ್ಯಾಟ್‌ಗಳಿದ್ದವು. ಇವುಗಳಲ್ಲಿ 50–60 ಮಂದಿ ವಾಸವಾಗಿದ್ದರು. ಈ ಕಟ್ಟಡವನ್ನು 2012ರಲ್ಲಿ ನಿರ್ಮಿಸಲಾಗಿತ್ತು.

ಕಟ್ಟಡ ನಿರ್ಮಿಸಿದ್ದ ಸಾಯಿದತ್ತ ಬಿಲ್ಡರ್ಸ್ ಮತ್ತು ಡೆವಲಪರ್ಸ್ ಮಾಲೀಕ ನಿಟ್ಟಲ್ ಗೋಪಿನಾಥ್ ಸಾನೆ ಅವರನ್ನು ವಿರಾರ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವಸಯಿ–ವಿರಾರ್ ಪೊಲೀಸರು, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ, ನಗರಸಭೆ ಸಿಬ್ಬಂದಿ ರಕ್ಷಣಾ ಕಾರ್ಯ ಕೈಗೊಂಡು ಅವಶೇಷಗಳ ಅಡಿ ಸಿಲುಕಿದವರನ್ನು ರಕ್ಷಿಸಿದರು.

ಮುನ್ನೆಚ್ಚರಿಕೆ ಕ್ರಮವಾಗಿ ಕಟ್ಟಡದ ಸುತ್ತಲಿನ ಮನೆಗಳನ್ನು ತೆರವುಗೊಳಿಸಲಾಗಿದ್ದು, ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲಾಗಿದೆ. ಅನೇಕರು ನಿರಾಶ್ರಿತರಾಗಿದ್ದು, ಚಂದನಸರ್ ಸಮಾಜ ಮಂದಿರಕ್ಕೆ ಸ್ಥಳಾಂತರಿಸಲಾಗಿದೆ. ಅವರಿಗೆ ಆಹಾರ, ನೀರು, ವೈದ್ಯಕೀಯ ನೆರವು ಒದಗಿಸಲಾಗಿದೆ.

ಘಟನೆಯಲ್ಲಿ ಮೃತಪಟ್ಟವರ ಕುಟುಂಬಸ್ಥರಿಗೆ ₹5 ಲಕ್ಷ ಪರಿಹಾರವನ್ನು ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಘೋಷಿಸಿದ್ದಾರೆ.

'ಕಾಂಗ್ರೆಸ್ ನಾಯಕರ ಬಂಧನ ಏಕಿಲ್ಲ'



ಕೇಜ್ರಿವಾಲ್

ನವದೆಹಲಿ (ಪಿಟಿಐ): ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಕಾಂಗ್ರೆಸ್‌ನ ಯಾವುದೇ 'ದೊಡ್ಡ ನಾಯಕ'ರನ್ನು ಏಕೆ ಬಂಧಿಸಿಲ್ಲ ಎಂದು ಪ್ರಶ್ನಿಸಿರುವ ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್, ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ 'ಒಳ ಒಪ್ಪಂದ' ಆಗಿದೆ ಎಂದು ಆರೋಪಿಸಿದ್ದಾರೆ.

ಗುರುವಾರ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಕ್ಷದ ಶಾಸಕರು ಮತ್ತು ಮುಖಂಡರನ್ನುದ್ದೇಶಿಸಿ ಮಾತನಾಡಿದ ಅವರು, 'ಕೆಲವೊಂದು ವಿಚಾರಗಳಲ್ಲಿ ರಾಜಿ ಮಾಡಿಕೊಳ್ಳಿ ಎಂಬ ಆಫರ್ ನಿರಂತರವಾಗಿ ನಮಗೆ ಬರುತ್ತಿದೆ. ಕಾಂಗ್ರೆಸ್ ಪಕ್ಷವು ಈಗ ಬಿಜೆಪಿಯೊಂದಿಗೆ ರಾಜಿ ಮಾಡಿಕೊಂಡಿರುವುದನ್ನು ಜನರು ನೋಡುತ್ತಿದ್ದಾರೆ. ನ್ಯಾಷನಲ್ ಹೆರಾಲ್ಡ್ ಪ್ರಕರಣವು ಈಗ ಬಹಳ ಸ್ಪಷ್ಟವಾಗಿದೆ . ಆದರೆ, ಕಾಂಗ್ರೆಸ್‌ನ ಯಾವುದೇ ದೊಡ್ಡ ನಾಯಕ ಜೈಲಿಗೆ ಹೋಗಿಲ್ಲ. ನಮ್ಮ ಐವರು ಪ್ರಮುಖ ನಾಯಕರನ್ನು ನಕಲಿ ಪ್ರಕರಣದಲ್ಲಿ ಸಿಲುಕಿಸಿ ಜೈಲಿಗೆ ಕಳುಹಿಸಲಾಗಿದೆ' ಎಂದು ವಾಗ್ದಾಳಿ ನಡೆಸಿದರು.

ನಮ್ಮಿಷ್ಟದಂತೆ ಬದುಕುವಾಗ...



ನುಡಿ ಬೆಳಗು

ದಯಾ ಗಂಗನಘಟ್ಟ

ರಂಗಸ್ವಾಮಿ ನಲವತ್ತು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದವನು. ತನ್ನ ಬಡ ಕುಟುಂಬದ ಬವಣೆಗಳನ್ನು ಧಿಕ್ಕರಿಸಿ, ಮನೆಯವರ ಅಂಕೆ ಆಜ್ಞೆಗಳಿಗೆ ಬೆನ್ನುಹಾಕಿ ತನ್ನಿಷ್ಟದಂತೆ ಬದುಕುತ್ತೇನೆಂದು ನಿರ್ಧರಿಸಿ ಊರು ಬಿಟ್ಟು ಬಂದವನು. ಇಷ್ಟು ವರ್ಷ ಒಂಟಿಯಾಗಿ ಯಾರ ಹಂಗಿಲ್ಲದೇ ಸುಂದರ ಬದುಕನ್ನು ಕಟ್ಟಿಕೊಂಡು ನೆಮ್ಮದಿಯಿಂದ ಜೀವನವನ್ನು ಆನಂದಿಸುತ್ತಾ ಬದುಕಿದ. ಆದರೆ, ಈಗ ವಯಸ್ಸು ಅರವತ್ತಾದ ಮೇಲೆ ಹೆಸರು ಹೇಳಲಾಗದ ಕಾಯಿಲೆಗಳು ಬಂದು ಅವುಗಳ ನಿವಾರಣೆ ಕಷ್ಟ ಅನಿಸಿ, ಜೊತೆಯಲ್ಲಿ ನನ್ನವರು ಅಂತ ಯಾರಾದರೂ ಇರಬೇಕಿತ್ತು ಎಂಬ ಕೊರಗನ್ನೇ ಹೆಚ್ಚುಮಾಡಿಕೊಂಡು ಖಿನ್ನತೆಗೆ ಜಾರಿದ್ದಾನೆ.

ಇನ್ನೊಂದೆಡೆ ಅವಿಭಕ್ತ ಕುಟುಂಬವೊಂದರಲ್ಲಿ ಮನೆ, ಮಕ್ಕಳು, ನೆಂಟರು, ಸ್ನೇಹಿತರು ಎಲ್ಲರೂ ತನಗೆ ಬೇಕೇ ಬೇಕು. ಅವರೊಂದಿಗಿನ ಬದುಕೇ ತನ್ನ ಬದುಕು ಎಂದುಕೊಂಡು ತನ್ನ ಅರವತ್ತನೇ ವಯಸ್ಸಿನವರೆಗೆ ತನ್ನದು ಅಂತ ಒಂದೇ ಒಂದು ಇಷ್ಟವನ್ನೂ ವ್ಯಕ್ತಪಡಿಸದೆ, ಈಡೇರಿಸಿಕೊಳ್ಳುವ ಯೋಚನೆಯನ್ನೂ ಮಾಡದೇ ಗಾಣದ ಎತ್ತಿನಂತೆ ದುಡಿದ ಗೀತಾ ಈಗ ಮಕ್ಕಳು ಮರಿಗಳೆಲ್ಲಾ ಅವರವರ ಬದುಕಿನ ಬಂಡಿಯೇರಿ ದೂರ ದೂರವಾದ ಮೇಲೆ ವರ್ಷಕ್ಕೊಮ್ಮೆ ಹಬ್ಬಕ್ಕಾದರೂ ಬಂದಾರೇನೋ ಎಂದು ಆಸೆಗಣ್ಣು ಬಿಟ್ಟುಕೊಂಡು ನಗರದಿಂದ ದೂರವಾದ ಹಳ್ಳಿಯೊಂದರ ಒಂಟಿಮನೆಯಲ್ಲಿ ತಾನೂ ಒಂಟಿಯಾಗಿ ಕಾಯುತ್ತಾ ಕುಳಿತಿದ್ದಾಳೆ.

ಈ ಎರಡೂ ವೈರುಧ್ಯಗಳಿಗೆ ಉತ್ತರ ಏನು? ಬದುಕಿನಲ್ಲಿ ಯಾವ ಆಯ್ಕೆ ಸರಿ, ಯಾವುದು ತಪ್ಪು, ಹೀಗೇ ಎಂದು ರೂಪಿಸಿಕೊಳ್ಳುವುದು ಹೇಗೆ ಎಂಬ ಪ್ರಶ್ನೆ ಏಳುತ್ತದೆ.

ಮಾನವ, ಕುಟುಂಬ ವ್ಯವಸ್ಥೆ ರಚಿಸಿಕೊಂಡ ಲಕ್ಷಾಂತರ ವರ್ಷಗಳ ನಂತರ ಕೂಡ ತುಂಬ ಮುಂದುವರಿದ ನಾಗರಿಕ ಸಮಾಜದಲ್ಲಿ ಬದುಕುತ್ತಿದ್ದೇವೆ ಎಂದು ತಿಳಿದುಕೊಂಡಿರುವ ಈ ಕಾಲಘಟ್ಟದಲ್ಲೂ ಇನ್ನೂ ಬದುಕಿನ ಬಗ್ಗೆ ಇದಮಿತ್ಥಂ ಎಂಬ ಸೂತ್ರಗಳನ್ನು ತರಲಾಗಿಲ್ಲ. ಕಾರಣ ಬದುಕು ಎಷ್ಟು ವೈಯಕ್ತಿಕವೋ ಅಷ್ಟೇ ಬದುಕು ಎಂದ ತಕ್ಷಣ ನಾನು, ನನ್ನವರು ಹಾಗೂ ಇತರರು ಎಂಬ ಪಾತ್ರಗಳು ಬರುತ್ತವೆ. ಇದರಲ್ಲಿ ನಾನು ಎಂಬ ಪಾತ್ರ ಬಹುಮುಖ್ಯವಾದದ್ದು. ಬಹಳ ಒತ್ತಡದ ಇಂದಿನ ಕಾಲದಲ್ಲಿ ನಾವು ಹಿಂದಿನವರ ಬದುಕಿನ ಬಗ್ಗೆ ಹಳಹಳಿಯುತ್ತಾ, ಹೊಸದರ ಬಗ್ಗೆ ಗೊಂದಲವನ್ನೂ ತೋರುತ್ತಾ ನಡುವಿನಲ್ಲಿ ಗೊಂದಲದ ಬದುಕಿಗೆ ಒಡ್ಡಿಕೊಂಡಿದ್ದೇವೆ. ಸಂಬಂಧ- ಬಾಂಧವ್ಯದ- ನೈತಿಕತೆಯ ಬೇಲಿಯನ್ನು ದಾಟಲೂ ಆಗದೆ, ಒಳಗೆ ಬದುಕಲೂ ಆಗದೆ ಒದ್ದಾಡುತ್ತಿದ್ದೇವೆ. ಪ್ರತಿ ವ್ಯಕ್ತಿಯೂ ನೈತಿಕತೆಯ ಮುಸುಕಿನ ಒಳಗೆ ತನ್ನ ಆಸೆಗಳನ್ನು ತೀರಿಸಿಕೊಳ್ಳುವುದಕ್ಕೆ ಆಗುತ್ತದಾ ಎಂದು ಯೋಚಿಸುತ್ತಾನೆ. ಮಾನಸಿಕವಾಗಿ ಸಾವಿರ ಬಾರಿ ಮೀರಿದ ಎಲ್ಲೆಯನ್ನು ದೈಹಿಕವಾಗಿ ಮೀರದೇ ಇರಲು ಒದ್ದಾಡುತ್ತಾ ತಾನು ಸಂಬಂಧಗಳ ಎಲ್ಲೆ ಮೀರಿಲ್ಲ ಅಂತ ತನ್ನನ್ನು ತಾನೇ ನಂಬಿಸಿಕೊಂಡು ಭ್ರಮೆಯ ಬದುಕು ಬದುಕುತ್ತಾನೆ. ಹಾಗೆಂದು ಮನಸಲ್ಲೇ ಮಂಡಿಗೆ ತಿನ್ನುವುದನ್ನೂ ನಿಲ್ಲಿಸಲಾರ. ಅವನಿಗೆ ಸಂಬಂಧಗಳ ಬೇಲಿಯೂ ಬೇಕು - ಅವಕಾಶವಾದರೆ ಅದರಾಚೆಗಿನ ಸುಖಭೋಗಗಳೂ ಬೇಕು.


ಇಂಥ ಸಂದಿಗ್ಧ ಸಮಯದಲ್ಲಿ ನಮ್ಮಿಷ್ಟದಂತೆ ಬದುಕುವುದು ಅಷ್ಟು ಸುಲಭವಾ? ನಮ್ಮಿಷ್ಟ ಅಂದರೆ ಏನು? ಸ್ವಾತಂತ್ರ್ಯವಾ, ಸ್ವೇಚ್ಛೆಯಾ, ಬಂಧನವಾ, ಬಿಡುಗಡೆಯಾ ಎಂಬುದನ್ನು ಯೋಚಿಸಬೇಕಿದೆ.

ಪದಬಂಧ 6148

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಯೌವ್ವನದಲ್ಲಿ ನೋಡಿದ ಅರಣ್ಯ (2)
3.ಪಿನಾಕದ ಹತ್ತಿರವಿರುವ ಕೋಗಿಲೆ (2)
6.ಮಧುರವಾದ ಧ್ವನಿ (4)
8.ಚಕ್ರ ಇಲ್ಲಿದೆ (2)
9.ಚಡಚಣದಲ್ಲಿ ಶರಣನು ನುಡಿದ ಪದ್ಯಗಳ ಸಾಲು! (3)
10.ಅನುಜನ ಹತ್ತಿರ ಕಾಣಿಸಿದ ಆಡು (2)
11.ರೇಕಣ್ಣಪ್ರಿಯ ನಾಗಿನಾಥ ಅಂಕಿತವುಳ್ಳ ವಚನಕಾರ (7)
12.ಕಾಜಾಣವನ್ನು ಹಿಡಿದಿಟ್ಟುಕೊಂಡ ಬುದ್ಧಿವಂತ! (2)
13.ಕೊನೆಗೆ ತಿರುಗಿರುವ ಮಗನಿಗೆ ಇದು ಸಲೀಸು! (3)
14.ನೋಡುವ ಅಂಗ (2)
15.ಹಣವಿರಿಸಿರುವ ಅಗಲವಾದ ತಟ್ಟೆ (4)
16.ಅತ್ತಿತ್ತ ನೋಡುವಾಗ ಮೊಟ್ಟೆ ಕಾಣಿಸಿತಲ್ಲಾ! (2)
17.ಸಾವಿರ ಕಾಲುಳ್ಳ ಹುಳು (2)

ಮೇಲಿಂದ ಕೆಳಕ್ಕೆ
2.ಇದು ಅಸಲಿ ಅಲ್ಲ! (3)
4.ಕಣದಲ್ಲಿರುವ ಜ್ಞಾನೇಂದ್ರಿಯ! (3)
5.ಮಜದಲ್ಲಿರುವ ಚಕ್ರವರ್ತಿ (4)
7.ಫ.ಗು.ಹಳಕಟ್ಟಿಯವರನ್ನು ಹೀಗೆ ಕರೆಯಲಾಗುತ್ತದೆ (7)
10.ಎಲವೋ ಎಂದರೆ ನರಕ ಹೀಗೆಂದರೆ ಸ್ವರ್ಗ! (2)
11.ಬಡಗಣ ದಿಕ್ಕಿನಲ್ಲಿರುವ ಗುಂಪು! (2)
12.ಯಜಮಾನನ ಹುಟ್ಟುಗುಣ (4)
13.ಸುತನಲ್ಲಿರುವ ಪುಣ್ಯ! (3)
14.ಧಾನ್ಯಗಳನ್ನು ಸಂಗ್ರಹಿಸುವ ಸ್ಥಳ (3)



6147ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅತ್ತೆ 3.ಮಾನ 5.ನಿರುಪಯೋಗಿ 6.ವಿಕೋಪ 7.ಗುಮಾನಿ 8.ರಾಷ್ಟ್ರೀಕರಣ 9.ಸುಸಂಧಿ 10.ಕಮಾನು 13.ದುರಭಿಮಾನ 14.ತಲೆ 15.ಹೊಟ್ಟು

ಮೇಲಿಂದ ಕೆಳಕ್ಕೆ: 1.ಅನುಭವಿ 2.ಆಪತ್ತು 4.ನಲಮೀನಿ 5.ನಿರಪರಾಧಿ 7.ಗುಣಕಥನ 9.ಸುಭಾಷಿತ 11.ನುಡಿಗಟ್ಟು 12.ಸಭಿಕ

ಸುಡೊಕು 6532

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6		4	9		7			8
					6		2	
	7	8	2			4		6
7					8		6	
	8		4			7	3	5
		5		7			4	
4	9		3	8		6		1
	6					5		
8		7			4			3

6531 ಸುಡೊಕು

9	1	7	3	5	8	6	2	4
8	4	6	9	2	7	5	1	3
2	5	3	4	1	6	9	7	8
5	3	8	1	6	2	7	4	9
4	2	9	7	3	5	1	8	6
6	7	1	8	4	9	2	3	5
3	8	5	6	7	1	4	9	2
7	9	2	5	8	4	3	6	1
1	6	4	2	9	3	8	5	7

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

29 ಆಗಸ್ಟ್ 2025 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ಷಷ್ಠಿ ಗಂ. 20-22 **ನಕ್ಷತ್ರ:** ಸ್ವಾತಿ ಗಂ. 11-39 **ಯೋಗ:** ಬ್ರಹ್ಮ ಗಂ. 14-13 **ಕರಣ:** ಕೌಲವ ಗಂ. 7-09 ಸಿಂಹ ಮಾಸದ 12 ನೇ ದಿನ. **ಮಳೆ ನಕ್ಷತ್ರ :** ಮಘಾ 4 ನೇ ಪಾದ. **ರಾಹುಕಾಲ :** ಬೆಳಿಗ್ಗೆ 10-30 12-00, **ಸೂರ್ಯೋದಯ :** 06-23 **ಸೂರ್ಯಾಸ್ತ :** 06-40, **ಮುಸ್ಲಿಂ ದಿನಾಂಕ :** 05 ರಬಿಉಲ್ಲಾವಲ್ , **ದಿನ ವಿಶೇಷ :** ಸೂರ್ಯ ಷಷ್ಠಿ , **ಅದೃಷ್ಟ ಸಂಖ್ಯೆ :** 2, 3, 7

ಮೇಷ: ಸ್ವಂತ ಪ್ರಯತ್ನದಿಂದ ಹಣ ಸಂಪಾದನೆಯಾಗುವುದು. ಕಷ್ಟಗಳಿಗೆ ಮಿತ್ರರಿಂದ ಸಹಾಯ ದೊರೆಯುವುದು. ವಿದೇಶಿ ಬಂಡವಾಳ ಹೂಡಿಕೆಗಿಂತ ಸ್ವದೇಶಿ ಕಂಪನಿಗಳ ಹೂಡಿಕೆಯ ಯೋಜನೆಗಳು ಶುಭ.

ವೃಷಭ: ಪ್ರಾಪ್ತ ವಯಸ್ಕರಿಗೆ ವಿವಾಹ ನಿಶ್ಚಯವಾಗುವುದು. ಹವಾಮಾನಕ್ಕೆ ಹೊಂದಿಕೊಳ್ಳಲಾಗದೆ ಅನಾರೋಗ್ಯದಿಂದ ಬಳಲುವಂತಾಗುವುದು. ಧಾರ್ಮಿಕ ವಿಚಾರದಲ್ಲಿ ಆಸಕ್ತಿ ತೋರಿದಷ್ಟೂ ಸುಖ-ಶಾಂತಿ ಹೆಚ್ಚುವುದು.

ಮಿಥುನ: ವಸ್ತುಗಳ ಮೇಲೆ ಚೋರ ಕೃತ್ಯಗಳು ನಡೆಯುವ ಸಂಭವವಿದೆ, ಜಾಗ್ರತೆ ಇರಲಿ. ವ್ಯಾಪಾರದಲ್ಲಿ ಉಂಟಾಗುವ ಪೈಪೋಟಿಯನ್ನು ನಿರ್ಲಕ್ಷಿಸುವುದು ಸರಿಯಲ್ಲ, ಸಮರ್ಥವಾಗಿ ಎದುರಿಸುವ ಶಕ್ತಿಯನ್ನು ತಂದುಕೊಳ್ಳಿರಿ.

ಕರ್ಕಾಟಕ: ಅತೀವ ಪ್ರಯತ್ನದ ಫಲವಾಗಿ ಹೊರದೇಶದಲ್ಲಿ ಉದ್ಯೋಗ ದೊರಕಿಸಿಕೊಳ್ಳುವಿರಿ. ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಹೆಚ್ಚಿನ ಕೆಲಸವಿದ್ದು ಕೆಲಸಗಾರರಲ್ಲಿ ಹುರುಪು ಮೂಡಿಸುವಲ್ಲಿ ಯಶಸ್ವಿಯಾಗುವಿರಿ.

ಸಿಂಹ: ರಿಯಲ್ ಎಸ್ಟೇಟ್ ವ್ಯವಹಾರ ಮಾಡುವವರಿಗೆ ಕಾರ್ಯಸಾಧನೆಯು ಅನುಕೂಲ ರೀತಿಯಲ್ಲಿ ಆಗಲಿದ್ದು, ವರಮಾನ ಹೆಚ್ಚಲಿದೆ. ಬಹಳ ದಿನಗಳ ನಂತರ ಅದ್ಭುತ ನಿರ್ಣಯವನ್ನು ಕೈಗೊಳ್ಳಲಿದ್ದೀರಿ.

ಕನ್ಯಾ: ಆದರ್ಶ ವ್ಯಕ್ತಿಗಳ ತತ್ವವನ್ನು ಅನುಸರಿಸುವ ಜತೆಗೆ ಹಿರಿಯರ ಉತ್ತಮ ಅನುಭವ, ಸಲಹೆಯನ್ನು ಅಳವಡಿಸಿಕೊಂಡಲ್ಲಿ ಯೋಚಿಸಿದ ಕಾರ್ಯಗಳು ನೆರವೇರುವುದು. ಷೇರು ವ್ಯವಹಾರದಲ್ಲಿ ಹೆಚ್ಚಿನ ಗಳಿಕೆ ಕಷ್ಟವಾಗುವುದು.

ತುಲಾ: ಕೆಲವೊಂದು ಅನಿರೀಕ್ಷಿತ ಘಟನೆಗಳಿಂದ ವ್ಯವಹಾರವು ಉತ್ತಮಗೊಳ್ಳುವುದು. ಕೃಷಿಕರಿಗೆ ಧಾನ್ಯ ಮಾರಾಟಕ್ಕೆ ಒಳ್ಳೆಯ ದಿನ. ಪ್ರಭಾವಿ ವ್ಯಕ್ತಿಗಳನ್ನು ಸಂದರ್ಶಿಸಲು ಅವಕಾಶ ಸಿಗುವುದು.

ವೃಶ್ಚಿಕ: ತಂದೆ ತಾಯಿ ಪ್ರೇಮ ಪೂರಿತ ಆರೈಕೆಯ ನಂತರವೂ ಮಗುವಿನ ಅಸಮಾಧಾನವನ್ನು ಕಂಡು ದುಃಖಿಸುವಂತಾಗುವುದು. ನಟರಿಗೆ ಹಲವು ಪಾಠಗಳನ್ನು ಕಲಿಯಲು ಅವಕಾಶವಿದೆ.


ಧನು: ವಿದೇಶಿ ಸಂಸ್ಥೆಯೊಂದಿಗೆ ವ್ಯಾವಹಾರಿಕ ಒಪ್ಪಂದ ಮಾಡಿಕೊಳ್ಳಲು ಸೂಕ್ತವಾಗಿರುವುದು. ಕೆಲವು ವಿಷಯಗಳು ಸರಿಯಾದ ಸಮಯಕ್ಕೆ ಮರೆತು ಹೋದಂತಾಗಿ ತೊಳಲಾಟಕ್ಕೆ ಒಳಗಾಗಬೇಕಾದೀತು.

ಮಕರ: ಉತ್ತಮ ಕಾರ್ಯಕ್ರಮ ನಿರ್ವಹಣೆಗೆ ಉತ್ತಮ ಪ್ರತಿಕ್ರಿಯೆಗಳು ಬರುತ್ತವೆ. ಕಾಲ ಕಳೆದಂತೆ ಪ್ರಕೃತಿ ಬದಲಾಗುವ ಹಾಗೆ ನಿಮ್ಮ ಮನಸ್ಸು ಸಹ ತಿಳಿಗೊಂಡು ಸಾಮಾನ್ಯ ಸ್ಥಿತಿಗೆ ಬರುವಿರಿ.

ಕುಂಭ: ಮನೆಯಲ್ಲಿ ಅಶಾಂತ ವಾತಾವರಣ ಬರದಂತೆ ಕಾಪಾಡಿಕೊಳ್ಳಿ. ಆರ್ಥಿಕ ಸ್ಥಿತಿಗತಿಯು ವ್ಯಸನಗಳಿಂದ ಕೆಳಗಿಳಿಯುವಂತಾಗಬಹುದು. ಹಾಲು ಉತ್ಪನ್ನ ವಸ್ತುಗಳ ಮಾರಾಟಗಾರರಿಗೆ ಲಾಭ ಆಗಲಿದೆ.

ಮೀನ: ರಾಜಕೀಯ ವಿದ್ಯಮಾನಗಳಿಂದಾಗಿ ಓಡಾಟ ಅಧಿಕಗೊಳ್ಳುವುದು. ಮನೆಯಲ್ಲಿನ ಪದ್ಧತಿಗಳನ್ನು ನಡೆಸಿಕೊಂಡು ಹೋಗಲು ಹಿರಿಯರಾಗಿದ್ದಲ್ಲಿ ಸಂಪೂರ್ಣ ಗಮನ ವಹಿಸಬೇಕು.

ಗುಂಡಣ್ಣ



ನಷ್ಟದಲ್ಲಿವೆ 14,670 ಸಹಕಾರ ಸಂಘಗಳು

28,516 ಸಂಘಗಳಿಗೆ ಲಾಭ | ಪುನಶ್ಚೇತನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಲ ವಸೂಲಾತಿ ಕೆಲಸ ಸಮರ್ಪಕವಾಗಿ ನಡೆಯದೇ 2,200 ಹಾಲು ಉತ್ಪಾದಕ ಸಂಘಗಳೂ ಸೇರಿ ರಾಜ್ಯದಲ್ಲಿ 14,670 ಸಹಕಾರ ಸಂಘಗಳು ನಷ್ಟದಲ್ಲಿವೆ.

ಸಹಕಾರ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯನ್ನು ಗುರುವಾರ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಈ ಕುರಿತು ಮಾಹಿತಿ ನೀಡಿದರು.

'28,516 ಸಹಕಾರ ಸಂಘಗಳು ಲಾಭದಲ್ಲಿವೆ. ಅವುಗಳ ಅರ್ಧದಷ್ಟು ಸಂಘಗಳು ನಷ್ಟದಲ್ಲಿವೆ. ಸಾಲ ವಸೂಲಾತಿಯಲ್ಲಿನ ಸಮಸ್ಯೆಗಳೇ ಈ ನಷ್ಟಕ್ಕೆ ಕಾರಣ. ವಸೂಲಾತಿಗೆ ಕೈಗೊಂಡ ಕ್ರಮಗಳ ಬಗ್ಗೆ ತ್ವರಿತವಾಗಿ ಪರಿಶೀಲನೆ ನಡೆಸಬೇಕು. ಹಾಲು ಉತ್ಪಾದಕ ಸಹಕಾರ ಸಂಘಗಳ ವೆಚ್ಚದ ಮೇಲೆ ನಿಗಾ ಇರಿಸಬೇಕು. ಹಾಲು ಉತ್ಪಾದನೆಯನ್ನು ಹೆಚ್ಚಿಸಲು ಸಂಘಗಳ ಕಾರ್ಯದರ್ಶಿಗಳು ಶ್ರಮಿಸಬೇಕು. ಪುನಶ್ಚೇತನಕ್ಕೆ ಕ್ರಮ ಕೈಗೊಳ್ಳಬೇಕು' ಎಂದು ಸೂಚಿಸಿದರು.

ಈ ಸಾಲಿನಲ್ಲಿ 37 ಲಕ್ಷ ರೈತರಿಗೆ ₹28 ಸಾವಿರ ಕೋಟಿ ಕೃಷಿ ಸಾಲ ವಿತರಣೆ ಗುರಿ ಹೊಂದಲಾಗಿದ್ದು, ಜುಲೈ ಅಂತ್ಯದವರೆಗೆ 8,69,284 ರೈತರಿಗೆ ₹8,362.68 ಕೋಟಿ ಸಾಲ ವಿತರಣೆ ಮಾಡಲಾಗಿದೆ. ಸಾಲ ವಿತರಣೆಯಲ್ಲಿ ಶೇ 96.07ರಷ್ಟು ಪ್ರಗತಿ ಸಾಧಿಸಲಾಗಿದೆ. 2024-25ನೇ ಸಾಲಿನಲ್ಲಿ 29,75,598 ರೈತರಿಗೆ ₹25,939.09 ಕೋಟಿ ಕೃಷಿ ಸಾಲ ವಿತರಣೆ ಮಾಡಲಾಗಿದೆ. ರೈತರಿಗೆ ಸಕಾಲದಲ್ಲಿ ಕೃಷಿ ಸಾಲ ಸಿಗುವುದನ್ನು ಖಾತ್ರಿಪಡಿಸಬೇಕು ಎಂದು ತಾಕೀತು ಮಾಡಿದರು.

ಸಹಕಾರ ಸಂಘಗಳ ನಿಬಂಧಕರ ಕಚೇರಿಯ ವ್ಯಾಪ್ತಿಯ ಸೇವೆಗಳನ್ನು ಗಣಕೀಕರಿಸುವ ಕಾರ್ಯವನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ರಾಜ್ಯದಲ್ಲಿ ಸಹಕಾರಿ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಬೇಕು. ಕಾನೂನು ಪ್ರಕಾರ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ಅಂಕಿ ಅಂಶಗಳು

₹5,600 ಕೋಟಿ — 2024–25ರಲ್ಲಿ ನಬಾರ್ಡ್ ನೀಡಿದ ಸಾಲ

₹3,236.11 ಕೋಟಿ — 2024–25ಕ್ಕೆ ನಬಾರ್ಡ್ ನಿಗದಿ ಮಾಡಿದ ಸಾಲ

42.21% — ನಬಾರ್ಡ್ ಕಡಿತ ಮಾಡಿದ ಸಾಲದ ಪ್ರಮಾಣ

ಕಸಾಪ ವಿರುದ್ಧ ಕ್ರಮಕ್ಕೆ ಸೂಚನೆ

ಹಣಕಾಸಿನ ಅವ್ಯವಹಾರ ಸೇರಿ ವಿವಿಧ ದೂರುಗಳಿಗೆ ಸಂಬಂಧಿಸಿದಂತೆ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ವಿರುದ್ಧ ಆರು ಅಧಿಕಾರಿಗಳ ತಂಡ ತನಿಖೆ ನಡೆಸುತ್ತಿರುವಾಗಲೇ ಕೆಲ ಸದಸ್ಯರ ಸದಸ್ಯತ್ವವನ್ನು ಪರಿಷತ್ ರದ್ದುಪಡಿಸುತ್ತಿರುವ ಕುರಿತು ದೂರುಗಳು ಬಂದಿದ್ದು, ಈ ಕುರಿತು ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸಿದ್ದರಾಮಯ್ಯ ಸೂಚಿಸಿದರು.
ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಶಾಖೆ ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಇಬ್ಬರು ಜಂಟಿ ನಿರ್ದೇಶಕರು, ಲೆಕ್ಕಾಧಿಕಾರಿ ಹಾಗೂ ಪತ್ರಾಂಕಿತ ವ್ಯವಸ್ಥಾಪಕರನ್ನು ಒಳಗೊಂಡ ತನಿಖಾ ಸಮಿತಿ ತನಿಖೆ ನಡೆಸುತ್ತಿದ್ದರೂ, ಸದಸ್ಯತ್ವ ರದ್ದು ಮಾಡಿರುವುದು ಸರಿಯಲ್ಲ ಎಂದರು.

ಅನಧಿಕೃತ ಗಿರವಿದಾರರ ವಿರುದ್ಧ ಕ್ರಮ

ಅನಧಿಕೃತ ಗಿರವಿ ದಾರ ಸಂಸ್ಥೆಗಳು, ಚೀಟಿ ವ್ಯವಹಾರ ಸಂಸ್ಥೆಗಳ ಮೇಲೆ ನಿಗಾ ಇರಿಸಬೇಕು ಎಂದು ಸಿದ್ದರಾಮಯ್ಯ ಹೇಳಿದರು.
ರಾಜ್ಯದಲ್ಲಿ 7,074 ಗಿರವಿದಾರ ಸಂಸ್ಥೆಗಳು ಹಾಗೂ 1,468 ಚೀಟಿ ವ್ಯವಹಾರ ಸಂಸ್ಥೆಗಳು ಕರ್ನಾಟಕ ಲೇವಾದೇವಿಗಾರರ ಕಾಯ್ದೆ ಹಾಗೂ ಚೀಟಿ ಕಾಯ್ದೆಗಳ ಅನ್ವಯ ನೋಂದಣಿಯಾಗಿವೆ. ಎಲ್ಲ ಸಂಸ್ಥೆಗಳು ಕಾನೂನು ಪ್ರಕಾರವೇ ಕಾರ್ಯನಿರ್ವಹಣೆ ಮಾಡುವಂತೆ ಅಧಿಕಾರಿಗಳು ನಿಗಾವಹಿಸಬೇಕು ಎಂದರು.

ಚಿಟಿಕೆ ಸುದ್ದಿ

ಚಂದ್ರಗ್ರಹಣ: ಸೆ.7ಕ್ಕೆ 'ಕುಕ್ಕೆ' ದೇಗುಲದಲ್ಲಿ ಸೇವೆ ವ್ಯತ್ಯಯ



ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಸೆ.7ರಂದು (ಭಾನುವಾರ) ಚಂದ್ರಗ್ರಹಣ ಇರುವುದರಿಂದ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಅಂದು ನಿತ್ಯದ ಸೇವೆ, ದರ್ಶನ, ಸೇವಾ ಸಮಯಗಳಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ದೇವಳದ ಪ್ರಕಟಣೆ ತಿಳಿಸಿದೆ.

ಅಂದು ಮಧ್ಯಾಹ್ನದ ಮಹಾಪೂಜೆ ಬೆಳಿಗ್ಗೆ 11ಕ್ಕೆ ನಡೆಯಲಿದೆ. ರಾತ್ರಿಯ ಮಹಾಪೂಜೆ ಸಂಜೆ 5ಕ್ಕೆ ನೆರವೇರಲಿದೆ. ರಾತ್ರಿ ಭೋಜನ ಪ್ರಸಾದ ಇರುವುದಿಲ್ಲ. ಸಾಯಂಕಾಲದ ಆಶ್ಲೇಷ ಬಲಿ ಸೇವೆಯೂ ಇರುವುದಿಲ್ಲ. ಶನಿವಾರ ಆರಂಭಗೊಂಡ ಸರ್ಪ ಸಂಸ್ಕಾರ ಸೇವೆ ಭಾನುವಾರ ಕೊನೆಗೊಳ್ಳುತ್ತದೆ. ಭಾನುವಾರ ಸೇವೆ ಆರಂಭವಾಗುವುದಿಲ್ಲ. ಸಂಜೆ 5ರಿಂದ ದೇವರ ದರ್ಶನ, ಸೆ.8ರಂದು ಪಂಚಾಮೃತ ಮಹಾಭಿಷೇಕ ಸೇವೆ ಇರುವುದಿಲ್ಲ.

ಸುದ್ದಿ 2 ನಿಮಿಷ

ಶಾಲೆ ಶೌಚಾಲಯದಲ್ಲಿ ಮಗುವಿಗೆ ಜನ್ಮ ನೀಡಿದ ಬಾಲಕಿ

ಶಹಾಪುರ (ಯಾದಗಿರಿ ಜಿಲ್ಲೆ): ನಗರದ ವಸತಿ ಶಾಲೆಯೊಂದರ ಶೌಚಾಲಯದಲ್ಲಿ 17 ವರ್ಷದ 9ನೇ ತರಗತಿ ವಿದ್ಯಾರ್ಥಿನಿ ಬುಧವಾರ ಗಂಡು ಮಗುವಿಗೆ ಜನ್ಮ ನೀಡಿದ್ದಾಳೆ. ಈ ಸಂಬಂಧ ಶಹಾಪುರ ಪೊಲೀಸ್ ಠಾಣೆಯಲ್ಲಿ ಐವರ ವಿರುದ್ಧ ಪೋಕ್ಸೊ ಕಾಯ್ದೆಯಡಿ ಗುರುವಾರ ಪ್ರಕರಣ ದಾಖಲಾಗಿದೆ. ಶಾಲೆಯ ನಾಲ್ವರು ನೌಕರರನ್ನು ಅಮಾನತು ಮಾಡಲಾಗಿದೆ.

ಪ್ರಕರಣ ಮುಚ್ಚಿಹಾಕಲು ಯತ್ನಿಸಿದ್ದ ಬಾಲಕಿಯ ಸಹೋದರ, ವಸತಿ ಶಾಲೆಯ ಪ್ರಾಂಶುಪಾಲರು, ವಾರ್ಡನ್, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯ ಹೊರಗುತ್ತಿಗೆಯ ಸ್ಟಾಫ್ ನರ್ಸ್ ಕಾವೇರಮ್ಮ ಹಾಗೂ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪಿ ಸೇರಿ ಐವರ ವಿರುದ್ಧ ಪ್ರಕರಣ ದಾಖಲಾಗಿದೆ.

ವಸತಿ ಶಾಲೆಯ ಪ್ರಾಂಶುಪಾಲರು, ವಾರ್ಡನ್, ವಿಜ್ಞಾನ ಶಿಕ್ಷಕ ಹಾಗೂ ದೈಹಿಕ ಶಿಕ್ಷಣ ಶಿಕ್ಷಕರನ್ನು ಕರ್ತವ್ಯ ಲೋಪದಡಿ ಅಮಾನತು ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ತಿಳಿಸಿದ್ದಾರೆ. ಸ್ಟಾಫ್ ನರ್ಸ್ ಕಾವೇರಮ್ಮ ಅವರನ್ನೂ ಕೆಲಸದಿಂದ ಬಿಡುಗಡೆ ಮಾಡಲಾಗಿದೆ.

'ಹೊಟ್ಟೆ ನೋವು ತಾಳಲಾರದೆ ಬಾಲಕಿಯು ಚೀರಾಡುತ್ತಿದ್ದಳು. ಸಹಪಾಠಿಗಳು ಆಕೆಯನ್ನು ಶೌಚಾಲಯಕ್ಕೆ ಕರೆದೊಯ್ದರು. ಅಲ್ಲಿಯೇ ಬಾಲಕಿ ಗಂಡು ಮಗುವಿಗೆ ಜನ್ಮ ನೀಡಿದ್ದಾಳೆ. ಬಳಿಕ ಬಾಲಕಿ ಹಾಗೂ ಮಗುವನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಈ ಕುರಿತು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಲಿದೆ' ಎಂದು ಆಯೋಗದ ಸದಸ್ಯ ಶಶಿಧರ ಕೋಸಂಬೆ 'ಪ್ರಜಾವಾಣಿ'ಗೆ ತಿಳಿಸಿದರು.

ಮುಳ್ಳಯ್ಯನಗಿರಿ: ಸೆ.1ರಿಂದ ಆನ್‌ಲೈನ್ ಬುಕ್ಕಿಂಗ್ ಕಡ್ಡಾಯ



ಚಿಕ್ಕಮಗಳೂರು: ಮುಳ್ಳಯ್ಯನಗಿರಿ, ಬಾಬಾಬುಡನ್‌ಗಿರಿಗೆ ಬರುವ ಪ್ರವಾಸಿಗರು ಇನ್ನುಮುಂದೆ ಆನ್‌ಲೈನ್‌ನಲ್ಲಿ ಮೊದಲೇ ಬುಕ್ಕಿಂಗ್ ಮಾಡಿಕೊಂಡು ಬರಬೇಕು. ಸೆ.1ರಿಂದ ಈ ವ್ಯವಸ್ಥೆ ಜಾರಿಗೆ ಬರಲಿದೆ.

ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತಿದೆ. ಇದರಿಂದ ಪ್ರವಾಸಿ ತಾಣಗಳಲ್ಲಿ ದಟ್ಟಣೆ ಉಂಟಾಗುತ್ತಿದ್ದು, ಇದನ್ನು ನಿಯಂತ್ರಿಸಲು ಜಿಲ್ಲಾಡಳಿತ ಈ ಕ್ರಮ ಕೈಗೊಂಡಿದೆ. ಜಿಲ್ಲಾಡಳಿತದ ವೆಬ್‌ಸೈಟ್ ಲಿಂಕ್ (https://chikkamagaluru.nic.in/en/tourism) ಬಳಸಿ ಶುಲ್ಕ (ಬೈಕ್‌ಗಳಿಗೆ ₹50, ಕಾರುಗಳಿಗೆ ₹100, ತೂಫಾನ್ (ಕ್ರೂಸರ್) ವಾಹನ ₹150 ಮತ್ತು ಟೆಂಪೊ ಟ್ರಾವೆಲರ್ ₹200) ಪಾವತಿಸಿ ದಿನಾಂಕ ಮತ್ತು ಸಮಯವನ್ನು ಮೊದಲೇ ಬುಕ್ಕಿಂಗ್ ಮಾಡಿಕೊಳ್ಳಬೇಕು ಎಂದು ಪ್ರಕಟಣೆ ತಿಳಿಸಿದೆ.

ಪ್ರತಿದಿನ ಬೆಳಿಗ್ಗೆ 6 ರಿಂದ ಮಧ್ಯಾಹ್ನ 12 ಗಂಟೆ ತನಕ ಮೊದಲ ಅವಧಿ ಮತ್ತು ಮಧ್ಯಾಹ್ನ 1ರಿಂದ ಸಂಜೆ 6 ಗಂಟೆ ತನಕ ಎರಡನೇ ಅವಧಿ ಎಂದು ಸಮಯ ನಿಗದಿ ಮಾಡಲಾಗಿದೆ. ಒಂದು ಅವಧಿಗೆ 600 ವಾಹನಗಳಿಗೆ (ದ್ವಿಚಕ್ರ ವಾಹನ/ಆಟೊರಿಕ್ಷಾ 100, ಸ್ಥಳೀಯ ಟ್ಯಾಕ್ಸಿ 100, ಟೆಂಪೊ ಟ್ರಾವೆಲರ್ 50, ತೂಫಾನ್ ವಾಹನ 50, ಪ್ರವಾಸಿಗರ ಕಾರು/ಜೀಪು/ಎಸ್‌ಯುವಿ 300) ಅವಕಾಶ ಇರಲಿದೆ.

'ಷಡ್ಯಂತ್ರ ನಡೆಸಿದವರಿಗೆ ಮಂಜುನಾಥ ಶಿಕ್ಷಿಸುತ್ತಾನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಧರ್ಮಸ್ಥಳ ವಿಷಯದಲ್ಲಿ ಷಡ್ಯಂತ್ರ-ಪಿತೂರಿ ನಡೆಸಿದವರಿಗೆ ಆ ಮಂಜುನಾಥ ಸ್ವಾಮಿಯೇ ತಕ್ಕ ಶಾಸ್ತಿ ಮಾಡುತ್ತಾನೆ' ಎಂದು ಕೇಂದ್ರ ಕೈಗಾರಿಕಾ ಸಚಿವ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, 'ಧರ್ಮಸ್ಥಳ ಪ್ರಕರಣದಲ್ಲಿ ರಾಜಕೀಯ ಬೆರೆಸುವ ಪ್ರಶ್ನೆಯೇ ಇಲ್ಲ. ಆದರೆ, ಸರ್ಕಾರ ಆರಂಭದಿಂದಲೂ ಸರಿಯಾಗಿ ನಡೆದುಕೊಂಡಿಲ್ಲ. ಇಲ್ಲಿ ತನಿಖೆ ಎಂಬ ನಾಟಕ ನಡೆಯುತ್ತಿದೆ. ಸಿ.ಎಸ್‌. ದ್ವಾರಕಾನಾಥ್ ಎಂಬ ವ್ಯಕ್ತಿ ದೂರು ನೀಡುತ್ತಾರೆ. ಸರ್ಕಾರ ತಕ್ಷಣವೇ ಎಸ್‌ಐಟಿ ರಚಿಸಿಬಿಡುತ್ತದೆ. ಇದರ ಹಿಂದೆ ಕೆಲ ಎಡಪಂಥೀಯ ಶಕ್ತಿಗಳ ಹುನ್ನಾರ ಮತ್ತು ಕುತಂತ್ರ ಅಡಗಿದೆ. ಕ್ಷೇತ್ರಕ್ಕೆ ಅಪಮಾನ ಮಾಡುವ ರೀತಿಯಲ್ಲಿ ಸರ್ಕಾರ ನಡೆದುಕೊಂಡದ್ದು ಅಕ್ಷಮ್ಯ' ಎಂದು ದೂರಿದರು.

ಜೆಡಿಎಸ್ ಧರ್ಮಸ್ಥಳ ಸತ್ಯ ಯಾತ್ರೆ: 'ಇದೇ 31ರಿಂದ 'ಧರ್ಮಸ್ಥಳ ಸತ್ಯ ಯಾತ್ರೆ' ನಡೆಸಲಾಗುತ್ತದೆ' ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

'ಧರ್ಮಸ್ಥಳಕ್ಕೆ ಅಪಮಾನ ಆಗುವ ರೀತಿಯ ಹೆಜ್ಜೆಗಳನ್ನು ಈ ಸರ್ಕಾರ ಇಟ್ಟಿದೆ. ನಾನು ಒಬ್ಬ ಭಕ್ತನಾಗಿ ಹಾಗೂ ನಮ್ಮ ಪಕ್ಷದ ಶಾಸಕರು, ಮಾಜಿ ಶಾಸಕರು, ಮುಖಂಡರು, ಕಾರ್ಯಕರ್ತರು ಧರ್ಮಸ್ಥಳ ಸತ್ಯ ಯಾತ್ರೆ ಮಾಡಿ, ವೀರೇಂದ್ರ ಹೆಗ್ಗಡೆ ಅವರಿಗೆ ಬೆಂಬಲ ಸೂಚಿಸುತ್ತೇವೆ' ಎಂದರು.

ಕೇಂದ್ರ ಸಚಿವರಿಗೆ ಪತ್ರ: ಧರ್ಮಸ್ಥಳದ ಬಗ್ಗೆ ಯೂಟ್ಯೂಬ್‌ಗಳಲ್ಲಿ ಅವಹೇಳನಕಾರಿಯಾಗಿ ಹರಿಯ ಬಿಡಲಾಗಿದ್ದ ವಿಡಿಯೊಗಳನ್ನು ಕೆಲವು ಸುದ್ದಿವಾಹಿನಿಗಳೂ ಪ್ರಸಾರ ಮಾಡಿವೆ. ಅಂತಹ ವಿಡಿಯೊಗಳನ್ನು ತೆಗೆದುಹಾಕಲು ನಿರ್ದೇಶನ ನೀಡಿ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ನಿಖಿಲ್ ಕುಮಾರಸ್ವಾಮಿ ಅವರು ಪತ್ರ ಬರೆದಿದ್ದಾರೆ.

'ಧರ್ಮಸ್ಥಳದ ರಕ್ಷಣೆಗೂ ನಾವು ಹಿಂಜರಿಯುವುದಿಲ್ಲ'

'ಧರ್ಮಸ್ಥಳ ಸುತ್ತಮುತ್ತ ನೂರಾರು ಶವಗಳನ್ನು ಹೂತುಹಾಕಲಾಗಿದೆ ಎಂಬ ವಿಷಯವನ್ನು ದೊಡ್ಡಮಟ್ಟದಲ್ಲಿ ಬಿಂಬಿಸಿದ್ದು ಪೂರ್ವಯೋಜಿತ ಕೃತ್ಯವೇ ಎನ್ನುವ ಕುರಿತು ಎಸ್‌ಐಟಿ ತನಿಖೆ ನಡೆಸುತ್ತಿದೆ. ಧರ್ಮಸ್ಥಳದ ರಕ್ಷಣೆಗೂ ನಾವು ಹಿಂಜರಿಯುವುದಿಲ್ಲ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.
ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, 'ಕಾಂಗ್ರೆಸ್ ಎಂದಿಗೂ ಧರ್ಮಸ್ಥಳದ ವಿರೋಧಿಯಲ್ಲ. ಧರ್ಮಸ್ಥಳದ ಬಗ್ಗೆ ಹಿಂದಿನಿಂದಲೂ ಚರ್ಚೆ ನಡೆಯುತ್ತಿದೆ. ಆರೋಪ ಬಂದಾಗ ತನಿಖೆ ಎದುರಿಸಬೇಕು. ತನಿಖೆಯಿಂದಲೇ ಕಳಂಕ ಮುಕ್ತವಾಗಬೇಕು. ಸೌಜನ್ಯಾ ಪ್ರಕರಣ ಬಿಜೆಪಿ ಅವಧಿಯಲ್ಲೇ ನಡೆದಿತ್ತು. ಮೃತ ಸೌಜನ್ಯಾ ಅವರಿಗೆ ನ್ಯಾಯ ಕೊಡಿಸುವ ಹೋರಾಟದಲ್ಲಿ ಸಂಘ ಪರಿವಾರದವರೂ ಇದ್ದಾರೆ. ಆದರೆ, ಬಿಜೆಪಿ ಕೇವಲ ಎಡಪಂಥೀಯರ ಬಗ್ಗೆ ಮಾತನಾಡುತ್ತಿದೆ. ಬಲಪಂಥೀಯರ ಬಗ್ಗೆ ಏಕೆ ಮಾತನಾಡುತ್ತಿಲ್ಲ' ಎಂದು ಪ್ರಶ್ನಿಸಿದರು.

'ಸೆ.1ಕ್ಕೆ ಧರ್ಮ ರಕ್ಷಣಾ ಸಮಾವೇಶ'

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸುತ್ತ ಇರುವ ಪ್ರಗತಿಪರರು ಧರ್ಮಸ್ಥಳ ದೇವಾಲಯವನ್ನು ಕಿತ್ತುಕೊಂಡು ಲೂಟಿ ಹೊಡೆಯಲು ಯೋಜನೆ ರೂಪಿಸಿದ್ದಾರೆ. ಧರ್ಮ ರಕ್ಷಣೆಗಾಗಿ ಸೆ. 1ರಂದು ಸಮಾವೇಶ ಮಾಡಲಿದ್ದೇವೆ' ಎಂದು ವಿರೋಧ ಪಕ್ಷದ ನಾಯಕ ಆರ್‌. ಅಶೋಕ ಹೇಳಿದರು.

'ಹಿಂದೆ ಘಜನಿ ಮಾಡಿದಂತೆಯೇ ಕಾಂಗ್ರೆಸ್ ಸರ್ಕಾರ ಲೂಟಿ ಮಾಡಲು ಮುಂದಾಗಿದೆ. ಮಂಜುನಾಥ ಸ್ವಾಮಿಗೆ ಕೆಟ್ಟ ಹೆಸರು ತರಲು ಎರಡು ವರ್ಷ ತಯಾರಿ ನಡೆಸಲಾಗಿದೆ. ಎಸ್‌ಐಟಿಗೆ ₹ 3 ಕೋಟಿಯಿಂದ 5 ಕೋಟಿ ಖರ್ಚಾಗಿದೆ' ಎಂದರು.

'ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದರೆ ಹಿಂದೂ ದೇವಾಲಯಗಳ ರಕ್ಷಣೆಗೆ ಕಾನೂನು ತರಲಿದೆ. ಧರ್ಮಸ್ಥಳವು ಎಲ್ಲ ಹಿಂದೂಗಳಿಗೆ ಸೇರಿದೆ. ಧರ್ಮಸ್ಥಳದ ಅಪಪ್ರಚಾರ ಖಂಡಿಸಿ ಬಿಜೆಪಿ–ಜೆಡಿಎಸ್ ಒಟ್ಟಿಗೆ ಹೋರಾಟ ನಡೆಸಲಿವೆ' ಎಂದರು.

ಅಪಪ್ರಚಾರ ಮಾಡಿದವರ ಬಂಧನ ಏಕಿಲ್ಲ?

ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಾಕಿದ ಹಿಂದೂಗಳ ವಿರುದ್ಧ ಪ್ರಕರಣ ದಾಖಲಿಸಿ, 24 ಗಂಟೆಗಳಲ್ಲಿ ಬಂಧಿಸುತ್ತಾರೆ. ಆದರೆ, ಧರ್ಮಸ್ಥಳದ ವಿಷಯದಲ್ಲಿ ಹಿಂದೂ ಭಾವನೆಗಳಿಗೆ ಧಕ್ಕೆ ತಂದವರನ್ನು ಕಾಂಗ್ರೆಸ್ ನೇತೃತ್ವದ ಸರ್ಕಾರ ಏಕೆ ಬಂಧಿಸಲಿಲ್ಲ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಪ್ರಶ್ನಿಸಿದರು.

'ಧರ್ಮಸ್ಥಳದ ಷಡ್ಯಂತ್ರದ ಹಿಂದಿರುವ ಅಂತರರಾಷ್ಟ್ರೀಯ ಶಕ್ತಿಗಳ ಬಗ್ಗೆ ಮಾಹಿತಿ ಪಡೆಯಲು ಎನ್‌ಐಎ, ಸಿಬಿಐ ತನಿಖೆಯ ಅಗತ್ಯವಿದೆ ಎಂದರು.

₹97 ಲಕ್ಷದೊಂದಿಗೆ ಪರಾರಿ: ಬಂಧನ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಸಿಬಿಐನ ನಿವೃತ್ತ ಎಸ್‌ಪಿ ಕೆ.ವೈ.ಗುರುಪ್ರಸಾದ್ ಅವರ ₹ 97 ಲಕ್ಷ ಹಣವನ್ನು ಅಪಹರಿಸಿ ಪರಾರಿಯಾಗಿದ್ದ ಚಾಲಕ ರಮೇಶ್‌ನನ್ನು ಚಳ್ಳಕೆರೆ ಠಾಣೆ ಪೊಲೀಸರು 24 ಗಂಟೆಯೊಳಗೆ ಬಂಧಿಸಿದ್ದಾರೆ.

ಬೆಂಗಳೂರಿನ ಗುರುಪ್ರಸಾದ್ ಅವರು ಆ.25ರಂದು ಬಳ್ಳಾರಿಯಲ್ಲಿದ್ದ ತಮ್ಮ ಜಮೀನನ್ನು ಮಾರಾಟ ಮಾಡಿದ್ದರು. ಆ ಹಣವನ್ನು ಬಾಡಿಗೆ ಕಾರಿನಲ್ಲಿಟ್ಟುಕೊಂಡು ಹೊರಟಿದ್ದರು. ಚಳ್ಳಕೆರೆ ಬಳಿ ಊಟ ಮಾಡಲು ಹೋಟೆಲ್‌ವೊಂದಕ್ಕೆ ತೆರಳಿದ್ದರು. ಈ ವೇಳೆ ಚಾಲಕ ರಮೇಶ್ ಹಣದೊಂದಿಗೆ ಪರಾರಿಯಾಗಿದ್ದ.

ಗುರುಪ್ರಸಾದ್ ತಕ್ಷಣವೇ ಈ ಕುರಿತು ಚಳ್ಳಕೆರೆ ಠಾಣೆಗೆ ಮಾಹಿತಿ ನೀಡಿದ್ದರು. ಮೂರು ತಂಡಗಳೊಂದಿಗೆ ಆರೋಪಿಯ ಬೆನ್ನು ಹತ್ತಿದ್ದ ಪೊಲೀಸರು ಆ.26ರಂದು ಪಾವಗಡ ಬಳಿ ಆರೋಪಿಯನ್ನು ಬಂಧಿಸಿದ್ದಾರೆ.

ಈತ ಪಾವಗಡದ ಅಜ್ಜಿಯ ಮನೆಯಲ್ಲಿಟ್ಟಿದ್ದ ₹ 97 ಲಕ್ಷ ಮೊತ್ತವನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೀಸಲಾತಿ ಇಲ್ಲವೇ ಭಿಕ್ಷೆ...

ಪ್ರಜಾವಾಣಿ ಚಿತ್ರ: ಲವ ಕೆ.



'ಅಲೆಮಾರಿಗಳಿಗೆ ಶೇ 1ರಷ್ಟು ಒಳಮೀಸಲಾತಿ ಕೊಡಿ ಇಲ್ಲವೇ ಭಿಕ್ಷೆ ಬೇಡಲು ಅಥವಾ ಬೇಟೆಯಾಡಲು ಅವಕಾಶ ನೀಡಿ' ಎಂದು ಆಗ್ರಹಿಸಿ ವಿವಿಧ ಅಲೆಮಾರಿ ಸಮುದಾಯಗಳ ಜನರು ಗುರುವಾರ ಹೊಸಪೇಟೆಯಲ್ಲಿ ತಮ್ಮ ಕಲೆಗಳನ್ನು ಪ್ರದರ್ಶಿಸುತ್ತ, ಪ್ರತಿಭಟನೆ ನಡೆಸಿದರು

ಸಾಕ್ಷಿ ದೂರುದಾರನ ಮಂಪರು ಪರೀಕ್ಷೆಗೆ ಒತ್ತಾಯ • ಅರ್ಜಿ ಪರಿಶೀಲನೆ ಭರವಸೆ

ಎಸ್‌ಐಟಿಗೆ ದೂರು ಸಲ್ಲಿಸಿದ ಸೌಜನ್ಯಾ ತಾಯಿ

ಪ್ರಜಾವಾಣಿ ವಾರ್ತೆ

ಮಂಗಳೂರು: 2012ರಲ್ಲಿ ಅತ್ಯಾಚಾರಕ್ಕೊಳಗಾಗಿ ಕೊಲೆಯಾಗಿದ್ದ ಸೌಜನ್ಯಾ ಎಂಬ ಯುವತಿಯ ತಾಯಿ ಕುಸುಮಾವತಿ ಹಾಗೂ ಕುಟುಂಬಸ್ಥರು ಗುರುವಾರ ವಿಶೇಷ ತನಿಖಾ ತಂಡದ (ಎಸ್‌ಐಟಿ) ಕಚೇರಿಗೆ ಭೇಟಿ ನೀಡಿ ದೂರು ಸಲ್ಲಿಸಿದರು.

ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣಕ್ಕೆ ಸಂಬಂಧಿಸಿ ಈಗಾಗಲೇ ಬಂಧನದಲ್ಲಿರುವ ಸಾಕ್ಷಿ ದೂರುದಾರನಿಗೆ ಸೌಜನ್ಯಾ ಸಾವಿನ ಪ್ರಕರಣದ ಬಗ್ಗೆ ಮಾಹಿತಿ ಇದ್ದು, ಆ ವ್ಯಕ್ತಿಯನ್ನು ಮಂಪರು ಪರೀಕ್ಷೆಗೆ ಒಳಪಡಿಸಬೇಕು ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

'17 ವರ್ಷಗಳ ಹಿಂದೆ ನನ್ನ ಮಗಳು ಅತ್ಯಾಚಾರಕ್ಕೆ ಒಳಗಾಗಿ ಮೃತಪಟ್ಟಿದ್ದಾಳೆ. ಎಸ್‌ಐಟಿ ಅಧಿಕಾರಿಗಳು ಬಂಧಿಸಿರುವ ಸಾಕ್ಷಿ ದೂರುದಾರ ವ್ಯಕ್ತಿಯ ಸಹೋದರಿಯು ಇತ್ತೀಚೆಗೆ ರಾಷ್ಟ್ರೀಯ ಮಾನವ ಹಕ್ಕು ಆಯೋಗದ ಎದುರು ವಿಚಾರಣೆಗೆ ಹಾಜರಾದಾಗ, 'ಸಾಕ್ಷಿ ದೂರುದಾರನಿಗೆ ಸೌಜನ್ಯಾಳ ಅತ್ಯಾಚಾರ ಮತ್ತು ಕೊಲೆಯ ಬಗ್ಗೆ ತಿಳಿದಿದ್ದು, ಆತನಿಗೆ ಜೀವ ಭಯ ಇತ್ತು. ಆ ಕಾರಣಕ್ಕೆ ಆತ ಇಲ್ಲಿಂದ ಹೋಗಬೇಕಾಯಿತು' ಎಂದು ಹೇಳಿಕೆ ನೀಡಿರುವ ಮಾಹಿತಿ ನನಗೆ ಲಭ್ಯವಾಗಿದೆ. ಹೀಗಾಗಿ, ಸಾಕ್ಷಿ ದೂರುದಾರ ವ್ಯಕ್ತಿಯ ಮಂಪರು ಪರೀಕ್ಷೆ ನಡೆಸುವ ಮೂಲಕ ಸೌಜನ್ಯಾ ಸಾವಿಗೆ ನ್ಯಾಯ ಒದಗಿಸಬೇಕು' ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

ದೂರನ್ನು ಸ್ವೀಕರಿಸಿದ ಎಸ್‌ಐಟಿ ಅಧಿಕಾರಿಗಳು, ಈಗಾಗಲೇ ತನಿಖೆ ನಡೆಸುತ್ತಿರುವ ಪ್ರಕರಣದ ಮುಂದುವರಿದ ತನಿಖೆಯ ಸಮಯದಲ್ಲಿ ಈ ಅರ್ಜಿಯನ್ನು ಪರಿಶೀಲಿಸಲಾಗುವುದು ಎಂದು ಹಿಂಬರಹ ನೀಡಿದ್ದಾರೆ.

ಮೂರನೇ ದಿನ ಹಾಜರು

ಮಗಳು ಅನನ್ಯಾ ಭಟ್ ಧರ್ಮಸ್ಥಳಕ್ಕೆ ತೆರಳಿದ್ದ ವೇಳೆ ನಾಪತ್ತೆಯಾಗಿದ್ದಳು ಎಂದು ಆರೋಪಿಸಿದ್ದ ಸುಜಾತಾ ಭಟ್ ಸತತ ಮೂರನೇ ದಿನ ವಿಚಾರಣೆಗೆ ಹಾಜರಾದರು. ಗುರುವಾರ ಬೆಳಿಗ್ಗೆ 10.30ರ ಸುಮಾರಿಗೆ ಆಟೊರಿಕ್ಷಾದಲ್ಲಿ ಬಂದಿದ್ದ ಸುಜಾತಾ ಭಟ್ ಅವರ ವಿಚಾರಣೆ ಸಂಜೆಯವರೆಗೂ ಮುಂದುವರಿಯಿತು. ಎಸ್‌ಐಟಿ ಎಸ್‌ಪಿ ಜಿತೇಂದ್ರಕುಮಾರ್ ದಯಾಮ ಊರಿಗೆ ತೆರಳಿದ್ದು, ಇನ್ನೊಬ್ಬ ಎಸ್‌ಪಿ ದರ್ಜೆಯ ಅಧಿಕಾರಿ ಸಿ.ಎ.ಸೈಮನ್ ಹಾಗೂ ಪಿಎಸ್‌ಐ ಗುಣಪಾಲ ಅವರು ಸುಜಾತಾ ಭಟ್ ಅವರ ಹೇಳಿಕೆ ದಾಖಲಿಸಿಕೊಂಡರು ಎಂದು ಮೂಲಗಳು ತಿಳಿಸಿವೆ.

'ಸುಜಾತಾ ಭಟ್ ವಿರುದ್ಧ ಯಾವುದೇ ಪ್ರಕರಣ ದಾಖಲಾಗಿಲ್ಲ, ವಿಚಾರಣೆ ಪೂರ್ಣಗೊಂಡ ನಂತರ ಪ್ರಕರಣ ದಾಖಲಿಸಬೇಕೇ ಅಥವಾ ಬೇಡವೇ ಎಂಬ ಬಗ್ಗೆ ನಿರ್ಧರಿಸಲಾಗುವುದು' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಬುಧವಾರ ವಿಚಾರಣೆಗೆ ಹಾಜರಾಗಿ ಹೊರಬಂದ ಸುಜಾತಾ ಭಟ್ ಅವರನ್ನು ಮಾಧ್ಯಮದವರು ಮಾತನಾಡಿಸಲು ಯತ್ನಿಸಿದಾಗ ಆಕ್ರೋಶಗೊಂಡ ಅವರು, 'ನಾನೇಕೆ ನಿಮ್ಮೊಂದಿಗೆ ಮಾತನಾಡಬೇಕು? ನನ್ನನ್ನು ಫಾಲೊ ಮಾಡಿದರೆ, ನೇಣು ಹಾಕಿಕೊಂಡು ಸಾಯುತ್ತೇನೆ' ಎಂದು ಹೆಗಲ ಮೇಲೆ ಹಾಕಿಕೊಂಡಿದ್ದ ಶಾಲನ್ನು ತೋರಿಸಿದ್ದಾರೆ. ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

'ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ಆಗಲಿ'

ಹುಬ್ಬಳ್ಳಿ/ಬೆಳಗಾವಿ: 'ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ಅಪರಾಧ ಪ್ರಕರಣಗಳ ತನಿಖೆ ಪ್ರಕ್ರಿಯೆಯನ್ನು ರಾಷ್ಟ್ರೀಯ ತನಿಖಾ ದಳಕ್ಕೆ (ಎನ್‌ಐಎ) ವಹಿಸುವ ಬದಲು ಹೈಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ನಡೆಸಬೇಕು' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಒತ್ತಾಯಿಸಿದರು.

'ಮುಸುಕುಧಾರಿ ದೂರುದಾರ ಬುರುಡೆ ತಂದು ದೂರು ನೀಡಿದಾಗಲೇ, ಆತನನ್ನು ವಿಚಾರಣೆಗೆ ಒಳಪಡಿಸಬೇಕಿತ್ತು. ಮುಸುಕುಧಾರಿ ಮತ್ತು ಯೂಟ್ಯೂಬರ್‌ಗಳ ಮಾತುಗಳನ್ನು ನಂಬಿ, ಸರ್ಕಾರವು ಎಸ್‌ಐಟಿ ತನಿಖೆಗೆ ಕ್ರಮ ತೆಗೆದುಕೊಂಡು ಬೌದ್ಧಿಕ ದಿವಾಳಿತನ ಪ್ರದರ್ಶಿಸಿತು' ಎಂದು ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

'ಒಟ್ಟಾರೆ ಈ ಪ್ರಕರಣದಲ್ಲಿ ಹಿಂದೂ ವಿರೋಧಿ ಕಾಣದ ಕೈಗಳ ಕೈವಾಡವಿದೆ. ಎಡಪಂಥೀಯರು ಮತ್ತು ಸರ್ಕಾರದಲ್ಲಿ ಇರುವಂತಹವರೇ ವ್ಯವಸ್ಥಿತ ಷಡ್ಯಂತ್ರ ನಡೆಸಿದ್ದಾರೆ. ಇದು ಹಿಂದೂ ಧಾರ್ಮಿಕ ಕ್ಷೇತ್ರದ ಮೇಲೆ ನಡೆದ ಪ್ರಾಯೋಜಿತ ದಾಳಿ' ಎಂದು ಅವರು ಆರೋಪಿಸಿದರು.

ಬೆಳಗಾವಿಯಲ್ಲಿ ಸಂಸದ ಜಗದೀಶ ಶೆಟ್ಟರ್ ಮಾತನಾಡಿ, 'ಧರ್ಮಸ್ಥಳ ಮತ್ತು ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರಿಗೆ ಅಪಖ್ಯಾತಿ ತರಲು ಎಡಪಂಥೀಯರು ಸೇರಿ ಕೆಲವರು ಪ್ರಯತ್ನ ನಡೆಸಿದ್ದಾರೆ. ಎಸ್‌ಐಟಿ ರಚನೆ ಮತ್ತು ತನಿಖೆಗಾಗಿ ಸರ್ಕಾರ ಸಾಕಷ್ಟು ಹಣ ವ್ಯಯಿಸಿದೆ. ಆದರೆ, ಅವರಿಗೆ ಯಾವ ಸಾಕ್ಷ್ಯವೂ ಸಿಕ್ಕಿಲ್ಲ. ಎಸ್‌ಐಟಿಯವರು ತನಿಖೆ ನಿಲ್ಲಿಸಲು ಬಯಸಿದರೂ ಎಡಪಂಥೀಯರು ಮತ್ತು ಸಿದ್ದರಾಮಯ್ಯ ಆಪ್ತರು ಬಿಡುತ್ತಿಲ್ಲ' ಎಂದರು.

'ಸುಜಾತಾ ಭಟ್‌ಗೆ ರಕ್ಷಣೆ ಒದಗಿಸಿ'

ಪ್ರಜಾವಾಣಿ ವಾರ್ತೆ



ಡಾ. ನಾಗಲಕ್ಷ್ಮೀ ಚೌಧರಿ

ಬೆಂಗಳೂರು: 'ಧರ್ಮಸ್ಥಳದ ವ್ಯಾಪ್ತಿಯಲ್ಲಿ ನಾಪತ್ತೆಯಾಗಿದ್ದಾರೆ ಎನ್ನಲಾದ ಅನನ್ಯಾ ಭಟ್ ಪ್ರಕರಣದ ದೂರುದಾರೆ ಸುಜಾತಾ ಭಟ್ ಅವರನ್ನು ಎರಡು ವಾರಗಳಿಂದ ಕೆಲವು ಮಾಧ್ಯಮದವರು ನಿರಂತರವಾಗಿ ಹಿಂಬಾಲಿಸಿ, ಹೇಳಿಕೆ ನೀಡಲು ಒತ್ತಾಯಿಸುತ್ತಿದ್ದಾರೆ. ಇದರಿಂದ ಅವರು ಮಾನಸಿಕವಾಗಿ ಕುಗ್ಗಿ ಹೋಗಿದ್ದು, ಅವರಿಗೆ ಸೂಕ್ತ ರಕ್ಷಣೆ ಒದಗಿಸಬೇಕು' ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ಅವರು ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ಸೂಚಿಸಿದ್ದಾರೆ.

ಈ ಬಗ್ಗೆ ಎಸ್‌ಐಟಿ ಮುಖ್ಯಸ್ಥರಿಗೆ ಪತ್ರ ಬರೆದಿರುವ ಅವರು, 'ಕೆಲ ಮಾಧ್ಯಮಗಳು ಸುಜಾತಾ ಭಟ್ ಅವರ ತೇಜೋವಧೆ ಮಾಡುವ ರೀತಿಯಲ್ಲಿ ಸುದ್ದಿಗಳನ್ನು ಪ್ರಸಾರ ಮಾಡುತ್ತಿವೆ. ತಡ ರಾತ್ರಿಯಲ್ಲಿ ಅವರ ಮನೆಗೆ ಹೋಗಿ ವಿಡಿಯೊ ಚಿತ್ರೀಕರಣ ಮಾಡಿ, ಕಾರಿನಲ್ಲಿ ಕೂರಿಸಿಕೊಂಡು ತನಿಖೆಯ ದಿಕ್ಕು ತಪ್ಪಿಸುವ ಹಾಗೆ ವೈರುಧ್ಯಗಳಿಂದ ಕೂಡಿದ ಹೇಳಿಕೆ ಪಡೆದು, ಅವರನ್ನು ಮಾನಸಿಕವಾಗಿ ಕುಗ್ಗಿಸುವ ವರದಿ ಪ್ರಸಾರ ಮಾಡಿವೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂತ್ರಸ್ತರು, ನಿರ್ಭೀತಿಯಿಂದ ದೂರನ್ನು ನೀಡಲು ಎಸ್‌ಐಟಿ ಅವಕಾಶ ನೀಡಬೇಕು. ದೂರುದಾರರ ಮಾಹಿತಿಯನ್ನು ಗೌಪ್ಯವಾಗಿಟ್ಟು, ಅವರಿಗೆ ರಕ್ಷಣೆ ನೀಡಬೇಕು. ಸುಜಾತಾ ಭಟ್ ಅವರು ಕೆಲ ಮಾಧ್ಯಮಗಳ ಒತ್ತಡದಿಂದ ಮಾನಸಿಕವಾಗಿ ಹಾಗೂ ದೈಹಿಕವಾಗಿ ಕುಗ್ಗಿ ಹೋಗುವ ಸಾಧ್ಯತೆ ಇದೆ. ಈ ವಿಷಯವನ್ನು ಮಹಿಳಾ ಆಯೋಗ ಗಂಭೀರವಾಗಿ ಪರಿಗಣಿಸಿದೆ. ಕೂಡಲೇ ಸುಜಾತಾ ಭಟ್ ಅವರಿಗೆ ಭದ್ರತೆ ಒದಗಿಸಿ, ಅವರ ಅಹವಾಲು ಸಲ್ಲಿಸಲು ಸೂಕ್ತ ವ್ಯವಸ್ಥೆ ಕಲ್ಪಿಸಬೇಕು. ಈ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ ಎಂಬ ವರದಿಯನ್ನು ಆಯೋಗಕ್ಕೆ ಸಲ್ಲಿಸಬೇಕು' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಲಪಾಡಿಯಲ್ಲಿ ಭೀಕರ ಅಪಘಾತ: ಆರು ಜನ ಸಾವು

ಪ್ರಜಾವಾಣಿ ವಾರ್ತೆ

ಉಳ್ಳಾಲ (ದಕ್ಷಿಣ ಕನ್ನಡ): ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಬಸ್ ಧಾವಂತಕ್ಕೆ ಆಟೊರಿಕ್ಷಾದಲ್ಲಿದ್ದ ಒಂದೇ ಕುಟುಂಬದ ಐವರು ಸೇರಿದಂತೆ ಒಟ್ಟು ಆರು ಮಂದಿ ಮೃತಪಟ್ಟಿದ್ದಾರೆ. ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಕಾಸರಗೋಡು ಜಿಲ್ಲೆಯ ಮಂಜೇಶ್ವರ ಪೊಲೀಸ್ ಠಾಣೆ ವ್ಯಾಪ್ತಿಯ ಮೇಲಿನ ತಲಪಾಡಿಯಲ್ಲಿ ಅಪಘಾತ ಸಂಭವಿಸಿದೆ.

ರಿಕ್ಷಾ ಚಾಲಕ, ಮುಳ್ಳುಗುಡ್ಡೆ ಅಜ್ಜಿನಡ್ಕದ ಹೈದರ್ ಆಲಿ (47), ಫರಂಗಿಪೇಟೆ ಪರಾರಿಯ ಅವ್ವಮ್ಮ (60), ಅಜ್ಜಿನಡ್ಕ ಖತೀಜ (60), ಅವರ ಸಹೋದರಿ ನಫೀಸಾ (52), ನಫೀಸಾ ಪುತ್ರಿ ಆಯೇಷಾ ಫಿದಾ (19), ನಫೀಸಾ ಅಣ್ಣನ ಪುತ್ರಿ ಹಸ್ನಾ (5) ಮೃತಪಟ್ಟವರು.

ಅಪಘಾತ ನಡೆದಿದ್ದು ಹೇಗೆ?: ಖತೀಜ ಕುಟುಂಬದವರು ಅಜ್ಜಿನಡ್ಕದಿಂದ ಕುಂಜತ್ತೂರು ಸಂಬಂಧಿಕರ ಮನೆಗೆ ಆಟೊರಿಕ್ಷಾದಲ್ಲಿ ತೆರಳುತ್ತಿದ್ದ ವೇಳೆ ಕಾಸರಗೋಡಿನಿಂದ ಮಂಗಳೂರು ಕಡೆ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದಿದೆ. ಹೊಸಂಗಡಿ ಕಡೆಯಿಂದ ಸರ್ವಿಸ್ ರಸ್ತೆ ಮೂಲಕ ಬರಬೇಕಿದ್ದ ಬಸ್ ಕೇರಳದ ಹೆದ್ದಾರಿಯಲ್ಲಿ ಬಂದಿದ್ದು, ಮೇಲಿನ ತಲಪಾಡಿಯಲ್ಲಿ ಪ್ರಯಾಣಿಕರನ್ನು ಇಳಿಸಲು ಮುಂದಾದ ವೇಳೆ ಅಪಘಾತ ಸಂಭವಿಸಿದೆ. ಬಸ್‌ಗಾಗಿ ಕಾಯುತ್ತ ನಿಂತಿದ್ದ ಇಬ್ಬರು ವೃದ್ಧರು ಗಾಯಗೊಂಡಿದ್ದಾರೆ. ರಿಕ್ಷಾ ಪಾರ್ಕ್‌ನಲ್ಲಿ ನಿಲ್ಲಿಸಿದ್ದ ಒಂದು ರಿಕ್ಷಾಕ್ಕೂ ಹಾನಿಯಾಗಿದ್ದು, ಅದರಲ್ಲಿದ್ದ ವ್ಯಕ್ತಿಗೂ ಗಾಯಗಳಾಗಿವೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

'ಅಲೆಮಾರಿಗಳಿಗೆ ಶೇ 1ರಷ್ಟು ಒಳ ಮೀಸಲಾತಿ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕವಾಗಿ ಶೇಕಡ 1ರಷ್ಟು ಒಳ ಮೀಸಲಾತಿ ನೀಡಬೇಕು ಎಂದು ಮಾದಿಗ ಸಮುದಾಯಗಳ ಸ್ವಾಭಿಮಾನ ಒಕ್ಕೂಟ ಆಗ್ರಹಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಭೀಮಾರಾಜು, 'ರಾಜ್ಯದಲ್ಲಿ ಭಿಕ್ಷೆ ಬೇಡಿ ಜೀವನ ನಡೆಸುತ್ತಿರುವ ಅಲೆಮಾರಿ ಸಮುದಾಯದ 59 ಉಪ ಜಾತಿಗಳ ಜನಸಂಖ್ಯೆ 5.22 ಲಕ್ಷ ಇದೆ. ನಾಗಮೋಹನ ದಾಸ್ ಆಯೋಗ ಈ ಸಮುದಾಯದವರಿಗೆ ಶೇ 1ರಷ್ಟು ಒಳ ಮೀಸಲಾತಿ ಹಂಚಿಕೆ ಮಾಡಿತ್ತು. ಆದರೆ, ಸಚಿವ ಸಂಪುಟ ಸಭೆಯಲ್ಲಿ ಈ ವರದಿಯನ್ನು ಪರಿಷ್ಕರಿಸಿ ಪ್ರಬಲ ಸಮುದಾಯಗಳಾದ ಭೋವಿ, ಲಂಬಾಣಿ, ಕೊರಮ ಹಾಗೂ ಕೊರಚರೊಂದಿಗೆ ಅಲೆಮಾರಿಗಳನ್ನು ಸೇರ್ಪಡೆ ಮಾಡಿರುವುದು ಖಂಡನೀಯ' ಎಂದರು.

'ಸಮಾಜದಲ್ಲಿ ಅತೀ ಹಿಂದುಳಿದಿರುವ ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕವಾಗಿ ಶೇ 1ರಷ್ಟು ಒಳ ಮೀಸಲಾತಿಯನ್ನು ಜಾರಿಗೊಳಿಸಬೇಕು. ಇಲ್ಲದಿದ್ದರೆ ರಾಜ್ಯದಾದ್ಯಂತ ಬೀದಿಗೆ ಇಳಿದು ಹೋರಾಟ ಮಾಡಲಾಗುವುದು' ಎಂದು ಎಚ್ಚರಿಕೆ ನೀಡಿದರು.

ನಾನು ಸತ್ತರೆ ಇ.ಡಿ ಹೊಣೆ: ಶಾಸಕ ವೀರೇಂದ್ರ

ಪ್ರಜಾವಾಣಿ ವಾರ್ತೆ



ಕೆ.ಸಿ.ವೀರೇಂದ್ರ

ಬೆಂಗಳೂರು: ಕಸ್ಟಡಿಯಲ್ಲಿ ಇ.ಡಿ ಅಧಿಕಾರಿಗಳು ನನ್ನನ್ನು ಸರಿಯಾಗಿ ನಡೆಸಿಕೊಂಡಿಲ್ಲ, ಕಿರುಕುಳ ನೀಡಿದ್ದಾರೆ. ಕುಡಿಯಲು ಅಶುದ್ಧ ನೀರನ್ನು ನೀಡಿದ್ದಾರೆ. ಪ್ಲಾಸ್ಟಿಕ್ ಕಂಟೇನರ್‌ನಲ್ಲಿ ಊಟ ಒದಗಿಸಿದ್ದಾರೆ. ಕೂರಲು ಕುರ್ಚಿಯನ್ನೂ ನೀಡಿಲ್ಲ. ಸರಿಯಾದ ಕೋಣೆ ಯಲ್ಲಿ ಇರಿಸಿಲ್ಲ, ನಾನು ಸತ್ತರೆ, ಅದಕ್ಕೆ ಇ.ಡಿ ಅಧಿಕಾರಿಗಳೇ ಹೊಣೆ..!

ಆನ್‌ಲೈನ್ ಮತ್ತು ಆಫ್‌ಲೈನ್ ಬೆಟ್ಟಿಂಗ್ ನಡೆಸುತ್ತಿದ್ದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಇ.ಡಿಯಿಂದ (ಜಾರಿ ನಿರ್ದೇಶನಾಲಯ) ಬಂಧನಕ್ಕೆ ಒಳಗಾಗಿರುವ ಚಿತ್ರದುರ್ಗದ ಕಾಂಗ್ರೆಸ್ ಶಾಸಕ ಕೆ.ಸಿ.ವೀರೇಂದ್ರ ಜನಪ್ರತಿನಿಧಿಗಳ ಕೋರ್ಟ್‌ನಲ್ಲಿ ಗುರುವಾರ ನ್ಯಾಯಾಧೀಶರ ಮುಂದೆ ಅಲವತ್ತುಕೊಂಡ ಪರಿ ಇದು.

ಪ್ರಕರಣಕ್ಕೆ ಸಂಬಂಧಿಸಿದಂತೆ ವೀರೇಂದ್ರ ಅವರನ್ನು ಬೆಂಗಳೂರು ನಗರ 35ನೇ ಸಿಸಿಎಚ್ ನ್ಯಾಯಾಲಯದ ನ್ಯಾಯಾಧೀಶರು ಇದೇ 28ರವರೆಗೆ ಇ.ಡಿ ಕಸ್ಟಡಿಗೆ ನೀಡಿದ್ದರು. ಕಸ್ಟಡಿ ಅವಧಿ ಗುರುವಾರ (ಆ.28) ಸಂಜೆ ಮುಗಿಯಲಿದ್ದ ಕಾರಣ ಅವರನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯಕ್ಕೆ ಬೆಳಿಗ್ಗೆಯೇ ಹಾಜರುಪಡಿಸಲಾಗಿತ್ತು.

ಈ ವೇಳೆ ವೀರೇಂದ್ರ ಅವರು, ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರ ಮುಂದೆ ಇ.ಡಿ ಕಸ್ಟಡಿಯಲ್ಲಿ ತಮಗಾಗುತ್ತಿರುವ ಸಂಕಟವನ್ನು ತೋಡಿಕೊಂಡರು. ಅಂತೆಯೇ, ವೀರೇಂದ್ರ ಪರ ಹಾಜರಾಗಿದ್ದ ಪದಾಂಕಿತ ಹಿರಿಯ ವಕೀಲರಾದ ಕಿರಣ್ ಜವಳಿ ಹಾಗೂ ಎಚ್‌.ಎಸ್‌.ಚಂದ್ರಮೌಳಿ, 'ಅರ್ಜಿದಾರರನ್ನು ಬಂಧಿಸುವ ವೇಳೆ ಇ.ಡಿ ಅಧಿಕಾರಿಗಳು ಸೂಕ್ತ ನ್ಯಾಯಿಕ ಪ್ರಕ್ರಿಯೆ ಪಾಲನೆ ಮಾಡಿಲ್ಲ. ಯಾವ ಪ್ರಕರಣದಲ್ಲಿ ಬಂಧಿಸಲಾಗಿದೆ ಎಂಬ ಮಾಹಿತಿಯನ್ನು ವೀರೇಂದ್ರ ಅವರಿಗೆ ನೀಡಿಯೇ ಇಲ್ಲ. ಅಧಿಕಾರಿಗಳು ನ್ಯಾಯಾಲಯಕ್ಕೆ ಸುಳ್ಳು ಮಾಹಿತಿ ನೀಡಿದ್ದಾರೆ' ಎಂದು ಆಕ್ಷೇಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಾಧೀಶರು, 'ಯಾವ ಪ್ರಕರಣದಲ್ಲಿ ಇಸಿಐಆರ್ (ಜಾರಿ ನಿರ್ದೇಶನಾಲಯ ಪ್ರಕರಣದ ಮಾಹಿತಿ ವರದಿ) ದಾಖಲಿಸಿದ್ದೀರಿ' ಎಂದು ಇ.ಡಿ ಅಧಿಕಾರಿಗಳನ್ನು ಪ್ರಶ್ನಿಸಿ, 'ಅಪರಾಧಿಕ ಪ್ರಕರಣಗಳಲ್ಲಿ ಆರೋಪಿಗೆ ಸೂಕ್ತ ಕಾರಣ ನೀಡದೆ ಬಂಧಿಸಬಾರದು. ಕೋರ್ಟ್‌ಗೆ ಬಂದಮೇಲೆ ಯಾವುದೋ ಪ್ರಕರಣಗಳನ್ನು ಹೆಸರಿಸುವುದು ಸಲ್ಲ. ಇದು ಯಾವ ರೀತಿಯ ತನಿಖೆ? ನೀವು ಮನಬಂದಂತೆ ನಡೆದುಕೊಳ್ಳಬಾರದು' ಎಂದು ಇ.ಡಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

'ಆರೋಪಿಯನ್ನು 14 ದಿನಗಳ ಕಸ್ಟಡಿಗೆ ನೀಡಬೇಕು' ಎಂಬ ಇ.ಡಿ ಮನವಿಯನ್ನು ತಿರಸ್ಕರಿಸಿದ ನ್ಯಾಯಾಧೀಶರು, ಆರು ದಿನ ಇ.ಡಿ ಕಸ್ಟಡಿಗೆ ಒಪ್ಪಿಸಿ ವಿಚಾರಣೆ ಮುಂದೂಡಿದರು. 'ಆರೋಪಿಗೆ ಶುದ್ಧೀಕರಿಸಿದ ನೀರು, ಕೂರಲು ಕುರ್ಚಿಯನ್ನು ಒದಗಿಸಿ. ದಿನದಲ್ಲಿ 30 ನಿಮಿಷ ತಮ್ಮ ವಕೀಲರನ್ನು ಭೇಟಿ ಮಾಡಲು ಅವರಿಗೆ ಅವಕಾಶ ಒದಗಿಸಿ' ಎಂದು ಇ.ಡಿ ಅಧಿಕಾರಿಗಳಿಗೆ ಸೂಚಿಸಿದರು.

ವೀರೇಂದ್ರ ಕುಟುಂಬದ ಸದಸ್ಯರ ಒಡೆತನದಲ್ಲಿ ಗೋವಾ ಮತ್ತಿತರ ಕಡೆ ಚಾಲ್ತಿಯಲ್ಲಿರುವ ಕ್ಯಾಸಿನೊಗಳು ಮತ್ತು ಆನ್‌ಲೈನ್ ಗೇಮಿಂಗ್ ಕಂಪನಿಗಳ ವಿರುದ್ಧ ಇಸಿಐಆರ್ ದಾಖಲಿಸಿದ್ದ ಇ.ಡಿ ಅಧಿಕಾರಿಗಳು ಇದೇ 22ರಂದು ದೇಶದಾದ್ಯಂತ 31 ವಿವಿಧ ಸ್ಥಳಗಳಲ್ಲಿ ದಾಳಿ ನಡೆಸಿದ್ದರು. ಸಿಕ್ಕಿಂನ ಗ್ಯಾಂಗ್ಟಕ್‌ನಲ್ಲಿ ವೀರೇಂದ್ರ ಅವರನ್ನು ಬಂಧಿಸಿದ್ದರು.

ನಾಗೇಂದ್ರ ಆಪ್ತರ ₹4.95 ಕೋಟಿ ಮುಟ್ಟುಗೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ₹89.63 ಕೋಟಿಯನ್ನು ಅಕ್ರಮವಾಗಿ ವರ್ಗಾವಣೆ ಮಾಡಿದ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ), ಕಾಂಗ್ರೆಸ್ ಶಾಸಕ ಬಿ.ನಾಗೇಂದ್ರ ಅವರ ಆಪ್ತ ನೆಕ್ಕಂಟಿ ನಾಗರಾಜ್ ಮತ್ತು ಇತರರಿಗೆ ಸೇರಿದ ₹4.95 ಕೋಟಿ ಮೌಲ್ಯದ ಸ್ಥಿರಾಸ್ತಿ ಮತ್ತು ಚರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿದೆ.

ನಿಗಮದ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡುವಲ್ಲಿ ಭಾಗಿಯಾಗಿದ್ದ ನೆಕ್ಕಂಟಿ ನಾಗರಾಜ್, ಚಂದ್ರಮೋಹನ್, ಜಿ.ಕಿಶೋರ್ ರೆಡ್ಡಿ, ಇ.ಸತ್ಯನಾರಾಯಣ ಅವರಿಗೆ ಸೇರಿದ ಕೃಷಿ ಜಮೀನು, ವಾಣಿಜ್ಯ ನಿವೇಶನ ಮತ್ತು ಬ್ಯಾಂಕ್ ಖಾತೆಗಳಲ್ಲಿನ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಇ.ಡಿ ಪ್ರಕಟಣೆಯಲ್ಲಿ ತಿಳಿಸಿದೆ.

ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಅಧೀನದಲ್ಲಿ ಬರುವ ನಿಗಮದ ಹಣವನ್ನು ಹೈದರಾಬಾದ್‌ನಲ್ಲಿನ ಸಹಕಾರಿ ಬ್ಯಾಂಕ್ ಒಂದರ 17 ಖಾತೆಗಳಿಗೆ ವರ್ಗಾವಣೆ ಮಾಡಿಕೊಳ್ಳಲಾಗಿತ್ತು. ನಿಗಮದ ಲೆಕ್ಕಾಧಿಕಾರಿ ಪಿ.ಚಂದ್ರಶೇಖರನ್ ಅವರು 2024ರ ಮೇ 21ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು. ನಿಗಮದ ಹಣ ದುರ್ಬಳಕೆ ಮಾಡಿಕೊಂಡಿರುವುದರ ಬಗ್ಗೆ ಆತ್ಮಹತ್ಯೆಗೂ ಮುನ್ನ ಬರೆದಿದ್ದ ಪತ್ರದಲ್ಲಿ ಉಲ್ಲೇಖಿಸಿದ್ದರು.

ಈ ಸಂಬಂಧ ರಾಜ್ಯ ಸರ್ಕಾರ ರಚನೆ ಮಾಡಿದ್ದ ವಿಶೇಷ ತನಿಖಾ ತಂಡ (ಎಸ್‌ಐಟಿ), ಸಿಬಿಐ ಮತ್ತು ಇ.ಡಿ ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಿಕೊಂಡು ತನಿಖೆ ನಡೆಸುತ್ತಿವೆ.

ಸಿಬಿಐನ ಎಫ್‌ಐಆರ್ ಆಧಾರದಲ್ಲಿ ತನಿಖೆ ನಡೆಸಿದ್ದ ಇ.ಡಿ, 'ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರಾಗಿದ್ದ ಬಿ.ನಾಗೇಂದ್ರ ಅವರ ಅಣತಿಯಂತೆ ಈ ಅಕ್ರಮ ನಡೆದಿದೆ. ಬಳ್ಳಾರಿ ಲೋಕಸಭಾ ಕ್ಷೇತ್ರದ ಚುನಾವಣೆಗೆ ನಿಗಮದ ₹20 ಕೋಟಿಯನ್ನು ಬಳಸಿಕೊಳ್ಳಲಾಗಿದೆ' ಎಂದು ಹೇಳಿತ್ತು.

ಅಂಕಿ ಅಂಶಗಳು

₹4.45 ಕೋಟಿ — ಮುಟ್ಟುಗೋಲು ಹಾಕಿಕೊಳ್ಳಲಾದ ಸ್ಥಿರಾಸ್ತಿಗಳ ಮೌಲ್ಯ

₹50 ಲಕ್ಷ — ಮುಟ್ಟುಗೋಲು ಹಾಕಿಕೊಳ್ಳಲಾದ ಬ್ಯಾಂಕ್‌ಗಳಲ್ಲಿನ ಠೇವಣಿ ಮೊತ್ತ

‘ಡಿಕೆಶಿ ಹಿಂದೂಗಳ ಕ್ಷಮೆ ಯಾಚಿಸಬೇಕು’

ಚಾಮುಂಡೇಶ್ವರಿ ದೇವಾಲಯ ಮುಟ್ಟಿದರೆ ರಾಜ್ಯದಲ್ಲಿ ದಂಗೆ ಆಗಲಿದೆ– ಆರ್. ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚಾಮುಂಡೇಶ್ವರಿ ದೇವಾಲಯ ಹಿಂದೂಗಳ ಆಸ್ತಿ ಅಲ್ಲ ಎನ್ನುವ ಮೂಲಕ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಹಿಂದೂಗಳ ಭಾವನೆಗೆ ಧಕ್ಕೆ ತಂದಿದ್ದಾರೆ. ಅವರು ತಕ್ಷಣ ಹಿಂದೂಗಳ ಬಳಿ ಕ್ಷಮೆ ಯಾಚಿಸಬೇಕು’ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಆಗ್ರಹಿಸಿದರು.

ಕೇಂದ್ರ ಸಚಿವ ವಿ. ಸೋಮಣ್ಣ ಜೊತೆ ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ‘ಕಾಂಗ್ರೆಸ್ ಸರ್ಕಾರ ಹಿಂದೂಗಳನ್ನು ಅಪಮಾನ ಮಾಡುತ್ತಿದೆ. ಚಾಮುಂಡಿ ಬೆಟ್ಟ ಹಿಂದೂಗಳ ಆಸ್ತಿಯಲ್ಲ ಎಂದು ಶಿವಕುಮಾರ್ ಹೇಳುವುದಾದರೆ, ಅದೇನು ವಕ್ಫ್ ಮಂಡಳಿಯ ಆಸ್ತಿಯೇ?’ ಎಂದರು.

‘ಚಾಮುಂಡೇಶ್ವರಿಯನ್ನು ಹಿಂದೂ ದೇವರಲ್ಲ ಎನ್ನುವ ಮೂಲಕ ಕಾಂಗ್ರೆಸ್ ಸರ್ಕಾರ ಮುಸ್ಲಿಮರ ಓಲೈಕೆ ಮಾಡುತ್ತಿದೆ. ಈ ದೇವಾಲಯವನ್ನು ಮುಟ್ಟಿದರೆ ಇಡೀ ರಾಜ್ಯದಲ್ಲಿ ದಂಗೆ ಆಗಲಿದೆ’ ಎಂದು ಎಚ್ಚರಿಕೆ ನೀಡಿದರು.

‘ಮೈಸೂರು, ವಿಜಯನಗರ ಸಾಮ್ರಾಜ್ಯ ಹಾಳು ಮಾಡಿದ ಮುಸ್ಲಿಮರಿಂದ ದಸರಾ ಉದ್ಘಾಟನೆ ಮಾಡಿಸುತ್ತಿರುವುದು ನಾಚಿಕೆಗೇಡು. ತಾಯಿ ಭುವನೇಶ್ವರಿಯನ್ನು ವಿಗ್ರಹ ಮಾಡಿದ್ದೀರಿ, ಬಾವುಟವನ್ನು ಅರಿಶಿನ–ಕುಂಕುಮ ಮಾಡಿಟ್ಟಿದ್ದೀರಿ ಎಂದು ಬಾನು ಮುಷ್ತಾಕ್ ಟೀಕಿಸಿದ್ದರು. ಹಾಗಾದರೆ, ಅರಿಶಿನ-ಕುಂಕುಮ ಹಚ್ಚದೇ ಸೆಂಟ್ ಹೊಡೆಯಬೇಕಿತ್ತೇ’ ಎಂದು ಪ್ರಶ್ನಿಸಿದರು.

‘ಚಾಮುಂಡೇಶ್ವರಿ ಕರೆಯುತ್ತಿದ್ದಾರೆ ಎಂದು ಬಾನು ಮುಷ್ತಾಕ್ ಹೇಳುತ್ತಾರೆ. ಆದರೆ, ಅವರನ್ನು ಮಸೀದಿಯವರೂ ಕರೆಯಲ್ಲ. ಕವಿ ನಿಸಾರ್ ಅಹಮದ್ ಬಗ್ಗೆ ಯಾರೂ ಮಾತಾಡುವುದಿಲ್ಲ. ಅವರು ಯಾವುದೇ ಧರ್ಮದ ವಿರುದ್ಧವಾಗಿ ಮಾತನಾಡಲಿಲ್ಲ. ಅಂಥವರಿಗೆ ಬಾನು ಮುಷ್ತಾಕ್ ಅವರನ್ನು ಹೋಲಿಸುವುದೇಕೆ’ ಎಂದರು.

‘ಮಾತಿನಲ್ಲಿ ವಿವಾದದ ಅಂಶ ಇಲ್ಲ’

‘ಚಾಮುಂಡಿ ಬೆಟ್ಟ ಎಂಬುದು ಧಾರ್ಮಿಕ ಭಾವನೆಯನ್ನು ಪರಸ್ಪರ ಗೌರವಿಸುವ ಎಲ್ಲರಿಗೂ ಸೇರಿದ್ದು ಎಂದು ಹೇಳಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಮಾತನ್ನು ಸರಿಯಾಗಿ ಅರ್ಥೈಸದೆ, ವಿವಾದ ಮಾಡುತ್ತಿರುವುದು ಬೇಸರದ ಸಂಗತಿ’ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಹೇಳಿದ್ದಾರೆ.

‘ಎಲ್ಲರೂ ಕೂಡಿ ಆಚರಿಸುವ ದಸರಾ ನಾಡ ಹಬ್ಬದಲ್ಲೂ ಧಾರ್ಮಿಕ ವಿಷ ಬಿತ್ತುವ ಕೆಲಸ ಮಾಡುತ್ತಿರುವ ಬಿಜೆಪಿಗರಿಗೆ ನಿಜಕ್ಕೂ ಈ ನೆಲದ ಬಹುತ್ವದ ವಿಷಯಗಳಾಗಲಿ, ಸಂವಿಧಾನವು ನೇರವಾಗಿ ಸಾರುತ್ತಿರುವ ಭಾವೈಕ್ಯದ ಬಗ್ಗೆಯಾಗಲಿ ಅರ್ಥವಾಗುತ್ತಿಲ್ಲ’ ಎಂದಿದ್ದಾರೆ.

‘ಚುನಾವಣಾ ರಾಜಕೀಯದ ದೃಷ್ಟಿಯಿಂದ ಕೋಮು ರಾಜಕಾರಣ ಮಾಡುತ್ತಿರುವ ಬಿಜೆಪಿಗರಿಗೆ ಜನರ ಬದುಕು ಮತ್ತು ಅವರ ಅನ್ನದ ವಿಷಯದಲ್ಲಿ ಕಿಂಚಿತ್ ಆಲೋಚನೆ ಇಲ್ಲ. ಕೋಮುವಾದಿ ಬಿಜೆಪಿಗರು ಮತ್ತೊಮ್ಮೆ ಜನರಿಂದ ಛೀಮಾರಿ ಹಾಕಿಸಿಕೊಳ್ಳುವ ಸಂದರ್ಭ ಬರಲಿದೆ’ ಎಂದೂ ಹೇಳಿದ್ದಾರೆ.

‘ಧಾರ್ಮಿಕ ನಂಬಿಕೆಗೆ ಚ್ಯುತಿ’

‘ನಾಡಿನ ಇತಿಹಾಸ ಗೊತ್ತಿಲ್ಲದವರು ಮಾತನಾಡಿದರೆ ಸಹಿಸಿಕೊಳ್ಳಬಹುದು. ಆದರೆ, ಶಿವಕುಮಾರ್ ಅವರು ಚಾಮುಂಡಿ ಬೆಟ್ಟದ ಬಗ್ಗೆ ಮಾತನಾಡಿರುವುದು ಅಕ್ಷಮ್ಯ’ ಎಂದು ಕೇಂದ್ರ ಜಲಶಕ್ತಿ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿ, ‘ಹಿಂದೂ ಧರ್ಮಕ್ಕೆ ಸಣ್ಣ ಅಪಚಾರ ನಡೆದರೂ ಕೆಲಸ ಮಾಡಬೇಕಿರುವುದು ನಮ್ಮ ಕರ್ತವ್ಯ. ಶಿವಕುಮಾರ್ ಅವರು ತಮ್ಮ ಹೇಳಿಕೆಯನ್ನು ಹಿಂಪಡೆಯುವುದು ಒಳ್ಳೆಯದು. ಕಾಂಗ್ರೆಸ್ ನಾಯಕರು ಇದೇ ರೀತಿ ಹೇಳಿಕೆ ನೀಡುತ್ತಿದ್ದರೆ ನಾಮಾವಶೇಷ ಆಗುತ್ತಾರೆ’ ಎಂದರು.

‘ಧರ್ಮಸ್ಥಳದ ವಿಚಾರದಲ್ಲಿ ಬಿಜೆಪಿ ಎಂದೂ ರಾಜಕೀಯ ಮಾಡಿಲ್ಲ. ಕೆಲವರು ಧಾರ್ಮಿಕ ನಂಬಿಕೆಗೆ ಚ್ಯುತಿ ತರುವ ಕೆಲಸ ಮಾಡುತ್ತಿದ್ದಾರೆ’ ಎಂದರು.

ಮಾತನಾಡದಿರುವುದೇ ಉತ್ತಮ: ಶಿವಕುಮಾರ್


ಶಿವಕುಮಾರ್

‘ರಾಜಕೀಯದವರು, ಮಾಧ್ಯಮಗಳು, ಪ್ರಮೋದಾದೇವಿ, ಸಂಸದ ಯದುವೀರ್ ಹೀಗೇ ಎಲ್ಲರೂ ತಪ್ಪು ಹುಡುಕುವವರೇ. ಸತ್ಯ ಹೇಳಿದರೆ ಕೆಲವರು ಸಹಿಸಲ್ಲ, ಹೀಗಾಗಿ, ನಾನು ಮಾತನಾಡದಿರುವುದೇ ಉತ್ತಮ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರತಿಕ್ರಿಯಿಸಿದರು.

ದಸರಾ ಉದ್ಘಾಟಕರ ಆಯ್ಕೆ ವಿಚಾರವಾಗಿ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರು ಸಾಮಾಜಿಕ ಜಾಲತಾಣದಲ್ಲಿ ಮಾಡಿರುವ ಪೋಸ್ಟ್ ಬಗ್ಗೆ ಸುದ್ದಿಗಾರರು ಕೇಳಿದಾಗ, ‘ನಾನು ಸದನದಲ್ಲಿ ಸೇರಿದಂತೆ ಎಲ್ಲಿ ಏನೇ ಮಾತನಾಡಿದರೂ, ಅದರಲ್ಲಿ ಕೇವಲ ತಪ್ಪು ಕಂಡುಹಿಡಿಯುವುದೇ ಬೇರೆಯವರ ಕೆಲಸವಾಗಿದೆ’ ಎಂದರು.

‘ಇಂತಹ ವಿಚಾರಗಳ ಬಗ್ಗೆ ಪ್ರತಿಕ್ರಿಯಿಸಲು ಬೇರೆ ನಾಯಕರು ಮತ್ತು ಪಕ್ಷದ ವಕ್ತಾರರಿದ್ದಾರೆ. ಅವರ ಬಳಿ ಮಾತನಾಡಿ’ ಎಂದರು.

‘ಹಿಂದೂ ಎಂದು ಸಾಬೀತುಪಡಿಸಲು ಬಿಜೆಪಿ ಸದಸ್ಯತ್ವ ಪಡೆಯಬೇಕಿಲ್ಲ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹ ಅಪ್ಪಟ ಹಿಂದೂ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಹೇಳಿದರು.

‘ಉದ್ಧಟತನ ಬೇಡವಾಗಿತ್ತು’

ಬಾನು ಮುಷ್ತಾಕ್ ಅವರನ್ನು ಆಹ್ವಾನಿಸಿರುವುದಕ್ಕೆ ನನ್ನ ಯಾವ ತಕರಾರೂ ಇಲ್ಲ. ಆದರೆ ಕೆಲವರು ಈ ಬಗ್ಗೆ ಬಹಳ ಉದ್ಧಟತನದಿಂದ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಅದು ಧಾರ್ಮಿಕ ಕ್ಷೇತ್ರದ ವಿಚಾರದಲ್ಲಿ ಬೇಡ, ಬೇಕಾಗಿಯೂ ಇಲ್ಲ. ಬಾನು ಮುಷ್ತಾಕ್ ಅವರಿಂದ ಪೂಜೆ ಮಾಡಿಸುವುದು ಬೇರೆ. ಆದರೆ ಚಾಮುಂಡೇಶ್ವರಿ ದೇಗುಲ ಹಿಂದೂಗಳ ಆಸ್ತಿಯಲ್ಲ ಎಂದಿದ್ದಾರೆ. ಹಿಂದೂ ಧಾರ್ಮಿಕ ಕ್ಷೇತ್ರಗಳಿಗೆ ಈ ರೀತಿ ಅಪಚಾರ ಸರಿಯಲ್ಲ. ಇದು ಕಾಂಗ್ರೆಸ್ ಸರ್ಕಾರಕ್ಕೆ ಆಪತ್ತು ತರಲಿದೆ.

ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

‘ಒತ್ತಡಕ್ಕೆ ಮಣಿದ ಡಿಕೆಶಿ’

‘ಚಾಮುಂಡಿ ಬೆಟ್ಟ ಕೇವಲ ಹಿಂದೂಗಳ ಆಸ್ತಿಯಲ್ಲ ಎಂಬ ಹೇಳಿಕೆಯನ್ನು ಡಿ.ಕೆ. ಶಿವಕುಮಾರ್ ವಾಪಸ್ ಪಡೆಯಬೇಕು. ಸದನದಲ್ಲೇ ‘ನಮಸ್ತೆ ಸದಾ ವತ್ಸಲೆ’ ಗೀತೆ ಹಾಡಿದ್ದ ಅವರು ಯಾರದೋ ಒತ್ತಡಕ್ಕೆ ಮಣಿದು, ಗಾಂಧಿ ಕುಟುಂಬವನ್ನು ಸಂತಸಪಡಿಸಲು ಇಂತಹ ಹೇಳಿಕೆ ನೀಡಬಾರದಿತ್ತು’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಡಿಕೆಶಿ ಅವರದ್ದು ಬೇಜವಾಬ್ದಾರಿ ಹೇಳಿಕೆ: ಯದುವೀರ್

ಮೈಸೂರು: ‘ಚಾಮುಂಡಿ ಬೆಟ್ಟ ಹಿಂದೂಗಳ ಆಸ್ತಿಯಲ್ಲ ಎಂಬ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆ ಬೇಜವಾಬ್ದಾರಿಯಿಂದ ಕೂಡಿದ್ದು, ಆಘಾತಕಾರಿ, ಖಂಡನೀಯ. ಜವಾಬ್ದಾರಿಯುತ ಸ್ಥಾನದಲ್ಲಿರುವವರು ಇಂತಹ ಬೇಜವಾಬ್ದಾರಿ ಹೇಳಿಕೆಗಳನ್ನು ಕೊಡಬಾರದು’ ಎಂದು ರಾಜವಂಶಸ್ಥರೂ ಆಗಿರುವ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಇಲ್ಲಿ ಬುಧವಾರ ಪತ್ರಕರ್ತರೊಂದಿಗೆ ಮಾತನಾಡಿ, ‘ಈ ದೇವಸ್ಥಾನದ ಮೇಲೆ ಜಾತ್ಯತೀತ ಪಟ್ಟಿಯನ್ನು ಹಾಕುವ ಅಗತ್ಯವಿಲ್ಲ. ಇದು ಸಹಜವಾಗಿಯೇ ಬಹುತ್ವದ ತತ್ವದ ಮೇಲಿರುವುದರಿಂದ, ಆಧುನಿಕ ಕಾಲದಲ್ಲಿ ಜಾತ್ಯತೀತವಾಗಿ ನೋಡಬಹುದು. ಆದರೆ, ಇದು ಭಾರತೀಯ, ಹಿಂದೂ ಧರ್ಮಕ್ಕೆ ಸೇರಿದ ಶಕ್ತಿ ಪೀಠ. ಕೋಟ್ಯಂತರ ಭಕ್ತರು ಚಾಮುಂಡಿ ತಾಯಿಯ ಮೇಲಿನ ನಂಬಿಕೆಯಿಂದ ಬಂದು ಪ್ರಾರ್ಥಿಸುತ್ತಾರೆ. ಆದರೆ ಅವರ ಭಾವನೆಗಳಿಗೆ ಧಕ್ಕೆಯಾಗುತ್ತಿದೆ’ ಎಂದರು.

ಚಾಮುಂಡೇಶ್ವರಿ ತಾಯಿಯೇ ಕರೆಸಿಕೊಳ್ಳುತ್ತಿದ್ದಾಳೆ: ಬಾನು

ಪ್ರಜಾವಾಣಿ ವಾರ್ತೆ


ಹಾಸನದ ತಮ್ಮ ನಿವಾಸದಲ್ಲಿ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಸನ್ಮಾನ ಸ್ವೀಕರಿಸಿ ಲೇಖಕಿ ಬಾನು ಮುಷ್ತಾಕ್ ಮಾತನಾಡಿದರು

ಹಾಸನ: ‘ಚಾಮುಂಡೇಶ್ವರಿ ತಾಯಿಯೇ ನನ್ನನ್ನು ಮೈಸೂರು ದಸರಾ ಉತ್ಸವದ ಉದ್ಘಾಟನೆಗೆ ಕರೆಸಿಕೊಳ್ಳುತ್ತಿದ್ದಾಳೆ’ ಎಂದು ಲೇಖಕಿ ಬಾನು ಮುಷ್ತಾಕ್ ಹೇಳಿದರು.

ತಮ್ಮ ಮನೆಯಲ್ಲಿ ಮಂಗಳವಾರ ರಾತ್ರಿ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಸನ್ಮಾನ ಸ್ವೀಕರಿಸಿ ಮಾತನಾಡಿ, ‘ನನ್ನ ಗೆಳತಿ, ಲೇಖಕಿ ಮೈಸೂರಿನ ಮೀನಾ ಅವರು ನನಗೆ ಬುಕರ್ ಪ್ರಶಸ್ತಿ ಬರಲಿ ಎಂದು ಚಾಮುಂಡೇಶ್ವರಿಗೆ ಹರಕೆ ಹೊತ್ತಿದ್ದರೆಂಬುದನ್ನು ಕೇಳಿ ಸಂತೋಷಪಟ್ಟಿದ್ದೆ. ಸಾಹಿತ್ಯ ಉತ್ಸವದ ಸಂದರ್ಭದಲ್ಲಿ ಮೈಸೂರಿಗೆ ಹೋಗಿದ್ದೆ. ಆಗ ಚಾಮುಂಡಿ ಬೆಟ್ಟಕ್ಕೆ ಹೋಗಿ ಹರಕೆ ತೀರಿಸೋಣವೆಂದಿದ್ದರು. ಸಮಯದ ಅಭಾವದಿಂದ ಆಗಿರಲಿಲ್ಲ. ಸದ್ಯದಲ್ಲೇ ಬರುವುದಾಗಿ ಹೇಳಿ ಬಂದಿದ್ದೆ. ಈಗ ಚಾಮುಂಡೇಶ್ವರಿ ತಾಯಿಯೇ ನನ್ನನ್ನು ಕರೆಸಿಕೊಳ್ಳುತ್ತಿದ್ದಾಳೆ’ ಎಂದರು.

‘ಕೋಟ್ಯಂತರ ಕನ್ನಡಿಗರು ಎಷ್ಟೊಂದು ಪ್ರೀತಿ, ಅಭಿಮಾನ ತೋರಿಸುತ್ತಿದ್ದಾರೆ. ಒಬ್ಬಿಬ್ಬರ ನಕಾರಾತ್ಮಕ ಮಾತುಗಳಿಗೆ ಪ್ರತಿಕ್ರಿಯಿಸುವ ಅಗತ್ಯವಿಲ್ಲ. ಆಡಳಿತ ಪಕ್ಷ, ವಿರೋಧ ಪಕ್ಷಗಳು ರಾಜಕೀಯ ಮಾಡಬೇಕು. ಆದರೆ ಯಾವುದರ ಬಗ್ಗೆ ಮಾಡಬೇಕು ಅಥವಾ ಮಾಡಬಾರದು ಎಂಬ ಪ್ರಜ್ಞೆ ರಾಜಕಾರಣಿಗಳಿಗೆ ಇರಬೇಕು’ ಎಂದರು.

‘ಕನ್ನಡವನ್ನು ಪ್ರೀತಿಸಿ, ಬಳಸಿ, ಅಂತರರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದು, ಅಲ್ಲಿನವರ ಬಾಯಲ್ಲಿ ಕನ್ನಡ ಎಂದು ಹೇಳಿಸುತ್ತಿದ್ದೇನೆ. ನನ್ನಂತೆ ನೀವೂ ಸಾಧಿಸಿದರೆ ಟೀಕಿಸಲು ಅರ್ಹತೆ ಸಿಗುತ್ತದೆ. ಇಲ್ಲದಿದ್ದರೆ ಮಾತಿನಲ್ಲಿ ಸ್ಪಷ್ಟತೆ ಇರುವುದಿಲ್ಲ’ ಎಂದರು.

‘ಹಾವೇರಿ ಸಾಹಿತ್ಯ ಸಮ್ಮೇಳನದಲ್ಲಿ ಮುಸ್ಲಿಂ ಸಾಹಿತಿಗಳನ್ನು ದೂರವಿಟ್ಟಿದ್ದಕ್ಕೆ ಆಯೋಜನೆಗೊಂಡಿದ್ದ ಜನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ ನಾನು ಆಡಿದ್ದ ಮಾತಿನ ತುಣುಕು ಹಾಕಿ, ನನ್ನ ವಿರುದ್ಧ ಕೆಲವರು ಆರೋಪಿಸಿದ್ದಾರೆ. ಕನ್ನಡವನ್ನು ಭಾಷೆಯಾಗಿ ಬಳಸುವ ಬದಲು, ಭಾವುಕವಾಗಿ ಪರಿಗಣಿಸಿದ್ದೀರಿ. ದೇವತೆಯಾಗಿ ಮಾಡಿ ಮಂದಾಸನದಲ್ಲಿ ಇದ್ದಾಗ, ಅದಕ್ಕೆ ಕೈಮುಗಿದು ಬಂದರೆ ಮುಗೀತು. ಭಾಷೆಯನ್ನು ಭಾಷೆಯಾಗಿ ಪರಿಗಣಿಸಿದಾಗ ನಾನು, ನೀವು ಎಲ್ಲರೂ ಓದಬೇಕಾಗುತ್ತೆ. ನಮ್ಮ ಭಾಷೆಯನ್ನಾಗಿ ಕನ್ನಡವನ್ನು ನಾವು ಬಳಸೋಣ’ ಎಂದರು.

‘ಮಾತು ತಿರುಚುವ ಅಗತ್ಯವಿಲ್ಲ’

ಗೋಕಾಕ್ ಸಮಿತಿ ಹಾಸನಕ್ಕೆ ಬಂದಾಗ, ಮಕ್ಕಳನ್ನು ಕನ್ನಡ ಶಾಲೆಗೆ ಕಳುಹಿಸುತ್ತಿರುವವರಷ್ಟೇ ಮಾತನಾಡಬೇಕು ಎಂದಿದ್ದರು. ಆಗ ಮಾತನಾಡಿದ್ದ ಏಕೈಕ ಮಹಿಳೆ ನಾನು. ನನ್ನ ಮೂವರು ಹೆಣ್ಣು ಮಕ್ಕಳು ಕನ್ನಡ ಶಾಲೆಯಲ್ಲಿ ಓದುತ್ತಿದ್ದರು. ನಾನು ಹೇಳಿದ ಮಾತು ತಿರುಚುವ ಅಗತ್ಯವಿಲ್ಲ

ಬಾನು ಮುಷ್ತಾಕ್, ಲೇಖಕಿ

ದಸರಾ ಆಚರಣೆ ಬೆಳವಣಿಗೆ ಕಳವಳಕಾರಿ: ಪ್ರಮೋದಾದೇವಿ


ಪ್ರಮೋದಾದೇವಿ

ಮೈಸೂರು: ‘ಈ ವರ್ಷದ ದಸರಾ ಆಚರಣೆಯ ಬೆಳವಣಿಗೆಗಳು ಕಳವಳಕಾರಿಯಾಗಿವೆ’ ಎಂದು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಹೇಳಿದ್ದಾರೆ.

ಈ ಬಗ್ಗೆ ಪ್ರಕಟಣೆ ನೀಡಿರುವ ಅವರು, ‘ರಾಜ್ಯ ಸರ್ಕಾರವು ಆಯೋಜಿಸಲು ಉದ್ದೇಶಿಸಿರುವ ದಸರಾ ಆಚರಣೆಗಳು ಹಾಗೂ ವಿಶೇಷವಾಗಿ ಚಾಮುಂಡಿ ಬೆಟ್ಟದ ಮೇಲಿರುವ ಪವಿತ್ರ ಚಾಮುಂಡೇಶ್ವರಿ ದೇವಸ್ಥಾನದ ಸುತ್ತ ನಡೆದಿರುವ ರಾಜಕೀಯವು ತೀವ್ರ ಬೇಸರ ಮೂಡಿಸಿದೆ’ ಎಂದಿದ್ದಾರೆ.

‘ಈ ವರ್ಷದ ನಾಡಹಬ್ಬ (ಜನತಾ ದಸರಾ) ಉದ್ಘಾಟನೆಗೆ ಆಹ್ವಾನಿಸಲಾದ ಗಣ್ಯರ ಆಯ್ಕೆಯು ಸಂಘರ್ಷದ ಅಭಿಪ್ರಾಯಗಳಿಗೆ ಕಾರಣವಾಗಿದೆ. ಚಾಮುಂಡೇಶ್ವರಿ ದೇವಸ್ಥಾನ ಹಿಂದೂಗಳಿಗೆ ಸೇರಿಲ್ಲ ಎಂಬಂತಹ ಸಂವೇದನಾರಹಿತ ಹೇಳಿಕೆ ಅನಗತ್ಯವಾಗಿತ್ತು. ಅದು ಹಿಂದೂ ದೇವಸ್ಥಾನ ಅಲ್ಲದಿದ್ದರೆ, ಅದನ್ನು ಎಂದಿಗೂ ಮುಜರಾಯಿ ಇಲಾಖೆಯ ವ್ಯಾಪ್ತಿಗೆ ತರುತ್ತಿರಲಿಲ್ಲ’ ಎಂದು ಪ್ರತಿಪಾದಿಸಿದ್ದಾರೆ.

‘ಸರ್ಕಾರದ ದಸರಾ ಸಾಂಸ್ಕೃತಿಕ ಆಚರಣೆಯಷ್ಟೆ ಎಂಬುದು ನಮ್ಮ ಅಭಿಪ್ರಾಯ. ರಾಜ್ಯ ಸರ್ಕಾರವು ಇಂತಹ ಉತ್ಸವವನ್ನು ನಡೆಸುವುದರಿಂದ ಧಾರ್ಮಿಕ ಪಾವಿತ್ರ್ಯ, ಸಂಪ್ರದಾಯ ಅಥವಾ ಪರಂಪರೆಯನ್ನು ಪ್ರತಿಪಾದಿಸಲು ಸಾಧ್ಯವಿಲ್ಲ. ಸರ್ಕಾರವು ಆಯೋಜಿಸುವ ಆಚರಣೆಗಳು ಧಾರ್ಮಿಕ ಸ್ವರೂಪದ್ದಾಗಿಲ್ಲ’ ಎಂದು ವಿಶ್ಲೇಷಿಸಿದ್ದಾರೆ.

‘ನಾವು ಈ ಧಾರ್ಮಿಕ ಆಚರಣೆಗಳನ್ನು ಖಾಸಗಿಯಾಗಿ, ಹಿಂದಿನ ಧಾರ್ಮಿಕ ಪದ್ಧತಿಗಳು ಮತ್ತು ಸಂಪ್ರದಾಯಗಳಿಗೆ ಅನುಗುಣವಾಗಿ ಆಚರಿಸುತ್ತಾ ಬರುತ್ತಿದ್ದೇವೆ. ಸರ್ಕಾರದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅರಮನೆಯ ಮುಂದೆ ಆಯೋಜಿಸಲಾಗಿರುವುದರಿಂದ, ನಮ್ಮ ಸಾಂಪ್ರದಾಯಿಕ ಆಚರಣೆಗಳೊಂದಿಗೆ ಯಾವುದೇ ಅತಿಕ್ರಮಣ ತಪ್ಪಿಸಲು, ವಿಜಯದಶಮಿಯ ಸಂದರ್ಭದಲ್ಲಿ ಚಾಮುಂಡೇಶ್ವರಿಯ ಮೆರವಣಿಗೆಗೆ ಸಮಯ ನಿಗದಿಪಡಿಸಲಾಗುತ್ತದೆ’ ಎಂದಿದ್ದಾರೆ.

ಆಯ್ಕೆ ವಿರುದ್ಧ ದೂರು ಬಂದಿಲ್ಲ: ಡಿ.ಸಿ

ಮೈಸೂರು: ‘ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಅವರ ಆಯ್ಕೆ ವಿರೋಧಿಸಿ ಯಾರಿಂದಲೂ ದೂರು ಬಂದಿಲ್ಲ’ ಎಂದು ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದರು. ಇಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಉದ್ಘಾಟಕರು ಸೇರಿ ಎಲ್ಲ ಗಣ್ಯರನ್ನು ಸೆಪ್ಟೆಂಬರ್ ಮೊದಲ ಅಥವಾ 2ನೇ ವಾರದಲ್ಲಿ ಅಧಿಕೃತವಾಗಿ ಆಹ್ವಾನಿಸಲಾಗುವುದು’ ಎಂದರು.

‘ನಿವೃತ್ತಿಯಾಗಬೇಕು ಎಂದಿಲ್ಲ’

ಒಂದನೇ ಪುಟದಿಂದ...

‘ನಾನು ಯಾವುದೇ ಸಂದರ್ಭದಲ್ಲಿಯೂ ನಿವೃತ್ತಿಯಾಗಲು ಸಿದ್ಧ. ಆದರೆ, ಸಂಘವು ಬಯಸುವವರೆಗೂ ನಾನು ಕೆಲಸ ಮಾಡುತ್ತೇನೆ’ ಎಂದರು.

ಮೂರು ಮಕ್ಕಳಿರಲಿ: ‘ಭಾರತದ ಪ್ರತಿ ಕುಟುಂಬವೂ ಮೂರು ಮಕ್ಕಳನ್ನು ಹೊಂದುವುದು ಅಗತ್ಯ. ದೇಶದಲ್ಲಿ 2.1ರ ಫಲವತ್ತತೆ ದರ ಹೊಂದಿರುವ ಸಮುದಾಯಗಳು ನಿಧಾನವಾಗಿ ನಶಿಸುತ್ತಿವೆ. ಜನಸಂಖ್ಯಾ ಕುಸಿತ ತಡೆಯಲು ಹಾಗೂ ಸ್ಥಿರತೆ ತರಲು ಪ್ರತಿ ಕುಟುಂಬ ಮೂರು ಮಕ್ಕಳನ್ನು ಹೊಂದುವುದು ಅಗತ್ಯ’ ಎಂದರು.

ಅಕ್ರಮ ವಲಸೆಗೆ ಕಡಿವಾಣ: ‘ಮತಾಂತರ ಹಾಗೂ ಅಕ್ರಮ ವಲಸೆಯೇ ಜನಸಂಖ್ಯಾ ಸ್ವರೂಪದ ಅಸಮತೋಲನಕ್ಕೆ ಕಾರಣವಾಗಿದೆ. ಅಕ್ರಮ ವಲಸೆಯನ್ನು ಸರ್ಕಾರ ತಡೆಯಬೇಕಿದ್ದು, ಸಮಾಜವು ಈ ವಿಚಾರದಲ್ಲಿ ಕೈ ಜೋಡಿಸಬೇಕು’ ಎಂದು ಭಾಗವತ್ ಸಲಹೆ ನೀಡಿದರು.

‘ಧರ್ಮವು ವೈಯಕ್ತಿಕ ಆಯ್ಕೆಯಾಗಿದ್ದು, ಇದರಲ್ಲಿ ಯಾವುದೇ ಬಲವಂತ ಅಥವಾ ಆಮಿಷ ಇರಬಾರದು’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ‘ಅಕ್ರಮ ವಲಸಿಗರಿಗೆ ಯಾವುದೇ ಕಾರಣಕ್ಕೂ ಉದ್ಯೋಗ ನೀಡಬಾರದು. ಮುಸ್ಲಿಮರು ಸೇರಿದಂತೆ ನಮ್ಮವರಿಗೆ ಮಾತ್ರ ಉದ್ಯೋಗ ನೀಡಬೇಕು’ ಎಂದು ಹೇಳಿದರು.

ದಾಳಿ ಒಪ್ಪಲ್ಲ: ‘ಆತ್ಮವಿಶ್ವಾಸದ ಕೊರತೆಯಿಂದ ಹಿಂದೂಗಳು ಅಸುರಕ್ಷಿತರಾಗಿದ್ದಾರೆ. ಭಾರತದಲ್ಲಿ ಇಸ್ಲಾಮ್‌ಗೆ ಜಾಗ ಇದೆ. ಧಾರ್ಮಿಕತೆ ಸೇರಿದಂತೆ ಯಾವುದೇ ಮಾದರಿಯ ದಾಳಿ ಬಗ್ಗೆ ಆರ್‌ಎಸ್‌ಎಸ್ ನಂಬಿಕೆ ಹೊಂದಿಲ್ಲ’ ಎಂದು ಸ್ಪಷ್ಟಪಡಿಸಿದ್ದಾರೆ.

ಭಾಗವತ್ ಹೇಳಿದ್ದು...

ಒಂದನೇ ಪುಟದಿಂದ...

- ಸಂವಿಧಾನಾತ್ಮಕವಾದ ಮೀಸಲಾತಿ ನೀತಿಗೆ ಸಂಪೂರ್ಣ ಬೆಂಬಲವಿದೆ
- ಜಾತಿ ವ್ಯವಸ್ಥೆಯು ಒಂದು ಕಾಲದಲ್ಲಿ ಇತ್ತು. ಇದು ಹೋಗಬೇಕಿದೆ
- ಶೋಷಣೆ ಮುಕ್ತ ಹಾಗೂ ಸಮಾನತೆಯ ವ್ಯವಸ್ಥೆಯ ಮೌಲ್ಯಮಾಪನದ ಅಗತ್ಯವಿದೆ
- ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆ ಸ್ವೀಕಾರಾರ್ಹವಲ್ಲ
- ಆಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ– ಆರ್‌ಎಸ್‌ಎಸ್ ಬೆಂಬಲಿಸಿದ ಏಕೈಕ ಚಳವಳಿ
- ಇಂಗ್ಲಿಷ್ ಸೇರಿದಂತೆ ಯಾವುದೇ ಭಾಷೆಯನ್ನು ವಿರೋಧಿಸಲ್ಲ
- ಸಂಸ್ಕೃತ ಭಾಷೆಯ ಅರಿವು ಅಗತ್ಯ, ಸಂಸ್ಕೃತ ಕಡ್ಡಾಯಗೊಳಿಸುವ ನಿಲುವು ಒಪ್ಪಲ್ಲ
- ಮುಖ್ಯವಾಹಿನಿಯ ಶಿಕ್ಷಣದೊಂದಿಗೆ ಗುರುಕುಲದ ಶಿಕ್ಷಣವನ್ನು ಸಂಯೋಜಿಸಬೇಕು
- ಫಿನ್ಲೆಂಡ್‌ನ ಶಿಕ್ಷಣದ ಮಾದರಿ ನಮಗೂ ಅಗತ್ಯ
- ಆಧುನಿಕ ಶಿಕ್ಷಣ, ತಂತ್ರಜ್ಞಾನ ವಿರೋಧಿಸಲ್ಲ, ಇದರ ಬಳಕೆ ಹೇಗೆ ಎಂಬುದು ಜನರ ಕೈಯಲ್ಲಿದೆ

ಮೈಸೂರು: 5ನೇ ರಾಜ್ಯ ಮಟ್ಟದ ಸಮ್ಮೇಳನ, ಪತ್ರಿಕಾ ವಿತರಕರ ದಿನಾಚರಣೆ

ವಿತರಕರ ಕ್ಷೇಮಾಭಿವೃದ್ಧಿ ನಿಧಿಗೆ ಆಗ್ರಹ

ಪ್ರಜಾವಾಣಿ ವಾರ್ತೆ


ಮೈಸೂರಿನಲ್ಲಿ ಗುರುವಾರ ನಡೆದ 5ನೇ ರಾಜ್ಯ ಪತ್ರಿಕಾ ವಿತರಕರ ಸಮ್ಮೇಳನದಲ್ಲಿ ಪತ್ರಿಕಾ ವಿತರಕರ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಯಿತು

ಮೈಸೂರು: ‘ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ನಿಧಿಯನ್ನು ಮರು ಸ್ಥಾಪಿಸಬೇಕು, ಮಾಧ್ಯಮ ಅಕಾಡೆಮಿಯಲ್ಲಿ ಸದಸ್ಯತ್ವ ನೀಡಬೇಕು’ ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಇಲ್ಲಿ ನಡೆದ 5ನೇ ರಾಜ್ಯ ಮಟ್ಟದ ಪತ್ರಿಕಾ ವಿತರಕರ ಸಮ್ಮೇಳನದಲ್ಲಿ ಮಂಡಿಸಲಾಯಿತು.

ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ಹಾಗೂ ಮೈಸೂರು ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಸಹಯೋಗದಲ್ಲಿ ನಗರದ ಕೆಎಸ್‌ಒಯು ಘಟಿಕೋತ್ಸವ ಭವನದ ‘ತಾತಯ್ಯನವರ ವೇದಿಕೆ’ಯಲ್ಲಿ ಗುರುವಾರ ಆಯೋಜಿಸಿದ್ದ ವಿಶ್ವ ಪತ್ರಿಕಾ ವಿತರಕರ ದಿನಾಚರಣೆ ಹಾಗೂ ಸಮ್ಮೇಳನದಲ್ಲಿ, ಒಕ್ಕೂಟದ ಅಧ್ಯಕ್ಷ ಕೆ.ಶಂಭುಲಿಂಗ ಮಾತನಾಡಿ, ‘ಈ ಹಿಂದೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ರಚಿಸಿದ್ದ ಕ್ಷೇಮಾಭಿವೃದ್ಧಿ ನಿಧಿಯನ್ನು ಮರು ಸ್ಥಾಪಿಸಬೇಕು’ ಎಂದು ಒತ್ತಾಯಿಸಿದರು.

‘ಮಾಧ್ಯಮ ಅಕಾಡೆಮಿಯಲ್ಲಿ ಪ್ರಾತಿನಿಧ್ಯ ದೊರಕಿಸಬೇಕು. ಅಕಾಲಿಕ ಮರಣ ಹೊಂದಿದವರ ಕುಟುಂಬದವರಿಗೆ ₹10 ಲಕ್ಷ ಪರಿಹಾರ ನೀಡಬೇಕು. 60 ವರ್ಷ ಮೀರಿದವರಿಗೆ ₹5 ಸಾವಿರ ಪಿಂಚಣಿ ಕೊಡಬೇಕು. ಉಚಿತ ವೈದ್ಯಕೀಯ ಸೌಲಭ್ಯ ಕಲ್ಪಿಸಬೇಕು. ಮೈಸೂರಿನಲ್ಲಿ ಪತ್ರಿಕಾ ವಿತರಣಾ ಕೇಂದ್ರ ನಿರ್ಮಿಸಬೇಕು ಹಾಗೂ ಎಂಡಿಎಯಿಂದ ಸಿಎ ನಿವೇಶನ ಮಂಜೂರು ಮಾಡಬೇಕು’ ಎಂದು ಆಗ್ರಹಿಸಲಾಯಿತು.

ಮುಖ್ಯಾಂಶಗಳು
- ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದಿಂದ ಆಯೋಜನೆ
- ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ
- ನೂರಾರು ಮಂದಿ ಭಾಗಿ

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ‘ವಿತರಕರನ್ನು ಮೊದಲು ಗುರುತಿಸಿದ್ದೇ ಮುಖ್ಯಮಂತ್ರಿ ಸಿದ್ದರಾಮಯ್ಯ. ವಿತರಕರ ಬೇಡಿಕೆಗಳನ್ನು ಅವರ ಗಮನಕ್ಕೆ ತರಲಾಗುವುದು’ ಎಂದು ಭರವಸೆ ನೀಡಿದರು. ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯು ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿತರಕರ ಮಕ್ಕಳನ್ನು ಪುರಸ್ಕರಿಸಲಾಯಿತು.

ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ವಿತರಕ ಎಂ.ಎನ್. ನಾಗರಾಜ್ ಅವರಿಗೆ ಸಮ್ಮೇಳನದ ‘ಅಧ್ಯಕ್ಷ ಸ್ಥಾನದ ಗೌರವ’ ನೀಡಲಾಯಿತು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಮೈಸೂರಿನ ಜವರಪ್ಪ ಹಾಗೂ ಸುವರ್ಣ ಕರ್ನಾಟಕ ಪ್ರಶಸ್ತಿ ಪುರಸ್ಕೃತರಾದ ತುಮಕೂರಿನ ಲಕ್ಷ್ಮೀನರಸಪ್ಪ ಅವರನ್ನು ಅಭಿನಂದಿಸಲಾಯಿತು. ಆರಂಭದಲ್ಲಿ ನಾಡಗೀತೆಯೊಂದಿಗೆ, ಪತ್ರಿಕಾ ವಿತರಕರ ಗೀತೆಯನ್ನೂ ಹಾಡಿದ್ದು ವಿಶೇಷವಾಗಿತ್ತು.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.04	7,706	6,552
ಹಾರಂಗಿ	2,859	2,857.74	1,789	2,000
ಕಬಿನಿ	2,284.00	2,283.38	4,620	4,650
ಹೇಮಾವತಿ	2,922	2,921.78	6,988	6,935
ಲಿಂಗನಮಕ್ಕಿ	1,819	1,817	47,232	32,138
ಸೂಪಾ (ಮೀ)	564	558	30,018	3,005.50
ಮಾಣಿ	595	593.25	4,691	507
ತುಂಗಭದ್ರಾ	1,633	1,626.06	19,617	19,412
ಮಲಪ್ರಭಾ	2,079.5	2,078.60	4,881	4,094
ಘಟಪ್ರಭಾ	2175	2,174.93	7,890	4,989
ಭದ್ರಾ *	186	184.10	8,715	5,116
ಆಲಮಟ್ಟಿ (ಮೀ)	519.6	519.35	94,541	1,02,365
ನಾರಾಯಣಪುರ (ಮೀ)	492.25	491.95	60,000	64,950

* ನೆಲಮಟ್ಟದಿಂದ

‘ಯೆಲ್ಲೊ ಅಲರ್ಟ್’

ರಾಜ್ಯದ ವಿವಿಧೆಡೆ ಶುಕ್ರವಾರ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆಯು ಮೂರು ಜಿಲ್ಲೆಗಳಿಗೆ ‘ಆರೆಂಜ್ ಅಲರ್ಟ್’ ಹಾಗೂ ಬಹುತೇಕ ಎಲ್ಲ ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಿಸಿದೆ. ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ‘ಆರೆಂಜ್ ಅಲರ್ಟ್’ ನೀಡಿದ್ದು, ಭಾರಿ ಮಳೆಯಾಗಲಿದೆ. ಗಂಟೆಗೆ 30ರಿಂದ 40 ಕಿ.ಮೀ ವೇಗದಲ್ಲಿ ಗಾಳಿಯೊಂದಿಗೆ ಧಾರಾಕಾರ ಮಳೆ ಸುರಿಯುವ ಸಾಧ್ಯತೆ ಇದೆ.

ವೀರಭದ್ರ ಶಿವಾಚಾರ್ಯ ಸ್ವಾಮೀಜಿ ನಿಧನ



ತೆಕ್ಕಲಕೋಟೆ (ಬಳ್ಳಾರಿ ಜಿಲ್ಲೆ): ಪಟ್ಟಣದ ಕಂಬಾಳಿಮಠದ ವೀರಭದ್ರ ಶಿವಾಚಾರ್ಯ ಸ್ವಾಮೀಜಿ (69) ಬುಧವಾರ ನಿಧನರಾದರು. ಅವರು 1971ರಲ್ಲಿ ತಮ್ಮ 16ನೇ ವಯಸ್ಸಿನಲ್ಲಿ ಶಿವಾಚಾರ್ಯ ದೀಕ್ಷೆ ಹಾಗೂ ಗುರು ಪಟ್ಟಾಧಿಕಾರವನ್ನು ಉಜ್ಜಯಿನಿ ಸದ್ಧರ್ಮ ಪೀಠದ ಸಿದ್ದೇಶ್ವರ ಸ್ವಾಮೀಜಿ ಅವರಿಂದ ಪಡೆದಿದ್ದರು.

ಶ್ರೀಗಳ ಅಂತ್ಯಕ್ರಿಯೆ ಪಟ್ಟಣದ ಸದ್ಧರ್ಮ ಜ್ಞಾನ ಚೇತನ ಆವರಣದ ಹೊಸಮಠದಲ್ಲಿ ಸಂಜೆ ನೆರವೇರಿತು. ಉಜ್ಜಯಿನಿ ಪೀಠದ ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ ಸೇರಿ ವಿವಿಧ ಪೀಠಗಳ ಸ್ವಾಮೀಜಿಗಳು ಇದ್ದರು.

ಯುಡಿಐಎಸ್‌ಇ ದತ್ತಾಂಶದ ಮಾಹಿತಿ • ದರದಲ್ಲಿ ಶೇ 6.7ರಷ್ಟು ಏರಿಕೆ

ಕೋಟಿ ದಾಟಿದ ಶಾಲಾ ಶಿಕ್ಷಕರ ಸಂಖ್ಯೆ

ನವದೆಹಲಿ (ಪಿಟಿಐ): ದೇಶದಲ್ಲಿ 2024–25ನೇ ಸಾಲಿನಲ್ಲಿ ಶಾಲಾ ಶಿಕ್ಷಕರ ಸಂಖ್ಯೆ ಒಂದು ಕೋಟಿ ದಾಟಿದೆ ಎಂದು ಶಿಕ್ಷಣ ಸಚಿವಾಲಯದ ‘ಯುನೈಟೆಡ್ ಡಿಸ್ಟ್ರಿಕ್ಟ್ ಇನ್ಫರ್ಮೇಷನ್ ಸಿಸ್ಟಂ ಫಾರ್ ಎಜುಕೇಷನ್‌ನ (ಯುಡಿಐಎಸ್‌ಇ)’ ದತ್ತಾಂಶದಿಂದ ತಿಳಿದು ಬಂದಿದೆ.

ಶಾಲಾ ಶಿಕ್ಷಕರ ಸಂಖ್ಯೆ ಕೋಟಿ ದಾಟಿರುವುದು ದೇಶದಲ್ಲಿ ಇದೇ ಮೊದಲು. ಯುಡಿಐಎಸ್‌ಐ, ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದ ದತ್ತಾಂಶವನ್ನು ಕ್ರೋಡೀಕರಿಸುವ ವೇದಿಕೆಯಾಗಿದೆ. ಇದನ್ನು ಶಿಕ್ಷಣ ಸಚಿವಾಲಯ ನಿರ್ವಹಿಸುತ್ತಿದೆ.

ಶಿಕ್ಷಕರ ಸಂಖ್ಯೆಯಲ್ಲಿ ಆಗಿರುವ ಈ ಏರಿಕೆಯು ವಿದ್ಯಾರ್ಥಿ– ಶಿಕ್ಷಕರ ಅನುಪಾತದ ಸುಧಾರಣೆ ಜತೆಗೆ ಗುಣಮಟ್ಟದ ಶಿಕ್ಷಣವನ್ನು ಖಾತರಿಪಡಿಸುತ್ತದೆ ಎಂದು ಯುಡಿಐಎಸ್‌ಇ ವರದಿಯಲ್ಲಿ ವಿಶ್ಲೇಷಿಸಲಾಗಿದೆ.

2022–23ನೇ ಸಾಲಿನಿಂದ ದತ್ತಾಂಶವನ್ನು ಗಮನಿಸಿದರೆ ಶಿಕ್ಷಕರ ಸಂಖ್ಯೆಯಲ್ಲಿ ಗಣನೀಯ ಏರಿಕೆ ದಾಖಲಾಗಿದೆ. ಅಂದರೆ 2022–23ನೇ ಸಾಲಿಗೆ ಹೋಲಿಸಿದರೆ 2024–25ನೇ ಸಾಲಿನಲ್ಲಿ ಶಿಕ್ಷಕರ ಸಂಖ್ಯೆ ಶೇ 6.7ರಷ್ಟು ಏರಿಕೆಯಾಗಿದೆ ಎಂದು ವರದಿ ತಿಳಿಸಿದೆ.

ವಿದ್ಯಾರ್ಥಿ–ಶಿಕ್ಷಕರ ಅನುಪಾತ ಸುಧಾರಣೆ: ಯುಡಿಐಎಸ್‌ಐ ವರದಿಯು, ಫೌಂಡೇಷನ್ ಹಂತ (ಪ್ರೀಸ್ಕೂಲ್‌ನಿಂದ 2ನೇ ತರಗತವರೆಗೆ), ಪ್ರಿಪರೇಟರಿ (3ರಿಂದ 5ನೇ ತರಗತಿವರೆಗೆ), ಮಾಧ್ಯಮಿಕ (6ರಿಂದ 8ನೇ ತರಗತಿ) ಹಾಗೂ ಸೆಕೆಂಡರಿ ಹಂತಗಳಲ್ಲಿ (9ರಿಂದ 12ನೇ ತರಗತಿ) ವಿದ್ಯಾರ್ಥಿ ಶಿಕ್ಷಕರ ಅನುಪಾತವು (ಪಿಟಿಆರ್) ಈಗ ಕ್ರಮವಾಗಿ 10, 13, 17 ಮತ್ತು 21 ಆಗಿದೆ ಎಂದು ಮಾಹಿತಿ ನೀಡಿದೆ.

ರಾಷ್ಟ್ರೀಯ ಶಿಕ್ಷಣ ನೀತಿಯು (ಎನ್‌ಇಪಿ) ವಿದ್ಯಾರ್ಥಿ– ಶಿಕ್ಷಕರ ಅನುಪಾತವನ್ನು 1:30 ಇರಬೇಕು ಎಂದು ಶಿಫಾರಸು ಮಾಡಿದೆ. ಪಿಟಿಆರ್ ವಿಷಯದಲ್ಲಿ ಎನ್‌ಇಪಿ ಶಿಫಾರಸ್ಸಿಗಿಂತ ಗಮನಾರ್ಹ ಸುಧಾರಣೆ ಆಗಿರುವುದನ್ನು ಯುಡಿಐಎಸ್‌ಐ ದತ್ತಾಂಶ ತೋರಿಸಿದೆ.

ಶಾಲೆ ತೊರೆಯುವವರ ದರದಲ್ಲಿ ಇಳಿಕೆ

2023–24ನೇ ಸಾಲಿಗೆ ಹೋಲಿಸಿದರೆ 2024–25ನೇ ಸಾಲಿನಲ್ಲಿ ಪ್ರಿಪರೇಟರಿ, ಮಾಧ್ಯಮಿಕ ಮತ್ತು ಸೆಕೆಂಡರಿ ಹಂತಗಳಲ್ಲಿ ಶಾಲೆ ತೊರೆಯುವ ವಿದ್ಯಾರ್ಥಿಗಳ ದರದಲ್ಲಿ ಇಳಿಕೆ ದಾಖಲಾಗಿದೆ.


ಪ್ರಿಪರೇಟರಿ ಹಂತದಲ್ಲಿ ಶಾಲೆ ತೊರೆಯುವ ವಿದ್ಯಾರ್ಥಿಗಳ ದರವು ಶೇ 3.7ರಿಂದ ಶೇ 2.3ಕ್ಕೆ, ಮಾಧ್ಯಮಿಕ ಹಂತದಲ್ಲಿ ಶೇ 5.2ರಿಂದ ಶೇ 3.5ಕ್ಕೆ ಹಾಗೂ ಸೆಕೆಂಡರಿ ಹಂತಗಳಲ್ಲಿ ಶೇ 10.9ರಿಂದ ಶೇ 8.2ಕ್ಕೆ ಇಳಿಕೆಯಾಗಿದೆ ಎಂದು ದತ್ತಾಂಶದಿಂದ ತಿಳಿದುಬರುತ್ತದೆ.



ಕಲಿಕೆ ಮುಂದುವರಿಕೆ ಪ್ರಮಾಣ ವೃದ್ಧಿ

ಹಿಂದಿನ ವರ್ಷಕ್ಕೆ ಹೋಲಿಸಿದರೆ 2024–25ನೇ ಸಾಲಿನಲ್ಲಿ ಮಕ್ಕಳು ಕಲಿಕೆ ಮುಂದುವರಿಕೆ ಪ್ರಮಾಣವು ವೃದ್ಧಿಸಿದೆ. ಫೌಂಡೇಷನ್ ಹಂತದಲ್ಲಿ ಶೇ 98ರಿಂದ ಶೇ 98.9, ಪ್ರಿಪರೇಟರಿ ಹಂತದಲ್ಲಿ ಶೇ 85.4ರಿಂದ ಶೇ 92.4, ಮಾಧ್ಯಮಿಕ ಹಂತದಲ್ಲಿ ಶೇ 78ರಿಂದ ಶೇ 82.8 ಹಾಗೂ ಸೆಕೆಂಡರಿ ಹಂತದಲ್ಲಿ ಶೇ 45.6ರಿಂದ ಶೇ 47.2ಕ್ಕೆ ಏರಿಕೆಯಾಗಿದೆ ಎಂದು ವರದಿ ತಿಳಿಸಿದೆ. ದೇಶದಲ್ಲಿ ಏಕೋಪಾಧ್ಯಾಯ ಶಾಲೆಗಳು ಹಿಂದಿನ ವರ್ಷಕ್ಕೆ ಹೋಲಿಸಿದೆ ಶೇ 6ರಷ್ಟು ಕಡಿಮೆಯಾಗಿದೆ. ಅದೇ ರೀತಿ ಶೂನ್ಯ ದಾಖಲಾತಿ ಶಾಲೆಗಳ ಸಂಖ್ಯೆ ಶೇ 38ರಷ್ಟು ಕುಸಿದಿದೆ ಎಂದಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	24,712
ಇಂದಿನ ಅಂತ್ಯ:	24,500
ದಿನದ ಕನಿಷ್ಠ:	24,481
▼	211

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		
	100 ಕ್ಕೆ	₹550
	12 ಕ್ಕೆ	₹72
ಮೈಸೂರು:	100 ಕ್ಕೆ	₹558

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹389-640
ದ್ವಿತಳಿ (ಬಿ.ವಿ)	₹448-790

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹186
ಆರ್‌ಎಸ್‌ಎಸ್-5	₹181
ಗುಡ್ ಲಾಟ್	₹166

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹21000-28300
ತಿಪಟೂರು	₹26000-29500
ತುರುವೇಕೆರೆ	₹27000-28500

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1375 (1375)
ಸೋಯಾ (ರಿಫೈನ್ಡ್)	₹1265 (1270)
ಸೂರ್ಯಕಾಂತಿ (ರಿಫೈನ್ಡ್)	₹1410 (1410)
ಪಾಮೋಲೀನ್	₹1275 (1280)

ಅಡಿಕೆ ಧಾರಣೆ

ಶಿವಮೊಗ್ಗ					
ಬೆಟ್ಟೆ	55114-63324	ಸರಕು	56400-87400	ಕೋಕ	8569-23499
ಗೊರಬಲು	19299-36869	ಸಾಗರ		ಕೆಂಪುಗೋಟು	30199-30199
ರಾಶಿ	46566-60509	ಬಿಳಿಗೋಟು	12119-26109	ರಾಶಿ	32169-59819
		ಚಾಲಿ	33599-38209	ಸಿಪ್ಪೆಗೋಟು	12299-18509

ಚಿಟಿಕೆ ಸುದ್ದಿ

ಕೈಗಾರಿಕಾ ಉತ್ಪಾದನೆ ನಾಲ್ಕು ತಿಂಗಳ ಗರಿಷ್ಠ

ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ಉತ್ಪಾದನಾ ಬೆಳವಣಿಗೆಯು ಜುಲೈ ತಿಂಗಳಿನಲ್ಲಿ ಶೇ 3.5ಕ್ಕೆ ಏರಿಕೆಯಾಗಿದೆ. ಇದು ನಾಲ್ಕು ತಿಂಗಳ ಗರಿಷ್ಠ ಮಟ್ಟವಾಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಗುರುವಾರ ತಿಳಿಸಿದೆ.

ತಯಾರಿಕಾ ವಲಯದ ಉತ್ಪಾದನೆಯಲ್ಲಿನ ಹೆಚ್ಚಳವೇ ಇದಕ್ಕೆ ಕಾರಣ ಎಂದು ತಿಳಿಸಿದೆ. ಮಾರ್ಚ್‌ನಲ್ಲಿ ವಲಯದ ಬೆಳವಣಿಗೆ ಶೇ 3.9ರಷ್ಟಿತ್ತು.

2024ರಲ್ಲಿ ತಯಾರಿಕಾ ವಲಯದ ಉತ್ಪಾದನೆ ಶೇ 4.7ರಷ್ಟಿತ್ತು. ಅದು ಈ ಬಾರಿ ಶೇ 5.4ಕ್ಕೆ ಏರಿಕೆಯಾಗಿದೆ. ಗಣಿಗಾರಿಕೆ ಉತ್ಪಾದನೆ ಶೇ 7.2ರಿಂದ ಶೇ 3.8ಕ್ಕೆ ಇಳಿದಿದೆ. ವಿದ್ಯುತ್ ಉತ್ಪಾದನೆ ಶೇ 0.6ರಷ್ಟು ಮಾತ್ರ ಹೆಚ್ಚಳವಾಗಿದೆ. ಕಳೆದ ಆರ್ಥಿಕ ವರ್ಷದ ಏಪ್ರಿಲ್–ಜುಲೈ ಅವಧಿಯಲ್ಲಿ ಕೈಗಾರಿಕಾ ಉತ್ಪಾದನೆ ಶೇ 5.4ರಷ್ಟಿತ್ತು. ಅದು ಈ ಬಾರಿ ಶೇ 2.3 ಆಗಿದೆ ಎಂದು ತಿಳಿಸಿದೆ.

ಕೈಗಾರಿಕಾ ಉತ್ಪಾದನಾ ಸೂಚ್ಯಂಕ (ಐಐಪಿ) ಆಧಾರದ ಮೇಲೆ ಈ ಪ್ರಗತಿಯನ್ನು ಲೆಕ್ಕ ಹಾಕಲಾಗುತ್ತದೆ.

‘ಜವಳಿ ವಲಯ: ತೀವ್ರ ಪರಿಣಾಮ’

ಅಮೆರಿಕದ ಸುಂಕವು ದೇಶದ ರಫ್ತಿನ ನಾಲ್ಕನೇ ಒಂದು ಭಾಗದ ಮೇಲೆ ಪರಿಣಾಮ ಬೀರುವ ನಿರೀಕ್ಷೆ: ತಜ್ಞರು

ನವದೆಹಲಿ / ಮುಂಬೈ (ರಾಯಿಟರ್ಸ್ / ಪಿಟಿಐ): ಅಮೆರಿಕದ ಸುಂಕ ಜಾರಿಯು, ಮುಂದಿನ ಆರು ತಿಂಗಳಿನಲ್ಲಿ ದೇಶದ ಜವಳಿ ವಲಯದ ರಫ್ತಿನ ನಾಲ್ಕನೇ ಒಂದು ಭಾಗದ ಮೇಲೆ ತೀವ್ರ ಪರಿಣಾಮ ಬೀರಬಹುದು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ. ಅಲ್ಲದೆ, ಕಾರ್ಯಾದೇಶ ರದ್ದುಗೊಳ್ಳುವ ಸಾಧ್ಯತೆ ಇದೆ ಎಂದು ಸಹ ಹೇಳಿದ್ದಾರೆ.

ಆದರೆ, ಡಿಸೆಂಬರ್ 31ರವರೆಗೆ ಸುಂಕ ರಹಿತ ಹತ್ತಿ ಆಮದನ್ನು ವಿಸ್ತರಿಸಿರುವುದು ದೇಶದ ಜವಳಿ ಉದ್ಯಮಕ್ಕೆ ಸ್ವಲ್ಪ ನೆಮ್ಮದಿ ನೀಡುವ ನಿರೀಕ್ಷೆಯಿದೆ. ವಲಯವು ಮುಕ್ತ ವ್ಯಾಪಾರ ಒಪ್ಪಂದಗಳನ್ನು ಬಳಸಿಕೊಳ್ಳುವ ಮೂಲಕ ಅಮೆರಿಕ ಹೊರತುಪಡಿಸಿ ಪರ್ಯಾಯ ಮಾರುಕಟ್ಟೆಗಳನ್ನು ಹುಡುಕಿ, ಸುಂಕದ ಪರಿಣಾಮ ತಗ್ಗಿಸಲು ನೋಡುತ್ತಿದೆ ಎಂದು ಹೇಳಿದ್ದಾರೆ.



ಅಮೆರಿಕವು ದೇಶದ ಸಿದ್ಧ ಉಡುಪು ಉದ್ಯಮಕ್ಕೆ ಅತಿದೊಡ್ಡ ಮಾರುಕಟ್ಟೆಯಾಗಿದ್ದು, ಶೇ 5.8ರಷ್ಟು ಪಾಲು ಹೊಂದಿದೆ. 2024-25ರಲ್ಲಿ, ಜವಳಿ ಮತ್ತು ಸಿದ್ಧ ಉಡುಪು ವಲಯದ ಒಟ್ಟಾರೆ ಗಾತ್ರವು ₹15.68 ಲಕ್ಷ ಕೋಟಿಯಾಗಿದೆ. ಇದರಲ್ಲಿ ರಫ್ತು ಮೌಲ್ಯ ₹3.24 ಲಕ್ಷ ಕೋಟಿಯಾಗಿದೆ. ಅಮೆರಿಕದ ಬಳಿಕ ಚೀನಾ, ವಿಯೆಟ್ನಾಂ ಮತ್ತು ಬಾಂಗ್ಲಾದೇಶ ಇವೆ.

ಗಡುವು ವಿಸ್ತರಣೆ: ಹತ್ತಿಯನ್ನು ಸುಂಕ ಇಲ್ಲದೆ ಆಮದು ಮಾಡಿಕೊಳ್ಳಲು ಇದ್ದ ಗಡುವನ್ನು ಡಿಸೆಂಬರ್ 31ರವರೆಗೆ ಕೇಂದ್ರ ಸರ್ಕಾರ ವಿಸ್ತರಿಸಿದೆ.

ಅಮೆರಿಕದ ಶೇ 50ರಷ್ಟು ಸುಂಕವು ದೇಶದ ಜವಳಿ ವಲಯದ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿದೆ. ಹೀಗಾಗಿ, ವಲಯಕ್ಕೆ ನೆರವು ನೀಡಲು ಅವಧಿ ವಿಸ್ತರಿಸಲಾಗಿದೆ ಎಂದು ಕೇಂದ್ರ ಸರ್ಕಾರ ಗುರುವಾರ ತಿಳಿಸಿದೆ.

ಹತ್ತಿಗಿದ್ದ ಸುಂಕ ರಹಿತ ಆಮದು ಗಡುವನ್ನು ಇತ್ತೀಚೆಗೆ, ಆಗಸ್ಟ್ 19ರಿಂದ ಸೆಪ್ಟೆಂಬರ್ 30ರವರೆಗೆ ವಿಸ್ತರಿಸಲಾಗಿತ್ತು. ದೇಶದ ರಫ್ತುದಾರರಿಗೆ ಬೆಂಬಲ ನೀಡಲು ಅವಧಿಯನ್ನು ಮತ್ತೆ ವಿಸ್ತರಿಸಲಾಗಿದೆ. ಈ ಆದೇಶ ಡಿಸೆಂಬರ್ 31ರ ವರೆಗೆ ಇರಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ತಿಳಿಸಿದೆ.

‘ಸುಂಕ ವಿನಾಯಿತಿಯಿಂದ ದೇಶದ ಜವಳಿ ವಲಯದ ಕಂಪನಿಗಳು ಕಡಿಮೆ ದರದಲ್ಲಿ ವಿವಿಧ ದೇಶಗಳಿಂದ ಹತ್ತಿಯನ್ನು ಆಮದು ಮಾಡಿಕೊಳ್ಳಲಿವೆ. ಇದು ದೇಶೀ ಮಾರುಕಟ್ಟೆಯಲ್ಲಿ ಕಚ್ಚಾ ಹತ್ತಿಯ ಲಭ್ಯತೆಯನ್ನು ಹೆಚ್ಚಿಸಲಿದ್ದು, ಹತ್ತಿ ದರವನ್ನು ಸ್ಥಿರಗೊಳಿಸಲಿದೆ’ ಎಂದು ಭಾರತದ ಹತ್ತಿ ಸಂಘದ ಅಧ್ಯಕ್ಷ ಅತುಲ್ ಗಣತ್ರಾ ತಿಳಿಸಿದ್ದಾರೆ.

ವಜ್ರ ಉದ್ಯಮಕ್ಕೆ ಸುಂಕ ಅಡ್ಡಿ: ಕ್ರಿಸಿಲ್



ದೇಶದ ನೈಸರ್ಗಿಕ ವಜ್ರಗಳ ಪಾಲಿಶ್ ಉದ್ಯಮದ ವರಮಾನವು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಶೇ 28ರಿಂದ ಶೇ 30ರಷ್ಟು ಇಳಿಕೆ ಕಾಣಲಿದೆ ಎಂದು ರೇಟಿಂಗ್ ಸಂಸ್ಥೆ ಕ್ರಿಸಿಲ್ ವರದಿ ಗುರುವಾರ ತಿಳಿಸಿದೆ.

ಭಾರತದಿಂದ ಆಮದಾಗುವ ಸರಕುಗಳ ಮೇಲೆ ಅಮೆರಿಕದ ಶೇ 50ರಷ್ಟು ಸುಂಕ ಜಾರಿಯೇ ಇದಕ್ಕೆ ಕಾರಣ ಎಂದು ತಿಳಿಸಿದೆ. 2024–25ರ ಆರ್ಥಿಕ ವರ್ಷದಲ್ಲಿ ಉದ್ಯಮದ ವರಮಾನವು ₹1.40 ಲಕ್ಷ ಕೋಟಿಯಷ್ಟಿತ್ತು. ಇದು ಪ್ರಸಕ್ತ ಆರ್ಥಿಕ ವರ್ಷದಲ್ಲಿ ₹1.09 ಲಕ್ಷ ಕೋಟಿಗೆ ಇಳಿಕೆಯಾಗಬಹುದು ಎಂದು ಹೇಳಿದೆ.

ಅಮೆರಿಕ ಮತ್ತು ಚೀನಾವು ಭಾರತದ ಪ್ರಮುಖ ಮಾರುಕಟ್ಟೆಗಳಾಗಿವೆ. ಪ್ರಯೋಗಾಲಯದಲ್ಲಿ ತಯಾರಿಸಿದ ವಜ್ರಗಳಿಗೆ ಬೇಡಿಕೆ ಹೆಚ್ಚಳವಾಗಿದ್ದು, ಮಾರುಕಟ್ಟೆಯಲ್ಲಿ ಶೇ 60ರಷ್ಟು ಪಾಲನ್ನು ಹೊಂದಿದೆ. ಇದು ನೈಸರ್ಗಿಕ ವಜ್ರಗಳಿಗೆ ಸ್ಪರ್ಧೆಯೊಡ್ಡಿದೆ ಎಂದು ತಿಳಿಸಿದೆ. ಚೀನಾದಲ್ಲಿ ಬೇಡಿಕೆ ಕಡಿಮೆಯಾಗಿರುವುದು ಸಹ ವರಮಾನ ಕಡಿಮೆ ಆಗಲು ಕಾರಣವಾಗಿದೆ ಎಂದು ತಿಳಿಸಿದೆ.

ಅಮೆರಿಕದ ಸುಂಕ ಜಾರಿಯು ಉದ್ಯಮದ ಲಾಭದ ಪ್ರಮಾಣವನ್ನು ಕಡಿಮೆ ಮಾಡುವುದಲ್ಲದೆ, ಬೇಡಿಕೆಯನ್ನು ತಗ್ಗಿಸಲಿದೆ ಎಂದು ಹೇಳಿದೆ.

ಉದ್ಯಮವು ತನ್ನ ವರಮಾನದ ಶೇ 80ರಷ್ಟನ್ನು ರಫ್ತಿನಿಂದ ಪಡೆಯುತ್ತದೆ. ಈ ಪೈಕಿ ಅಮೆರಿಕದ ಪಾಲು ಶೇ 35ರಷ್ಟಿದೆ. ಅಮೆರಿಕವು ಏಪ್ರಿಲ್‌ನಲ್ಲಿ ಶೇ 10ರಷ್ಟು ಸುಂಕ ವಿಧಿಸಿದ ನಂತರ ಮಾರಾಟದ ಮೇಲೆ ನಕಾರಾತ್ಮಕ ಪರಿಣಾಮ ಬೀರಲು ಪ್ರಾರಂಭವಾಯಿತು ಎಂದು ತಿಳಿಸಿದೆ.

ಉದ್ಯಮವು ದೇಶದಲ್ಲಿ ಮಾರಾಟವನ್ನು ಹೆಚ್ಚಿಸುವ ಜೊತೆಗೆ ಬೇರೆ ದೇಶಗಳಲ್ಲಿ ಮಾರಾಟವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು. ಕಡಿಮೆ ಸುಂಕ ಇರುವ ದೇಶಗಳಲ್ಲಿ ಘಟಕಗಳನ್ನು ಸ್ಥಾಪಿಸಬೇಕು ಎಂದು ತಿಳಿಸಿದೆ.

ಸುದ್ದಿ 2 ನಿಮಿಷ

ವಿಮಾನಯಾನ ಉದ್ಯಮಕ್ಕೆ ₹10,500 ಕೋಟಿ ನಷ್ಟ: ಐಸಿಆರ್‌ಎ

ಮುಂಬೈ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ವಿಮಾನಯಾನ ಉದ್ಯಮವು ₹9,500 ಕೋಟಿಯಿಂದ ₹10,500 ಕೋಟಿವರೆಗೆ ನಷ್ಟ ಕಾಣಬಹುದು ಎಂದು ರೇಟಿಂಗ್ ಸಂಸ್ಥೆ ಐಸಿಆರ್‌ಎ ಅಂದಾಜಿಸಿದೆ.

ಭೌಗೋಳಿಕ ರಾಜಕೀಯ ಬಿಕ್ಕಟ್ಟು ಇದಕ್ಕೆ ಕಾರಣ ಎಂದು ಹೇಳಿದೆ. ಉದ್ಯಮವು 2021–22ರಲ್ಲಿ ₹21,600 ಕೋಟಿ ಮತ್ತು 2022–23ರಲ್ಲಿ ₹17,900 ಕೋಟಿ ನಷ್ಟ ಕಂಡಿದೆ ಎಂದು ಗುರುವಾರ ತಿಳಿಸಿದೆ.

ದೇಶೀಯ ಮಾರ್ಗದಲ್ಲಿ ವಿಮಾನ ಪ್ರಯಾಣಿಕರ ಸಂಚಾರ 17.6 ಕೋಟಿಯಾಗಬಹುದು. ಇದು ಕಳೆದ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 6ರಷ್ಟು ಹೆಚ್ಚಳ ಎಂದು ತಿಳಿಸಿದೆ. ಜೂನ್ ತ್ರೈಮಾಸಿಕದಲ್ಲಿ ಪ್ರಯಾಣಿಕರ ಸಂಚಾರ ಶೇ 4.4ರಷ್ಟಿತ್ತು.

ಏರ್ ಇಂಡಿಯಾ ವಿಮಾನ ದುರಂತವು ಪ್ರಯಾಣದ ಹಿಂಜರಿಕೆಗೆ ಕಾರಣವಾಯಿತು. ಅಮೆರಿಕದ ಸುಂಕದಿಂದ ಉಂಟಾಗುವ ವ್ಯಾಪಾರ ಅಡಚಣೆಗಳು ಮುಂಬರುವ ತ್ರೈಮಾಸಿಕಗಳಲ್ಲಿ ವ್ಯಾಪಾರವನ್ನು ಕುಗ್ಗಿಸುವ ಸಾಧ್ಯತೆಯಿದೆ. ಇದು ಪ್ರಯಾಣಿಕರ ಸಂಚಾರ ಇಳಿಕೆ ಮೇಲೆ ಪರಿಣಾಮ ಬೀರಲಿದೆ ಎಂದು ತಿಳಿಸಿದೆ.



ದೇಶೀಯ ವಿಮಾನ ಪ್ರಯಾಣಿಕ ಸಂಚಾರ ಇಳಿಕೆ

ನವದೆಹಲಿ (ಪಿಟಿಐ): ದೇಶೀಯ ವಿಮಾನ ಮಾರ್ಗದಲ್ಲಿ ಪ್ರಯಾಣಿಕರ ಸಂಚಾರ ಜುಲೈ ತಿಂಗಳಿನಲ್ಲಿ ಶೇ 2.94ರಷ್ಟು ಇಳಿಕೆಯಾಗಿದೆ ಎಂದು ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (ಡಿಜಿಸಿಎ) ತಿಳಿಸಿದೆ.

2024ರ ಜುಲೈನಲ್ಲಿ 1.29 ಕೋಟಿ ಪ್ರಯಾಣಿಕರು ಸಂಚಾರ ಮಾಡಿದ್ದರು. ಇದು ಈ ಬಾರಿ 1.26 ಕೋಟಿಯಷ್ಟಾಗಿದೆ ಎಂದು ತಿಳಿಸಿದೆ.

ಜೂನ್ 12ರಂದು ನಡೆದ ಏರ್ ಇಂಡಿಯಾ ವಿಮಾನ ದುರಂತದ ಬಳಿಕ ಪ್ರಯಾಣಿಕರ ಸಂಚಾರದಲ್ಲಿ ಇಳಿಕೆ ಆಗಿದೆ.

ಏರ್ ಇಂಡಿಯಾ ಸಮೂಹವು ಶೇ 1ರಷ್ಟು ಮಾರುಕಟ್ಟೆಯನ್ನು ಕಳೆದುಕೊಂಡಿದೆ. ಇದೇ ಅವಧಿಯಲ್ಲಿ ಇಂಡಿಗೊ ವಿಮಾನದ ಮಾರುಕಟ್ಟೆ ಪಾಲು ಶೇ 64.5ರಿಂದ ಶೇ 65.2ಕ್ಕೇರಿದೆ. ಆಕಾಸಾ ಏರ್ ಮತ್ತು ಸ್ಪೈಸ್‌ಜೆಟ್ ಮಾರುಕಟ್ಟೆ ಪಾಲು ಕ್ರಮವಾಗಿ ಶೇ 5.5 ಮತ್ತು ಶೇ 2ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಜುಲೈನಲ್ಲಿ ದೆಹಲಿ, ಮುಂಬೈ, ಚೆನ್ನೈ, ಕೋಲ್ಕತ್ತ, ಬೆಂಗಳೂರು ಮತ್ತು ಹೈದರಾಬಾದ್‌ನ ವಿಮಾನ ನಿಲ್ದಾಣಗಳಿಂದ ಎಲ್ಲಾ ದೇಶೀಯ ವಿಮಾನಯಾನ ಸಂಸ್ಥೆಗಳ ಪೈಕಿ ಇಂಡಿಗೊ ಶೇ 91.4ರಷ್ಟು ಅತ್ಯುತ್ತಮ ಕಾರ್ಯಕ್ಷಮತೆ ನೀಡಿದೆ ಎಂದು ತಿಳಿಸಿದೆ.

ತೊಂದರೆ ಆಗುವ ಕ್ಷೇತ್ರಕ್ಕೆ ಸಹಾಯ

ಅಮೆರಿಕವು ಭಾರತದ ಸರಕುಗಳ ಮೇಲೆ ವಿಧಿಸಿರುವ ಭಾರಿ ಪ್ರಮಾಣದ ಸುಂಕದ ಕಾರಣದಿಂದಾಗಿ ತೊಂದರೆಗೆ ಒಳಗಾಗಬಹುದಾದ ಕ್ಷೇತ್ರಗಳಿಗೆ ಬೆಂಬಲವಾಗಿ ನಿಲ್ಲಲು ಸರ್ಕಾರ ವಿವಿಧ ಕ್ರಮಗಳಿಗೆ ಮುಂದಾಗಲಿದೆ ಎಂದು ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದಾರೆ.

‘ರಫ್ತುದಾರರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಸರ್ಕಾರವು ಗಮನ ಹರಿಸಿದೆ. ಅವರಿಗೆ ಸಹಾಯ ಮಾಡಲು ಸಕಾರಾತ್ಮಕ ಕ್ರಮಗಳನ್ನು ತೆಗೆದುಕೊಳ್ಳುವ ಪ್ರಕ್ರಿಯೆ ಆರಂಭಿಸಿದೆ’ ಎಂದು ಹೇಳಿದ್ದಾರೆ.

ರಫ್ತು ಉತ್ತೇಜನ ಯೋಜನೆ ಜಾರಿಗೊಳಿಸುವುದು, ರಫ್ತು ಪ್ರಕ್ರಿಯೆಯಲ್ಲಿ ವೈವಿಧ್ಯತೆ ತರುವುದು, ಸಾಲ ಮರುಪಾವತಿ ಅವಧಿ ವಿಸ್ತರಣೆ, ಹೊಸ ಮುಕ್ತ ವ್ಯಾಪಾರ ಒಪ್ಪಂದಗಳ (ಎಫ್‌ಟಿಎ) ಅನುಷ್ಠಾನ ಸೇರಿದಂತೆ ವಿವಿಧ ಕ್ರಮಗಳನ್ನು ಜಾರಿಗೊಳಿಸಲು ತಯಾರಿ ನಡೆದಿದೆ. ಅಮೆರಿಕವು ಶೇ 50ರಷ್ಟು ಸುಂಕ ಹೇರಿರುವುದಿಂದ ಆಗಿರುವ ಪರಿಣಾಮದಿಂದ ರಫ್ತುದಾರರನ್ನು ರಕ್ಷಿಸಲು ಈ ಕ್ರಮಗಳು ನೆರವಾಗಲಿವೆ ಎಂದಿದ್ದಾರೆ.

ರಫ್ತು ಪ್ರಕ್ರಿಯೆಯಲ್ಲಿ ವೈವಿಧ್ಯ ತರುವ ಮತ್ತು ಹೊಸ ಮಾರುಕಟ್ಟೆಗಳ ಅನ್ವೇಷಣೆಯಂತಹ ವಿಷಯಗಳ ಕುರಿತು ಚರ್ಚಿಸಲು ಹಣಕಾಸು ಸಚಿವಾಲಯವು ರಫ್ತುದಾರರೊಂದಿಗೆ ಸರಣಿ ಸಭೆಗಳನ್ನು ನಡೆಸುತ್ತಿದೆ.

ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಶೇ 25ರಷ್ಟು ಹೆಚ್ಚುವರಿ ಸುಂಕ ವಿಧಿಸುವ ಡೊನಾಲ್ಡ್ ಟ್ರಂಪ್ ಆಡಳಿತದ ನಿರ್ಧಾರ ಆಗಸ್ಟ್ 27ರಂದು ಜಾರಿಗೆ ಬಂದಿದೆ. ಅಮೆರಿಕದ ಮಾರುಕಟ್ಟೆ ಪ್ರವೇಶಿಸುವ ಭಾರತದ ಸರಕುಗಳ ಮೇಲಿನ ಒಟ್ಟು ಸುಂಕ ಈಗ ಶೇಕಡ 50ರಷ್ಟಾಗಿದೆ.

ಸಚಿವರ ಭರವಸೆ: ‘ಈ ಸವಾಲಿನ ಸಮಯದಲ್ಲಿ ಸರ್ಕಾರವು ರಫ್ತುದಾರರ ಜತೆ ದೃಢವಾಗಿ ನಿಲ್ಲಲಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಗುರುವಾರ ಭರವಸೆ ನೀಡಿದ್ದಾರೆ’ ಎಂದು ಭಾರತೀಯ ರಫ್ತು ಸಂಘಟನೆಗಳ ಒಕ್ಕೂಟ (ಎಫ್‌ಐಇಒ) ತಿಳಿಸಿದೆ.

‘ಜಿಡಿಪಿ ಶೇ 6ಕ್ಕಿಂತ ಕಡಿಮೆ ನಿರೀಕ್ಷೆ’

ಪ್ರಜಾವಾಣಿ ವಾರ್ತೆ




ನವದೆಹಲಿ: ಅಮೆರಿಕದ ಸುಂಕ ಹೇರಿಕೆಯಿಂದ ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ 6ಕ್ಕಿಂತ ಕಡಿಮೆಯಾಗುವ ಸಾಧ್ಯತೆ ಇದೆ ಎಂದು ಸಂಶೋಧನಾ ಏಜೆನ್ಸಿಗಳು ತಿಳಿಸಿವೆ.

2025–26ರಲ್ಲಿ ಆರ್ಥಿಕ ಬೆಳವಣಿಗೆ ಶೇ 0.20ರಷ್ಟು ಕಡಿಮೆ ಆಗಿ, ಶೇ 5.8ಕ್ಕೆ ಇಳಿಯಲಿದೆ. 2026–27ರಲ್ಲಿ ಇದು ಶೇ 5.4 ಆಗುವ ನಿರೀಕ್ಷೆ ಇದೆ ಎಂದು ಬಿಎಂಐ ಸಂಸ್ಥೆ ತಿಳಿಸಿದೆ. ಜಪಾನ್‌ನ ಬ್ರೋಕರೇಜ್ ಸಂಸ್ಥೆ ನೊಮುರಾ, ದೇಶದ ಆರ್ಥಿಕ ಬೆಳವಣಿಗೆ ದರವನ್ನು ಶೇ 6.2ರಿಂದ ಶೇ 5.8ಕ್ಕೆ ತಗ್ಗಿಸಿದೆ. ಸುಂಕವನ್ನು ತೆಗೆದು ಹಾಕಿದರೆ, ಶೇ 6ರಷ್ಟು ಬೆಳೆಯಬಹುದು ಎಂದು ಅಂದಾಜಿಸಿದೆ.

ರಫ್ತು ಇಳಿಕೆಯು ಉದ್ಯೋಗ ಕಡಿತಕ್ಕೆ ಕಾರಣವಾಗುತ್ತದೆ ಮತ್ತು ಖಾಸಗಿ ಹೂಡಿಕೆ ಪ್ರಮಾಣದ ಮೇಲೆ ಪರಿಣಾಮ ಬೀರಲಿದೆ ಎಂದು ಮಾರುಕಟ್ಟೆ ವಿಶ್ಲೇಷಕರು ಎಚ್ಚರಿಸಿದ್ದಾರೆ. ಆದರೆ, ಪ್ರಸ್ತಾವಿತ ಜಿಎಸ್‌ಟಿ ಸುಧಾರಣೆಗಳು ದೇಶೀಯ ಬಳಕೆ, ಬೇಡಿಕೆಯನ್ನು ಹೆಚ್ಚಿಸುವ ಮೂಲಕ ಆರ್ಥಿಕತೆಗೆ ಉತ್ತೇಜನ ನೀಡಲಿದೆ ಎಂದಿದ್ದಾರೆ.

ಸುಧಾ, ಮಯೂರ ಓದಿ

‘ರಷ್ಯಾದಿಂದ ಕಚ್ಚಾ ತೈಲ ರಿಯಾಯಿತಿ ಇದ್ದರೂ ಲಾಭ ಕಡಿಮೆ’



ನವದೆಹಲಿ (ಪಿಟಿಐ): ರಷ್ಯಾದಿಂದ ರಿಯಾಯಿತಿ ದರದಲ್ಲಿ ಭಾರತ ಖರೀದಿಸುವ ಕಚ್ಚಾ ತೈಲದಿಂದ ವಾರ್ಷಿಕ ಅಂದಾಜು ಸುಮಾರು ₹22,000 ಕೋಟಿ ಮಾತ್ರ ಲಾಭ ಆಗಲಿದೆ ಎಂದು ಬ್ರೋಕರೇಜ್ ಸಂಸ್ಥೆ ಸಿಎಲ್‌ಎಸ್‌ಎ ವರದಿ ತಿಳಿಸಿದೆ.

ಕೆಲ ಮಾಧ್ಯಮಗಳು ಭಾರತವು, ರಷ್ಯಾದಿಂದ ಕಚ್ಚಾ ತೈಲ ಖರೀದಿಸಿದರೆ ವಾರ್ಷಿಕ ಸುಮಾರು ₹90,000 ಕೋಟಿಯಿಂದ ₹2.19 ಲಕ್ಷ ಕೋಟಿವರೆಗೆ ಲಾಭವಾಗಲಿದೆ ಎಂದು ಅಂದಾಜಿಸಿವೆ. ಆದರೆ, ಲೆಕ್ಕ ಹಾಕಿದಾಗ ದೊರೆಯುವುದು ₹22,000 ಕೋಟಿ ಮಾತ್ರ. ಇದು ದೇಶದ ಜಿಡಿಪಿಯ ಶೇ 0.6ರಷ್ಟು ಮಾತ್ರ ಎಂದು ತಿಳಿಸಿದೆ.

ರಷ್ಯಾ ನೀಡುತ್ತಿರುವ ರಿಯಾಯಿತಿಯು ಗಣನೀಯವಾಗಿ ಕಂಡರೂ ಭಾರತದ ಕಚ್ಚಾ ತೈಲ ಆಮದುದಾರರಿಗೆ ದೊಡ್ಡ ಮಟ್ಟದ ಲಾಭ ಆಗುತ್ತಿಲ್ಲ. ರಷ್ಯಾದ ಕಚ್ಚಾ ತೈಲದ ಮೇಲೆ ಸಾಗಾಟ, ವಿಮೆ, ಮರುವಿಮೆಯಂತಹ ಹಲವು ನಿರ್ಬಂಧಗಳು ಇವೆ. ಹಾಗಾಗಿ ಭಾರತದ ಆಮದುದಾರರು ಹೆಚ್ಚು ವೆಚ್ಚ ಮಾಡಬೇಕಾಗುತ್ತದೆ. ಹಾಗಾಗಿ ರಿಯಾಯಿತಿಯಿಂದ ದೊಡ್ಡ ಮಟ್ಟದ ಲಾಭ ಆಗುತ್ತಿಲ್ಲ ಎಂದು ಸಿಎಲ್‌ಎಸ್‌ಎ ಹೇಳಿದೆ.

ಭಾರತೀಯ ತೈಲ ಕಂಪನಿಗಳು ರಷ್ಯಾದಿಂದ ಆಮದಾಗುವ ಕಚ್ಚಾ ತೈಲದಿಂದ 2023–24ರಲ್ಲಿ ಪ್ರತೀ ಬ್ಯಾರೆಲ್‌ಗೆ 8.5 ಡಾಲರ್ ರಿಯಾಯಿತಿ ಪಡೆಯುತ್ತಿದ್ದವು. 2025ರಲ್ಲಿ 3ರಿಂದ 5 ಡಾಲರ್‌ಗೆ ಇಳಿದಿದೆ. ಇತ್ತೀಚಿನ ದಿನಗಳಲ್ಲಿ 1.5 ಡಾಲರ್‌ಗೆ ಇಳಿದಿದೆ ಎಂದು ತಿಳಿಸಿದೆ.

ಭಾರತವು ರಷ್ಯಾದ ತೈಲವನ್ನು ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸಿದರೆ ಕಚ್ಚಾ ತೈಲದ ಬೆಲೆ ಪ್ರತೀ ಬ್ಯಾರೆಲ್‌ಗೆ 90 ಡಾಲರ್‌ನಿಂದ 100 ಡಾಲರ್‌ಗಳಿಗೆ ಏರಬಹುದು ಎಂದು ಹೇಳಿದೆ.

ಉಕ್ರೇನ್ ಯುದ್ಧದ ಬಳಿಕ ಭಾರತಕ್ಕೆ ಆಮದಾಗುವ ರಷ್ಯಾದ ತೈಲ ಪ್ರಮಾಣ, ಶೇ 1ರಿಂದ ಶೇ 40ಕ್ಕೆ ಏರಿದೆ. ಪ್ರತೀ ದಿನ ಭಾರತ 54 ಲಕ್ಷ ಬ್ಯಾರೆಲ್ ಕಚ್ಚಾ ತೈಲ ಆಮದು ಮಾಡಿಕೊಳ್ಳುತ್ತಿದೆ. ಈ ಪೈಕಿ ರಷ್ಯಾದ ಪಾಲು ಶೇ 36ರಷ್ಟಿದೆ.

ಬಾಂಗ್ಲಾ: ಸ್ವಾತಂತ್ರ್ಯ ಹೋರಾಟಗಾರ ವಶ

ಢಾಕಾ (ಪಿಟಿಐ): 1971ರ ಬಾಂಗ್ಲಾದೇಶ ವಿಮೋಚನಾ ಯುದ್ಧದ ಹೋರಾಟಗಾರ ಸೇರಿದಂತೆ ಹಲವರನ್ನು ಪೊಲೀಸರು ಗುರುವಾರ ವಶಕ್ಕೆ ಪಡೆದಿದ್ದಾರೆ. ಬಂಧನಕ್ಕೆ ಒಳಗಾದವರು ನಡೆಸುತ್ತಿದ್ದ ಸಭೆಯಲ್ಲಿ ಗುಂಪೊಂದು ಹಿಂಸಾಚಾರ ನಡೆಸಿದ್ದು, ಸಭೆ ನಡೆಸುತ್ತಿದ್ದವರನ್ನು ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರ ‘ಫ್ಯಾಸಿಸ್ಟ್ ಆಡಳಿತ’ದ ಸಹಚರರು ಎಂದು ಕರೆದಿದ್ದಾರೆ.

ಪ್ರತ್ಯಕ್ಷದರ್ಶಿಗಳು ಮತ್ತು ಮಾಧ್ಯಮ ವರದಿಗಳ ಪ್ರಕಾರ, ಹೊಸದಾಗಿ ರಚಿಸಲಾಗಿದ್ದ ‘ಮೊಂಚೊ 71’ ಎಂಬ ಸಂಘಟನೆಯ ಅಡಿಯಲ್ಲಿ 1971ರ ಸ್ವಾತಂತ್ರ್ಯ ಹೋರಾಟಗಾರರು, ಶಿಕ್ಷಣ ತಜ್ಞರು ಮತ್ತು ಮಾಜಿ ಅಧಿಕಾರಿಗಳು ಢಾಕಾದ ರಿಪೋರ್ಟರ್ಸ್ ಯೂನಿಟಿ ಆಡಿಯೋಟರಿಯಂನಲ್ಲಿ ಒಟ್ಟುಗೂಡಿದ್ದರು. ಈ ವೇಳೆ ಉದ್ರಿಕ್ತ ಜನರ ಗುಂಪು ಸ್ಥಳಕ್ಕೆ ನುಗ್ಗಿದೆ.

ಹೆದ್ದಾರಿ ಕಾಮಗಾರಿಗೆ ಆಮೆಗತಿ

ಒಬ್ಬರಿಗೂ ಈವರೆಗೆ ಪರಿಹಾರ ಇಲ್ಲ

ಒಂದನೇ ಪುಟದಿಂದ...

ಇದಕ್ಕೆ ಎರಡನೇ ಹಂತದ ಅನುಮೋದನೆ ಸಿಕ್ಕಿಲ್ಲ.

ಚಿಕ್ಕೋಡಿ- ಮುರುಗುಂಡಿ ನಡುವಿನ 50.2 ಕಿ.ಮೀ. ಉದ್ದದ ಹೆದ್ದಾರಿ ಕಾಮಗಾರಿಯಲ್ಲೂ ಇದೇ ಸಮಸ್ಯೆ. ಭೂಮಿ ಬಿಟ್ಟುಕೊಡುವ 1091 ಫಲಾನುಭವಿಗಳಿಗೆ ₹181.39 ಕೋಟಿ ಪರಿಹಾರ ನೀಡಲು ಒಪ್ಪಿಗೆ ಕೊಡಲಾಗಿದೆ. ಆದರೆ, ಈವರೆಗೆ ಯಾರಿಗೂ ಪರಿಹಾರ ಸಿಕ್ಕಿಲ್ಲ. ಭೂಸ್ವಾಧೀನದ ಕಗ್ಗಂಟಿನಿಂದಾಗಿ ಶಿರಗುಪ್ಪಿ-ಅಂಕಲಿ ನಡುವಿನ 10 ಕಿ.ಮೀ. ಉದ್ದದ ಚತುಷ್ಪಥ ಕಾಮಗಾರಿ ಶುರುವೇ ಆಗಿಲ್ಲ.

ಆರು ಪ್ಯಾಕೇಜ್‌ಗಳಿಗೂ ರೈತರಿಂದ ತಕರಾರು

ಒಂದನೇ ಪುಟದಿಂದ...

220 ಮೀಟರ್ ಜಾಗ ಸ್ವಾಧೀನಪಡಿಸಿಕೊಳ್ಳಲು ಹೆದ್ದಾರಿ ಪ್ರಾಧಿಕಾರದವರು ಹರಸಾಹಸ ಪಟ್ಟರು. ಕೊನೆಗೂ ರೈತರು ಭೂಮಿ ಬಿಟ್ಟುಕೊಡಲು ಒಪ್ಪಿದರು. ಈಗ ಇಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ.

ಚನ್ನರಾಯಪಟ್ಟಣ-ಹಾಸನ ಬೈಪಾಸ್ ನಡುವಿನ ಚತುಷ್ಪಥ ಯೋಜನೆಗೆ ಬೇಕಿರುವ ಬಹುತೇಕ ಜಾಗ ವಶಪಡಿಸಿಕೊಳ್ಳಲಾಗಿದೆ. ಇಲ್ಲೂ 170 ಮೀಟರ್ ಜಾಗದ್ದೇ ಸಮಸ್ಯೆಯಾಗಿದೆ. ಹೀಗಾಗಿ, ಕಾಮಗಾರಿ ಮುಂದೆ ಸಾಗುತ್ತಿಲ್ಲ.

ಹಾಸನ-ಮಾರನಹಳ್ಳಿ ನಡುವಿನ ಹೆದ್ದಾರಿ ವಿಸ್ತರಣೆ ಕಾಮಗಾರಿ ಐದಾರು ವರ್ಷಗಳಿಂದ ನಡೆಯುತ್ತಿದೆ. ಭೂಕುಸಿತ ತಗ್ಗಿಸುವ ಕಾಮಗಾರಿಗಾಗಿ ದೊಡ್ಡತಪ್ಪಲುವಿನಲ್ಲಿ 2.28 ಎಕರೆ ವಿಸ್ತೀರ್ಣದ ಹೆಚ್ಚುವರಿ ಭೂಮಿಯ ಅಗತ್ಯವಿದೆ. ಆದಾಗ್ಯೂ, ರಾಜ್ಯ ಸರ್ಕಾರ ಈ ತನಕ ಭೂಮಿ ಹಸ್ತಾಂತರಿಸಿಲ್ಲ.

ಹೆಚ್ಚುವರಿ ಪರಿಹಾರಕ್ಕೆ ಗ್ರಾಮಸ್ಥರ ಪಟ್ಟು


ಒಂದನೇ ಪುಟದಿಂದ...

ಶಿವಮೊಗ್ಗದ ವಿಶೇಷ ಭೂಸ್ವಾಧೀನ ಅಧಿಕಾರಿಯವರಿಂದ ಈ ಪ್ರಕ್ರಿಯೆ ವಿಳಂಬವಾಗಿದೆ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ತಿಳಿಸಿದೆ.

ಪ್ರಸ್ತಾವ ಪರಿಷ್ಕರಣೆಗೆ ಸೂಚನೆ: ತೀರ್ಥಹಳ್ಳಿ-ನೆಲ್ಲಿಸರ ಚತುಷ್ಪಥ ಕಾಮಗಾರಿಗೆ 24 ಹೆಕ್ಟೇರ್ ಅರಣ್ಯದ ಜಮೀನು ಅಗತ್ಯ ಇದೆ. ಅರಣ್ಯ ಭೂಮಿ ಹಸ್ತಾಂತರಿಸಲು ಅರಣ್ಯ ಇಲಾಖೆ ಒಪ್ಪಿಲ್ಲ. ಅರಣ್ಯಕ್ಕೆ ತೊಂದರೆಯಾಗದಂತೆ ಪ್ರಸ್ತಾವ ಪರಿಷ್ಕರಿಸುವಂತೆ ಇಲಾಖೆ ಸೂಚಿಸಿದೆ. ಹೀಗಾಗಿ, ಮರು ಸರ್ವೆ ಆರಂಭಿಸಲಾಗಿದೆ.

ಉಕ್ರೇನ್–ರಷ್ಯಾ ಯುದ್ಧಕ್ಕೆ ಶ್ವೇತ ಭವನದ ಪೀಟರ್ ನವರೊ ಪ್ರತಿಕ್ರಿಯೆ

‘ಇದು ಮೋದಿ ಅವರ ಯುದ್ಧ’



ಪೀಟರ್ ನವರೊ

ನ್ಯೂಯಾರ್ಕ್/ವಾಷಿಂಗ್ಟನ್/ಕೀವ್ (ಪಿಟಿಐ/ಎಪಿ): ‘ಉಕ್ರೇನ್ ಮೇಲೆ ನಡೆಯುತ್ತಿರುವುದು ‘ಮೋದಿ ಅವರ ಯುದ್ಧ’. ರಷ್ಯಾದಿಂದ ಕಚ್ಚಾ ತೈಲ ಖರೀದಿಸುವ ಮೂಲಕ ಭಾರತವು ಯುದ್ಧಕ್ಕೆ ಆರ್ಥಿಕ ಬೆಂಬಲ ನೀಡುತ್ತಿದೆ’ ಎಂದು ಶ್ವೇತ ಭವನದ ವ್ಯಾಪಾರ ಸಲಹೆಗಾರ ಪೀಟರ್ ನವರೊ ಅಭಿಪ್ರಾಯಪಟ್ಟಿದ್ದಾರೆ.

‘ಬ್ಲೂಮ್‌ಬರ್ಗ್’ ಸುದ್ದಿ ಸಂಸ್ಥೆಗೆ ಬುಧವಾರ ನವರೊ ಅವರು ಸಂದರ್ಶನ ನೀಡಿದ್ದು, ‘ರಷ್ಯಾ ನಡೆಸುತ್ತಿರುವ ಯುದ್ಧಕ್ಕೆ, ಯುದ್ಧದ ಆರ್ಥಿಕತೆಗೆ ಭಾರತವು ಹಣಕಾಸಿನ ಸಹಕಾರ ನೀಡುತ್ತಿದೆ’ ಎಂದು ಆರೋಪಿಸಿದ್ದಾರೆ.

‘ಭಾರತದ ಕಾರಣದಿಂದ ಅಮೆರಿಕದಲ್ಲಿ ಇರುವ ಪ್ರತಿಯೊಬ್ಬರೂ ನಷ್ಟ ಅನುಭವಿಸಬೇಕಾಗಿದೆ. ಭಾರತ ನಮ್ಮ ಮೇಲೆ ವಿಧಿಸುವ ಸುಂಕದ ಕಾರಣದಿಂದ ನಮಗೆ ವ್ಯಾಪಾರದಲ್ಲಿ ನಷ್ಟವಾಗುತ್ತಿದೆ. ಕಾರ್ಮಿಕರಿಗೆ ನಷ್ಟವಾಗುತ್ತಿದೆ. ಉದ್ಯೋಗಕ್ಕೆ, ಕಾರ್ಖಾನೆಗಳಿಗೆ ನಷ್ಟವಾಗುತ್ತಿದೆ. ತೆರಿಗೆದಾರರಿಗೂ ನಷ್ಟ. ಯಾಕೆಂದರೆ, ನಾವು ಮೋದಿ ಅವರ ಯುದ್ಧಕ್ಕೆ’ ಹಣ ನೀಡಬೇಕಾಗಿದೆಯಲ್ಲ’ ಎಂದು ದೂರಿದ್ದಾರೆ.

‘ಇದು ‘ಪುಟಿನ್ ಅವರ ಯುದ್ಧ’ ಅಲ್ಲವೇ’ ಎಂದು ಸಂದರ್ಶಕರು ಕೇಳಿದ ಪ್ರಶ್ನೆಗೆ ಉತ್ತರಿಸಿದ ನವರೊ, ‘ಇದು ಮೋದಿ ಅವರದ್ದೇ ಯುದ್ಧ’ ಎಂದು ಮತ್ತೊಮ್ಮೆ ಪ್ರತಿಕ್ರಿಯಿಸಿದರು. ನವರೊ ಅವರ ಹೇಳಿಕೆಗಳಿಗೆ ಭಾರತವು ಪ್ರತಿಕ್ರಿಯಿಸಿಲ್ಲ.

ನವರೊ ಹೇಳಿದ್ದು...

- ರಷ್ಯಾದಿಂದ ತೈಲ ಖರೀದಿ ನಿಲ್ಲಿಸಿದರೆ, ನಾಳೆಯೇ ಶೇಕಡ 25ರಷ್ಟು ಹೆಚ್ಚುವರಿ ಸುಂಕ ವಿಧಿಸಿರುವುದನ್ನು ರದ್ದು ಮಾಡುತ್ತೇವೆ
- ಜಗತ್ತಿನಲ್ಲಿಯೇ ಭಾರತವು ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ದೇಶ. ಅದು ಪ್ರಜಾಪ್ರಭುತ್ವ ದೇಶದ ರೀತಿಯಲ್ಲಿಯೇ ನಡೆದುಕೊಳ್ಳಬೇಕು. ಅದು ಸರ್ವಾಧಿಕಾರಿಯ ಪರ ನಿಲ್ಲಬಾರದು
- ಮೋದಿ ಅವರು ಉತ್ತಮ ನಾಯಕ. ಭಾರತದಲ್ಲಿ ಪ್ರಬುದ್ಧ ಪ್ರಜಾಪ್ರಭುತ್ವವಿದೆ. ಬುದ್ಧಿವಂತರು ದೇಶವನ್ನು ಮುನ್ನಡೆಸುತ್ತಿದ್ದಾರೆ. ನಾವು ಅಧಿಕ ಸುಂಕ ವಿಧಿಸಿದ್ದೇವೆ ಎನ್ನುವ ಕಾರಣಕ್ಕೆ ನಾವೇನೋ ಅಪರಾಧ ಮಾಡಿದ್ದೇವೆ ಎನ್ನುವಂತೆ ಭಾರತದವರು ನಮ್ಮನ್ನು ನೋಡುತ್ತಾರೆ
- ಭಾರತ ಮತ್ತು ಚೀನಾವು ರಷ್ಯಾದಿಂದ ತೈಲ ಖರೀದಿಸುವುದನ್ನು ನಿಲ್ಲಿಸಬೇಕು. ಹೀಗೆ ಮಾಡಿದರೆ, ನಾಳೆಯೇ ಯುದ್ಧ ನಿಲ್ಲುತ್ತದೆ. ಇಷ್ಟೇ ಅಲ್ಲ, ಐರೋಪ್ಯ ದೇಶಗಳೂ ರಷ್ಯಾದಿಂದ ತೈಲ ಖರೀದಿಸುವುದನ್ನು ನಿಲ್ಲಿಸಬೇಕು. ಆಗ ಪುಟಿನ್ ಅವರ ಬಳಿ ಹಣ ಇರುವುದಿಲ್ಲ. ಆಗ ಯುದ್ಧಕ್ಕೂ ಹಣ ಇರುವುದಿಲ್ಲ

‘ತೈಲ: ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಭಾರತ’

‘ನಾವು (ಭಾರತ) ರಷ್ಯಾದಿಂದ ತೈಲ ಖರೀದಿಯನ್ನು ನಿಲ್ಲಿಸುವುದಿಲ್ಲ’ ಎನ್ನುತ್ತಿದ್ದಾರೆ. ಇದನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕು? ಜಾಗತಿಕ ಮಾರಾಟ ಬೆಲೆಗಿಂತ ಕಡಿಮೆ ಬೆಲೆಗೆ ರಷ್ಯಾದಿಂದ ಭಾರತವು ತೈಲ ಖರೀದಿಸುತ್ತದೆ. ರಷ್ಯಾದ ಶುದ್ಧೀಕರಣ ಘಟಕಗಳ ಮಾಲೀಕರೊಂದಿಗಿನ ಪಾಲುದಾರಿಕೆಯಲ್ಲಿ ಭಾರತದ ಶುದ್ಧೀಕರಣ ಘಟಕಗಳ ಮಾಲೀಕರು ಇಡೀ ಜಗತ್ತಿಗೆ ಹೆಚ್ಚಿನ ಬೆಲೆಗೆ ಆ ತೈಲವನ್ನು ಮಾರಾಟ ಮಾಡುತ್ತಾರೆ’ ಎಂದು ನವರೊ ಆರೋಪಿಸಿದ್ದಾರೆ.

‘ಇದೇ ಹಣವನ್ನು ರಷ್ಯಾವು ಉಕ್ರೇನ್ ಮೇಲಿನ ಯುದ್ಧಕ್ಕೆ ಬಳಸಿಕೊಳ್ಳುತ್ತದೆ. ಹೆಚ್ಚು ಹೆಚ್ಚು ಉಕ್ರೇನ್ ಜನರನ್ನು ಹತ್ಯೆ ಮಾಡುತ್ತದೆ. ಆಮೇಲೆ ಉಕ್ರೇನ್ ನಮ್ಮ ಬಳಿ, ಐರೋಪ್ಯ ದೇಶಗಳ ಬಳಿ ಬಂದು ಹಣ ನೀಡಿ ಎಂದು ಕೇಳುತ್ತದೆ’ ಎಂದಿದ್ದಾರೆ.

ರಷ್ಯಾ ದಾಳಿ: 17 ಸಾವು

ಉಕ್ರೇನ್‌ನ ರಾಜಧಾನಿ ಕೀವ್ ನಗರದ ಕೇಂದ್ರ ಭಾಗದಲ್ಲಿ ರಷ್ಯಾವು ಗುರುವಾರ ತೀವ್ರ ಡ್ರೋನ್ ದಾಳಿ ನಡೆಸಿದೆ. ದಾಳಿಯಲ್ಲಿ 17 ಮಂದಿ ಮೃತಪಟ್ಟು, 48ಕ್ಕೂ ಹೆಚ್ಚು ಜನರಿಗೆ ಗಾಯಗಳಾಗಿವೆ. ‘ಮೃತರ ಸಂಖ್ಯೆ ಮತ್ತಷ್ಟು ಏರಿಕೆಯಾಗುವ ಸಂಭವವಿದೆ’ ಎಂದು ಗೃಹ ಇಲಾಖೆ ಹೇಳಿದೆ. ಯುದ್ಧ ಅಂತ್ಯಗೊಳಿಸುವ ಬಗ್ಗೆ ಅಮೆರಿಕದ ನೇತೃತ್ವದಲ್ಲಿ ಮಾತುಕತೆ ನಡೆಯುತ್ತಿರುವಂತೆಯೇ ರಷ್ಯಾವು ಉಕ್ರೇನ್ ಮೇಲೆ ದಾಳಿ ನಡೆಸಿದೆ.

ಮುಂಬೈ ಧಾರಣೆ (ಶೇಂಗಾ)

28-08-2025	
ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7400-7500
ದಪ್ಪ ಗುಜರಾತ್ (ಹೊಸ)	8400-8500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1385 (1385)
ಒಂದು ವಾರದ ಡೆಲಿವರಿ	1380 (1380)
ಪಾಮ್ ವಾರದ ಡೆಲಿವರಿ	1273 (1278)
ಸೂರ್ಯಕಾಂತಿ ಎಣ್ಣೆ ಕಚ್ಚಾ	1350 (1350)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	10,1000 (1,00,900)
ಬೆಳ್ಳಿ ಕೆ.ಜಿಗೆ	1,17,000 (1,15,900)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಗಡಿಯಲ್ಲಿ ಶಾಂತಿ ಸ್ಥಾಪನೆಗೆ ಜಂಟಿ ಕ್ರಮ: ಚೀನಾ ಸೇನೆ

ಬೀಜಿಂಗ್ (ಪಿಟಿಐ): ಚೀನಾ ಮತ್ತು ಭಾರತ ಸೇನೆಗಳು ಜಂಟಿಯಾಗಿ ತಮ್ಮ ಗಡಿ ಪ್ರದೇಶಗಳಲ್ಲಿ ಶಾಂತಿ ಮತ್ತು ನೆಮ್ಮದಿ ಕಾಪಾಡಿಕೊಳ್ಳಬೇಕು ಎಂದು ಚೀನಾ ಸೇನೆ ಗುರುವಾರ ಹೇಳಿದೆ.

ಉಭಯ ದೇಶಗಳ ನಡುವೆ ಇತ್ತೀಚೆಗೆ ಗಡಿಯಲ್ಲಿನ ಪರಿಸ್ಥಿತಿ ಕುರಿತು ರಚನಾತ್ಮಕ ಮತ್ತು ಸಕಾರಾತ್ಮಕ ಮಾತುಕತೆ ನಡೆದ ಬಳಿಕ ಚೀನಾ ಸೇನೆ ಈ ಕುರಿತು ಹೇಳಿಕೆ ನೀಡಿದೆ.

ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಮತ್ತು ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಅವರ ನಡುವೆ ಆಗಸ್ಟ್ 19ರಂದು ದೆಹಲಿಯಲ್ಲಿ ಭಾರತ– ಚೀನಾ ಗಡಿ ಸಮಸ್ಯೆಗಳ ಕುರಿತು 24ನೇ ಸುತ್ತಿನ ಮಾತುಕತೆ ನಡೆದಿತ್ತು. ಈ ವೇಳೆ 10 ಅಂಶಗಳಿಗೆ ಒಮ್ಮತ ಮೂಡಿತ್ತು ಎಂದು ಚೀನಾ ತಿಳಿಸಿದೆ.

ವಾಡಿ-ಸಿಕಂದರಾಬಾದ್ ಹೆಚ್ಚುವರಿ ರೈಲು ಮಾರ್ಗ: ಸಂಪುಟ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ವಾಡಿ ಹಾಗೂ ತೆಲಂಗಾಣದ ಸಿಕಂದರಾಬಾದ್ (ಸನತ್‌ನಗರ) ನಡುವೆ ಮೂರು ಹಾಗೂ ನಾಲ್ಕನೇ ರೈಲು ಮಾರ್ಗ ನಿರ್ಮಾಣಕ್ಕೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ.

ಸನತ್‌ನಗರ - ಹಫೀಜ್‌ಪೇಟೆ ನಡುವೆ 3ನೇ ಮಾರ್ಗ, ಹಫೀಜ್‌ಪೇಟೆ - ವಾಡಿ ನಡುವೆ 3ನೇ ಮತ್ತು 4ನೇ ಮಾರ್ಗ ನಿರ್ಮಾಣ ಮಾಡಲಾಗುತ್ತದೆ. ಈ ಯೋಜನೆಯು 5 ವರ್ಷಗಳಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

ಈ ಮಾರ್ಗವು ಕರ್ನಾಟಕದಲ್ಲಿ 47 ಕಿ.ಮೀ ಹಾಗೂ ತೆಲಂಗಾಣದಲ್ಲಿ 126 ಕಿ.ಮೀ. ಹಾದು ಹೋಗುತ್ತದೆ. ಈ ಯೋಜನೆಯನ್ನು ಪ್ರಧಾನಮಂತ್ರಿ-ಗತಿ ಶಕ್ತಿ ರಾಷ್ಟ್ರೀಯ ಮಾಸ್ಟರ್ ಪ್ಲಾನ್ ಅಡಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಹೆಚ್ಚುವರಿ ಮಾರ್ಗ ನಿರ್ಮಾಣದ ಬಳಿಕ ಕಲ್ಲಿದ್ದಲು, ಸಿಮೆಂಟ್, ಕ್ಲಿಂಕರ್ (ಸಿಮೆಂಟ್ ತಯಾರಿಕೆಯಲ್ಲಿ ಬಳಸುವ ವಸ್ತು), ಉಕ್ಕು, ರಸಗೊಬ್ಬರಗಳು, ಕೃಷಿ ಸರಕುಗಳ ಸಾಗಣೆಗೆ ಅನುಕೂಲವಾಗಲಿದೆ ಎಂದು ರೈಲ್ವೆ ಇಲಾಖೆಯ ಹೇಳಿಕೆ ತಿಳಿಸಿದೆ.

ರಾಜ್ಯದಲ್ಲಿ ಬಹುತೇಕ ಕಡೆಗಳಲ್ಲಿ ಜೋಡಿ ಹಳಿ ಮಾರ್ಗಗಳು ಇವೆ. ಆದರೆ, ಈ ಹಿಂದೆ ಬೆಂಗಳೂರು-ವೈಟ್‌ಫೀಲ್ಡ್ ನಡುವೆ ಮೂರನೇ ಹಾಗೂ ನಾಲ್ಕನೇ ಮಾರ್ಗದ ಕಾಮಗಾರಿಗೆ ಅನುಮೋದನೆ ನೀಡಲಾಗಿತ್ತು. ಈ ಕಾಮಗಾರಿ ಪ್ರಗತಿಯಲ್ಲಿದೆ. ಇದೀಗ ವಾಡಿ-ಸಿಕಂದರಾಬಾದ್ ನಡುವೆ ಹೆಚ್ಚುವರಿ ಮಾರ್ಗ ನಿರ್ಮಾಣಕ್ಕೆ ಒಪ್ಪಿಗೆ ಸಿಕ್ಕಿದೆ.

ಅಂಕಿ ಅಂಶಗಳು

173 ಕಿ.ಮೀ. – ರೈಲು ಮಾರ್ಗದ ಒಟ್ಟು ಉದ್ದ

₹5012 ಕೋಟಿ – ಯೋಜನೆಯ ವೆಚ್ಚ

226 ಹೆಕ್ಟೇರ್ ಭೂ ಸ್ವಾಧೀನ

ಚೀನಾ ವಿಜಯೋತ್ಸವಕ್ಕೆ ಪುಟಿನ್, ಕಿಮ್ ಜಾಂಗ್ ಉನ್

ಬೀಜಿಂಗ್ (ಪಿಟಿಐ): ಸೆಪ್ಟೆಂಬರ್ 3ರಂದು ನಡೆಯುವ ಚೀನಾದ 80ನೇ ವಿಜಯೋತ್ಸವ ಸಂಸ್ಮರಣಾ ದಿನದ ಪಥಸಂಚಲನಕ್ಕೆ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್, ಉತ್ತರ ಕೊರಿಯಾದ ಕಿಮ್ ಜಾಂಗ್ ಉನ್ ಸೇರಿದಂತೆ 26 ರಾಷ್ಟ್ರಗಳ ನಾಯಕರು ಸಾಕ್ಷಿಯಾಗಲಿದ್ದಾರೆ ಎಂದು ಚೀನಾ ಗುರುವಾರ ತಿಳಿಸಿದೆ.

ಎರಡನೇ ವಿಶ್ವ ಯುದ್ಧದ ಸಂದರ್ಭದಲ್ಲಿ ಜಪಾನ್ ವಿರುದ್ಧ ಮೇಲುಗೈ ಸಾಧಿಸಿದ ದಿನವನ್ನು ವಿಜಯೋತ್ಸವವಾಗಿ ಚೀನಾ ಆಚರಿಸುತ್ತಿದೆ. ವಿಜಯೋತ್ಸವದಿಂದ ಅಂತರ ಕಾಯ್ದುಕೊಳ್ಳುವಂತೆ ಜಪಾನ್ ವಿಶ್ವ ನಾಯಕರಲ್ಲಿ ಮನವಿ ಮಾಡಿಕೊಂಡಿತ್ತು. ಜಪಾನ್‌ನ ಈ ಕೋರಿಕೆಗೆ ಚೀನಾ ಪ್ರಬಲವಾದ ರಾಜತಾಂತ್ರಿಕ ಪ್ರತಿಭಟನೆಯನ್ನೂ ವ್ಯಕ್ತಪಡಿಸಿತ್ತು.

ಬೀಜಿಂಗ್‌ನಲ್ಲಿ ನಡೆಯುವ ವಿಜಯೋತ್ಸವಕ್ಕೆ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರ ಆಹ್ವಾನದ ಮೇರೆಗೆ ಜಗತ್ತಿನ 26 ರಾಷ್ಟ್ರಗಳ ನಾಯಕರು ಆಗಮಿಸುತ್ತಿದ್ದಾರೆ ಎಂದು ಚೀನಾ ವಿದೇಶಾಂಗ ಇಲಾಖೆಯ ಸಹಾಯಕ ಸಚಿವ ಹಾಂಗ್ ಲೀ ತಿಳಿಸಿದ್ದಾರೆ.

ವಿಳಂಬ ಧೋರಣೆ; 'ಸುಪ್ರೀಂ' ಪ್ರಶ್ನೆ

ಮಸೂದೆಗಳಿಗೆ ರಾಜ್ಯಪಾಲರ ಅಂಕಿತ ರಾಜ್ಯಗಳು ಅರ್ಜಿ ಸಲ್ಲಿಸುವಂತಿಲ್ಲ– ಕೇಂದ್ರ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ವಿಧಾನಸಭೆಗಳಲ್ಲಿ ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕಲು ಕೆಲವು ರಾಜ್ಯಪಾಲರು ವಿಳಂಬ ಧೋರಣೆ ಅನುಸರಿಸುತ್ತಿರುವುದನ್ನು ಸುಪ್ರೀಂ ಕೋರ್ಟ್ ಗುರುವಾರ ಪ್ರಶ್ನಿಸಿದೆ.


ಮಸೂದೆಗಳಿಗೆ ಅಂಕಿತ ಹಾಕದೆ 'ಸುದೀರ್ಘ ಅವಧಿ'ಗೆ ತಮ್ಮ ಬಳಿ ಇರಿಸಿಕೊಳ್ಳಲು ರಾಜ್ಯಪಾಲರಿಗೆ ಅನುಮತಿಸಿದರೆ, ಸಂವಿಧಾನದ 200ನೇ ವಿಧಿಯಲ್ಲಿ ಬಳಸಿರುವ 'ಸಾಧ್ಯವಾದಷ್ಟು ಬೇಗ' ಎಂಬ ಪದವು ತನ್ನ ಉದ್ದೇಶವನ್ನು ಪೂರೈಸುವುದಿಲ್ಲ ಎಂದು ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ಪೀಠ ತಿಳಿಸಿದೆ.

ಮಸೂದೆಗೆ ಅಂಕಿತ ಹಾಕಲು 'ಆರು ವಾರಗಳ ಮಿತಿ'ಯನ್ನು ಸಂವಿಧಾನ ರಚನೆಕಾರರು 200ನೇ ವಿಧಿಯಲ್ಲಿ ಉದ್ದೇಶಪೂರ್ವಕವಾಗಿ 'ಸಾಧ್ಯವಾದಷ್ಟು ಬೇಗ' ಎಂಬ ಪದಕ್ಕೆ ಬದಲಾಯಿಸಿದ್ದಾರೆ ಎಂದು ಪೀಠವು ಹೇಳಿತು. ಮಸೂದೆಗಳ ಭವಿಷ್ಯವನ್ನು ನಿರ್ಧರಿಸುವಾಗ 'ಸಾಧ್ಯವಾದಷ್ಟು ಬೇಗ' ಎಂಬ ಪದವನ್ನು ನಿರ್ಲಕ್ಷಿಸಬಹುದೇ ಎಂದು ಕೇಂದ್ರ ಸರ್ಕಾರವನ್ನು ಪ್ರಶ್ನಿಸಿತು.

ರಾಜ್ಯ ವಿಧಾನಸಭೆಗಳು ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕಲು ಕಾಲಮಿತಿ ನಿಗದಿಪಡಿಸಬಹುದೇ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಉಲ್ಲೇಖಿಸಿರುವ ಸಾಂವಿಧಾನಿಕ ಪ್ರಶ್ನೆಗಳ ಕುರಿತ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದೆ. ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್, ವಿಕ್ರಮನಾಥ್, ಪಿ.ಎಸ್.ನರಸಿಂಹ ಮತ್ತು ಎ.ಎಸ್. ಚಂದೂರ್‌ಕರ್ ಅವರು ಪೀಠದಲ್ಲಿದ್ದಾರೆ.

ಅರ್ಜಿ ಸಲ್ಲಿಸುವಂತಿಲ್ಲ: ವಿಧಾನಸಭೆಗಳಲ್ಲಿ ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕುವುದಕ್ಕೆ ಸಂಬಂಧಿಸಿ ರಾಜ್ಯಪಾಲರು ಮತ್ತು ರಾಷ್ಟ್ರಪತಿ ಕೈಗೊಳ್ಳುವ ಕ್ರಮಗಳ ವಿರುದ್ಧ ರಾಜ್ಯ ಸರ್ಕಾರಗಳು ಸುಪ್ರೀಂ ಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸುವಂತಿಲ್ಲ ಎಂದು ಕೇಂದ್ರ ಸರ್ಕಾರ ಇದಕ್ಕೂ ಮುನ್ನ ಸುಪ್ರೀಂ ಕೋರ್ಟ್‌ಗೆ ತಿಳಿಸಿತು.

'ಕಾರ್ಯಾಂಗದ ಮೇಲೆ ಅಧಿಕಾರ ಚಲಾಯಿಸಬಾರದು'



ರಾಜ್ಯಪಾಲರು ರಾಜ್ಯ ಕಾರ್ಯಾಂಗ ಮತ್ತು ಶಾಸಕಾಂಗದ ಮೇಲೆ ಅಧಿಕಾರ ಚಲಾಯಿಸಲು ಸಾಧ್ಯವಿಲ್ಲ ಎಂದು ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

'ರಾಜ್ಯಪಾಲರು ಶಾಸಕಾಂಗದ ಮೇಲೆ ಅಧಿಕಾರ ಚಲಾಯಿಸುವುದು 'ಒಂದೇ ಒರೆಯಲ್ಲಿ ಎರಡು ಕತ್ತಿ'ಗಳನ್ನು ಇಡುವುದಕ್ಕೆ ಸಮಾನ. ಅದಕ್ಕೆ ಅವಕಾಶ ನೀಡಿದರೆ ರಾಜ್ಯಪಾಲರು ಸೂಪರ್ ಮುಖ್ಯಮಂತ್ರಿಯಾಗುವರು. ಚುನಾಯಿತ ಮುಖ್ಯಮಂತ್ರಿ ಪ್ರಜಾಪ್ರಭುತ್ವ ತತ್ವಗಳಡಿ ಕಾರ್ಯ ನಿರ್ವಹಿಸುವುದಕ್ಕೆ ತಡೆ ಉಂಟಾಗಬಹುದು' ಎಂದು ತಮಿಳುನಾಡು ಸರ್ಕಾರ ವನ್ನು ಪ್ರತಿನಿಧಿಸಿದ ಹಿರಿಯ ವಕೀಲ ಎ.ಎಂ.ಸಿಂಘ್ವಿ ವಾದಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ಸಿಜೆಐ ಬಿ.ಆರ್.ಗವಾಯಿ, 'ನಾನು ಸಾಲಿಸಿಟರ್ ಜನರಲ್ ಅವರಿಗೆ ಆರಂಭದಿಂದಲೂ ಇದನ್ನೇ ಕೇಳುತ್ತಿದ್ದೇನೆ' ಎಂದರು. ಮಹಾರಾಷ್ಟ್ರ ಸರ್ಕಾರದ ಪರವಾಗಿ ಹಾಜರಾದ ಹಿರಿಯ ವಕೀಲ ಹರೀಶ್ ಸಾಳ್ವೆ ಅವರು, ರಾಜ್ಯಪಾಲರು ಹಣಕಾಸು ಮಸೂದೆಗಳಿಗೆ ಒಪ್ಪಿಗೆ ನೀಡುವುದನ್ನೂ ನಿರಾಕರಿಸಬಹುದು ಎಂದು ವಾದಿಸಿದರು.

ಮೆಹ್ತಾ ವಾದ...

- ರಾಜ್ಯಪಾಲರು ಮತ್ತು ರಾಷ್ಟ್ರಪತಿಯ ವಿರುದ್ಧ ರಾಜ್ಯ ಗಳು ಸಂವಿಧಾನದ 32ನೇ ವಿಧಿಯಡಿ ಅರ್ಜಿ ಸಲ್ಲಿಸುವುದು ಸಮರ್ಥನೀಯವಲ್ಲ
- ರಾಜ್ಯ ಸರ್ಕಾರಗಳು ಈ ವಿಚಾರದಲ್ಲಿ ಯಾವುದೇ ನಿರ್ದೇಶನಗಳನ್ನು ನೀಡುವಂತಿಲ್ಲ
- ಮಸೂದೆಗಳ ಬಗ್ಗೆ ರಾಷ್ಟ್ರಪತಿ ಮತ್ತು ರಾಜ್ಯಪಾಲರು ನಿರ್ಧಾರ ತೆಗೆದುಕೊಳ್ಳುವ ವಿಚಾರವು ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡುವಂತಿಲ್ಲ

ಮೂಲಭೂತ ಹಕ್ಕುಗಳ ಉಲ್ಲಂಘನೆ ವಿಚಾರದಲ್ಲಿ ರಾಜ್ಯಗಳು ಸಂವಿಧಾನದ 32ನೇ ವಿಧಿಯ ಅಡಿಯಲ್ಲಿ ರಿಟ್ ಅರ್ಜಿ ಸಲ್ಲಿಸಬಹುದೇ ಎಂಬ ಬಗ್ಗೆ ರಾಷ್ಟ್ರಪತಿಯವರು ಸುಪ್ರೀಂ ಕೋರ್ಟ್‌ನ ಅಭಿಪ್ರಾಯವನ್ನು ಪಡೆಯಲು ಬಯಸುತ್ತಾರೆ ಎಂದು ಕೇಂದ್ರ ಸರ್ಕಾರದ ಪರ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಪೀಠಕ್ಕೆ ತಿಳಿಸಿದರು.

ತಮಿಳುನಾಡು ಸರ್ಕಾರ ಮತ್ತು ಅಲ್ಲಿನ ರಾಜ್ಯಪಾಲರ ನಡುವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಏಪ್ರಿಲ್ 8ರಂದು ನೀಡಿದ್ದ ತೀರ್ಪನ್ನು ಸಾಲಿಸಿಟರ್ ಜನರಲ್ ಉಲ್ಲೇಖಿಸಿದರು. ವಿಧಾನಸಭೆ ಅಂಗೀಕರಿಸಿದ ಮಸೂದೆಗಳಿಗೆ ರಾಜ್ಯಪಾಲರು ನಿಗದಿತ ಕಾಲಮಿತಿಯೊಳಗೆ ಅಂಕಿತ ಹಾಕದಿದ್ದರೆ ರಾಜ್ಯಗಳು ನೇರವಾಗಿ ಸುಪ್ರೀಂ ಕೋರ್ಟ್ ಮೊರೆ ಹೋಗಬಹುದು ಎಂದು ಸುಪ್ರೀಂ ಕೋರ್ಟ್ ಪೀಠ ಹೇಳಿತ್ತು. ಇಬ್ಬರು ನ್ಯಾಯಮೂರ್ತಿಗಳ ಪೀಠ ಏಪ್ರಿಲ್ 8ರಂದು ನೀಡಿದ್ದ ತೀರ್ಪಿನ ಬಗ್ಗೆ ಯಾವುದೇ ಅಭಿಪ್ರಾಯ ಹೇಳುವುದಿಲ್ಲ ಎಂದ ಸಿಜೆಐ ತಿಳಿಸಿದರು. ಆದರೆ, ರಾಜ್ಯಪಾಲರು ಮಸೂದೆಯನ್ನು ಆರು ತಿಂಗಳವರೆಗೆ ತಮ್ಮಲ್ಲೇ ಇಟ್ಟುಕೊಳ್ಳುವುದು ಸಮರ್ಥನೀಯವಲ್ಲ ಎಂದರು.

ವಾಯು ಮಾಲಿನ್ಯ ಕಡಿತಗೊಳಿಸಿದೆ 3.5 ವರ್ಷ ಅಧಿಕ ಆಯಸ್ಸು

ನವದೆಹಲಿ (ಪಿಟಿಐ): ವಿಶ್ವ ಆರೋಗ್ಯ ಸಂಸ್ಥೆ ಮಾರ್ಗಸೂಚಿಯ ಅನುಸಾರ ವಾಯು ಮಾಲಿನ್ಯವನ್ನು ತಡೆಗಟ್ಟಿದರೆ ಭಾರತದ ಜನರ ಸರಾಸರಿ ಜೀವಿತಾವಧಿಯು 3.5 ವರ್ಷ ಅಧಿಕಗೊಳ್ಳಲಿದೆ ಎಂದು ಷಿಕಾಗೊ ವಿಶ್ವವಿದ್ಯಾಲಯದ 'ದಿ ಎನರ್ಜಿ ಪಾಲಿಸಿ ಇನ್‌ಸ್ಟಿಟ್ಯೂಟ್' ವಿಭಾಗವು ಗುರುವಾರ ಬಿಡುಗಡೆ ಮಾಡಿರುವ 2025ರ ತನ್ನ ವರದಿಯಲ್ಲಿ ಹೇಳಿದೆ.

ವಾಯು ಮಾಲಿನ್ಯಕಾರಕ ಕಣಗಳ ಪ್ರಮಾಣವನ್ನು ಶೇ 40ರಷ್ಟು ಕಡಿತ ಮಾಡುವುದಾಗಿ ಕೇಂದ್ರ ಸರ್ಕಾರವು 2017ರಲ್ಲಿ ಗುರಿ ಹಾಕಿಕೊಂಡಿತ್ತು. ಒಂದು ವೇಳೆ 2026ರ ಒಳಗೆ ಈ ಗುರಿಯನ್ನು ತಲುಪಿದರೆ ಜನರ ಜೀವಿತಾವಧಿ ಅಧಿಕಗೊಳ್ಳಲಿದೆ ಎಂದು ವರದಿಯಲ್ಲಿ ಹೇಳಲಾಗಿದೆ. 2023ರಲ್ಲಿ ಗಾಳಿಯಲ್ಲಿ ಮಾಲಿನ್ಯ ಕಾರಕ ಕಣಗಳ ಗಾತ್ರವು 2.5ರಷ್ಟಿತ್ತು. ಇದು ವಿಶ್ವ ಆರೋಗ್ಯ ಸಂಸ್ಥೆಯ ಸರಾಸರಿಗಿಂತಲೂ 8 ಪಟ್ಟು ಅಧಿಕವಾಗಿದೆ. 2023ರ ಪ್ರಮಾಣವು 2022ರಲ್ಲಿ ಇದ್ದ ಪ್ರಮಾಣಕ್ಕಿಂತೂ ಅಧಿಕವಾಗಿತ್ತು.

ಒಂದು ಘನ ಮೀಟರ್‌ನಷ್ಟು ಗಾಳಿಯಲ್ಲಿ 2.5ರಷ್ಟು ಗಾತ್ರದಲ್ಲಿ ಇರುವ ಮಾಲಿನ್ಯಕಾರಕ ಕಣಗಳು 40 ಮೈಕ್ರೊಗ್ರಾಂನಷ್ಟು ಇರಬಹುದು ಎಂದು ಭಾರತವು ಮಿತಿ ಹಾಕಿಕೊಂಡಿದೆ. ಭಾರತದ ಶೇ 46ರಷ್ಟು ಜನ ವಾಸಿಸುವ ಪ್ರದೇಶದಲ್ಲಿ ಮಾಲಿನ್ಯಕಾರಕ ಕಣಗಳ ಪ್ರಮಾಣ ನಾವೇ ಹಾಕಿಕೊಂಡ ಮಿತಿಯನ್ನು ಮೀರುತ್ತವೆ ಎಂದು ವರದಿ ಹೇಳಿದೆ.


ರಾಜ್ಯ: 1.4 ವರ್ಷ ಅಧಿಕ ಜೀವಿತಾವಧಿ

ವಾಯು ಮಾಲಿನ್ಯದ ವಿಚಾರದಲ್ಲಿ ಉತ್ತರ ಭಾರತದ ಹೋಲಿಕೆಯಲ್ಲಿ ದಕ್ಷಿಣ ಭಾರತದಲ್ಲಿ ಉತ್ತಮ ಸ್ಥಿತಿ ಇದೆ. ವಿಶ್ವ ಸಂಸ್ಥೆಯ ಮಾರ್ಗಸೂಚಿಯನ್ನು ಪಾಲಿಸಿದರೆ ಕರ್ನಾಟಕದ ಜನರ ಸರಾಸರಿ ಜೀವಿತಾವಧಿಯು 1.5 ವರ್ಷ ಅಧಿಕಗೊಳ್ಳಲಿದೆ. ಆಂಧ್ರ ಪ್ರದೇಶದ ಜನರ ಜೀವಿತಾವಧಿಯು 2.1, ತೆಲಂಗಾಣದ ಜನರದ್ದು 2.4, ತಮಿಳುನಾಡಿನ ಜನರ ಜೀವಿತಾವಧಿಯು 1.7 ವರ್ಷ ಅಧಿಕಗೊಳ್ಳಲಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಚಿಟಿಕೆ ಸುದ್ದಿ

ಗಡಿ ನುಸುಳುವ ಯತ್ನ ವಿಫಲ: ಇಬ್ಬರು ಉಗ್ರರ ಹತ್ಯೆ

ಶ್ರೀನಗರ: ಉತ್ತರ ಕಾಶ್ಮೀರದ ಗುರೇಜ್ ವಲಯದ ಗಡಿ ನಿಯಂತ್ರಣ ರೇಖೆಯಲ್ಲಿ ಗುರುವಾರ ಭಾರತೀಯ ಸೇನೆಯು, ಇಬ್ಬರು ಭಯೋತ್ಪಾದಕರನ್ನು ಹತ್ಯೆ ಮಾಡಿದೆ.



ಖಚಿತ ಮಾಹಿತಿ ಮೇರೆಗೆ ಸೇನೆ ಹಾಗೂ ಜಮ್ಮು ಮತ್ತು ಕಾಶ್ಮೀರ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿದರು ಎಂದು ಶ್ರೀನಗರದ ಚಿನಾರ್ ಕೋರ್ ತಿಳಿಸಿದೆ.

ಭಯೋತ್ಪಾದಕರ ಗುಂಡಿನ ದಾಳಿಗೆ ಪ್ರತಿದಾಳಿ ನಡೆಸಿದ ಯೋಧರು ಇಬ್ಬರನ್ನು ಹೊಡೆದುರುಳಿಸಿದರು ಎಂದು 'ಎಕ್ಸ್' ಪೋಸ್ಟ್‌ನಲ್ಲಿ ಸೇನೆ ಅಧಿಕಾರಿಗಳು ತಿಳಿಸಿದ್ದಾರೆ.

ಬುಧವಾರವೂ ಇದೇ ವಲಯದಲ್ಲಿ ಗಡಿ ನುಸುಳುವಿಕೆ ಯತ್ನ ನಡೆದಿತ್ತು. ಕಣಿವೆಯಲ್ಲಿ ಭಯೋತ್ಪಾದಕರ ಸಂಖ್ಯೆ ಗಣನೀಯವಾಗಿ ಇಳಿಕೆಯಾಗಿದ್ದರೂ ಗುರೇಜ್, ಉರಿ ಮತ್ತು ಕುಪ್ವಾರ ವಲಯಗಳಲ್ಲಿ ಪದೇ–ಪದೇ ಗಡಿ ನುಸುಳುವ ಯತ್ನ ನಡೆಯುತ್ತಲೇ ಇವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತೆಗೆದುಹಾಕಿದ 65 ಲಕ್ಷ ಮತದಾರರು ಬಡವರು: ರಾಹುಲ್

ಸೀತಾಮಡಿ, ಮೋತಿಹಾರಿ (ಬಿಹಾರ), (ಪಿಟಿಐ): 'ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಸಂದರ್ಭದಲ್ಲಿ 65 ಲಕ್ಷ ಮತದಾರರ ಹೆಸರನ್ನು ತೆಗೆದುಹಾಕಲಾಗಿದೆ. ಈ ಎಲ್ಲ ಮತದಾರರು ಬಡವರು ಹಾಗೂ ಸಮಾಜದ ದುರ್ಬಲ ವರ್ಗಕ್ಕೆ ಸೇರಿದ್ದಾರೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ದೂರಿದ್ದಾರೆ.

ಬಿಹಾರದಲ್ಲಿ 'ವೋಟರ್ ಅಧಿಕಾರ ಯಾತ್ರೆ' ಸಂದರ್ಭದಲ್ಲಿ ಮಾತನಾಡಿದ ಅವರು, 'ಬಿಹಾರದ ಜನರು ಬಿಜೆಪಿ ಹಾಗೂ ಚುನಾವಣಾ ಆಯೋಗವು ಜನರ ಮತದಾನದ ಹಕ್ಕನ್ನು ದೋಚಲು ಬಿಡಬಾರದು. ಬಿಜೆಪಿ ಹಾಗೂ ಆಯೋಗವು ಮತ ಕಳ್ಳತನದಲ್ಲಿ ಭಾಗಿಯಾಗಿದ್ದು, ನಾವು ಅದನ್ನು ಬಯಲು ಮಾಡಿದ್ದೇವೆ. ಮಹಾರಾಷ್ಟ್ರ, ಹರಿಯಾಣ, ಕರ್ನಾಟಕದಲ್ಲಿ ಮತಕಳ್ಳತನ ಮಾಡಿಯೇ ಗೆದ್ದಿದೆ. ಬಿಹಾರದಲ್ಲಿಯೂ ಅದನ್ನೇ ಮಾಡಲು ಹೊರಟಿದ್ದು, ಅದಕ್ಕೆ ಅವಕಾಶ ಮಾಡಿಕೊಡಬಾರದು' ಎಂದು ಕರೆ ನೀಡಿದರು.

ಹಿಂಸಾಚಾರ: ನ್ಯಾಯಾಂಗ ಆಯೋಗದ ವರದಿ ಸಲ್ಲಿಕೆ

ಸಂಭಲ್: ಹಿಂದೂಗಳ ಸಂಖ್ಯೆ ಭಾರಿ ಇಳಿಕೆ

ಪ್ರಜಾವಾಣಿ ವಾರ್ತೆ

ಲಖನೌ: ಕಳೆದ ವರ್ಷ ಉತ್ತರ ಪ್ರದೇಶದ ಸಂಭಲ್ ನಗರದಲ್ಲಿ ನಡೆದ ಹಿಂಸಾಚಾರ ಘಟನೆಯ ಕುರಿತ ತನಿಖೆಗೆ ರಚನೆಯಾಗಿದ್ದ ನ್ಯಾಯಾಂಗ ಆಯೋಗವು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೆ ವರದಿಯನ್ನು ಗುರುವಾರ ಸಲ್ಲಿಸಿದೆ.

ಹಿಂಸಾಚಾರದಲ್ಲಿ ನಾಲ್ವರು ಮೃತಪಟ್ಟಿದ್ದರು ಮತ್ತು ಹಲವರು ಗಾಯಗೊಂಡಿದ್ದರು. ನಗರದ ಕೋಮು ಗಲಭೆಯ ಇತಿಹಾಸ, ಸ್ವಾತಂತ್ರ್ಯಾ ನಂತರ ಜನಸಂಖ್ಯಾ ಸ್ವರೂಪದಲ್ಲಾದ ಬದಲಾವಣೆ ಮತ್ತು ಮಸೀದಿ ಇದ್ದ ಸ್ಥಳದಲ್ಲಿ ಹಿಂದೂ ದೇಗುಲ ಇತ್ತು ಎಂಬುದಕ್ಕೆ ಲಭ್ಯವಿರುವ ಸಾಕ್ಷ್ಯಗಳ ಕುರಿತ ಮಾಹಿತಿಯು 400 ಪುಟಗಳ ವರದಿಯಲ್ಲಿದೆ ಎಂದು ಮೂಲಗಳು ತಿಳಿಸಿವೆ. 1947ರಿಂದ ಈವರೆಗೆ ಸಂಭಲ್ ನಗರದಲ್ಲಿ ಹಿಂದೂಗಳ ಜನಸಂಖ್ಯೆ ಶೇ 45ರಿಂದ ಶೇ 15ಕ್ಕೆ ಕುಸಿದಿದೆ. ಇದೇ ಸಂದರ್ಭದಲ್ಲಿ ಮುಸ್ಲಿಂ ಸಮುದಾಯದ ಜನಸಂಖ್ಯೆಯು ಶೇ 55ರಿಂದ ಶೇ 85ಕ್ಕೆ ಹೆಚ್ಚಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ರಾಜಕೀಯ ಓಲೈಕೆ, ಭಯದ ವಾತಾವರಣದ ಸೃಷ್ಟಿಯೇ ಜನಸಂಖ್ಯಾ ಸ್ವರೂಪದಲ್ಲಿ ಬದಲಾವಣೆ ಮತ್ತು ಪದೇ ಪದೇ ಕೋಮು ಗಲಭೆ ನಡೆಯಲು ಕಾರಣ ಎಂದು ವರದಿಯಲ್ಲಿ ವಿವರಿಸಿದೆ.



ನಿವೃತ್ತ ನ್ಯಾಯಮೂರ್ತಿ ದೇವೇಂದ್ರ ಕುಮಾರ್ ಅರೋರಾ ನೇತೃತ್ವದ ನ್ಯಾಯಾಂಗ ಆಯೋಗದ ಸದಸ್ಯರು, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೆ ಸಂಭಲ್ ಹಿಂಸಾಚಾರ ಪ್ರಕರಣದ ವರದಿಯನ್ನು ಗುರುವಾರ ಸಲ್ಲಿಸಿದರು –ಪಿಟಿಐ ಚಿತ್ರ

ಸಮಿತಿ ಹೇಳಿದ್ದು...

- ಮಸೀದಿ ಸಮೀಕ್ಷೆ ಕುರಿತ ಮಾಹಿತಿ ಸೋರಿಕೆಯಾಗಿತ್ತು. ಹೀಗಾಗಿ ತಂಡವು ಸಮೀಕ್ಷೆಗೆ ತೆರಳಿದ್ದಾಗ ಜನದಟ್ಟಣೆ ಉಂಟಾಗಿತ್ತು
- ಸಂಭಲ್, ಹಲವು ಭಯೋತ್ಪಾದಕ ಸಂಘಟನೆಗಳ ತಾಣ ಆಗುತ್ತಿದೆ
- ಕೋಮು ಗಲಭೆಗೆ ವಿದೇಶಿ ಶಸ್ತ್ರಾಸ್ತ್ರಗಳು ಬಳಕೆಯಾಗುತ್ತಿವೆ

ಮಳೆ ಅನಾಹುತ: 12 ಮಂದಿ ಸಾವು

ಮಹಾರಾಷ್ಟ್ರ, ತೆಲಂಗಾಣದಲ್ಲಿ ಅವಘಡಗಳು, ತಗ್ಗು ಪ್ರದೇಶಗಳು ಜಲಾವೃತ

ಪ್ರಜಾವಾಣಿ ವಾರ್ತೆ/ ಪಿಟಿಐ

ಮುಂಬೈ/ಹೈದರಾಬಾದ್: ಮಹಾರಾಷ್ಟ್ರ ಮತ್ತು ತೆಲಂಗಾಣದಲ್ಲಿ ಭಾರಿ ಮಳೆ ಮುಂದುವರೆದಿದೆ. ಬುಧವಾರ ಮತ್ತು ಗುರುವಾರ ಮಹಾರಾಷ್ಟ್ರ ಹಾಗೂ ತೆಲಂಗಾಣದಲ್ಲಿ ಹಲವೆಡೆ ಸಂಭವಿಸಿದ ಮಳೆ ಸಂಬಂಧಿತ ಅವಘಡಗಳಲ್ಲಿ ಕನಿಷ್ಠ 12 ಮಂದಿ ಸಾವಿಗೀಡಾಗಿದ್ದಾರೆ.

ವಾಣಿಜ್ಯ ನಗರಿ ಮುಂಬೈನಲ್ಲಿ ಗುರುವಾರ ಭಾರಿ ಮಳೆ ಸುರಿಯಿತು. ತಗ್ಗು ಪ್ರದೇಶಗಳು ಜಲಾವೃತಗೊಂಡಿದ್ದವು. ಮಹಾರಾಷ್ಟ್ರದಲ್ಲಿ ಮಳೆ ಅವಘಡಗಳಲ್ಲಿ 7 ಮಂದಿ ಸಾವಿಗೀಡಾಗಿದ್ದಾರೆ.

ನಾಗಪುರದಲ್ಲಿ ಸಿಡಿಲು ಬಡಿದು ನಾಲ್ವರು ಸಾವಿಗೀಡಾಗಿದ್ದಾರೆ. ಬೀಡ್‌ನಲ್ಲಿ ಪ್ರವಾಹದಲ್ಲಿ ಇಬ್ಬರು ಕೊಚ್ಚಿ ಹೋಗಿದ್ದಾರೆ. ನಾಸಿಕ್ ಜಿಲ್ಲೆಯಲ್ಲಿ ಸಿಡಿಲಿಗೆ ಒಬ್ಬರು ಬಲಿಯಾಗಿದ್ದಾರೆ.

ಸರ್ಕಾರದ ಮಾಹಿತಿಯಂತೆ ಆಗಸ್ಟ್ ತಿಂಗಳಲ್ಲಿ 23 ಲಕ್ಷ ಎಕರೆ ಬೆಳೆ ಮಳೆಯಿಂದಾಗಿ ನಾಶವಾಗಿದೆ. ನಾಂದೇಡ್ ಜಿಲ್ಲೆಯಲ್ಲಿ ಭಾರಿ ಹಾನಿ ಸಂಭವಿಸಿದೆ.

ತೆಲಂಗಾಣದಲ್ಲೂ ಭಾರಿ ವರ್ಷಧಾರೆ: ತೆಲಂಗಾಣದ ಉತ್ತರ ಭಾಗದ ಜಿಲ್ಲೆಗಳಲ್ಲಿ ಬುಧವಾರ ಮತ್ತು ಗುರುವಾರ ಸುರಿದ ನಿರಂತರ ಮಳೆಯಿಂದಾಗಿ ಜನಜೀವನ ಅಸ್ತವ್ಯಸ್ತವಾಗಿದ್ದು, ಐವರು ಸಾವಿಗೀಡಾಗಿದ್ದಾರೆ.

ಕಾಮರೆಡ್ಡಿ, ಮೇದಕ್, ನಿರ್ಮಲ್ ಜಿಲ್ಲೆಗಳಲ್ಲಿ ಪ್ರವಾಹ ಪರಿಸ್ಥಿತಿ ಇದೆ. ಗೋದಾವರಿ ನದಿಯ ಉಪನದಿಗಳಾದ ಮಂಜಿರಾ, ಕದಮ್ ಮತ್ತು ಸ್ವರ್ಣ ನದಿಗಳು ಅಪಾಯ ಮಟ್ಟ ಮೀರಿ ಹರಿಯುತ್ತಿದ್ದು, ನದಿಯ ಅಕ್ಕಪಕ್ಕದ ಪ್ರದೇಶಗಳು ಜಲಾವೃತಗೊಂಡಿವೆ.

ತಗ್ಗು ಪ್ರದೇಶದಲ್ಲಿ ಮನೆಗಳು ಮುಳುಗಿದ್ದು, ರಸ್ತೆಗಳು ಸಂಪರ್ಕ ಕಡಿತಗೊಂಡಿವೆ. ಮೇದಕ್ ಜಿಲ್ಲೆಯಲ್ಲಿ ರಾಜ್ಯ ವಿಕೋಪ ಪರಿಹಾರ ತಂಡ 1000ಕ್ಕೂ ಹೆಚ್ಚು ಜನರನ್ನು ರಕ್ಷಣೆ ಮಾಡಿದೆ. ರಕ್ಷಣಾ ಕಾರ್ಯಕ್ಕೆ ಹೆಲಿಕಾಪ್ಟರ್ ಬಳಕೆ ಮಾಡಲಾಗಿದೆ. ಕಾಮರೆಡ್ಡಿ– ನಿಜಾಮಾಬಾದ್ ಜಿಲ್ಲೆಗಳನ್ನು ಹೈದರಾಬಾದ್‌ಗೆ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ ಪ್ರವಾಹದ ನೀರಿನಲ್ಲಿ ಮುಳುಗಿದೆ. ಹಲವು ಕಡೆ ರೈಲು ಹಳಿಗಳೂ ಜಲಾವೃತಗೊಂಡಿವೆ.

ರಕ್ಷಣಾ ಕಾರ್ಯಕ್ಕೆ ಬಳಸಿಕೊಳ್ಳಲು ಸಿರ್ಸಿಲ್ಲಾದಲ್ಲಿ ಸೇನೆಯ ನಾಲ್ಕು ಹೆಲಿಕಾಪ್ಟರ್‌ಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇಡಲಾಗಿದೆ.



ಬಿಹಾರದ ಪಟ್ನಾದಲ್ಲಿ ಗುರುವಾರ ಪ್ರವಾಹದಲ್ಲಿ ಸಿಲುಕಿದ್ದ ಜನರನ್ನು ಸುರಕ್ಷಿತ ಸ್ಥಳಗಳಿಗೆ ಬೋಟ್ ಮೂಲಕ ಕರೆತರಲಾಯಿತು –ಪಿಟಿಐ ಚಿತ್ರ

ಕೇರಳ: ಆರು ಜಿಲ್ಲೆಗಳಲ್ಲಿ ಮಳೆ ಮುನ್ನೆಚ್ಚರಿಕೆ

ತಿರುವನಂತಪುರ (ಪಿಟಿಐ): ಕೇರಳದಲ್ಲಿ ಗುರುವಾರ ಮಳೆ ಮತ್ತಷ್ಟು ತೀವ್ರಗೊಂಡಿದೆ. ಬಹುತೇಕ ಅಣೆಕಟ್ಟೆಗಳ ನೀರಿನ ಪ್ರಮಾಣ ಏರಿಕೆಯಾಗಿದೆ. ಹಲವೆಡೆ ಭೂಕುಸಿತ ಅವಘಡಗಳು ಸಂಭವಿಸಿವೆ. ಹವಾಮಾನ ಇಲಾಖೆ ಆರು ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಣೆ ಮಾಡಿದೆ.

ಎರ್ನಾಕುಳಂ, ತ್ರಿಶ್ಶೂರ್, ಕೋಯಿಕ್ಕೋಡ್, ವಯನಾಡ್, ಕಣ್ಣೂರು ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಇದ್ದು, ಪತ್ತನಂತಿಟ್ಟ, ಇಡುಕ್ಕಿ, ಪಾಲಕ್ಕಾಡ್ ಮತ್ತು ಮಲಪ್ಪುರ ಸೇರಿ ಐದು ಜಿಲ್ಲೆಗಳಲ್ಲಿ ಯೆಲ್ಲೊ ಅಲರ್ಟ್ ಘೋಷಿಸಲಾಗಿದೆ.

ವಯನಾಡ್‌ನ ತಾಮರಶ್ಶೇರಿ ಘಾಟ್‌ನಲ್ಲಿ ಸುಮಾರು 30 ಮೀಟರ್ ಭೂಕುಸಿತ ಉಂಟಾಗಿ, ಕೆಲ ಗಂಟೆ ವಾಹನ ಸಂಚಾರ ಸ್ಥಗಿತ ಗೊಂಡಿತ್ತು.

ಇಡುಕ್ಕಿ ಸೇರಿ ಹಲವು ಅಣೆಕಟ್ಟೆಗಳಲ್ಲಿ ನೀರಿನ ಪ್ರಮಾಣ ಹೆಚ್ಚಾಗಿದ್ದು, ಮುನ್ನೆಚ್ಚರಿಕೆ ಘೋಷಿಸಲಾಗಿದೆ.

ಕೇರಳ ಮತ್ತು ಲಕ್ಷದ್ವೀಪ ಕರಾವಳಿ ಭಾಗದಲ್ಲಿ ಪ್ರಬಲ ಗಾಳಿ ಬೀಸಲಿದ್ದು ಗುರುವಾರ ಮತ್ತು ಶುಕ್ರವಾರ ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಸೂಚನೆ ನೀಡಲಾಗಿದೆ.

ಕರ್ನಾಟಕದ ಕರಾವಳಿ ಪ್ರದೇಶಕ್ಕೆ ಸೆಪ್ಟೆಂಬರ್ 1ರವರೆಗೂ ಮುನ್ನೆಚ್ಚರಿಕೆ ಘೋಷಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉತ್ತರ ಭಾರತದ ಹಲವೆಡೆ ಪ್ರವಾಹ

ನವದೆಹಲಿ: ಉತ್ತರ ಭಾರತದ ಜಮ್ಮು–ಕಾಶ್ಮೀರ, ಬಿಹಾರ, ಪಂಜಾಬ್, ಒಡಿಶಾ, ಉತ್ತರ ಪ್ರದೇಶ, ಹಿಮಾಚಲಪ್ರದೇಶ ಸೇರಿ ಹಲವು ರಾಜ್ಯಗಳಲ್ಲಿ ಮಳೆ ಮತ್ತು ಪ್ರವಾಹದಿಂದಾಗಿ ಜನರು ಪರದಾಡಿದರು. ನದಿಗಳು ಅಪಾಯ ಮಟ್ಟ ಮೀರಿ, ತಗ್ಗು ಪ್ರದೇಶಗಳು ಜಲಾವೃತಗೊಂಡಿವೆ. ಪಂಜಾಬ್‌ನಲ್ಲಿ ಮಳೆಯಿಂದ ಜನಜೀವನ ಅಸ್ತವ್ಯಸ್ತಗೊಂಡಿದೆ. ಹೋಶಿಯಾರಪುರದಲ್ಲಿ ಪ್ರವಾಹದಲ್ಲಿ ಸಿಲುಕಿದ್ದ ಸಾವಿರ ಜನರನ್ನು ರಕ್ಷಿಸಲಾಗಿದೆ.

ಮೋದಿ ತಾಯಿಗೆ ನಿಂದನೆ: ಬಿಜೆಪಿ ಆರೋಪ

ನವದೆಹಲಿ, ಪಟ್ನಾ (ಪಿಟಿಐ): ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ಬಿಹಾರದಲ್ಲಿ ನಡೆಯುತ್ತಿರುವ 'ಮತ ಅಧಿಕಾರ ಯಾತ್ರೆ'ಯ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ದಿವಂಗತ ತಾಯಿಯ ಬಗ್ಗೆ ಅವಹೇಳನಕಾರಿ ಮತ್ತು ನಿಂದನಾತ್ಮಕ ಪದಗಳನ್ನು ಬಳಕೆ ಮಾಡಲಾಗುತ್ತಿದೆ. ಈ ಯಾತ್ರೆಯು 'ಅವಮಾನ, ದ್ವೇಷ ಮತ್ತು ಸದಭಿರುಚಿ'ಯ ಎಲ್ಲೆಗಳನ್ನು ಮೀರಿದೆ ಎಂದು ಬಿಜೆಪಿ ಆರೋಪಿಸಿದೆ.

ತನ್ನ ಅಧಿಕೃತ 'ಎಕ್ಸ್' ಖಾತೆಯಲ್ಲಿ ಬಿಜೆಪಿ ಪೋಸ್ಟ್ ಮಾಡಿದ್ದು, ಅಪರಿಚಿತ ವ್ಯಕ್ತಿಗಳು ಹಿಂದಿಯಲ್ಲಿ ಮೋದಿಯವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುತ್ತಿರುವ ತುಣುಕುಗಳನ್ನು ಪ್ರಸ್ತಾಪಿಸಿದೆ.

ಬುಧವಾರ ದರ್ಭಾಂಗ್‌ನಲ್ಲಿ ರಾಹುಲ್ ಗಾಂಧಿ, ಪ್ರಿಯಾಂಕಾ, ತೇಜಸ್ವಿ ಯಾದವ್ ಯಾತ್ರೆ ನಡೆಸುತ್ತಿದ್ದ ದೃಶ್ಯ ಸಾಮಾಜಿಕ ಮಾಧ್ಯಮ ಗಳಲ್ಲಿ ಹರಿದಾಡಿತ್ತು. ರ‍್ಯಾಲಿಯಲ್ಲಿ 'ಅಶ್ಲೀಲ ಭಾಷೆ' ಬಳಸಿದ್ದು, ಇದರ ಹಿಂದೆ ರಾಹುಲ್ ಮತ್ತು ತೇಜಸ್ವಿ ಇದ್ದಾರೆಎಂದಿದೆ.

ಅವಹೇಳನ ವಿರುದ್ಧ ದೂರು ದಾಖಲು

ನವದೆಹಲಿ/ಪಾಟ್ನಾ (ಪಿಟಿಐ): ರಾಹುಲ್ ಗಾಂಧಿ ಅವರ 'ವೋಟ್ ಅಧಿಕಾರ್ ಯಾತ್ರೆ' ವೇಳೆ ಪ್ರಧಾನಿ ನರೇಂದ್ರ ಮೋದಿ ಅವರ ತಾಯಿಯನ್ನು ಅವಹೇಳನ ಮಾಡಿದ ಆರೋಪದ ಮೇಲೆ ಬಿಜೆಪಿಯ ರಾಜ್ಯ ನಿಯೋಗವು ಕೊತ್ವಾಲಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಬಿಹಾರದ ಉಪ ಮುಖ್ಯಮಂತ್ರಿ ಸಮ್ರಾಟ್ ಚೌಧರಿ, 'ಜನ ಸಾಮೂಹದ ವರ್ತನೆಯು ಆರ್‌ಜೆಡಿಯ ಗೂಂಡಾಗಿರಿಯ ಲಕ್ಷಣವಾಗಿತ್ತು. ಕಾಂಗ್ರೆಸ್ ಪಕ್ಷವು ಕುರುಡು ಅಧಿಕಾರದ ಅನ್ವೇಷಣೆಯಲ್ಲಿ ರೌಡಿ ವರ್ತನೆಗೆ ಪ್ರಚೋದಿಸುತ್ತಿದೆ' ಎಂದು ಕಿಡಿಕಾರಿದರು.

ದುಲೀಪ್ ಟ್ರೋಫಿ: ದಾನೀಶ್, ರಜತ್ ಶತಕ ಸೊಬಗು



ದಾನೀಶ್ ಮಾಳೆವಾರ್ ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿಶತಕದತ್ತ ಹೊಸ್ತಿಲಲ್ಲಿರುವ ದಾನೀಶ್ ಮಾಳೆವಾರ್ ಮತ್ತು ಸೊಗಸಾದ ಶತಕ ಗಳಿಸಿದ ರಜತ್ ಪಾಟೀದಾರ್ ಅವರ ಜೊತೆಯಾಟದ ಬಲದಿಂದ ಕೇಂದ್ರ ವಲಯ ತಂಡವು ಗುರುವಾರ ಇಲ್ಲಿ ಆರಂಭವಾದ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಈಶಾನ್ಯ ವಲಯದ ಎದುರು ಬೃಹತ್ ಮೊತ್ತ ಗಳಿಸಿತು.

ಈಶಾನ್ಯ ರಾಜ್ಯಗಳ ಆಟಗಾರರೇ ಹೆಚ್ಚಾಗಿರುವ ಜೊನಾಥನ್ ರಾಂಗ್ಸೆನ್ ತಂಡವು ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಬೆಂಗಳೂರು ಹೊರವಲಯದ ಸಿಂಗಹಳ್ಳಿಯಲ್ಲಿರುವ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ಪಂದ್ಯಗಳು ನಡೆಯುತ್ತಿವೆ.

ಅನುಭವದ ಕೊರತೆ ಇರುವ ತಂಡದ ಬೌಲರ್‌ಗಳನ್ನು ಲೀಲಾಜಾಲವಾಗಿ ಎದುರಿಸಿದ ದಾನೀಶ್ (ಅಜೇಯ 198; 219ಎ, 4X35, 6X1) ಮತ್ತು ರಜತ್ (125; 96ಎ, 4X21, 6X3) ಅವರು ಎರಡನೇ ವಿಕೆಟ್ ಜೊತೆಯಾಟದಲ್ಲಿ 343 ರನ್ ಸೇರಿಸಿದರು. ಇದರಿಂದಾಗಿ ತಂಡವು ದಿನ ದಾಟದ ಮುಕ್ತಾಯಕ್ಕೆ 77 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 432 ರನ್ ಗಳಿಸಿದೆ. ದಾನೀಶ್ ಮತ್ತು ಯಶ್ ರಾಥೋಡ್ (32*) ಕ್ರೀಸ್‌ನಲ್ಲಿದ್ದಾರೆ.

ಈಶಾನ್ಯ ತಂಡದ ಆಕಾಶ್ ಚೌಧರಿ (73ಕ್ಕೆ1) ಇನಿಂಗ್ಸ್‌ನ 3ನೇ ಓವರ್‌ನಲ್ಲಿ ಆಯುಷ್ ಪಾಂಡೆ ಅವರ ವಿಕೆಟ್ ಗಳಿಸಿದರು. ಆದರೆ ಇನ್ನೊಂದು ಬದಿಯಲ್ಲಿದ್ದ ಆರ್ಯನ್ ಜುಯಾಲ್ (60; 100ಎ, 4X8) ಅವರು ಅರ್ಧಶತಕ ಗಳಿಸಿದರು. ಆದರೆ ಗಾಯಗೊಂಡು ನಿವೃತ್ತರಾದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕೇಂದ್ರ ವಲಯ: 77 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 432 (ಆರ್ಯನ್ ಜುಯಾಲ್ ಗಾಯಗೊಂಡು ನಿವೃತ್ತಿ 60, ದಾನೀಶ್ ಮಾಳೆವಾರ್ ಬ್ಯಾಟಿಂಗ್ 198, ರಜತ್ ಪಾಟೀದಾರ್ 125, ಯಶ್ ರಾಥೋಡ್ ಬ್ಯಾಟಿಂಗ್ 32, ಆಕಾಶ್ ಚೌಧರಿ 73ಕ್ಕೆ1) ವಿರುದ್ಧ ಈಶಾನ್ಯ ವಲಯ.

ಉತ್ತರ ವಲಯ: ಮೊದಲ ಇನಿಂಗ್ಸ್: 75.2 ಓವರ್‌ಗಳಲ್ಲಿ 6ಕ್ಕೆ308 (ಅಂಕಿತ್ ಕುಮಾರ್ 30, ಯಶ್ ಧುಳ್ 39, ಆಯುಷ್ ಬಡೋನಿ 63, ನಿಶಾಂತ್ ಸಿಂಧು 47, ಕನ್ಹಯ್ಯಾ ವಾಧ್ವಾನ್ ಬ್ಯಾಟಿಂಗ್ 42, ಮಯಂಕ್ ದಾಗರ್ ಬ್ಯಾಟಿಂಗ್ 28, ಮನೀಷಿ 90ಕ್ಕೆ3) ವಿರುದ್ಧ ಪೂರ್ವ ವಲಯ.

ಪ್ರೊ ಕಬಡ್ಡಿ ಇಂದಿನಿಂದ: ಉದ್ಘಾಟನೆ ಪಂದ್ಯದಲ್ಲಿ ತೆಲುಗು ಟೈಟನ್ಸ್–ತಮಿಳ್ ತಲೈವಾಸ್

ಪುಣೇರಿ ಪಲ್ಟನ್‌ಗೆ ಬೆಂಗಳೂರು ಬುಲ್ಸ್ ಸಡ್ಡು

ಪಿಟಿಐ/ ಪ್ರಜಾವಾಣಿ ವಾರ್ತೆ

ವಿಶಾಖಪಟ್ಟಣ : ರಾಷ್ಟ್ರೀಯ ಕ್ರೀಡಾ ದಿನಾಚರಣೆ ಯಂದು ಪ್ರೊ ಕಬಡ್ಡಿ ಟೂರ್ನಿಯ 12ನೇ ಆವೃತ್ತಿಯ ವೈಭವ ಗರಿಗೆದರಲಿದೆ.

ಇಲ್ಲಿಯ ವಿಶ್ವನಾಥ ಸ್ಪೋರ್ಟ್ಸ್ ಕ್ಲಬ್ ಒಳಾಂಗಣದಲ್ಲಿ ಟೂರ್ನಿಗೆ ಚಾಲನೆ ದೊರೆಯಲಿದೆ. ಉದ್ಘಾಟನೆ ಪಂದ್ಯದಲ್ಲಿ ತೆಲುಗು ಟೈಟನ್ಸ್ ಮತ್ತು ತಮಿಳ್ ತಲೈವಾಸ್ ಮುಖಾ–ಮುಖಿಯಾಗಲಿವೆ. ದಿನದ ಎರಡನೇ ಪಂದ್ಯದಲ್ಲಿ ಬೆಂಗಳೂರು ಬುಲ್ಸ್ ಮತ್ತು ಪುಣೇರಿ ಪಲ್ಟನ್ ನಡುವೆ ಹಣಾಹಣಿ ನಡೆಯಲಿದೆ.

12 ತಂಡಗಳು ಹೊಸ ಹುಮ್ಮಸ್ಸಿನೊಂದಿಗೆ ಕಣಕ್ಕಿಳಿಯಲಿವೆ. ಈ ಬಾರಿ ಕೆಲ ತಂಡಗಳ ನಾಯಕರು, ಕೋಚ್ ಮತ್ತು ಪ್ರಮುಖ ಆಟಗಾರರು ಹೊಸದಾಗಿ ಸೇರ್ಪಡೆಯಾಗಿದ್ದಾರೆ. ಬಹುತೇಕ ಎಲ್ಲ ತಂಡಗಳು ಉತ್ತಮ ಆಟಗಾರರ ಸಂಯೋಜನೆಯೊಂದಿಗೆ ಕಣಕ್ಕಿಳಿಯಲಿದ್ದು ಟೂರ್ನಿಯು ರೋಚಕವಾಗಿ ನಡೆಯುವ ಭರವಸೆಯನ್ನು ಆಯೋಜಕರು ವ್ಯಕ್ತಪಡಿಸುತ್ತಾರೆ.

ಬೆಂಗಳೂರು ಬುಲ್ಸ್ ತಂಡವನ್ನು ಅಂಕುಶ್ ರಾಠಿ ಮುನ್ನಡೆಸಲಿದ್ದಾರೆ. ಅವರು ಹೋದ ಋತುವಿನಲ್ಲಿ ಜೈಪುರ ತಂಡದಲ್ಲಿದ್ದರು. ಅವರ ಮೇಲೆ ನಿರೀಕ್ಷೆಗಳ ಭಾರವಿದೆ. ಮುಖ್ಯ ಕೋಚ್ ಬಿ.ಸಿ. ರಮೇಶ್ ಮಾರ್ಗದರ್ಶನದಲ್ಲಿ ಯುವ ತಂಡವು ಸಿದ್ಧವಾಗಿದೆ. ಇರಾನ್ ಆಟಗಾರರಾದ ಅಹಮದ್ ರೇಝಾ ಅಸ್ಗರಿ ಮತ್ತು ಅಲಿರೇಝಾ ಮಿರ್ಜಾನ್ ಅವರೂ ಸಾಮರ್ಥ್ಯ ತೋರಲು ಸಿದ್ಧರಾಗಿದ್ದಾರೆ.

ಉತ್ತಮ ಆಟಗಾರರಾದ ಪಂಕಜ್ ಮೋಹಿತೆ, ಗೌರವ್ ಖತ್ರಿ ಹಾಗೂ ಮೋಹಿತ್ ಗೋಯತ್ ಅವರಿರುವ ಪುಣೇರಿ ತಂಡವೂ ಸವಾಲೊಡ್ಡಲು ಸಿದ್ಧವಾಗಿದೆ.

ತೆಲುಗು–ತಮಿಳ್ ಹಣಾಹಣಿ: ಟೂರ್ನಿಯ ಮೊದಲ ಪಂದ್ಯದಲ್ಲಿ ಸ್ಥಳೀಯ ಅಭಿಮಾನಿಗಳ ಸಮ್ಮುಖದಲ್ಲಿ ತೆಲುಗು ಟೈಟನ್ಸ್ ಕಣಕ್ಕಿಳಿಯಲಿದೆ. ತಮಿಳ್ ತಲೈವಾಸ್ ಸವಾಲೊಡ್ಡಲಿದೆ.

'ತಾರಾ ವರ್ಚಸ್ಸಿನ ರೈಡರ್' ಪವನ್ ಶೇರಾವತ್ ಅವರು ಈ ಬಾರಿ ತಮಿಳ್ ತಲೈವಾಸ್ ತಂಡವನ್ನು ಮುನ್ನಡೆಸಲಿದ್ದಾರೆ. 'ಸ್ಥಳೀಯ ತಂಡಕ್ಕೆ ಇಲ್ಲಿಯ ಅಭಿಮಾನಿಗಳ ಬೆಂಬಲ ಹೆಚ್ಚಿದೆ ಎಂಬುದರ ಅರಿವು ನಮಗಿದೆ. ಅದಕ್ಕಾಗಿಯೇ ನಾವು ಕೂಡ ಮತ್ತಷ್ಟು ಕಠಿಣ ಪರಿಶ್ರಮದಿಂದ ಸಿದ್ಧತೆ ಮಾಡಿಕೊಳ್ಳಲೂ ಕೂಡ ಅದೇ ಅಂಶ ಕಾರಣವಾಗುತ್ತದೆ' ಎಂದು ಪವನ್ ಹೇಳಿದ್ದಾರೆ.

ಯೋಧರಿಗೆ ಗೌರವ: ಟೂರ್ನಿಯ ಆರಂಭಕ್ಕೂ ಮುನ್ನ ಭಾರತೀಯ ಸಶಸ್ತ್ರ ಪಡೆಗೆ ಗೌರವ ಸಲ್ಲಿಸಲಾಯಿತು. 1971ರ ಭಾರತ – ಪಾಕಿಸ್ತಾನ ಯುದ್ಧದಲ್ಲಿ ಕಾರ್ಯನಿರ್ವಹಿಸಿದ್ದ 'ಐಎನ್‌ಎಸ್ ಕುರ್ಸುರಾ ಸಬ್‌ಮರೀನ್' ಇರುವ ಸಂಗ್ರಾಹಲಯಕ್ಕೆ 12 ಕಬಡ್ಡಿ ತಂಡಗಳ ನಾಯಕರೂ ಭೇಟಿ ನೀಡಿ ಗೌರವ ಸಲ್ಲಿಸಿದರು.

ವಿಶಾಖಪಟ್ಟಣ (ಅ.29 ರಿಂದ ಸೆ.11) ನಂತರ ಜೈಪುರ (ಸೆ 12 ರಿಂದ 28), ಚೆನ್ನೈ (ಸೆ 29 ರಿಂದ ಅ.10) ಮತ್ತು ನವದೆಹಲಿ (ಅ.11 ರಿಂದ ಅ.23) ನಗರಗಳಲ್ಲಿ ಪಂದ್ಯಗಳು ನಡೆಯಲಿವೆ. ಪ್ಲೇ ಆಫ್ ಮತ್ತು ಫೈನಲ್ ಪಂದ್ಯಗಳ ಆಯೋಜನೆಯ ಸ್ಥಳಗಳನ್ನು ಲೀಗ್ ನಂತರ ನಿರ್ಧರಿಸಲಾಗುವುದು.



ವಿಶಾಖಪಟ್ಟಣದಲ್ಲಿರುವ 'ಐಎನ್‌ಎಸ್ ಕುರ್ಸುರಾ ಸಬ್‌ಮರೀನ್' ಮುಂದೆ ಪ್ರೊ ಕಬಡ್ಡಿ ಟೂರ್ನಿಯ 12 ತಂಡಗಳ ನಾಯಕರು ಮತ್ತು ಲೀಗ್ ಚೇರ್ಮನ್ ಅನುಪಮ್ ಗೋಸ್ವಾಮಿ ಇದ್ದಾರೆ ಪಿಟಿಐ ಚಿತ್ರ

ಇಂದಿನ ಪಂದ್ಯಗಳು

ತೆಲುಗು ಟೈಟನ್ಸ್ Vs ತಮಿಳ್ ತಲೈವಾಸ್	ರಾತ್ರಿ 8 ರಿಂದ
ಬೆಂಗಳೂರು ಬುಲ್ಸ್ Vs ಪುಣೇರಿ ಪಲ್ಟನ್	ರಾತ್ರಿ 9 ರಿಂದ
ಲೈವ್	ಸ್ಟಾರ್ ಸ್ಪೋರ್ಟ್ಸ್, ಜಿಯೊಸ್ಟಾರ್ ಆ್ಯಪ್

ಮಂಗಳೂರು ಡ್ರ್ಯಾಗನ್ಸ್ ಚಾಂಪಿಯನ್

ಮಹಾರಾಜ ಟ್ರೋಫಿ ಫೈನಲ್ ಪಂದ್ಯಕ್ಕೆ ಮಳೆ ಅಡ್ಡಿ: ಹುಬ್ಬಳ್ಳಿ ಟೈಗರ್ಸ್‌ಗೆ ನಿರಾಸೆ

• ಆರ್.ಜಿತೇಂದ್ರ

ಮೈಸೂರು: ಬಲಿಷ್ಠ ಹುಬ್ಬಳ್ಳಿ ಟೈಗರ್ಸ್ ಪಡೆಯನ್ನು 154 ರನ್‌ಗಳಿಗೆ ಕಟ್ಟಿಹಾಕಿದ ಮಂಗಳೂರು ಡ್ರ್ಯಾಗನ್ಸ್ 'ಮಹಾರಾಜ ಟ್ರೋಫಿ' ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಚೊಚ್ಚಲ ಪ್ರಶಸ್ತಿ ಎತ್ತಿ ಹಿಡಿಯಿತು.

ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಗುರುವಾರ ರಾತ್ರಿ ನಡೆದ ಫೈನಲ್‌ನಲ್ಲಿ ಗುರಿ ಬೆನ್ನತ್ತಿದ ಮಂಗಳೂರು 10.4 ಓವರ್‌ಗಳಲ್ಲಿ 2 ವಿಕೆಟ್‌ಗೆ 85 ರನ್ ಗಳಿಸಿದ್ದಾಗ ಪಂದ್ಯಕ್ಕೆ ಮಳೆ ಅಡ್ಡಿಯಾಯಿತು. ಒಂದು ಗಂಟೆ ನಂತರವೂ ಮಳೆ ಮುಂದುವರಿದಾಗ ಅಂಪೈರ್‌ಗಳು ಪಂದ್ಯ ಮುಗಿಸುವ ನಿರ್ಣಯ ಕೈಗೊಂಡರು. ವಿಜೆಡಿ ನಿಯಮದಂತೆ ಮಂಗಳೂರು 15 ರನ್ ಅಂತರದಿಂದ ಗೆಲುವು ಸಾಧಿಸಿತು. ಮೈದಾನದಲ್ಲಿನ ಮಳೆ ನೀರಿನಲ್ಲೇ ಆಟಗಾರರು ಕುಣಿದು ಕುಪ್ಪಳಿಸಿದರು.

ಮಂಗಳೂರು ತಂಡದ ಆರಂಭಿಕರಾದ ಲೋಚನ್ ಗೌಡ (18) ಹಾಗೂ ಬಿ.ಆರ್. ಶರತ್ (49 ರನ್, 35 ಎ, 4X4, 6X3) ಉತ್ತಮ ಆರಂಭ ಒದಗಿಸಿದರು. ಶರತ್ ಅರ್ಧಶತಕದ ಹೊಸ್ತಿಲಲ್ಲಿ ಎಡವಿದರು. ರಿತೇಶ್ ಭಟ್ಕಳ್ 14ಕ್ಕೆ 2 ವಿಕೆಟ್ ಪಡೆದರು.

ಉತ್ತಮ ಆರಂಭ: ನಾಯಕ ದೇವದತ್ತ ಪಡಿಕ್ಕಲ್ ಹಾಗೂ ಮೊಹಮ್ಮದ್ ತಾಹಾ ಜೋಡಿಯು ಹುಬ್ಬಳ್ಳಿಗೆ ಕೇವಲ 2.3 ಓವರ್‌ಗಳಲ್ಲಿ 38 ರನ್‌ಗಳ ಅಬ್ಬರದ ಆರಂಭ ಒದಗಿಸಿತು. ಆದರೆ ಪಡಿಕ್ಕಲ್, ಸಂತೋಕ್ ಸಿಂಗ್ ಎಸೆತದಲ್ಲಿ ಮೇಕ್ನಿಲ್ ನೊರೊನಾಗೆ ಮಿಡ್ ವಿಕೆಟ್‌ನಲ್ಲಿ ಕ್ಯಾಚಿತ್ತು ನಿರಾಸೆ ಮೂಡಿಸಿದರು. ಉತ್ತಮವಾಗಿ ಆಡುತ್ತಿದ್ದ ತಾಹಾ ಆರನೇ ಓವರ್‌ನಲ್ಲಿ ಮೇಕ್ನಿಲ್ ನೊರಾನಗೆ ವಿಕೆಟ್ ಒಪ್ಪಿಸುತ್ತಲೇ ಹುಬ್ಬಳ್ಳಿ ಬಳಗದಲ್ಲಿ ಆತಂಕದ ಮೋಡ ಕವಿಯಿತು. ಡ್ರ್ಯಾಗನ್ಸ್‌ನ ಬೌಲರ್‌ಗಳ ಕರಾರುವಕ್ ಎಸೆತಗಳ ಎದುರು ಹುಬ್ಬಳ್ಳಿ ಬ್ಯಾಟರ್‌ಗಳು ತಿಣುಕಾಡಿದರು.

ಮತ್ತೊಂದೆಡೆ ಭದ್ರವಾಗಿ ನಿಂತ ಕೆ.ಎಲ್. ಶ್ರೀಜಿತ್ ಅರ್ಧಶತಕದ ಮೂಲಕ (52 ರನ್, 45 ಎ, 4X4, 6X1) ತಂಡಕ್ಕೆ ಆಸರೆ ಆದರು. ತಾಳ್ಮೆಯ ಇನಿಂಗ್ಸ್ ಕಟ್ಟಿದ ಅವರು ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳ ಜೊತೆ ಉತ್ತಮ ಜೊತೆಯಾಟದ ಪ್ರಯತ್ನ ನಡೆಸಿದರು. ಕಡೆಯಲ್ಲಿ ಎಲ್. ಮನ್ವಂತ್‌ಕುಮಾರ್ 15 ರನ್‌ಗಳ ಉಪಯುಕ್ತ ಕಾಣಿಕೆ ನೀಡಿದರು.

ಡ್ರ್ಯಾಗನ್ಸ್ ಪರ ಸ್ಪಿನ್ ಚಾದು ತೋರಿದ ಸಚಿನ್ ಶಿಂಧೆ 28ಕ್ಕೆ 3 ವಿಕೆಟ್ ಪಡೆದರೆ, ಆಫ್‌ಸ್ಪಿನ್ನರ್ ನೊರೊನಾ ಹಾಗೂ ವೇಗಿ ಶ್ರೀವತ್ಸ ಆಚಾರ್ಯ ತಲಾ 2 ವಿಕೆಟ್ ಪಡೆದರು. ಮಹಾರಾಜ ಟ್ರೋಫಿಯ ನಾಲ್ಕನೇ ಆವೃತ್ತಿ ಇದಾಗಿದ್ದು, ಹುಬ್ಬಳ್ಳಿ ಟೈಗರ್ಸ್ ಎರಡನೇ ಬಾರಿಗೆ ಫೈನಲ್ ತಲುಪಿತ್ತು. 2023ರಲ್ಲಿ ತಂಡವು ಕಪ್ ಎತ್ತಿ ಹಿಡಿದಿತ್ತು. ಮಂಗಳೂರು ಡ್ರ್ಯಾಗನ್ಸ್ ಮೊದಲ ಬಾರಿಗೆ ಫೈನಲ್ ಪ್ರವೇಶಿಸಿತ್ತು. ಬಿ.ಆರ್. ಶರತ್ ಪಂದ್ಯದ ಆಟಗಾರ ಹಾಗೂ ದೇವದತ್ತ ಪಡಿಕ್ಕಲ್ ಸರಣಿ ಆಟಗಾರ ಪ್ರಶಸ್ತಿ ಪಡೆದರು.

ಸಂಕ್ಷಿಪ್ತ ಸ್ಕೋರ್: ಹುಬ್ಬಳ್ಳಿ ಟೈಗರ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 154 (ಕೆ.ಎಲ್. ಶ್ರೀಜಿತ್ 52, ಮೊಹಮ್ಮದ್ ತಾಹಾ 27, ಸಚಿನ್ ಶಿಂಧೆ 28ಕ್ಕೆ 3, ಮೇಕ್ನಿಲ್ ನೊರೊನಾ 25ಕ್ಕೆ 2, ಶ್ರೀಶ ಆಚಾರ್ಯ 30ಕ್ಕೆ 2) **ಮಂಗಳೂರು ಡ್ರ್ಯಾಗನ್ಸ್:** 10.4 ಓವರ್‌ಗಳಲ್ಲಿ 2 ವಿಕೆಟ್‌ಗೆ 85 (ಬಿ.ಆರ್. ಶರತ್ 49 , ಲೋಚನ್ ಗೌಡ 18, ರಿತೇಶ್ ಭಟ್ಕಳ್ 14ಕ್ಕೆ 2)



ಮಹಾರಾಜ ಟ್ರೋಫಿ ಗೆದ್ದ ಸಂಭ್ರಮದಲ್ಲಿ ಮಂಗಳೂರು ಡ್ರ್ಯಾಗನ್ಸ್ ತಂಡದ ಆಟಗಾರರು ಚಿತ್ರ/ಅನೂಪ್ ರಾಘ .ಟಿ.

ಶಾಶಿನಿಗೆ ಚಿನ್ನ

ಬೆಂಗಳೂರು: ಇಲ್ಲಿನ ಶಾಶಿನಿ ಪುವಿ ಅವರು ದಾವಣಗೆರೆಯಲ್ಲಿ ಈಚೆಗೆ ನಡೆದ ಸಿಬಿಎಸ್‌ಸಿ ದಕ್ಷಿಣ ವಲಯ II ತಂಡ ಚೆಸ್ ಚಾಂಪಿಯನ್‌ಷಿಪ್‌ನ 14 ವರ್ಷದೊಳಗಿನ ಮುಕ್ತ ಮತ್ತು ಮಿಶ್ರ ವಿಭಾಗದ ಒಂದನೇ ಬೋರ್ಡ್‌ನಲ್ಲಿ ಚಿನ್ನದ ಪದಕ ಗೆದ್ದರು. ಹೊಸೂರು ರಸ್ತೆಯ ನ್ಯಾಷನಲ್ ಪಬ್ಲಿಕ್ ಶಾಲೆಯನ್ನು ಪ್ರತಿನಿಧಿಸಿದ ಶಾಶಿನಿ ಅವರು ಒಂದನೇ ಬೋರ್ಡ್‌ನಲ್ಲಿ ಏಳು ಜಯದೊಂದಿಗೆ ಅಜೇಯವಾಗಿ ಉಳಿದರು.

ಡೈಮಂಡ್ ಲೀಗ್: ನೀರಜ್‌ಗೆ ಬೆಳ್ಳಿ

ಜೂರಿಕ್ (ಪಿಟಿಐ): ಭಾರತದ ಜಾವೆಲಿನ್ ಥ್ರೋ ತಾರೆ ನೀರಜ್ ಚೋಪ್ರಾ ಅವರು ಗುರುವಾರ ರಾತ್ರಿ ಇಲ್ಲಿ ನಡೆದ ಡೈಮಂಡ್ ಲೀಗ್ ಫೈನಲ್‌ನಲ್ಲಿ ಬೆಳ್ಳಿ ಪದಕ ಗೆದ್ದರು. ಲೀಗ್‌ನಲ್ಲಿ ಅವರಿಗೆ ಇದು ನಾಲ್ಕನೇ ಪದಕ ಮತ್ತು ಹ್ಯಾಟ್ರಿಕ್ ಬೆಳ್ಳಿ ಆಗಿದೆ.

2022ರಲ್ಲಿ ಚಿನ್ನ ಗೆದ್ದರೆ, 2023 ಮತ್ತು 24ರಲ್ಲಿ ಬೆಳ್ಳಿ ಪದಕ ಜಯಿಸಿದ್ದರು. ಮೇ ತಿಂಗಳಿನಲ್ಲಿ ನಡೆದ ದೋಹಾ ಡೈಮಂಡ್ ಲೀಗ್ ಕೂಟದಲ್ಲಿ ಜೀವನಶ್ರೇಷ್ಠ 90.30 ಮೀಟರ್ ಸಾಧನೆ ಮೆರೆದಿದ್ದ ನೀರಜ್, ಇಲ್ಲಿ 85 ಮೀ. ಗಡಿ ದಾಟಲು ಪ್ರಯಾಸಪಟ್ಟರು.

ಹಾಲಿ ವಿಶ್ವ ಚಾಂಪಿಯನ್ ಆಗಿರುವ 27 ವರ್ಷದ ನೀರಜ್ ಮೊದಲೆರಡು ಪ್ರಯತ್ನದಲ್ಲಿ 84.35 ಮೀ, 82 ಮೀ. ದೂರ ಈಟಿ ಎಸೆದರು. ನಂತರದ ಮೂರು ಪ್ರಯತ್ನಗಳು ಫೌಲ್ ಆದವು. ಕೊನೆಯ ಮತ್ತು ಆರನೇ ಪ್ರಯತ್ನದಲ್ಲಿ 85.01 ಮೀ. ಸಾಧನೆಯೊಂದಿಗೆ ಬೆಳ್ಳಿ ಖಚಿತಪಡಿಸಿಕೊಂಡರು.

ಜರ್ಮನಿಯ ತಾರೆ ಜೂನಿಯನ್ ವೆಬರ್ ವೈಯಕ್ತಿಕ ಶ್ರೇಷ್ಠ ಪ್ರದರ್ಶನದೊಂದಿಗೆ ಚಿನ್ನದ ಪದಕ ಕೊರಳಿಗೇರಿಸಿಕೊಂಡರು. ಅವರು ಮೊದಲೆರಡು ಪ್ರಯತ್ನದಲ್ಲಿ ಕ್ರಮವಾಗಿ 91.37 ಮೀ. ಮತ್ತು 91.51 ಮೀ. ದೂರಕ್ಕೆ ಈಟಿ ಎಸೆದು, ಆರಂಭದಲ್ಲೇ ಅಗ್ರಸ್ಥಾನ ಖಾತರಿಪಡಿಸಿಕೊಂಡರು.

ಮೊದಲ ಪ್ರಯತ್ನದಲ್ಲಿ 84.95 ಮೀ. ಈಟಿ ಎಸೆದ ಟ್ರಿನಿಡ್ಯಾಡ್‌ನ ಕೆಶಾರ್ನ್ ವಾಲ್ಕಾಟ್ ಕಂಚಿನ ಪದಕ ಗೆದ್ದರು.



ಭಾರತದ ಜಾವೆಲಿನ್ ತಾರೆ ನೀರಜ್ ಚೋಪ್ರಾ ಎಎಫ್‌ಪಿ ಚಿತ್ರ

ಕ್ವಾರ್ಟರ್‌ಗೆ ಸಿಂಧು

ಪ್ಯಾರಿಸ್ (ಪಿಟಿಐ): ಭಾರತದ ಬ್ಯಾಡ್ಮಿಂಟನ್ ತಾರೆ ಪಿ.ವಿ. ಸಿಂಧು ಇಲ್ಲಿ ನಡೆಯುತ್ತಿರುವ ವಿಶ್ವ ಚಾಂಪಿಯನ್‌ಷಿಪ್‌ನ ಮಹಿಳೆಯರ ಸಿಂಗಲ್ಸ್‌ನಲ್ಲಿ ವಿಶ್ವದ ಎರಡನೇ ಕ್ರಮಾಂಕದ ವಾಂಗ್ ಝಿ ಯಿ ಅವರಿಗೆ ಆಘಾತ ನೀಡಿ ಕ್ವಾರ್ಟರ್ ಫೈನಲ್ ತಲುಪಿದರು.

30 ವರ್ಷದ ಸಿಂಧು 16ರ ಘಟ್ಟದ ಪಂದ್ಯದಲ್ಲಿ 21-19, 21-15ರ ನೇರ ಗೇಮ್‌ಗಳಿಂದ ಚೀನಾದ ಆಟಗಾರ್ತಿಯನ್ನು ಸದೆಬಡಿದರು.

2019ರ ಚಾಂಪಿಯನ್ ಆಗಿರುವ ಸಿಂಧು ಎಂಟರ ಘಟ್ಟದ ಪಂದ್ಯದಲ್ಲಿ ವಿಶ್ವದ ಒಂಬತ್ತನೇ ಕ್ರಮಾಂಕದ ಪುತ್ರಿ ಕುಸುಮಾ ವರ್ದಾನಿ (ಇಂಡೋನೇಷ್ಯಾ) ಅವರನ್ನು ಎದುರಿಸಲಿದ್ದಾರೆ. ಸಿಂದು ಮುಂದಿನ ಒಂದು ಪಂದ್ಯ ಗೆದ್ದರೆ ಆರನೇ ಪದಕ ಖಚಿತವಾಗಲಿದೆ.

ಧ್ರುವ್ ಕಪಿಲಾ ಮತ್ತು ತನಿಶಾ ಕ್ರಾಸ್ಟೊ ಜೋಡಿಯು ಮಿಶ್ರ ಡಬಲ್ಸ್ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ 19-21, 21-12, 21-15 ಐದನೇ ಕ್ರಮಾಂಕದ ಟ್ಯಾಂಗ್ ಚುನ್ ಮ್ಯಾನ್ ಮತ್ತು ತ್ಸೆ ಯಿಂಗ್ ಸೂಟ್ (ಹಾಂಗ್‌ಕಾಂಗ್) ಅವರಿಗೆ ಆಘಾತ ನೀಡಿತು.

ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿಯು 19–21, 21–15, 21–17ರಿಂದ ಚೀನಾದ ಲಿಯಾಂಗ್ ವೀಕೆಂಗ್ ಮತ್ತು ವಾಂಗ್ ಚಾಂಗ್ ಅವರನ್ನು ಮಣಿಸಿ ಕ್ವಾರ್ಟರ್ ಫೈನಲ್‌ಗೆ ಮುನ್ನಡೆಯಿತು.

ಪ್ರಣಯ್‌ಗೆ ನಿರಾಸೆ: 2023ರ ಕಂಚು ವಿಜೇತ ಎಚ್.ಎಸ್. ಪ್ರಣಯ್ ಅವರಿಗೆ 32ರ ಘಟ್ಟದಲ್ಲಿ ನಿರಾಸೆಯಾಯಿತು. 33 ವರ್ಷದ ಅವರು 8-21, 21-17, 21-23ರಿಂದ ವಿಶ್ವದ ಎರಡನೇ ರ್‍ಯಾಂಕ್‌ನ ಆಂಡರ್ಸ್ ಆಂಟೊನ್ಸೆನ್ (ಡೆನ್ಮಾರ್ಕ್) ಅವರಿಗೆ ಮಣಿದರು.

ರಾಷ್ಟ್ರೀಯ ಕ್ರೀಡಾ ದಿನಾಚರಣೆ: ಮುಖ್ಯಮಂತ್ರಿ ಸಿದ್ದರಾಮಯ್ಯ

ಪದಕ ವಿಜೇತರಿಗೆ ನಗದು ಬಹುಮಾನ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರೀಯ ಕ್ರೀಡಾ ಕೂಟಗಳಲ್ಲಿ ಪದಕ ಗೆದ್ದ ಕರ್ನಾಟಕದ ಕ್ರೀಡಾಪಟುಗಳಿಗೆ ನೀಡುವ ನಗದು ಬಹುಮಾನದ ಮೊತ್ತವನ್ನು ಹೆಚ್ಚಳ ಮಾಡಲಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದರು.

ರಾಷ್ಟ್ರೀಯ ಕ್ರೀಡಾ ದಿನಾಚರಣೆ ಅಂಗವಾಗಿ ನಗರದ ಯವನಿಕಾ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕ್ರೀಡಾಪಟುಗಳಿಗೆ ನೇರ ನಗದು ಪುರಸ್ಕಾರ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು. 'ಚಿನ್ನದ ಪದಕ ವಿಜೇತರಿಗೆ ₹ 7 ಲಕ್ಷ, ಬೆಳ್ಳಿ ಪಡೆದವರಿಗೆ ₹ 5 ಲಕ್ಷ ಹಾಗೂ ಕಂಚಿನ ಪದಕ ವಿಜೇತರಿಗೆ ₹ 3 ಲಕ್ಷಕ್ಕೆ ಹೆಚ್ಚಿಸಿದ್ದೇವೆ' ಎಂದು ವಿವರಿಸಿದರು.

'2015ರಲ್ಲಿ ನಾನೇ ಮುಖ್ಯಮಂತ್ರಿ ಆಗಿದ್ದಾಗ ಬಹುಮಾನದ ಮೊತ್ತವನ್ನು ಚಿನ್ನ, ಬೆಳ್ಳಿ, ಕಂಚಿನ ಪದಕ ಗೆದ್ದವರಿಗೆ ಕ್ರಮವಾಗಿ 5, ₹3 ಹಾಗೂ ₹2 ಲಕ್ಷಕ್ಕೆ ಏರಿಸಿದ್ದೆ. ದಶಕದ ನಂತರ ನಗದು ಬಹುಮಾನದ ಮೊತ್ತ ಹೆಚ್ಚಿಸಿ ಕ್ರೀಡಾಪಟುಗಳಿಗೆ ಮತ್ತಷ್ಟು ಪ್ರೋತ್ಸಾಹ ನೀಡಲಾಗುತ್ತಿದೆ' ಎಂದು ಹೇಳಿದರು.

ಕರ್ನಾಟಕದ ಕ್ರೀಡಾಪಟುಗಳು ಒಲಿಂಪಿಕ್ಸ್, ಕಾಮನ್‌ವೆಲ್ತ್ ಹಾಗೂ ಏಷಿಯನ್ ಗೇಮ್ಸ್‌ನಲ್ಲಿ ಹೆಚ್ಚು ಪದಕ ಪಡೆಯಲು ಪೂರಕ ಪ್ರೋತ್ಸಾಹವನ್ನು ಸರ್ಕಾರ ನೀಡುತ್ತಿದೆ ಎಂದರು.

ಉತ್ತರಾಖಂಡದಲ್ಲಿ ನಡೆದ 38ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ 34 ಚಿನ್ನ, 18 ಬೆಳ್ಳಿ ಹಾಗೂ 28 ಕಂಚಿನ ಪದಕ ಪಡೆದವರ ಜತೆಗೆ ಇತರೆ ಕೂಟಗಳಲ್ಲಿ ಪದಕ ಗೆದ್ದ 124 ಕ್ರೀಡಾಪಟುಗಳಿಗೆ ನಗದು ಪುರಸ್ಕಾರ ನೀಡಲಾಯಿತು.

ಕ್ರೀಡಾಪಟುಗಳಾದ ಸುನೀಲ್, ಮೊಹಮ್ಮದ್ ರಹೀಲ್, ಅಶ್ವಿನಿ ಭಟ್, ಶ್ರೇಯಾ, ಶಿಖಾ ಗೌತಮ್, ಜ್ಯೋತಿಕಾ, ಉನ್ನತಿ ಅಯ್ಯಪ್ಪ, ಪ್ರಜ್ವಲ್‌ದೇವ್, ಜೋನಾಥನ್ ಅವರು ಸಾಂಕೇತಿಕವಾಗಿ ಗೌರವ ಸ್ವೀಕರಿಸಿದರು. ಶಾಸಕ ರಿಜ್ವಾನ್ ಅರ್ಷದ್, ಇಲಾಖೆ ಪ್ರಧಾನ ಕಾರ್ಯದರ್ಶಿ ನವೀನ್ ರಾಜ್ ಸಿಂಗ್, ಆಯುಕ್ತ ಆರ್.ಚೇತನ್ ಹಾಜರಿದ್ದರು.

ಸಾಧಕ ಕ್ರೀಡಾಪಟುಗಳಿಗೆ ನೀಡುತ್ತಿರುವ ಪ್ರಶಸ್ತಿ ಮೊತ್ತದ ಕುರಿತ ಲೇಖನವನ್ನು 'ಪ್ರಜಾವಾಣಿ' ಆ.3ರಂದು ಪ್ರಕಟಿಸಿತ್ತು.

'ಕೃಪಾಂಕ ನೀಡಲಿ'

ಕ್ರೀಡಾಪಟುಗಳಿಗೆ ಶಿಕ್ಷಣದಲ್ಲಿ ಶೇ 5ರಷ್ಟು ಕೃಪಾಂಕ ನೀಡುವ ಕುರಿತು ಸರ್ಕಾರ ಈಗಾಗಲೇ ಘೋಷಣೆ ಮಾಡಿದ್ದು, ಅದನ್ನು ಶಿಕ್ಷಣ ಇಲಾಖೆ ಜಾರಿಗೊಳಿಸಬೇಕು ಎಂದು ರಾಜ್ಯ ಒಲಿಂಪಿಕ್ ಅಸೋಸಿಯೇಷನ್ ಅಧ್ಯಕ್ಷ ಕೆ.ಗೋವಿಂದರಾಜು ಮನವಿ ಮಾಡಿದರು.

ಒಂದಕ್ಕಿಂತ ಹೆಚ್ಚು ಪದಕ ಪಡೆದವರಿಗೆ ಪದಕಕ್ಕೆ ಅನುಗುಣವಾಗಿ ಬಹುಮಾನ ನೀಡಲಾಗುವುದು. ಕೋಚ್‌ಗಳು, ಮ್ಯಾನೇಜರ್‌ಗಳಿಗೂ ಬಹುಮಾನ ನೀಡುವ ಕುರಿತು ಪರಿಶೀಲಿಸಲಾಗುವುದು

ಸಿದ್ದರಾಮಯ್ಯ, ಮುಖ್ಯಮಂತ್ರಿ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕ್ರೀಡಾಪಟು ಸುನಿಲ್ ಎನ್‌ವಿ. ಅವರನ್ನು ಗೌರವಿಸಿದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ನವೀನ್ ರಾಜ್ ಸಿಂಗ್, ಕೆಒಎ ಅಧ್ಯಕ್ಷ ಕೆ. ಗೋವಿಂದರಾಜ್ ಮತ್ತು ಶಾಸಕ ರಿಜ್ವಾನ್ ಅರ್ಷದ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಅಥ್ಲೀಟ್‌ಗಳ ಅಸಮಾಧಾನ

ಬೆಂಗಳೂರು: ಹಾಕಿ ದಂತಕಥೆ ಮೇಜರ್ ಧ್ಯಾನಚಂದ್ ಅವರ ಜಯಂತಿಯ ಅಂಗವಾಗಿ ಶುಕ್ರವಾರ (ಆ.29) ರಾಷ್ಟ್ರೀಯ ಕ್ರೀಡಾ ದಿನ ಆಚರಿಸಲಾಗುತ್ತಿದೆ. ಆದರೆ ರಾಜ್ಯದಲ್ಲಿ ಒಂದು ದಿನ ಮೊದಲೇ ಈ ದಿನವನ್ನು ಆಚರಿಸಲಾಯಿತು.

ರಾಜ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ರಾಷ್ಟ್ರೀಯ ಕ್ರೀಡಾಕೂಟದ ಪದಕವಿಜೇತರಿಗೆ ನಗದು ಪುರಸ್ಕಾರ ವಿತರಿಸಲು ಗುರುವಾರ ಸಂಜೆಯೇ ಈ ಕಾರ್ಯಕ್ರಮ ಆಯೋಜಿಸಿತು. ಸಾಂಕೇತಿಕವಾಗಿ ಎಂಟು ಜನ ಅಥ್ಲೀಟ್‌ಗಳಿಗೆ ಮಾತ್ರ ಪ್ರಶಸ್ತಿ ವಿತರಿಸಲಾಯಿತು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಬಿಹಾರಕ್ಕೆ ತೆರಳುತ್ತಿರುವುದರಿಂದ ಕಾರ್ಯಕ್ರಮವನ್ನು ಒಂದು ದಿನ ಮೊದಲೇ ಆಯೋಜಿಸಬೇಕಾಯಿತು' ಎಂದು ಸಮಾರಂಭದ ನಿರೂಪಕರು ಹೇಳಿದರು.

'ಮುಖ್ಯಮಂತ್ರಿಗಳು ನಗದು ಪುರಸ್ಕಾರದಲ್ಲಿ ಹೆಚ್ಚಳ ಮಾಡಿರುವುದು ಸ್ವಾಗತಾರ್ಹ. ಆದರೆ ಇಷ್ಟು ತರಾತುರಿಯಲ್ಲಿ ಕಾರ್ಯಕ್ರಮ ಮಾಡುವ ಅಗತ್ಯವಿರಲಿಲ್ಲ. ಜನವರಿಯಲ್ಲಿಯೇ ಮುಗಿದ ರಾಷ್ಟ್ರೀಯ ಕ್ರೀಡಾಕೂಟಕ್ಕೆ ಈಗ ಪುರಸ್ಕಾರ ನೀಡಲಾಗುತ್ತಿದೆ. ಇನ್ನೂ ಒಂದು ವಾರ ಬಿಟ್ಟು ಕೊಟ್ಟಿದ್ದರೂ ನಡೆಯುತ್ತಿತ್ತು. ಬಹಳಷ್ಟು ಮಂದಿ ಅಥ್ಲೀಟ್‌ಗಳು, ಈಜುಪಟುಗಳು ರಾಷ್ಟ್ರೀಯ ಶಿಬಿರಗಳಿಗೆ ತೆರಳಿದ್ದಾರೆ. ಒಲಿಂಪಿಯನ್ ಅಥ್ಲೀಟ್‌ಗಳೇ ಇವತ್ತು ಇರಲಿಲ್ಲ. ಯಾರಿಗಾಗಿ ಈ ಕಾರ್ಯಕ್ರಮ' ಎಂದು ಸಭೆಯಲ್ಲಿದ್ದ ತರಬೇತುದಾರರು ಮತ್ತು ಕೆಲ ಆಟಗಾರರ ಪೋಷಕರು 'ಪ್ರಜಾವಾಣಿ' ಮುಂದೆ ಬೇಸರ ವ್ಯಕ್ತಪಡಿಸಿದರು.

ಅಮೆರಿಕ ಓಪನ್ ಟೆನಿಸ್: ಸಬಲೆಂಕಾ ಗೆಲುವಿನ ಓಟ

ಅಲ್ಕರಾಜ್, ಜೊಕೊವಿಚ್ ಮುನ್ನಡೆ

ನ್ಯೂಯಾರ್ಕ್ (ಎಎಫ್‌ಪಿ): ಕಾರ್ಲೋಸ್ ಅಲ್ಕರಾಜ್ ಅವರು ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಮೂರನೇ ಸುತ್ತಿಗೆ ಲಗ್ಗೆ ಇಟ್ಟರು. ಇನ್ನೊಂದೆಡೆ ಕಠಿಣ ಸವಾಲು ಎದುರಿಸಿದ ಸರ್ಬಿಯಾದ ಆಟಗಾರ ನೊವಾಕ್ ಜೊಕೊವಿಚ್ ಕೂಡ ಗೆದ್ದರು. ಈ ಯುವ ಮತ್ತು ಅನುಭವಿ ಆಟಗಾರರಿಬ್ಬರೂ ಈ ಟೂರ್ನಿಯ ಸೆಮಿಫೈನಲ್ ಪ್ರವೇಶಿಸುವ ನಿರೀಕ್ಷೆ ಮೂಡಿದೆ.

ಆರ್ಥರ್ ಆ್ಯಷ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಎರಡನೇ ಸುತ್ತಿನ ಪಂದ್ಯದಲ್ಲಿ ಅಲ್ಕರಾಜ್ ಅವರು 6-1, 6-0, 6-3ರಿಂದ ಇಟಲಿಯ ಮ್ಯಾಟಿಯಾ ಬೆಲ್ಲುಚಿ ವಿರುದ್ಧ ಪಾರಮ್ಯ ಮೆರೆದರು. ಸ್ಪೇನ್‌ನ 22 ವರ್ಷದ ಅಲಕ್ರಾಜ್ ಅವರು ನೇರ ಸೆಟ್‌ಗಳಲ್ಲಿಯೂ ಮೇಲುಗೈ ಸಾಧಿಸಿದರು. ಯಾವುದೇ ಹಂತದಲ್ಲಿಯೂ ಇಟಲಿಯ ಆಟಗಾರನಿಂದ ದೊಡ್ಡಮಟ್ಟದ ಪ್ರತಿರೋಧ ಎದುರಿಸಲಿಲ್ಲ. 65ನೇ ರ್‍ಯಾಂಕ್‌ನ ಬೆಲ್ಲುಚಿ ಅವರು ಈಚೆಗೆ ವಿಂಬಲ್ಡನ್‌ನಲ್ಲಿ ಮೂರನೇ ಸುತ್ತು ಪ್ರವೇಶಿಸಿದ್ದು, ಗ್ರ್ಯಾನ್ ಸ್ಲ್ಯಾಮ್ ಟೂರ್ನಿಗಳಲ್ಲಿ ಅದು ಅವರ ಶ್ರೇಷ್ಠ ಸಾಧನೆಯಾಗಿದೆ.

ಇಲ್ಲಿ ಅಲ್ಕರಾಜ್ ಅವರು 32 ವಿನ್ನರ್‌ಗಳನ್ನು ದಾಖಲಿಸುವ ಮೂಲಕ ಇಟಲಿ ಆಟಗಾರನಿಗೆ ಚೇತರಿಸಿಕೊಳ್ಳುವ ಅವಕಾಶವನ್ನೇ ನೀಡಲಿಲ್ಲ.

'ಪಂದ್ಯದ ಆರಂಭದಿಂದ ಕೊನೆಯ ಹೊಡೆತದವರೆಗೂ ಚೆನ್ನಾಗಿ ಆಡಿದೆ' ಎಂದು ಅಲ್ಕರಾಜ್ ಅವರು ವಿಜಯದ ನಂತರ ಹೇಳಿದರು. ಮುಂದಿನ ಸುತ್ತಿನಲ್ಲಿ ಅವರು ಇಟಲಿಯ ಮತ್ತೊಬ್ಬ ಆಟಗಾರ 32ನೇ ಶ್ರೇಯಾಂಕದ ಲೂಸಿಯಾನೊ ದರ್ದೇರಿ ಅವರನ್ನು ಎದುರಿಸಲಿದ್ದಾರೆ.

'ಕೋರ್ಟ್‌ನಲ್ಲಿ ಕಡಿಮೆ ಸಮಯ ವ್ಯಯಿಸಿದಷ್ಟು ನನಗೇ ಒಳ್ಳೆಯದು. ಅದರಿಂದಾಗಿ ನಾನು ಬೇಗನೆ ಮಲಗಲು ಹೋಗಬಹುದು' ಎಂದೂ ಅಲ್ಕರಾಜ್ ಹೇಳಿದರು.

ಬುಧವಾರ ನಡೆದ ಇನ್ನೊಂದು ಪಂದ್ಯದಲ್ಲಿ ಟೆನಿಸ್ ದಂತಕತೆ ಜೊಕೊವಿಚ್ ಅವರು 6-7 (5/7), 6-3, 6-3, 6-1ರಿಂದ ಅಮೆರಿಕದ ಝುಚಾರಿ ಸವಾಜ್ದಾ ವಿರುದ್ಧ ಗೆದ್ದರು. ಆದರೆ ಈ ಗೆಲುವು ಅವರಿಗೆ ಸುಲಭವಾಗಲಿ ಒಲಿಯಲಿಲ್ಲ.

25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಜಯಿಸಿ ದಾಖಲೆ ಬರೆಯುವ ಹುಮ್ಮಸ್ಸಿನಲ್ಲಿರುವ ಜೋಕೊವಿಚ್ ಅವರಿಗೆ ಈ ಪಂದ್ಯದ ಮೊದಲ ಸೆಟ್‌ನಲ್ಲಿಯೇ ಇಟಾಲಿಯನ್ ಆಟಗಾರ ಆಘಾತ ನೀಡಿದ್ದರು. ಟೈಬ್ರೇಕರ್‌ಗೆ ಸಾಗಿದ ಈ ಸೆಟ್ ಕಳೆದುಕೊಂಡ ಜೊಕೊ ನಂತರದ ಸೆಟ್‌ಗಳಲ್ಲಿ ವೀರಾವೇಷದ ಆಟವಾಡಿದರು. ಎದುರಾಳಿಗೆ ಯಾವುದೇ ಹಂತದಲ್ಲಿಯೂ ಅವಕಾಶ ನೀಡದೇ ಗೆಲುವಿನ ದಾರಿ ತುಳಿದರು. ಅದರೊಂದಿಗೆ ಅಮೆರಿಕ ಓಪನ್ ಟೆನಿಸ್ ಟೂರ್ನಿಯಲ್ಲಿ 19ನೇ ಬಾರಿಗೆ ಮೂರನೇ ಸುತ್ತು ಪ್ರವೇಶಿಸಿ ದಾಖಲೆ ಬರೆದರು.

ಮುಂದಿನ ಸುತ್ತಿನಲ್ಲಿ ಅವರು ಬ್ರಿಟನ್‌ನ ಕ್ಯಾಮೆರಾನ್ ನೊರಿ ಅವರನ್ನು ಎದುರಿಸುವರು. ಕ್ಯಾಮೆರಾನ್ ಅವರು ಎರಡನೇ ಸುತ್ತಿನಲ್ಲಿ 7-6 (7/5), 6-3, 6-7 (0/7), 7-6 (7/4) ರಿಂದ ಅರ್ಜೆಂಟಿನಾದ ಫ್ರಾನ್ಸಿಸ್ಕೊ ಕಾಮೆಸಾನಾ ವಿರುದ್ಧ ಜಯಿಸಿದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ವಿಶ್ವದ ಅಗ್ರಶ್ರೇಯಾಂಕದ ಆಟಗಾರ್ತಿ ಅರೀನಾ ಸಬಲೆಂಕಾ 7–6, 6–2ರಿಂದ ರಷ್ಯಾದ ಪೊಲಿನಾ ಕುದೆರ್ಮೆಟೊವಾ ವಿರುದ್ಧ ಗೆದ್ದರು.



ಸ್ಪೇನ್ ದೇಶದ ಕಾರ್ಲೋಸ್ ಅಲ್ಕರಾಜ್ ಅವರು ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಪಂದ್ಯದಲ್ಲಿ ಜಯಿಸಿದರು —ಎಪಿ/ಪಿಟಿಐ ಚಿತ್ರ

ಐಪಿಎಲ್ ಕ್ರಿಕೆಟ್‌ಗೂ ಅಶ್ವಿನ್ ವಿದಾಯ



ಚೆನ್ನೈ (ಪಿಟಿಐ): 'ಪ್ರತಿಯೊಂದು ಅಂತ್ಯದ ನಂತರ ಹೊಸದೊಂದು ಆರಂಭವೂ ಇರುತ್ತದೆಯೆಂದು ಹೇಳುತ್ತಾರೆ. ಐಪಿಎಲ್ ಕ್ರಿಕೆಟಿಗನಾಗಿ ನನ್ನ ಪಯಣ ಇಂದು ಮುಕ್ತಾಯವಾಗುತ್ತಿದೆ. ಆದರೆ ಬೇರೆ ಬೇರೆ ಲೀಗ್‌ಗಳಲ್ಲಿ ಅವಕಾಶಗಳತ್ತ ಸಾಗುವ ಕಾರ್ಯ ಇಂದಿನಿಂದ ಆರಂಭವಾಗಲಿದೆ'–

ಆಫ್‌ಸ್ಪಿನ್ ದಂತಕತೆ ರವಿಚಂದ್ರನ್ ಅಶ್ವಿನ್ ಅವರು ಬುಧವಾರ 'ಎಕ್ಸ್'ನಲ್ಲಿ ಹಾಕಿದ ಸಂದೇಶವಿದು. ಇದರೊಂದಿಗೆ ಅವರು ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದರು. ಹೋದ ಡಿಸೆಂಬರ್‌ನಲ್ಲಿ ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದರು.

ಐಪಿಎಲ್‌ನಲ್ಲಿ ಆಡಿದ ಕೆಲವು ಪ್ರಖರ ಜಾಣ್ಮೆಯ ಆಟಗಾರರಲ್ಲಿ ಅಶ್ವಿನ್ ಕೂಡ ಒಬ್ಬರು. ಅವರು 2009ರಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಮೂಲಕ ಐಪಿಎಲ್‌ಗೆ ಪದಾರ್ಪಣೆ ಮಾಡಿದರು. ಅವರು ತಮ್ಮ ಕೊನೆಯ ಐಪಿಎಲ್ ಪಂದ್ಯ ಆಡಿದ್ದು ಕೂಡ ಹಳದಿ ಪೋಷಾಕಿನಲ್ಲಿ (ಚೆನ್ನೈ ತಂಡ) ಎಂಬುದು ವಿಶೇಷ. ಅವರು 2025ರ ಟೂರ್ನಿಯ ಮೆಗಾ ಹರಾಜಿನಲ್ಲಿ ₹9.75 ಕೋಟಿ ಮೌಲ್ಯದೊಂದಿಗೆ ಚೆನ್ನೈ ತಂಡಕ್ಕೆ ಮರಳಿದ್ದರು.

ಚೆನ್ನೈನವರೇ ಆದ ಅಶ್ವಿನ್ ಅವರು 2010 ಮತ್ತು 2011ರಲ್ಲಿ ಸೂಪರ್ ಕಿಂಗ್ಸ್ ಪ್ರಶಸ್ತಿ ವಿಜಯದಲ್ಲಿಯೂ ಭಾಗಿಯಾಗಿದ್ದರು. ಅಲ್ಲದೇ ರೈಸಿಂಗ್ ಪುಣೆ ಸೂಪರ್ ಜೈಂಟ್, ಪಂಜಾಬ್ ಕಿಂಗ್ಸ್, ಡೆಲ್ಲಿ ಕ್ಯಾಪಿಟಲ್ಸ್ ಮತ್ತು ರಾಜಸ್ಥಾನ ರಾಯಲ್ಸ್ ತಂಡಗಳಲ್ಲಿಯೂ ಅವರು ಆಡಿದ್ದರು.

ಚೆಸ್: ಸಿಂಕ್‌ಫೀಲ್ಡ್ ಕಪ್ ಗೆದ್ದ ವೆಸ್ಲಿ ಸೊ

ಸೇಂಟ್ ಲೂಯಿ (ಅಮೆರಿಕ), (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅವರು ಸಿಂಕ್‌ಫೀಲ್ಡ್ ಕಪ್ ಟೂರ್ನಿಯಲ್ಲಿ ರನ್ನರ್ ಅಪ್ ಆಗುವ ಮೂಲಕ ಗ್ರ್ಯಾಂಡ್ ಚೆಸ್ ಟೂರ್ ಫೈನಲ್‌ಗೆ ಸ್ಥಾನ ಕಾದಿರಿಸಿದರು. ಅಮೆರಿಕದ ವೆಸ್ಲಿ ಸೊ ಅವರು ಮೂರು ಮಂದಿಯ ಪ್ಲೇ ಆಫ್‌ನಲ್ಲಿ ಪ್ರಶಸ್ತಿ ಗೆದ್ದರು.

ಬುಧವಾರ ನಡೆದ ಅಂತಿಮ ಸುತ್ತಿನಲ್ಲಿ ಸೊ ಅವರು ಉಜ್ಬೇಕಿಸ್ತಾನದ ನದಿರ್ಬೆಕ್ ಅಬ್ದುಸತ್ತಾರೋವ್ ಅವರನ್ನು ಸೋಲಿಸಿ ಒಟ್ಟು ಐದೂವರೆ ಅಂಕ ಸಂಗ್ರಹಿಸಿದರು. ಪ್ರಜ್ಞಾನಂದ ಮತ್ತು ಅಮೆರಿಕದ ಫ್ಯಾಬಿಯಾನೊ ಕರುವಾನ ತಮ್ಮ ಪಂದ್ಯಗಳನ್ನು (ಕ್ರಮವಾಗಿ ಅಮೆರಿಕದ ಲೆವೋನ್ ಅರೋನಿಯನ್ ಮತ್ತು ಭಾರತದ ಡಿ.ಗುಕೇಶ್ ಜೊತೆ) ಜೊತೆ ಡ್ರಾ ಮಾಡಿಕೊಂಡಿದ್ದು ಅವರೂ 5.5 ಪಾಯಿಂಟ್ಸ್ ಸಂಗ್ರಹಿಸಿದ್ದರು. ಇದರಿಂದ ಅಗ್ರಸ್ಥಾನಕ್ಕೆ ಮೂವರ ಮಧ್ಯೆ ಪೈಪೋಟಿ ನಡೆಯಿತು.

ವಿಜೇತರ ನಿರ್ಧಾರಕ್ಕೆ 'ಪ್ಲೇ ಆಫ್' ನಡೆಯಿತು. ಪ್ರಜ್ಞಾನಂದ ಅವರು ಕರುವಾನ ಅವರನ್ನು ಸೋಲಿಸಿ ಶುಭಾರಂಭ ಮಾಡಿದರು. ಆದರೆ ಎರಡನೇ ಪಂದ್ಯದಲ್ಲಿ ಸೋ, ಪ್ರಜ್ಞಾನಂದ ಅವರನ್ನು ಮಣಿಸಿದರು. ಮೂರನೇ ಪಂದ್ಯದಲ್ಲಿ ಸೊ ಮತ್ತು ಕರುವಾನ ಡ್ರಾ ಮಾಡಿಕೊಂಡರು. ಗರಿಷ್ಠ ಎರಡರಲ್ಲಿ 1.5 ಅಂಕ ಕಲೆಹಾಕಿದ ಸೊ ವಿಜೇತರಾದರು. ಒಂದು ಅಂಕ ಪಡೆದ ಪ್ರಜ್ಞಾನಂದ ಎರಡನೇ ಸ್ಥಾನ ಗಳಿಸಿದರು.

ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ ಅವರು ಗ್ರ್ಯಾಂಡ್ ಚೆಸ್ ಟೂರ್ (ಇದು ಆಯ್ದ ಟೂರ್ನಿಗಳ ಸರಣಿ) ನಲ್ಲಿ ಈಗಾಗಲೇ ಅತ್ಯಧಿಕ ಪಾಯಿಂಟ್ಸ್ ಕಲೆಹಾಕಿ ಅಗ್ರಸ್ಥಾನ ಪಡೆದಿದ್ದಾರೆ. ಲೆವೋನ್ ಅರೋನಿಯನ್, ಕರುವಾನ ಅವರೂ ಪ್ರಜ್ಞಾನಂದ ಅವರೊಂದಿಗೆ ಜಿಸಿಟಿ ಗ್ರ್ಯಾಂಡ್ ಫಿನಾಲೆಗೆ ಸ್ಥಾನ ಕಾದಿರಿಸಿದ್ದಾರೆ.

ಇದಕ್ಕೆ ಮೊದಲು, 9ನೇ ಸುತ್ತಿನ (ಕ್ಲಾಸಿಕಲ್) ನಂತರ ಸೊ, ಕರುವಾನ, ಪ್ರಜ್ಞಾನಂದ ಜಂಟಿ ಅಗ್ರಸ್ಥಾನ ಪಡೆದರೆ, ಅರೋನಿಯನ್ 9 ಸುತ್ತುಗಳಲ್ಲಿ 5 ಅಂಕ ಪಡೆದು ನಾಲ್ಕನೇ ಸ್ಥಾನ ಗಳಿಸಿದರು.

ವೇಷಿಯರ್-ಲಗ್ರಾವ್, ಸಾಮ್ಯುಯೆಲ್ ಸೇವಿಯನ್ (ಅಮೆರಿಕ), ಪೋಲೆಂಡ್‌ನ ಡೂಡಾ ಯಾನ್ ಕ್ರಿಸ್ಟೋಫ್ ಅವರು ತಲಾ 4.5 ಅಂಕ ಕಲೆಹಾಕಿ ಐದನೇ ಸ್ಥಾನ ಹಂಚಿಕೊಂಡರು. ಅಂಥ ಉತ್ತಮ ಲಯದಲ್ಲಿಲ್ಲದ ಡಿ.ಗುಕೇಶ್ ನಾಲ್ಕು ಅಂಕ ಪಡೆಯಲಷ್ಟೇ ಶಕ್ತರಾದರು.

ಏಷ್ಯಾ ಕಪ್ ಪುರುಷರ ಹಾಕಿ ಟೂರ್ನಿ ಇಂದಿನಿಂದ: ಎಂಟು ತಂಡಗಳ ಸ್ಪರ್ಧೆ

ಭಾರತ ತಂಡಕ್ಕೆ ಚೀನಾ ಸವಾಲು

ರಾಜ್‌ಗಿರ್ (ಬಿಹಾರ((ಪಿಟಿಐ): ಮೂರು ಬಾರಿಯ ಚಾಂಪಿಯನ್ ಭಾರತ ಪುರುಷರ ಹಾಕಿ ತಂಡವು ಶುಕ್ರವಾರ ಇಲ್ಲಿ ಆರಂಭವಾಗಲಿರುವ ಏಷ್ಯಾ ಕಪ್ ಟೂರ್ನಿಯಲ್ಲಿ ತನಗಿಂತ ಕೆಳ ಕ್ರಮಾಂಕದ ಚೀನಾ ತಂಡದ ವಿರುದ್ಧ ಅಭಿಯಾನ ಆರಂಭಿಸಲಿದೆ.

ಭಾರತ, ಚೀನಾ, ಜಪಾನ್ ಮತ್ತು ಕಜಾಕಸ್ತಾನ ತಂಡಗಳೊಂದಿಗೆ ಎ ಗುಂಪಿನಲ್ಲಿದೆ. ಐದು ಬಾರಿಯ ಚಾಂಪಿಯನ್ ದಕ್ಷಿಣ ಕೊರಿಯಾ, ಮಲೇಷ್ಯಾ, ಬಾಂಗ್ಲಾದೇಶ ಮತ್ತು ಚೀನಾ ತೈಪೆ ತಂಡಗಳು ಬಿ ಗುಂಪಿನಲ್ಲಿವೆ. ಪ್ರತಿ ಗುಂಪಿನಲ್ಲಿ ಮೊದಲೆರಡು ಸ್ಥಾನ ಪಡೆಯುವ ತಂಡಗಳು ಸೆಮಿಫೈನಲ್‌ಗೆ ಮುನ್ನಡೆಯಲಿವೆ. ಸೆ.7ರಂದು ಫೈನಲ್ ಹಣಾಹಣಿ ನಡೆಯಲಿದೆ.

ಟೂರ್ನಿಯಲ್ಲಿ ಆಡಲು ಪಾಕಿಸ್ತಾನ ಮತ್ತು ಓಮನ್ ತಂಡಗಳು ಹಿಂದೆ ಸರಿದ ಕಾರಣ ಕಜಾಕಸ್ತಾನ ಮತ್ತು ಬಾಂಗ್ಲಾದೇಶ ತಂಡಗಳು ಅವಕಾಶ ಪಡೆದಿವೆ. ಕಜಾಕಸ್ತಾನ ತಂಡವು ಮೂರು ದಶಕಗಳ ನಂತರ ಏಷ್ಯಾಕಪ್ ಟೂರ್ನಿಯಲ್ಲಿ ಆಡಲು ಸಜ್ಜಾಗಿದೆ.

ಹರ್ಮನ್‌ಪ್ರೀತ್ ಸಿಂಗ್ ನಾಯಕತ್ವದ ಆತಿಥೇಯ ತಂಡವು ತವರಿನಂಗಳದ ಲಾಭ ಪಡೆದು, ನಾಲ್ಕನೇ ಬಾರಿ ಪ್ರಶಸ್ತಿ ಮುಡಿಗೇರಿಸಿಕೊಳ್ಳುವತ್ತ ಚಿತ್ತ ಹರಿಸಿದೆ. ಈ ಮೂಲಕ ಮುಂದಿನ ವರ್ಷದ ಆಗಸ್ಟ್‌ನಲ್ಲಿ ಬೆಲ್ಜಿಯಂ ಮತ್ತು ನೆದರ್ಲೆಂಡ್ಸ್ ಜಂಟಿ ಆತಿಥ್ಯದಲ್ಲಿ ನಡೆಯಲಿರುವ ವಿಶ್ವಕಪ್‌ಗೆ ನೇರ ಅರ್ಹತೆ ಪಡೆಯಲು ಎದುರು ನೋಡುತ್ತಿದೆ. ಟೂರ್ನಿಯಲ್ಲಿ ಅಗ್ರ ಶ್ರೇಯಾಂಕಿತ ತಂಡವಾಗಿರುವ ಭಾರತ 2023ರ ಏಷ್ಯನ್ ಗೇಮ್ಸ್ ಮತ್ತು 2024ರ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಗೆದ್ದಿದೆ.

ಪ್ರಸ್ತುತ ವಿಶ್ವ ರ್‍ಯಾಂಕಿಂಗ್‌ನಲ್ಲಿ 7ನೇ ಸ್ಥಾನದಲ್ಲಿರುವ ಭಾರತ ತಂಡವು ಮೊದಲ ಪಂದ್ಯದಲ್ಲಿ 23ನೇ ಕ್ರಮಾಂಕದ ಚೀನಾ ವಿರುದ್ಧ ಜಯ ಸಾಧಿಸುವ ನೆಚ್ಚಿನ ತಂಡವಾಗಿದೆ. 2009ರ ಆವೃತ್ತಿಯಲ್ಲಿ ಮೂರನೇ ಸ್ಥಾನ ಗಳಿಸಿದ್ದು ಚೀನಾ ತಂಡವು ಈವರೆಗಿನ ಉತ್ತಮ ಸಾಧನೆಯಾಗಿದೆ. 2008ರಲ್ಲಿ ಆತಿಥೇಯ ತಂಡವಾಗಿ ಒಮ್ಮೆ ಮಾತ್ರ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡು, 11ನೇ ಸ್ಥಾನ ಪಡೆದಿತ್ತು.



ಭಾರತ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ (ಬಲದಿಂದ ನಾಲ್ಕನೇಯವರು) ಮತ್ತು ಇತರ ಏಳು ತಂಡಗಳ ನಾಯಕರು ಏಷ್ಯಾ ಕಪ್ ಟ್ರೋಫಿಯೊಂದಿಗೆ ಪೋಸ್ ನೀಡಿದರು ಪಿಟಿಐ ಚಿತ್ರ

ಇಂದಿನ ಪಂದ್ಯಗಳು

ಮಲೇಷ್ಯಾ Vs ಬಾಂಗ್ಲಾದೇಶ	ಬೆಳಿಗ್ಗೆ	9
ದಕ್ಷಿಣ ಕೊರಿಯಾ Vs ಚೀನಾ ತೈಪೆ	ಬೆಳಿಗ್ಗೆ	11
ಜಪಾನ್ Vs ಕಜಾಕಸ್ತಾನ	ಮಧ್ಯಾಹ್ನ	1
ಭಾರತ Vs ಚೀನಾ	ಮಧ್ಯಾಹ್ನ	3

ಗುರುಪ್ರೀತ್‌ಗೆ ಚಿನ್ನ

ಶಿಮ್ಕೆಂಟ್ (ಕಜಾಕಸ್ತಾನ) (ಪಿಟಿಐ): ಭಾರತದ ಶೂಟರ್‌ಗಳಾದ ಗುರುಪ್ರೀತ್ ಸಿಂಗ್ ಮತ್ತು ಅಮನ್‌ಪ್ರೀತ್ ಸಿಂಗ್ ಅವರು ಗುರುವಾರ ಏಷ್ಯನ್ ಚಾಂಪಿಯನ್‌ಷಿಪ್‌ನ ಪುರುಷರ 25 ಮೀಟರ್ ಸ್ಟ್ಯಾಂಡರ್ಡ್ ಪಿಸ್ತೂಲ್ ವಿಭಾಗದಲ್ಲಿ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕ ಗೆದ್ದರು.

ಸೀನಿಯರ್, ಜೂನಿಯರ್ ಮತ್ತು ಯೂತ್ ವಿಭಾಗಗಳಲ್ಲಿ ಭಾರತದ ಪದಕಗಳ ಸಂಖ್ಯೆಯನ್ನು 82ಕ್ಕೆ ಏರಿಕೆಯಾಗಿದೆ. ಅದರಲ್ಲಿ 44 ಚಿನ್ನ, 20 ಬೆಳ್ಳಿ ಮತ್ತು 18 ಕಂಚು ಸೇರಿವೆ.

ಗುರುಪ್ರೀತ್, ಅಮನ್‌ಪ್ರೀತ್ ಅವರು ಹರ್ಷ್ ಗುಪ್ತಾ ಅವರ ಜೊತೆಗೂಡಿ ಒಟ್ಟು 1709 ಅಂಕ ಗಳಿಸಿ, ತಂಡ ವಿಭಾಗದಲ್ಲಿ ಚಾಂಪಿಯನ್ ಆದರು. ಜೂನಿಯರ್ ಬಾಲಕರ ವಿಭಾಗದಲ್ಲಿ 50 ಮೀಟರ್ ರೈಫಲ್ ಪ್ರೋನ್ ತಂಡ ಮತ್ತು 25 ಮೀಟರ್ ಸ್ಟ್ಯಾಂಡರ್ಡ್ ಪಿಸ್ತೂಲ್ ತಂಡವೂ ಚಿನ್ನ ಗೆದ್ದಿತು.

37 ವರ್ಷದ ಗುರುಪ್ರೀತ್ ಅವರಿಗೆ ಇದು ಅಂತತರಾಷ್ಟ್ರೀಯ ಸ್ಪರ್ಧೆಯಲ್ಲಿ ಮೊದಲ ಚಿನ್ನದ ಪದಕವಾಗಿದೆ. 12 ವರ್ಷಗಳ ಹಿಂದೆ ಟೆಹ್ರಾನ್‌ನಲ್ಲಿ ನಡೆದ ಏಷ್ಯನ್ ಚಾಂಪಿಯನ್‌ಷಿಪ್‌ನ ಇದೇ ವಿಭಾಗದ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದಿದ್ದರು.